7 ಜನವರಿ 1989 ರಂದು ಭಗವಾನ್ ಶ್ರೀ ರಜನೀಶ್‌ರವರು "ಭಗವಾನ್ ಶ್ರೀ" ಎಂಬ ಸಂಬೋಧನೆಯನ್ನು ತೆಗೆದುಹಾಕುವಂತೆ ಘೋಷಿಸಿರುವರು. ಏಕೆಂದರೆ ಬಹಳ ಮಂದಿ ಇದಕ್ಕೆ "ಈಶ್ವರ" ನೆಂಬ ಅರ್ಥವನ್ನು ಕಲ್ಪಿಸುವರು.

ಭಗವಾನ್ ಶ್ರೀ ಯವರು ಇನ್ನು ಮುಂದೆ "ಓಶೋ" ಎಂಬ ಹೆಸರಿನಿಂದ ಕರೆಯಲ್ಪಡುವರು.

ವಿಲಿಯಂ ಜೇಮ್ಸ್‌ರವರ ಶಬ್ದಗಳಲ್ಲಿ, "ಓಶೋ" ಎಂಬ ಅವರ ಹೆಸರು "ಓಶಾನಿಕ್" ನಿಂದ ಬಂದುದು. ಇದರ ಅರ್ಥ - ಸಾಗರದಲ್ಲಿ ವಿಲೀನನಾಗುವುದೆಂದು.

"ಓಶಾನಿಕ್" ಶಬ್ದದಿಂದ ಅನುಭೂತಿಯನ್ನೇನೋ ವ್ಯಾಖ್ಯಾಯಿಸಿದಂತಾಯಿತು. ಆದರೆ ಅನುಭೋಕ್ತನ ಬಗ್ಗೆ ಏನೂ ಹೇಳಿದಂತಾಗಲಿಲ್ಲ. ಆದ್ದರಿಂದ "ಓಶೋ" ಪದವು ಸಮಂಜಸವಾಗಿದೆಯೆಂದು ಅವರು ಹೇಳುವರು. ಮುಂದೆ ಅವರಿಗೆ ದೂರದ ಪೂರ್ವದೇಶಗಳಲ್ಲಿ "ಓಶೋ" ಎಂಬ ಪದವು ಪ್ರಚಲಿತವಿರುವುದಾಗಿ ತಿಳಿದು ಬಂದಿತು. ಅದರ ಅಭಿಪ್ರಾಯ - "ಭಗವತ್ತೆಯನ್ನು ಪಡೆದವನು" ಎಂದು. ಆತನ ಮೇಲೆ ಆಕಾಶವು ಅನವರತವೂ ಹೂಮಳೆಗರೆಯುವುದು.

ಓಶೋ

ನನ್ನ ಪ್ರಿಯ ಭಾರತ

ಸ್ವರ್ಣೀಯ ಗತವೈಭವದ ತುಣುಕುಗಳು

ಓಶೋರವರ ಭಾರತಕ್ಕೆ ಮುನ್ನುಡಿ

ಪ್ರಜ್ವಲ ಭಾರತ, ಕಾರ್ಗತ್ತಲೆಯ, ಕಳಾಹೀನ ಭಾರತ, ಎತ್ತಿನ ಗಾಡಿಯ ವೇಗದಲ್ಲಿ ಚಲಿಸುವ ಪುರಾತನ ಭಾರತ ಇಲ್ಲವೇ ಅಂತರಿಕ್ಷಯಾನದ ವೇಗದಲ್ಲಿ ಚಲಿಸುತ್ತಿರುವ ಮಾಡ್ರನ್ ಭಾರತ. ಭಾರತ ಯಾವುದು? ಅದೊಂದು ಸ್ಥಳವೇ? ಪರಿಕಲ್ಪನೆಯೇ? ಗತಕಾಲದ ಸ್ವರ್ಣ ಪಕ್ಷಿಯೇ? ಸಾವಿರಾರು ಝರಿಗಳು, ಉಪನದಿಗಳು ಉದ್ದಗಲಕ್ಕೂ ಹರಿಯುತ್ತಿರುವ ಪರಮಜ್ಞಾನಿಗಳ ಈ ಬೀಡು, ರಾಜ ಮಹಾರಾಜರು, ಸಾಮ್ರಾಟರು, ಅದ್ವಿತೀಯ ಕರಕುಶಲ ಕರ್ಮಿಗಳು ಮತ್ತು ಸ್ವರ್ಗೀಯ ಸಂಗೀತಗಾರರು ಮೆರೆದ ನಾಡು. ಭಾರತವನ್ನು ನಾನು ಬಲ್ಲವನಾದರೂ ಅದನ್ನು ಪದಗಳಲ್ಲಿ ಬಂಧಿಸಬಲ್ಲೆನೇ? ಭಾರತದ ಚಿತ್ರವನ್ನು ಚಿತ್ರಿಸಲು ನನ್ನ ಊಹಾಶಕ್ತಿಯನ್ನು ಹೇಗೆ ತಾನೇ ಬೆಳೆಸಬಲ್ಲೆ?

ಭಾರತ ಒಂದು ವಿರೋಧಾಭಾಸ, ಸತತ ದ್ವಂದ್ವಗಳ ಚಿತ್ರ. ತಾರ್ಕಿಕ ದೃಷ್ಟಿಯಲ್ಲಿ ನೋಡಿದಲ್ಲಿ ಯಾವುದೂ ಸರಿಹೊಂದದಿದ್ದರೂ, ಮತ್ತೊಂದು ಸ್ತರದಲ್ಲಿ ಎಲ್ಲವೂ ಅತಿ ಸೂಕ್ತ ಎನಿಸುತ್ತದೆ. ಆದ್ದರಿಂದಲೇ, ಭಾರತದಲ್ಲಿ ಒಂದು ವಾರ ತಂಗಿದವ ಒಂದು ಪುಸ್ತಕವನ್ನೇ ಬರೆಯಬಲ್ಲ; ಆತ ಒಂದು ತಿಂಗಳು ತಂಗಿದನೆಂದರೆ ಆ ವ್ಯಕ್ತಿ ಒಂದು ಲೇಖನವನ್ನು ಬರೆಯಬಲ್ಲ, ಆದರೆ ಆ ವ್ಯಕ್ತಿ ಒಂದು ವರ್ಷವೋ ಅಥವಾ ಅದಕ್ಕೂ ಹೆಚ್ಚು ಕಾಲ ಭಾರತದಲ್ಲಿ ಇದ್ದನೆಂದರೆ ಆತ ಹೆಚ್ಚೆಂದರೆ ಒಂದು ನಾಲ್ಕೈದು ವಾಕ್ಯಗಳನ್ನು ಬರೆಯಬಲ್ಲ ಅಷ್ಟು ಮಹತ್ತರ ಸಂಕೀರ್ಣ ಭಾರತ. ಇಲ್ಲಿ ವಿರೋಧಾಭಾಸಗಳನ್ನು ವಿವಿಧ ಸ್ತರಗಳಲ್ಲಿ ಕಾಣಬಹುದು. ಒಂದೆಡೆ ಅನಂತ ಕಡುಬಡತನ ಕಂಡರೆ ಮತ್ತೊಂದೆಡೆ ದಿನ ದಿನಕ್ಕೆ ಆರ್ಥಿಕ ವೃದ್ಧಿ ಹೊಂದುತ್ತಿರುವ ಮಧ್ಯಮ ವರ್ಗವನ್ನೂ ಕಾಣಬಹುದು. ಪ್ರತಿಯೊಂದು ವೃತ್ತಿಯಲ್ಲೂ ಅಪರಿಮಿತ ಕುಶಲತೆ ಕಂಡುಬಂದರೂ ಸರ್ವವ್ಯಾಪಿ ಸೋಮಾರಿತನ ಭಾರತದ ಭೌತಿಕ ಏಳ್ಗೆಗೆ ತಡೆಯನ್ನು ಒಡ್ಡುತ್ತದೆ. ಪ್ರಪಂಚದ ಅತಿ ದೊಡ್ಡ ಪ್ರಜಾಪ್ರಭುತ್ವ ಆಗಿದ್ದರೂ ಲಂಚಕೋರತನ, ಸ್ವಜನಪಕ್ಷಪಾತ ಮುಂತಾದ ಪಿಡುಗುಗಳು ಭಾರತೀಯ ರಾಜಕೀಯವನ್ನು ಒಳಗಿನಿಂದಲೇ ಟೊಳ್ಳುಮಾಡಿವೆ. ಇವೆಲ್ಲಕ್ಕೂ ಮೂಲ ಕಾರಣ ಕರ್ಮಫಲ ಮತ್ತು ಪುನರ್ಜನ್ಮದ ನಂಬಿಕೆಗಳೇ ಆಗಿವೆ. ಈ ಮಹತ್ತರ ಸಿದ್ಧಾಂತಗಳನ್ನು ಕರ್ಮಫಲವೆಂದು ತಪ್ಪು ಅರ್ಥೈಸಿದುದರಿಂದ ವ್ಯಕ್ತಿ ಮತ್ತು ಸಾಮಾಜ ತಂತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸದಿದ್ದುದರಿಂದ ಭಾರತಲ್ಲಿ ಶತಮಾನಗಳ ಕಾಲದಿಂದಲೂ ದ್ವಂದ್ವಗಳು ಕಾಣಿಸಿಕೊಂಡಿವೆ. ಭಾರತವನ್ನು ವರ್ಗೀಕರಿಸುವುದು ಸಾಧ್ಯವಿಲ್ಲ ಯಾಕೆಂದರೆ ಭಾರತ ಕೇವಲ ಒಂದು ದೇಶವಲ್ಲ ಅದೊಂದು ವಿಸ್ಮಯ.

ಪ್ರಾಯಶಃ ಭಾರತ ಒಂದು ಮಹಾನ್ ವೃಕ್ಷದಂತೆ, ವಿಶಾಲ, ಗಂಭೀರ, ಮಂದಿರದ ಕಂಭಗಳನ್ನು ನೆನಪಿಗೆ ತರುವ ಬಿಳಲುಗಳ ಮೂಲಕ ಬೇರುಬಿಟ್ಟ ಆಲದ ಮರದಂತೆ. ಅಥವಾ ಮುಂಜಾವಿನ ಮಂಜಿನ ಹನಿಯಂತೆ ಪರಿಶುದ್ಧ, ಸೂಕ್ಷ್ಮ ಮತ್ತು ದಿವ್ಯವಾದ ಕಮಲದ ಹೂವಿನಂತೆ. ಭಾರತ ನಿಮ್ಮಲ್ಲಿ, ಶಿಶುಗಳಲ್ಲಿ ಉಂಟಾಗುವಂತಹ ಅಚ್ಚರಿ ಮತ್ತು ಬೆರಗನ್ನು ಹುಟ್ಟಿಸಬಲ್ಲ ಏಕೈಕ ದೇಶ.

ಭಾರತದ ಬಗ್ಗೆ ಹೇಳುವಾಗ ಪರಮಜ್ಞಾನಿ ಓಶೋರವರ ವಚನಗಳು ಬಲು ಮೃದುವಾಗಿ ಆದರೆ ಅಧಿಕಾರಯುಕ್ತವಾಗಿ ಸಾಗುತ್ತವೆ. ಅವರಿಗೆ ಭಾರತದ ಭೂಗೋಳದಲ್ಲಾಗಲೀ ಇತಿಹಾಸದಲ್ಲಾಗಲೀ ಆಸಕ್ತಿ ಇಲ್ಲ. ದೂರದ ಹಿಮಾಲಯದಷ್ಟು ಮಹತ್ತರವಾದ, ಆದರೂ ನಮ್ಮ ಉಸಿರಿನಷ್ಟೇ ಸನಿಹದಲ್ಲಿರುವ, ಕಾಮನಬಿಲ್ಲಿನಂತೆ ಅಭೌತಿಕವಾದರೂ ಅಷ್ಟೇ ಜೀವಂತ, ನೈಜವಾದ - ತಮ್ಮ ಅಚ್ಚುಮೆಚ್ಚಿನ ಭಾರತದ ಆಂತರಿಕ ಸೌಂದರ್ಯ ಬಣ್ಣಿಸುತ್ತಾ ಓಶೋ ತಮ್ಮ ಹೃದಯವನ್ನೇ ಧಾರೆ ಎರೆದಿದ್ದಾರೆ.

ಅವರು, ಭಾರತದ ಆಧ್ಯಾತ್ಮಿಕ ಸಂಪ್ರದಾಯದ ಕೀರ್ತಿಕಲಶಗಳಾದ ಪರಮಜ್ಞಾನಿ ಸ್ತ್ರೀ, ಪುರುಷರ ಬೋಧದ ತಿರುಳನ್ನು ತೆಗೆದು, ಸರಳವಾಗಿ ಅರ್ಥೈಸಿ, ಉಣಬಡಿಸುತ್ತಾರೆ. ಭಾರತದ ಗತಕಾಲದ ಉಚ್ಛ ಮತ್ತು ನೀಚ ಸ್ಥಿತಿಯ ಬಗ್ಗೆ ಅವರ ಅನುಕಂಪಯುಕ್ತ ದೃಷ್ಟಿಕೋನ, ಇಂದಿನ ಭೌತಿಕ ಸುಖ, ಸೌಲಭ್ಯಗಳನ್ನು ಹೊಂದುವ ಹೋರಾಟದಲ್ಲೂ ಸನಾತನ ತಿಳಿವು ಕಳೆದುಹೋಗದಂತೆ ಸಂರಕ್ಷಿಸಿದೆ. ಅವರ ದೃಷ್ಟಿಯಲ್ಲಿ ಭೌತಿಕ ಧ್ಯೇಯಗಳು ಮಾನವ ವಿಕಾಸದ ಸಮಗ್ರ ಭಾಗ. ಇಡೀ ಮಾನವತೆಗೆ ಭಾರತದ ಅನುಪಮ ಕೊಡುಗೆಯಾದ ಆಧ್ಯಾತ್ಮಿಕ ಶೋಧವನ್ನು ಭಾರತದ ಪ್ರಸ್ತುತ ಮಾನವತೆ ಕೈ ಬಿಡುವುದನ್ನು ತಡೆಯಬೇಕೆಂಬುದೇ ಓಶೋರವರ ಪ್ರಮುಖ ಉದ್ದೇಶ.

ಓಶೋರವರ ಭಾರತದ ಆರಾಧನೆ ಬಲು ಮೃದು, ಮದುವಣಿಗ ಮದುವಣಗಿತ್ತಿಯನ್ನು ಆರಾಧಿಸುವಂತೆ. ಕೊಳಲಿನಿಂದ ಹೊರ ಹೊಮ್ಮುವ ನವಿರಾದ ನಾದದಂತೆ. ಅವರ ದೃಷ್ಟಿ ಆಕೆಯ ಅರ್ಧ ಮುಸುಕಿದ, ಲಜ್ಜಾಭರಿತ ಮುಖಾರವಿಂದದ ಸೊಬಗಿನ ಮೇಲೆ ನೆಟ್ಟಿದೆ. ಓಶೋ ಭಾರತವನ್ನು ಕೊನೆಯಿಲ್ಲದ ವೈವಿಧ್ಯ ಸಾಗರದಂತೆ, ತನ್ನ ಶಕ್ತಿಯನ್ನು ತಾನೇ ಸೃಜಿಸಿಕೊಳ್ಳಬಲ್ಲ ವಿಸ್ಮಯದಂತೆ ಕಾಣುತ್ತಾರೆ. ಈ ಸನಾತನ ಮಣ್ಣನ್ನು ಮೆಟ್ಟುವ ಕೃಪೆಗೈದ ಸಹಸ್ರಾರು ಅಜ್ಞಾತ ಕುಸುಮಗಳ - ಮಹಾಜ್ಞಾನಿಗಳ - ಮೇಲೆ ಓಶೋ ಬೆಳಕನ್ನು ಚೆಲ್ಲಿದ್ದಾರೆ. ಭಾರತದ ಬಗ್ಗೆ ಓಶೋರವರ ಪ್ರೇಮ ಸಮಯ ಮತ್ತು ಸ್ಥಳವನ್ನು ಮೀರಿದುದು. ಅವರ ಅಂತರ್‌ದೃಷ್ಟಿ, ಅವರು ಭಾರತದ ಆಧ್ಯಾತ್ಮದ ಬಗ್ಗೆ ನಡೆಸಿದ ವೈಯಕ್ತಿಕ ಮತ್ತು ಅಸ್ತಿತ್ವಿಕ

ಸ್ತರಗಳಲ್ಲಿನ ಶೋಧನೆಯಿಂದ ಮೂಡಿದುದು. ಇದು ಕೇವಲ ತಿಳಿವಳಿಕೆಯಿಂದ ಸಂಗ್ರಹಿಸಿದ ಮಾಹಿತಿಯಲ್ಲ. ಯಾವುದೇ ವಿಷಯವಾಗಲಿ ಓಶೋ ಖುದ್ದಾಗಿ ತಾವೇ ಅದರ ಮೂಲದಿಂದ ವಿವಿಧ ಸ್ತರಗಳಲ್ಲಿ ಅದರ ವಿಕಾಸವನ್ನು ತಮ್ಮ ಅರಿವಿನೊಂದಿಗೆ ಸಂಕೀರ್ಣಗೊಳಿಸಿ, ಶೋಧಿಸುತ್ತಾರೆ, ಯಾವುದೇ ಪೂರ್ವಾನುಗ್ರಹಗಳಿಲ್ಲದೆ. ಓಶೋ ಭಾರತದ ನೈಜರೂಪವನ್ನು ಪ್ರತಿಬಿಂಬಿಸುತ್ತಾರೆ, ಕಾರಣ: ಅವರ ಅಸ್ತಿತ್ವ ಭಾರತೀಯ ಪ್ರಜ್ಞೆ ಮೂರ್ತಿವೆತ್ತಂತೆ.

ಕಥೆ ಹೇಳುವುದರಲ್ಲಿ ಓಶೋರವರದ್ದು ಎತ್ತಿದ ಕೈ. ಕಥೆಗಳ ಮೂಲಕ ಓಶೋ ನಮಗೆ ಭಾರತವನ್ನು ಕಾಣಲು, ಕೇಳಲು, ಸ್ಪರ್ಶಿಸಲು, ಕಂಡುಕೊಳ್ಳಲು ನೆರವಾಗುತ್ತಾರೆ. ಕತೆ, ಉಪಕತೆ, ಅಂತರ್‌ದೃಷ್ಟಿಗಳ ನಡುವೆ ಭಾರತದ ಪ್ರತಿಯೊಂದು ಸೂಕ್ಷ್ಮಾತಿಸೂಕ್ಷ್ಮ ಭೇದ, ವ್ಯತ್ಯಾಸಗಳನ್ನು, ವಿವಿಧ ಬಣ್ಣಗಳನ್ನು ಸ್ಫಟಿಕದಂತೆ ಸ್ಪಷ್ಟವಾಗಿಸುತ್ತಾರೆ. ಈ ಮೂಲಕವಾಗಿ ಓಶೋ ಭಾರತವನ್ನು ಅರ್ಥಮಾಡಿಕೊಳ್ಳುವ ಹಲವಾರು ಮಾರ್ಗಗಳನ್ನು ತೆರೆಯುತ್ತಾರೆ.

ಓಶೋ ಭಾರತವನ್ನು ಪ್ರೇಮಿಸಲು ಕಾರಣವೇನೆಂದರೆ ಅವರಿಗೆ ಭಾರತ ಚೆನ್ನಾಗಿ ಗೊತ್ತಿದೆ.

ಸ್ವಾಮಿ ಸತ್ಯ ವೇದಾಂತ್
(ಡಾ। ವಸಂತ್ ಜೋಶಿ, ಎಂ.ಎ ಪಿ ಹೆಚ್ ಡಿ (ಬರೋಡ), ಪಿ ಹೆಚ್ ಡಿ (ಮಿಷಿಗನ್, ಯು ಎಸ್ ಎ)
ಛಾನ್ಸಲರ್, ಓಶೋ ಮಲ್ಟಿವರ್ಸಿಟಿ,
ಓಶೋ ಇಂಟರ್‌ನ್ಯಾಷನಲ್ ಫೌಂಡೇಷನ್, ಭಾರತ.

ಪರಿಚಯ

ಭಾರತ ಒಂದು
ಭೂಗೋಳವಲ್ಲ,
ಇತಿಹಾಸವೂ ಅಲ್ಲ.
ಬೇರಾವ ದೇಶವೂ
ಹೇಳಿಕೊಳ್ಳಲಾಗದ
ಶಕ್ತಿ-ಸ್ಥಳಗಳಿಂದ ಕೂಡಿ
ಅದು ಕಂಪಿಸುತ್ತಿದೆ.

ಭಾರತ ಒಂದು ಭೂಗೋಳವಲ್ಲ, ಇತಿಹಾಸವಾವೂ ಅಲ್ಲ. ಅದು ಬರೀ ರಾಷ್ಟ್ರವಲ್ಲ, ದೇಶವಲ್ಲ, ಭೂಮಿಯ ಬಿಡಿ ತುಂಡೂ ಅಲ್ಲ. ಅದು ಇವೆಲ್ಲಕ್ಕಿಂತ ಹೆಚ್ಚಿನದು: ಅದು ಒಂದು ಉಪಮೆ, ಕಾವ್ಯ, ಒಂದು ಬಗೆಯಲ್ಲಿ ಅದೃಶ್ಯ ಆದರೂ ಸ್ಫುಟ ವಾಸ್ತವ. ಅದು ಬೇರಾವ ದೇಶವೂ ಹೇಳಿಕೊಳ್ಳಲಾಗದ ಶಕ್ತಿಸ್ಥಳಗಳಿಂದ ಕೂಡಿ ಕಂಪಿಸುತ್ತಿದೆ.

ಸರಿಸುಮಾರು ಹತ್ತುಸಾವಿರ ವರ್ಷಗಳ ಕಾಲ ಸಹಸ್ರಾರು ಜನರು ಪ್ರಜ್ಞೆಯ ಪರಾಕಾಷ್ಠೆಯನ್ನು ತಲುಪಿದ್ದಾರೆ. ಅವರ ಕಂಪನ ಈಗಲೂ ಜೀವಂತ, ಅವರ ಪ್ರಭಾವ ಈಗಲೂ ಈ ಗಾಳಿಯಲ್ಲೇ ಇದೆ; ಈ ನಿಗೂಢ ನೆಲವನ್ನು ಆವರಿಸಿದ ಅದೃಶ್ಯ ಅಂಶಗಳನ್ನು ಸ್ವೀಕರಿಸಲು ನಿಮಗೆ ಬೇಕಾಗಿದ್ದಿಷ್ಟೆ; ಕೊಂಚ ಗ್ರಹಿಕೆ, ಕೊಂಚ ಸಾಮರ್ಥ್ಯ.

ಭಾರತ ನಿಗೂಢ. ಏಕೆಂದರೆ ಅದು ಏಕೈಕ ಶೋಧಕ್ಕಾಗಿ ಎಲ್ಲವನ್ನೂ ತ್ಯಜಿಸಿದೆ; ಅದುವೇ ಸತ್ಯದ ಶೋಧ. ನಿಮಗೆ ಅಚ್ಚರಿಯಾಗಬಹುದು, ಅದು ಮಹಾನ್ ದಾರ್ಶನಿಕರನ್ನೇನೂ ರೂಪಿಸಿಲ್ಲ - ಪ್ಲೂಟೋ ಇಲ್ಲ, ಅರಿಸ್ಟಾಟಲ್ ಇಲ್ಲ, ಥಾಮಸ್ ಅಕ್ವಿನಸ್ ಇಲ್ಲ, ಕಾಂಡ್ ಇಲ್ಲ, ಹೆಗೆಲ್ ಇಲ್ಲ, ಬ್ರ್ಯಾಡ್ಲಿ ಇಲ್ಲ, ಬರ್ಟ್ರೆಂಡ್ ರಸ್ಸೆಲ್ ಇಲ್ಲ. ಭಾರತದ ಇಡೀ ಇತಿಹಾಸವು ಒಬ್ಬ ದಾರ್ಶನಿಕನನ್ನೂ ಕೊಟ್ಟಿಲ್ಲ. ಆದರೆ ಅವರೆಲ್ಲರೂ ಸತ್ಯವನ್ನು ಶೋಧಿಸುತ್ತಿದ್ದಾರೆ!

ನಿಜಕ್ಕೂ ಅವರ ಶೋಧ ಇತರೆ ದೇಶಗಳಲ್ಲಿ ನಡೆದ ಶೋಧಕ್ಕಿಂತ ತೀರ ಭಿನ್ನವಾಗಿದೆ. ಬೇರೆ ದೇಶಗಳಲ್ಲಿ ಜನ ಸತ್ಯದ ಬಗ್ಗೆ ಚಿಂತನೆ ನಡೆಸುತ್ತಿದ್ದರು; ಭಾರತದಲ್ಲಿ ಜನ ಸತ್ಯದ ಬಗ್ಗೆ ಚಿಂತನೆ ನಡೆಸುತ್ತಿರಲಿಲ್ಲ - ಏಕೆಂದರೆ, ನೀವು ಸತ್ಯದ ಬಗ್ಗೆ ಚಿಂತಿಸುವುದಾದರೂ ಹೇಗೆ? ಒಂದೋ ನಿಮಗದು ಗೊತ್ತಿರಬೇಕು, ಇಲ್ಲ ಗೊತ್ತಿರಲಾರದು, ಚಿಂತನೆಯಂತೂ ಅಸಾಧ್ಯ. ದಾರ್ಶನಿಕತೆಯೂ ಅಸಾಧ್ಯ. ಅದು ನಿಶ್ಚಿತವಾಗಿಯೂ ಒಂದು ಅಸಂಬದ್ಧ ಮತ್ತು ವ್ಯರ್ಥ ಯತ್ನ. ಅದು ಕುರುಡನೊಬ್ಬ ಬೆಳಕಿನ ಬಗ್ಗೆ ಚಿಂತಿಸಿದಂತೆ - ಆತ ಏನು ತಾನೆ ಚಿಂತಿಸಬಲ್ಲ? ಆತ ಮಹಾನ್ ಮೇಧಾವಿ ಆಗಿರಬಹುದು, ಮಹಾನ್ ತರ್ಕವಾದಿ ಆಗಿರಬಹುದು - ಅದರಿಂದ ಏನೂ ಪ್ರಯೋಜನವಾಗದು. ತರ್ಕವೂ ಬೇಡ, ಮೇಧಾವಿತನವೂ ಬೇಡ; ಬೇಕಾದದ್ದು ನೋಡಲು ಕಣ್ಣುಗಳು.

ಬೆಳಕನ್ನು ನೋಡಬಹುದು, ಅದರ ಬಗ್ಗೆ ಚಿಂತನೆ ನಡೆಸಲಾಗದು. ಸತ್ಯವನ್ನು ಕಾಣಬಹುದು, ಅದನ್ನು ಚಿಂತಿಸಲಾಗದು; ಆದ್ದರಿಂದಲೇ ದರ್ಶನಶಾಸ್ತ್ರಕ್ಕೆ ಭಾರತದಲ್ಲಿ ಸಮಾನಾಂತರ ಪದವಿಲ್ಲ. ಸತ್ಯದ ಶೋಧನೆಯನ್ನು ನಾವು ದರ್ಶನ ಎಂದು ಕರೆಯುತ್ತೇವೆ; ದರ್ಶನ ಎಂದರೆ ನೋಡುವುದು. ದರ್ಶನಶಾಸ್ತ್ರ ಎಂದರೆ ಚಿಂತಿಸುವುದು, ಚಿಂತಿಸುವುದೆಂದರೆ ಸುತ್ತಿ ಬಳಸಿ ತಿರುಗುವುದು - ಆ ಬಗ್ಗೆ, ಈ ಬಗ್ಗೆ; ಅದು

ಖಂಡಿತವಾಗಿಯೂ ಅನುಭವದ ಬಿಂದುವನ್ನು ತಲುಪಿಸುವುದಿಲ್ಲ.

ವಿಚಿತ್ರವೆಂದರೆ ಇಡೀ ಜಗತ್ತಿನಲ್ಲಿ ಭಾರತವೊಂದೇ ತನ್ನೆಲ್ಲಾ ಪ್ರತಿಭೆಗಳನ್ನು ಸತ್ಯವನ್ನು ಕಾಣಲು, ಸತ್ಯವೇ ಆಗಹೊರಡಲು ಏಕಾಗ್ರಚಿತ್ತ ಯತ್ನಗಳಿಗಾಗಿ ಮೀಸಲಾಗಿಟ್ಟ ನೆಲ.

ನೀವು ಭಾರತದ ಇಡೀ ಇತಿಹಾಸದಲ್ಲಿ ಒಬ್ಬ ಮಹಾ ವಿಜ್ಞಾನಿಯನ್ನು ಕಾಣಲಾರಿರಿ. ಹಾಗೆಂದರೆ ಪ್ರತಿಭಾವಂತ ಜನರೇ ಇರಲಿಲ್ಲ, ಮೇಧಾವಿಗಳೇ ಇರಲಿಲ್ಲ ಎಂದಲ್ಲ. ಭಾರತದಲ್ಲೇ ಗಣಿತ ಶಾಸ್ತ್ರ ಹುಟ್ಟಿತು; ಆದರೆ ಭಾರತವು ಆಲ್ಬರ್ಟ್ ಐನ್‌ಸ್ಟೀನ್‌ನನ್ನು ರೂಪಿಸಲಿಲ್ಲ. ಒಂದು ಪವಾಡವೋ ಎಂಬಂತೆ ಇಡೀ ದೇಶವು ಯಾವುದೇ ವಸ್ತುನಿಷ್ಠ ಸಂಶೋಧನೆಯಲ್ಲಿ ಆಸಕ್ತಿ ಹೊಂದಿರಲಿಲ್ಲ. ಇನ್ನೊಬ್ಬರನ್ನು ಅರಿಯುವುದು ಇಲ್ಲಿ ಗುರಿಯಾಗಿರಲಿಲ್ಲ; ಆದರೆ ಸ್ವಯಂ-ಅನ್ನು ಅರಿಯುವುದಾಗಿತ್ತು.

ಹತ್ತು ಸಾವಿರ ವರುಷಗಳ ಕಾಲ ಲಕ್ಷಗಟ್ಟಲೆ ಜನರು ಒಂದೇ ಯತ್ನವನ್ನು ಅವಿರತವಾಗಿ ನಡೆಸಿದರು. ಅದಕ್ಕಾಗಿ ವಿಜ್ಞಾನ, ತಾಂತ್ರಿಕ ಅಭಿವೃದ್ಧಿ, ಸಿರಿವಂತಿಕೆಗಳನ್ನು ಬಲಿಕೊಟ್ಟರು. ಬಡತನ, ಅನಾರೋಗ್ಯ, ಖಾಯಿಲೆ, ಸಾವು - ಎಲ್ಲವನ್ನೂ ಸ್ವೀಕರಿಸಿದರು. ಯಾವುದೇ ಕಾರಣಕ್ಕೂ ಶೋಧವನ್ನು ಕೈಬಿಡಲಿಲ್ಲ ..... ಅದೊಂದು ಹೊಸ ವಾತಾವರಣವನ್ನು ರೂಪಿಸಿದೆ. ನಿಮ್ಮ ಸುತ್ತ ಕಂಪನಗಳ ಸಮುದ್ರವನ್ನೇ ರಚಿಸಿದೆ.

ನೀವು ಇಲ್ಲಿಗೆ ಕೊಂಚ ಧ್ಯಾನಪೂರ್ವಕ ಮನಸ್ಸಿನಿಂದ ಬಂದರೆ ನೀವು ಅದರ ಸಂಪರ್ಕಕ್ಕೆ ಬರುತ್ತೀರಿ. ನೀವಿಲ್ಲಿಗೆ ಬರಿ ಪ್ರವಾಸಿಯಾಗಿ ಬಂದರೆ, ನೀವದನ್ನು ಕಳೆದುಕೊಳ್ಳುತ್ತೀರಿ. ನೀವು ಅವಶೇಷಗಳನ್ನು, ಅರಮನೆಗಳನ್ನು, ತಾಜಮಹಲನ್ನು, ದೇಗುಲಗಳನ್ನು, ಖಜುರಾಹೋವನ್ನು, ಹಿಮಾಲಯ ಪರ್ವತವನ್ನು ನೋಡುತ್ತೀರಿ. ಆದರೆ ನೀವು ಭಾರತವನ್ನು ನೋಡಿರುವುದಿಲ್ಲ - ನೀವು ಭಾರತವನ್ನು ಭೇಟಿಯಾಗದೆ ಅದರ ಮೂಲಕ ಹಾದುಹೋಗಿರುತ್ತೀರಿ. ಅದು ಎಲ್ಲೆಡೆಯಲ್ಲೂ ಇದೆ. ಆದರೆ ನೀವು ಸೂಕ್ಷ್ಮವಾಗಿರಲಿಲ್ಲ, ನೀವು ಗ್ರಹಿಸುವವರಾಗಿರಲಿಲ್ಲ. ನೀವು ಇಲ್ಲಿಗೆ ನಿಜಕ್ಕೂ ಭಾರತವಲ್ಲದ, ಅದರ ಬರಿ ಅಸ್ಥಿಪಂಜರವನ್ನು ಕಾಣಲು ಬಂದಿರುತ್ತೀರಿ. ಅಸ್ಥಿಪಂಜರದ ಛಾಯಾಚಿತ್ರಗಳನ್ನು ಪಡೆದು ಅವುಗಳ ಆಲ್ಬಮ್ ಮಾಡುತ್ತೀರಿ. ನೀವೆಲ್ಲ ಭಾರತಕ್ಕೆ ಹೋಗಿದ್ದೆವೆಂದೂ, ಭಾರತವನ್ನು ಬಲ್ಲೆನೆಂದೂ ಆಲೋಚಿಸುತ್ತೀರಿ. ಆದರೆ ವಾಸ್ತವವಾಗಿ ನೀವು ನಿಮ್ಮನ್ನೇ ವಂಚಿಸಿಕೊಳ್ಳುತ್ತಿದ್ದೀರಿ.

ಅಲ್ಲೊಂದು ಆಧ್ಯಾತ್ಮ ಅಂಶವಿದೆ. ನಿಮ್ಮ ಕ್ಯಾಮೆರಾಗಳು ಅದನ್ನು ಸೆರೆಹಿಡಿಯಲಾರವು; ನಿಮ್ಮ ತರಬೇತಿ, ಶಿಕ್ಷಣ ಯಾವುದೂ ಅದನ್ನು ಹಿಡಿದಿಡಲಾರವು.

ನೀವು ಯಾವುದೇ ದೇಶಕ್ಕೂ ಹೋಗಬಹುದು; ಅಲ್ಲಿ ಖಂಡಿತ ನೀವು ಜನರನ್ನು, ದೇಶವನ್ನು, ಅದರ ಇತಿಹಾಸವನ್ನು, ಗತಕಾಲವನ್ನು ಭೇಟಿಮಾಡಲು ಸಮರ್ಥರು; ಅದು ಜರ್ಮನಿಯಲ್ಲಿ, ಇಟಲಿಯಲ್ಲಿ, ಫ್ರಾನ್ಸಿನಲ್ಲಿ, ಇಂಗ್ಲೆಂಡಿನಲ್ಲಿ. ಆದರೆ, ಭಾರತದ ಮಟ್ಟಿಗೆ ಹೇಳುವುದಾದರೆ ಮಾತ್ರ, ಹಾಗೆ ನೀವು ಮಾಡಲಾರಿರಿ. ನೀವು ಅದನ್ನು ಉಳಿದ ದೇಶಗಳೊಡನೆ ಇಡುವುದಾದರೆ ನೀವು ಆದಾಗಲೇ ವಿಷಯ ವಂಚಿತರಾದಂತೇ; ಏಕೆಂದರೆ ಆ ದೇಶಗಳು ಈ ಆಧ್ಯಾತ್ಮ ಪ್ರತಿಭಾವಳಿಯನ್ನು ಹೊಂದಿಲ್ಲ. ಅವು ಒಬ್ಬ ಗೌತಮ ಬುದ್ಧರನ್ನಾಗಲೀ, ಒಬ್ಬ ನೇಮಿನಾಥರನ್ನಾಗಲೀ, ಒಬ್ಬ ಆದಿನಾಥರನ್ನಾಗಲೀ, ಒಬ್ಬ ಮಹಾವೀರರನ್ನಾಗಲೀ ರೂಪಿಸಿಲ್ಲ .... ಅವು ಒಬ್ಬ ಕಬೀರರನ್ನಾಗಲೀ, ಒಬ್ಬ ಫರೀದರನ್ನಾಗಲೀ, ಒಬ್ಬ ದಾದುವನ್ನಾಗಲೀ ರೂಪಿಸಿಲ್ಲ. ಅವು ವಿಜ್ಞಾನಿಗಳನ್ನು ಕೊಟ್ಟಿವೆ, ಕವಿಗಳನ್ನು ಕೊಟ್ಟಿವೆ, ಮಹಾನ್ ಕಲಾವಿದರನ್ನು ಕೊಟ್ಟಿವೆ, ಅವು ಎಲ್ಲಾ ಬಗೆಯ ಪ್ರತಿಭಾವಂತ ವ್ಯಕ್ತಿಗಳನ್ನು ಕೊಟ್ಟಿವೆ. ಆದರೆ ಸಂತರು ಭಾರತದ ಏಕಾಧಿಪತ್ಯ; ಕನಿಷ್ಠ ಈ ಹೊತ್ತಿನವರೆಗೆ.

ಸಂತ ಸಂಪೂರ್ಣ ಭಿನ್ನವಾದ ಮಾನವ ಜೀವ. ಆತ ಬರೀ ಮೇಧಾವಿಯಲ್ಲ, ಆತ ಬರೀ ಕಲಾವಿದನಲ್ಲ ಅಥವಾ ಮಹಾಕವಿಯಷ್ಟೇ ಅಲ್ಲ, ಆತ ದೈವೀಕತೆಯವಾಹಕ ವ್ಯಕ್ತಿ ಒಂದು ಪ್ರಚೋದನೆ, ದೈವೀಕತೆಗೊಂದು ಆಹ್ವಾನ. ಆತ ದೈವವು ಒಳಬರಲೆಂದು ಬಾಗಿಲುಗಳನ್ನು ತೆರೆಯುತ್ತಾನೆ. ಹಾಗೆ ಸಾವಿರಾರು ವರುಷಗಳಿಂದ ಲಕ್ಷಾಂತರ ಜನರು, ದೈವೀಕತೆಯು ಈ ದೇಶದ ವಾತಾವರಣವನ್ನು ತುಂಬಲೆಂದು ಬಾಗಿಲುಗಳನ್ನು ತೆರೆದಿದ್ದಾರೆ. ನನಗೆ ಆ ವಾತಾವರಣವೇ ನಿಜವಾದ ಭಾರತ. ಆದರೆ ನೀವು ಅದನ್ನು ಅರಿಯಬೇಕಾದರೆ ನೀವೊಂದು ಬಗೆಯ ಮನಸ್ಥಿತಿಯಲ್ಲಿ ಇರಬೇಕಾಗುತ್ತದೆ.

ನೀವು ಧ್ಯಾನದಲ್ಲಿರುವಾಗ, ಮೌನವಾಗಿರಲು ಯತ್ನಿಸುತ್ತಿರುವಾಗ, ನೀವು, ನಿಜ ಭಾರತ ನಿಮ್ಮ ಸಂಪರ್ಕಕ್ಕೆ ಬರಲು ಬಿಡುತ್ತೀರ. ಬೇರೆಲ್ಲೂ ಕಾಣದಿರುವ ಬಗೆಯಲ್ಲಿ ನೀವು ಈ ಬಡದೇಶದಲ್ಲಿ ಸತ್ಯವನ್ನು ಕಾಣುತ್ತೀರ. ಇದು ಕಡು ಬಡ ದೇಶ. ಆದರೂ ಆಧ್ಯಾತ್ಮಿಕವಾಗಿ ಅದೆಂತಹ ಶ್ರೀಮಂತ ಪರಂಪರೆಯನ್ನು ಹೊಂದಿದೆಯೆಂದರೆ ಒಮ್ಮೆ ನೀವು ನಿಮ್ಮ ಕಣ್ಣುಗಳನ್ನು ತೆರೆದರೆ, ಆ ಪರಂಪರೆಯನ್ನು ವೀಕ್ಷಿಸಿದರೆ ಸಾಕು ಅಚ್ಚರಿಗೊಳ್ಳುತ್ತೀರ. ಬೇರಾವುದರ ಬಗ್ಗೆಯೂ ಗಮನ ಕೊಡದೆ ಕೇವಲ ಪ್ರಜ್ಞೆಯ ವಿಕಾಸದ ಬಗ್ಗೆಯೇ ಆಳವಾದ ಕಾಳಜಿ ಹೊಂದಿರುವ ದೇಶ ಬಹುಶಃ ಇದೊಂದೇ. ಇತರೆ ಪ್ರತಿಯೊಂದು ದೇಶವೂ ಇತರೆ ಸಾವಿರಾರು ವಿಷಯಗಳ ಬಗ್ಗೆ ಕಾಳಜಿ ವಹಿಸಿವೆ. ಆದರೆ ಈ ದೇಶಕ್ಕೆ ಮಾತ್ರ ಏಕೈಕ, ವಿಕಾಸದ ಗುರಿ. ದೈವತ್ವವನ್ನು ಮುಟ್ಟುವ ಬಿಂದುವಿನವರೆಗೆ ಮಾನವ ಪ್ರಜ್ಞೆಯನ್ನು

ವಿಕಸಿತಗೊಳಿಸುವುದು ಹೇಗೆ ಎಂಬುದು, ಮಾನವ ಮತ್ತು ದೈವವನ್ನು ಹೇಗೆ ಹತ್ತಿರ ತರಬಹುದು ಎಂಬುದು.

ಇದು ಕೇವಲ ಒಬ್ಬನ ಪ್ರಶ್ನೆಯಲ್ಲ, ಲಕ್ಷಗಟ್ಟಲೆ ಜನರದ್ದು; ಒಂದು ದಿನದ ಅಥವಾ ತಿಂಗಳಿನ ಅಥವಾ ವರ್ಷದ ಪ್ರಶ್ನೆಯಲ್ಲ, ಸಹಸ್ರಾರು ವರ್ಷಗಳದ್ದು. ಸಹಜವಾಗಿಯೇ ಇದು ದೇಶದ ಎಲ್ಲೆಡೆಗಳಲ್ಲೂ ಶಕ್ತಿ ಕ್ಷೇತ್ರವನ್ನು ರೂಪಿಸಿದೆ. ಅದು ಎಲ್ಲೆಡೆಯೂ ಇದೆ, ನೀವು ಸಿದ್ಧರಾಗಿರಬೇಕಷ್ಟೆ.

ಯಾರೇ ಆಗಲಿ ಸತ್ಯದ ದಾಹಕ್ಕೊಳಗಾದರೆ ಅವನು ಹಠಾತ್ತಾಗಿ ಭಾರತದತ್ತ ಆಸಕ್ತಿವಹಿಸುವುದು, ಹಠಾತ್ತಾಗಿ ಪೂರ್ವದತ್ತ ಚಲಿಸುವುದು ಕಾಕತಾಳೀಯವೇನಲ್ಲ, ಹಾಗೆಯೇ ಇಂತಹ ಆಸಕ್ತಿ ಚಲನೆ ಇವತ್ತಿನದಷ್ಟೇ ಅಲ್ಲ; ದಾಖಲೆಗಳು ಸಿಗದಷ್ಟು ಹಳೆಯದು. ಇಪ್ಪತ್ತೈದು ಶತಮಾನಗಳ ಹಿಂದೆ ಸತ್ಯವನ್ನು ಅರಸಿಕೊಂಡು ಪೈಥಾಗೊರಸ್ ಭಾರತಕ್ಕೆ ಬಂದರು, ಜೀಸಸ್ ಕ್ರಿಸ್ತರೂ ಭಾರತಕ್ಕೆ ಬಂದರು .....

..... ಹಾಗೆಯೇ ಶತಶತಮಾನಗಳ ಕಾಲ, ಸಾಧಕರು ಈ ನೆಲಕ್ಕೆ ಜಗತ್ತಿನೆಲ್ಲೆಡೆಯಿಂದ ಬರುತ್ತಲೇ ಇದ್ದಾರೆ. ಬಡ ರಾಷ್ಟ್ರ. ಕೊಡಲೇನೂ ಇಲ್ಲ ಆದರೆ ಸೂಕ್ಷ್ಮ ಇರುವವರಿಗೆ ಇದು ಜಗತ್ತಿನಲ್ಲೇ ಅತಿ ಶ್ರೀಮಂತ ಪ್ರದೇಶ. ಆದರೆ ಈ ಶ್ರೀಮಂತಿಕೆ ಒಳಗಿನದು. ಈ ಬಡದೇಶವು ಮಾನವ ಜೀವಿಗಳಿಗೆ ಕೊಡಲು ಸಾಧ್ಯವಾಗುವ ಮಹಾನ್ ಐಶ್ವರ್ಯವನ್ನು ನಿಮಗೆ ಕೊಡಬಲ್ಲದು.

(ಓಶೋ ಉಪನಿಶದ್, ಅಧ್ಯಾಯ 21)



ಚಾವ್‌ಮುಖ ಮಂದಿರ, ರಾನಕ್‌ಪುರ್, ರಾಜಾಸ್ಥಾನ

ಸಾರ್ವತ್ರಿಕ ಕನಸು

ಜ್ಞಾನಿಗಳು ಸದಾ ಕಂಡ
ಕನಸು
ಮರೆತುಹೋದುದನ್ನು
ನಿಮಗೆ
ನೆನಪಿಸುವುದಾಗಿದೆ,
ನಿಮ್ಮೊಳಗೆ ಸುಪ್ತಾವಸ್ಥೆಯಲ್ಲಿ
ಇರುವುದನ್ನು
ಎಚ್ಚರಿಸುವುದಾಗಿದೆ.

ಎಲ್ಲ ಬಗೆಯ ಅಡೆತಡೆಗಳು, ತೊಡಕುಗಳನ್ನು ಕಡೆಗಣಿಸಿ ಕಳೆದ ಇಪ್ಪತ್ತೈದು ಮೂವತ್ತು ವರುಷಗಳಿಂದ ಸಾಕ್ಷಾತ್ಕರಿಸಿಕೊಳ್ಳಲು ನೀವು ಯತ್ನಿಸುತ್ತಿರುವ ಆ ಕನಸಿನ ಬಗ್ಗೆ ಹೇಳುವಿರಾ?

ಆ ಕನಸು ನನ್ನ ಸ್ವಂತದ್ದಲ್ಲ, ಜಾಗತಿಕವಾದುದು. ಅದು ಶತಮಾನಗಳಷ್ಟು ಹಳೆಯದು - ಅಥವಾ ನೀವದನ್ನು ಚಿರಂತನ ಎಂದೂ ಹೇಳಬಹುದು. ಮಾನವ ಪ್ರಜ್ಞೆಯ ಮೊತ್ತಮೊದಲ ಕಿರಣಗಳು ಮೂಡಿದಾಗಲೇ ಭೂಮಿಯು ಆ ಕನಸನ್ನು ಕಾಣತೊಡಗಿತು. ಈ ಕನಸಿನ ಹಾರದಲ್ಲಿ ಎಷ್ಟೊಂದು ಹೂಗಳು ಪೋಣಿಸಲ್ಪಟ್ಟವು - ಎಷ್ಟು ಗೌತಮ ಬುದ್ಧರು, ಮಹಾವೀರರು, ಕಬೀರರು ಮತ್ತು ನಾನಕರು ಈ ಕನಸಿಗಾಗಿ ತಮ್ಮ ಜೀವಿತವನ್ನೇ ಬಲಿದಾನಗೈದರು? ಆ ಕನಸನ್ನು ನಾನು ನನ್ನದೆಂದು ಕರೆಯುವುದಾದರೂ ಹೇಗೆ? ಆ ಕನಸು ಮನುಷ್ಯನದೇ ಕನಸು, ಮನುಷ್ಯನ ಸ್ವಯಂ ಅಂತರಾತ್ಮದ್ದು. ನಾವು ಈ ಕನಸಿಗೆ ಒಂದು ಹೆಸರು ಕೊಟ್ಟಿದ್ದೇವೆ - ಈ ಕನಸನ್ನು ನಾವು ಭಾರತ ಎನ್ನುತ್ತೇವೆ.

ಭಾರತವು ಬರಿಯ ಭೂ ಪ್ರದೇಶವಲ್ಲ ಅಥವಾ ಯಾವುದೋ ರಾಜಕೀಯ ಸಂಗತಿಯಲ್ಲ ಅಥವಾ ಕೆಲವು ಐತಿಹಾಸಿಕ ವಾಸ್ತವಾಂಶಗಳ ಭಾಗವಲ್ಲ. ಭಾರತವು ಹಣ, ಅಧಿಕಾರ, ಸ್ಥಾನ-ಮಾನಕ್ಕಾಗಿ ಹುಚ್ಚಾಗುವ ಜನಾಂಗವಲ್ಲ. ಭಾರತವು ಸತ್ಯಕ್ಕಾಗಿ ಹಾತೊರೆಯುವ, ಸತ್ಯವನ್ನು ಸಾಧಿಸುವ ಒತ್ತಾಸೆಯನ್ನು ಹೊಂದಿದೆ; ನಮ್ಮೆಲ್ಲರ ಹೃದಯದ ಪ್ರತಿಯೊಂದು ಬಡಿತದಲ್ಲಿರುವ, ನಮ್ಮೆಲ್ಲರ ಪ್ರಜ್ಞೆಯ ಪದರದ ಕೆಳಗೆ ನಿದ್ರಿಸುತ್ತಿರುವ, ನಮ್ಮದೇ ಆದ ಆದರೆ ನಾವೇ ಮರೆತಿರುವ ಸತ್ಯ ಅದು. ಅದನ್ನು ನೆನೆಸಿಕೊಳ್ಳುವುದೇ, ಅದರ ಪುನಃಸಂರಕ್ಷಣವೇ ಭಾರತ.

ಅಮೃತಸ್ಯ ಪುತ್ರಾಃ, 'ಓ, ಅಮರ ಪುತ್ರರೇ!' - ಈ ಕರೆಯನ್ನು ಕೇಳಿದವರೇ ಭಾರತದ ನೈಜ ಪ್ರಜೆಗಳು. ಇನ್ನಾರೂ ಭಾರತದ ಪ್ರಜೆಗಳಾಗಲಾರರು. ನೀವು ಭೂಮಿಯ ಮೇಲೆ ಎಲ್ಲಾದರೂ ಹುಟ್ಟಬಹುದು, ಯಾವುದೇ ದೇಶದಲ್ಲಿ, ಯಾವುದೇ ಶತಮಾನದಲ್ಲಿ, ಗತಕಾಲದಲ್ಲಿ ಅಥವಾ ಭವಿಷ್ಯದಲ್ಲಿ; ನಿಮ್ಮ ಶೋಧವು ಆಂತರ್ಯದ ಶೋಧವಾಗಿದ್ದರೆ ನೀವು ಭಾರತದ ಪುತ್ರರು. ನನ್ನ ಮಟ್ಟಿಗೆ ಭಾರತ ಮತ್ತು ಆಧ್ಯಾತ್ಮಿಕತೆ ಸಮಾನಾರ್ಥ ಪದಗಳು; ಭಾರತ ಮತ್ತು ಧಾರ್ಮಿಕತೆ ಸಮಾನಾರ್ಥ ಪದಗಳು. ಈ ರೀತಿಯಾಗಿ ಭಾರತದ ಮಕ್ಕಳು ಈ ಭೂಮಿಯ ಎಲ್ಲಾ ಮೂಲೆಗಳಲ್ಲೂ ಇದ್ದಾರೆ. ಆಕಸ್ಮಿಕವಾಗಿ ಭಾರತದಲ್ಲಿ ಹುಟ್ಟಿದ್ದರೂ ಅನಂತದ ಶೋಧದ ಆಸಕ್ತಿ ಇರದಿದ್ದವರಿಗೆ ಭಾರತದ ಪ್ರಜೆಗಳೆಂದು ಕರೆಸಿಕೊಳ್ಳುವ ಹಕ್ಕು ಇರುವುದಿಲ್ಲ.

ಭಾರತ ಒಂದು ಚಿರಂತನ ಯಾನ, ಮಕರಂದದ ಹಾದಿ; ಅದು ಚಿರಂತನದಿಂದ ಚಿರಂತನದವರೆಗೆ ಹಬ್ಬಿದೆ. ಆದ್ದರಿಂದಲೇ ನಾವೆಂದೂ ಭಾರತದ ಯಾವುದೇ

ಇತಿಹಾಸವನ್ನು ಬರೆದಿಲ್ಲ, ಅಂದಹಾಗೆ ಬರೆಯಲು ಇತಿಹಾಸ ಲಾಯಕ್ಕಾದುದೇ? ತೀರಾ ಸಾಮಾನ್ಯವಾದ ಇಂದು ಬಿರುಗಾಳಿಯಂತೆ ಮೇಲೇಳುವ, ನಾಳೆ ಅದರದ್ದೊಂದೂ ಕುರುಹೂ ಇರದಂತಾಗುವ ಲೌಕಿಕ ದಿನವಹಿ ಘಟನೆಗಳಿಗೆ ಇರುವ ಹೆಸರೇ ಇತಿಹಾಸ. ಇತಿಹಾಸವೆಂದರೆ ಬರಿ ಧೂಳಿನ ಸುಂಟರಗಾಳಿ.

ಭಾರತವೆಂದೂ ಇತಿಹಾಸವನ್ನು ಬರೆದಿಲ್ಲ. ಭಾರತವು ಚಕೋರ ಪಕ್ಷಿ ಒಂದಿನಿತೂ ಕಣ್ಣು ಮಿಟುಕಿಸದೆ ಚಂದ್ರನತ್ತ ನೋಡುತ್ತಲೇ ಇರುವಂತೆ ಚಿರಂತನವನ್ನು ಮುಟ್ಟಲು ಯತ್ನಿಸುತ್ತಿದೆ, ಅಷ್ಟೆ.

ಭಾರತವು ಮತ್ತೆ ತನ್ನ ಒಳಘನತೆಯನ್ನು, ಹೆಮ್ಮೆಯನ್ನು, ಹಿಮಾವೃತ ಶಿಖರಗಳನ್ನು ಪಡೆಯಲೆಂದೇ ನಾನು ಮರೆತವರಿಗೆ ಜ್ಞಾಪಿಸಲು, ನಿದ್ದೆಬಿದ್ದವರನ್ನು ಎಬ್ಬಿಸಲು ಆಶಿಸುತ್ತೇನೆ. ಏಕೆಂದರೆ, ಇಡೀ ಮನುಕುಲದ ಭವಿತವ್ಯವೇ ಭಾರತದ ಭವಿತವ್ಯದ ಜತೆ ಸಂಬಂಧ ಹೊಂದಿದೆ. ಇದು ಕೇವಲ ಒಂದು ದೇಶದ ವಿಷಯವಲ್ಲ; ಭಾರತವು ಕತ್ತಲೆಯಲ್ಲಿ ಕಳೆದುಹೋದರೆ, ಮನುಷ್ಯತೆಗೆ ಭವಿಷ್ಯವೇ ಇಲ್ಲ. ನಾವು ಒಂದು ವೇಳೆ ಭಾರತಕ್ಕೆ ಅದರ ರೆಕ್ಕೆಗಳನ್ನು ಮತ್ತೆ ಕೊಡಬಲ್ಲೆವಾದರೆ, ಅದರ ಆಕಾಶವನ್ನು ಮತ್ತೆ ಕೊಡಬಲ್ಲೆವಾದರೆ, ಅದರ ಕಣ್ಣುಗಳನ್ನು ಮತ್ತೆ ನಕ್ಷತ್ರಗಳತ್ತ ಹಾರಿಹೋಗುವ ಕಾತರತೆಯಿಂದ ತುಂಬಬಲ್ಲೆವಾದರೆ, ನಾವು ಕೇವಲ ಆಂತರಿಕ ತೃಷೆ ಇದ್ದವರನ್ನಷ್ಟೇ ರಕ್ಷಿಸಿದಂತಾಗುವುದಿಲ್ಲ, ಇಂದು ಮಲಗಿದ ಆದರೆ ನಾಳೆ ಎಚ್ಚರಗೊಳ್ಳಬಹುದಾದವರನ್ನೂ ರಕ್ಷಿಸಬಹುದು.

ಭಾರತದ ಭವಿಷ್ಯವೇ ಇಡೀ ಮನುಕುಲದ ಭವಿತವ್ಯ - ಏಕೆಂದರೆ, ನಾವು ಮಾನವ ಪ್ರಜ್ಞೆಯನ್ನು ಪರಿಶುದ್ಧಗೊಳಿಸಿದಂತೆ, ಮನುಷ್ಯನೊಳಗೆ ನಾವು ಹೊತ್ತಿಸಿದ ಜ್ಯೋತಿಯಂತೆ, ಮನುಷ್ಯನಲ್ಲಿ ನಾವು ಅರಳಿಸಿದ ಹೂಗಳಂತೆ, ಮನುಷ್ಯನಲ್ಲಿ ನಾವು ಹಬ್ಬಿಸಿದ ಪರಿಮಳದಂತೆ ಮತ್ತಾರೂ ಮಾಡಿಲ್ಲ. ಅದು ಹತ್ತು ಸಹಸ್ರ ವರ್ಷಗಳ ಅವಿರತ ಯತ್ನ, ಕೊನೆಯಿಲ್ಲದಷ್ಟು ಯೋಗ, ಕೊನೆಯಿಲ್ಲದಷ್ಟು ಧ್ಯಾನದ ಫಲವಾಗಿದೆ. ಇದರ ಸಲುವಾಗಿ ನಾವು ಇನ್ನೆಲ್ಲವನ್ನೂ ಬಲಿಕೊಟ್ಟಿದ್ದೇವೆ. ಆದರೆ, ಮನುಷ್ಯನ ಅತಿ ಕರಾಳ ರಾತ್ರಿಗಳಲ್ಲೂ ನಾವು ಮನುಷ್ಯನ ಪ್ರಜ್ಞೆಯ ದೀಪವನ್ನು ಹೊತ್ತಿಸಿಟ್ಟಿದ್ದೇವೆ. ಆ ಜ್ಯೋತಿಯೀಗ ಎಷ್ಟೇ ಕ್ಷೀಣಿಸಿದ್ದರೂ, ದೀಪ ಉರಿಯುತ್ತಲೇ ಇದೆ, ಈಗಲೂ .....

ನನ್ನ ಕನಸೇನು ಎಂದು ನೀವು ಕೇಳುತ್ತೀರಿ. ಅದು ಜ್ಞಾನಿಗಳು ಸದಾ ಕಂಡ ಕನಸೇ; ಈಗ ಮರೆತುಹೋಗಿರುವುದನ್ನು ನಿಮಗೆ ನೆನಪಿಸಲು, ನಿಮ್ಮೊಳಗೆ ಸುಪ್ತಾವಸ್ಥೆಯಲ್ಲಿರುವುದನ್ನು ಎಚ್ಚರಿಸಲು. ಚಿರಂತನ ಬದುಕು ತನ್ನ ಜನ್ಮಸಿದ್ಧ ಹಕ್ಕು ಎಂದು, ದೈವತ್ವವು ತನ್ನ ಜನ್ಮಸಿದ್ಧ ಹಕ್ಕೆಂದು, ತಿಳಿಯುವವರೆಗೆ ಮನುಷ್ಯನೊಬ್ಬ

ಸಂಪೂರ್ಣನಾಗಲಾರ. ಆತ ಅಪೂರ್ಣನಾಗಿರುತ್ತಾನೆ, ಹೆಳವನಾಗಿರುತ್ತಾನೆ.

ನಾನು ಜಾಗೃತನಾದಾಗಿನಿಂದ, ಪ್ರತಿಯೊಂದು ಕ್ಷಣದಲ್ಲೂ, ಪ್ರತಿಯೊಂದು ತಾಸಿನಲ್ಲೂ, ಒಂದೇ ಒಂದು ಯತ್ನ, ಒಂದೇ ಒಂದು ಸಾಹಸ, ಹಗಲೂ-ರಾತ್ರಿಯೂ ಒಂದೇ ಒಂದು ಪ್ರಯತ್ನ - ಹೇಗಾದರೂ ನಾನು ನಿಮ್ಮನ್ನು ನೀವು ಮರೆತಿರುವ ನಿಮ್ಮ ಐಶ್ವರ್ಯದ ಬಗ್ಗೆ ಎಚ್ಚರಿಸಬಹುದೇ ಎಂದು; 'ಅನಲ್ ಹಖ್' ಎಂಬ ಘೋಷಣೆಯೂ ನಿಮ್ಮೊಳಗೂ ಹುಟ್ಟಲೆಂದು, ನೀವು 'ಅಹಂ ಬ್ರಹ್ಮಾಸ್ಮಿ' - ನಾನೇ ದೇವರು ಎಂದು ಹೇಳಬಹುದೇ ಎಂದು.

ಜಗತ್ತಿನ ಪ್ರತಿ ಮೂಲೆಯಲ್ಲೂ ದೇವರ ಬಗ್ಗೆ ಮಾತಾಡಲಾಗಿದೆ. ಆದರೆ ಆ ದೇವರು ಸದಾ ದೂರ ಇದ್ದಾನೆ, ನಕ್ಷತ್ರಗಳಾಚೆ ಇದ್ದಾನೆ. ಭಾರತವೊಂದೇ ದೇವರು ಮನುಷ್ಯನೊಳಗೇ' ಇದ್ದಾನೆ ಎಂದು ತೋರಿಸಿಕೊಟ್ಟಿದೆ. ಹೀಗೆ ಮನುಷ್ಯನೊಳಗೇ ಇರುವ ದೇವರನ್ನು ಸಾಕ್ಷಾತ್ಕರಿಸಿಕೊಳ್ಳಲು ಭಾರತವೊಂದೇ ಮನುಷ್ಯನಿಗೆ ಸಾಮರ್ಥ್ಯವನ್ನು, ಆತನೇ ದೇಗುಲವಾಗುವ, ಗುಡಿಯಾಗುವ, ಗೌರವ ಮತ್ತು ಖುಷಿಯನ್ನು ನೀಡಿದೆ.

ಹೇಗೆ ಪ್ರತಿಯೊಬ್ಬರೂ ದೇಗುಲವಾಗಬಹುದು, ಹೇಗೆ ಪ್ರತಿಯೊಬ್ಬರೂ ಪ್ರತಿ ಕ್ಷಣದಲ್ಲೂ ಒಂದು ಪ್ರಾರ್ಥನೆಯಾಗಬಹುದು - ಇದನ್ನೇ ನನ್ನ ಕನಸು ಎಂದು ಕರೆಯಬಹುದು.[1]

ಪ್ರಾಯಶಃ '*ಅಹಂ ಬ್ರಹ್ಮಾಸ್ಮಿ*' ಘೋಷಣೆ, ಜಗತ್ತಿನ ಯಾವುದೇ ಭಾಗದಲ್ಲಿ, ಯಾವುದೇ ಕಾಲದಲ್ಲಿ ಯಾವುದೇ ಮಾನವ ಜೀವಿ ಮಾಡಿರಬಹುದಾದ ದಿಟ್ಟಾತಿದಿಟ್ಟ ಹೇಳಿಕೆ. ನನಗಂತೂ ಭವಿಷ್ಯದಲ್ಲಂದೂ ಆ ಹೇಳಿಕೆಯನ್ನು ಸುಧಾರಿಸಬಹುದು ಎಂದು ಅನಿಸುವುದಿಲ್ಲ. ಆ ಹೇಳಿಕೆಯಲ್ಲಿನ ಧೀರತೆ ಎಷ್ಟು ನಿಖರ ಮತ್ತು ನಿರಪೇಕ್ಷವಾಗಿದೆ ಎಂದರೆ, ನೀವದನ್ನು ಎನಿತೂ ಇನ್ನಷ್ಟು ಪರಿಷ್ಕರಿಸಲಾರಿರಿ. ಅದೆಷ್ಟು ಮೂಲಭೂತವಾಗಿದೆ ಎಂದರೆ ನೀವು ಅದಕ್ಕಿಂತ ಆಳಕ್ಕೆ ಅಥವಾ ಅದಕ್ಕಿಂತ ಎತ್ತರಕ್ಕೆ ಹೋಗಲಾರಿರಿ.

ಸಂಸ್ಕೃತದ 'ಅಹಂ ಬ್ರಹ್ಮಾಸ್ಮಿ' ಎಂಬ ಈ ಅತಿ ಸರಳ ಹೇಳಿಕೆಯಲ್ಲಿ ಮೂರೇ ಪದಗಳಿವೆ. ಇಲ್ಲಿ ಇಂಗ್ಲೀಷ್‌ನಲ್ಲಿಯೂ ಅದನ್ನು ಕೆಲವೇ ಪದಗಳಲ್ಲಿ ಅನುವಾದಿಸಬಹುದು: I am the ultimate. ನನ್ನಾಚೆಗೆ ಏನೂ ಇಲ್ಲ. ನನ್ನೊಳಗಿರದ ಔನ್ನತ್ಯ, ನನ್ನೊಳಗಿರದ ಆಳ ಎಲ್ಲೂ ಇಲ್ಲ. ನಾನು ನನ್ನನ್ನೇ ಅವಿಷ್ಕರಿಸಬಲ್ಲೆನಾದರೆ, ನಾನು ಅಸ್ತಿತ್ವದ ರಹಸ್ಯವನ್ನೇ ಆವಿಷ್ಕರಿಸಿದಂತೆ.

ಈ ನೆಲದಲ್ಲಿ ಉಪನಿಷತ್ತುಗಳ ದಿನಗಳು ತುಂಬ ವೈಭವಯುತವಾಗಿದ್ದವು. ಆಗ ಮನುಕುಲವನ್ನು ಬೇರಾವ ಆಶೆಗಳೂ ಕಾಡುತ್ತಿರಲಿಲ್ಲ - ತನ್ನನ್ನು ತಾನೆ ಅರಿಯುವುದೊಂದೇ ಏಕೈಕ ಶೋಧವಾಗಿತ್ತು, ಏಕೈಕ ಬಯಕೆಯಾಗಿತ್ತು, ಏಕೈಕ ಕಾತರವಾಗಿತ್ತು. ಸಿರಿವಂತಿಕೆ, ಯಶಸ್ಸು, ಶಕ್ತಿ ಪ್ರತಿಯೊಂದೂ ತೀರ ಲೌಕಿಕವಾಗಿದ್ದವು. ಮಹತ್ವಾಕಾಂಕ್ಷಿಗಳಾಗಿದ್ದವರು, ಶ್ರೀಮಂತಿಕೆಯ ಹಿಂದೆ ಓಡುತ್ತಿದ್ದವರು, ಶಕ್ತಿಯುತರಾಗಬೇಕೆಂದು ಆಶಿಸಿದವರು ಮಾನಸಿಕವಾಗಿ ಅಸ್ವಸ್ಥರೆಂದೇ ತಿಳಿಯಲಾಗುತ್ತಿತ್ತು. ಮಾನಸಿಕವಾಗಿ ನಿಜಕ್ಕೂ ಆರೋಗ್ಯವಂತರಾಗಿದ್ದವರು, ಆಧ್ಯಾತ್ಮಿಕವಾಗಿ ಆರೋಗ್ಯವಂತವರಾಗಿದ್ದವರು - ಇವರೆಲ್ಲರಿಗೂ ತನ್ನನ್ನು ತಾನು ಅರಿಯುವುದೊಂದೇ ಏಕೈಕ ಶೋಧವಾಗಿತ್ತು; ಅತ್ಯಂತ ಗಹನವಾದ ರಹಸ್ಯವನ್ನು ಇಡೀ ಜಗತ್ತಿಗೆ ಘೋಷಿಸುವುದೇ ಏಕೈಕ ಗುರಿಯಾಗಿತ್ತು. ಆ ರಹಸ್ಯವೇ 'ಅಹಂ ಬ್ರಹ್ಮಾಸ್ಮಿ' ಎಂಬ ಈ ಹೇಳಿಕೆಯಲ್ಲಿ ಅಡಕವಾಗಿದೆ.

ಉಪನಿಷತ್ತುಗಳ ಬೋಧನೆಗಳು ಬುದ್ಧನಿಗಿಂತ ತೀರ ಹಳೆಯವು. ಬುದ್ಧ ಹೇಳಿದ್ದೂ ಉಪನಿಷತ್ತುಗಳಲ್ಲಿ ಅಡಗಿದ್ದನ್ನೇ. ಅದರ ಆಳವನ್ನು ಹೊಕ್ಕವರು ಬುದ್ಧ ಉಪನಿಷತ್ತುಗಳ ಮೇಲೆ ಜೀವಂತ ವ್ಯಾಖ್ಯಾನ ನೀಡಿರುವುದನ್ನು ಅರಿಯುತ್ತಾರೆ.....

ಉಪನಿಷತ್ತುಗಳ ಮುನಿಗಳು ಬೆಂಕಿಯ ಜತೆ ಆಟವಾಡುತ್ತಿದ್ದರು; ಆದರೆ, ಬುದ್ಧ ಬರುವ ಹೊತ್ತಿಗೆ ಆದಾಗಲೇ ಬೂದಿಯಾಗಿತ್ತು. ಮತ್ತೆ ಬುದ್ಧ ಬೆಂಕಿಯ ಬಗ್ಗೆ ಮಾತನಾಡಲು ಆರಂಭಿಸಿದಾಗ, ಬೂದಿಯನ್ನು ರಕ್ಷಿಸಿಕೊಂಡಿದ್ದು ಅದನ್ನೇ ಬೆಂಕಿ ಎಂದೆನ್ನುತ್ತಿದ್ದವರಿಗೆ, ಆತ

ಸಹಜವಾಗಿಯೇ ಶತ್ರುವಿನಂತೆ ಕಂಡರು. ಇದು ಸಹಜವೇ. ಏಕೆಂದರೆ, ಮತ್ತೆ ಬೆಂಕಿಯನ್ನು ಹೊತ್ತಿಸಿದರೆ, ಬೂದಿಯ ಸಂರಕ್ಷಕರು ಭಾರಿ ತೊಂದರೆಗೆ ಸಿಲುಕಿಕೊಳ್ಳುತ್ತಾರೆ ......

ಸತ್ಯವು ಯಾವಾಗಲೂ ಒಂದೇ ಎಂದು ಅರಿಯುವುದು ಕಷ್ಟ. ಅದರ ಅಭಿವ್ಯಕ್ತಿಯಷ್ಟೆ ಹೊಸತು; ಸತ್ಯದ ಜೀವಿತ-ತಿರುಳು ಸದಾ ಒಂದೇ ಆಗಿರುತ್ತದೆ.....

ವಾಸ್ತವವಾಗಿ ಉಪನಿಷತ್ತುಗಳಲ್ಲಿ, ಚಿರಂತನ ಮೌಲ್ಯವಿರುವ ಪ್ರತಿಯೊಂದು ವಿಷಯದ ಬಗ್ಗೆ ಎಷ್ಟು ಚೆನ್ನಾಗಿ ಹೇಳಲಾಗಿದೆಯೆಂದರೆ ಅಲ್ಲಿ ಇರಲಾರದ ಯಾವುದಾದರೊಂದು ಅಂಶವನ್ನು ಸೇರಿಸಲು ಸಾಧ್ಯವೇ ಎಂದು ನನಗೆ ಅಚ್ಚರಿಯಾಗುತ್ತದೆ. ಉಪನಿಷತ್ತುಗಳನ್ನು ಇನ್ನಷ್ಟು ಚೆನ್ನುಗೊಳಿಸಬಹುದೇ? ಅವುಗಳನ್ನು ಇನ್ನೂ ಸುಧಾರಿಸಬಹುದೇ? - ನನಗಂತೂ ಅನುಮಾನ. ಏನೊಂದು ಸುಧಾರಣೆಯನ್ನು ಮಾಡುವುದು ತೀರಾ ಕಷ್ಟ. ಹಾಗೆ ಮಾಡಬಹುದೆಂಬುದೇ ಅನುಮಾನಾಸ್ಪದ; ಬೇರಾವುದೇ ದಾರಿ ಇಲ್ಲವೆಂದು ಕಾಣುತ್ತದೆ.[3]

ಉಪನಿಷತ್‌ನ ಕಾಲದಲ್ಲಿ ಹೀಗೊಂದು ಘಟನೆ ನಡೆಯಿತು. ಶ್ವೇತಕೇತು ಎಂಬ ಹುಡುಗನನ್ನು ಆತನ ತಂದೆ ಕಲಿಕೆಗಾಗಿ ಜ್ಞಾನವೇತ್ತ ಗುರುವಿರುವ ಗುರುಕುಲಕ್ಕೆ ಕಳಿಸಿದ. ಆ ಬಾಲಕ ಕಲಿಯಬಹುದಾದದ್ದನ್ನೆಲ್ಲ ಕಲಿತ. ಅಂದಿನ ಕಾಲದಲ್ಲಿ ಲಭ್ಯವಿದ್ದ ಎಲ್ಲಾ ವಿಜ್ಞಾನಗಳನ್ನೂ, ವೇದಗಳನ್ನೂ ಆತ ಬಾಯಿಪಾಠ ಮಾಡಿಕೊಂಡ. ಅವುಗಳ ಬಗ್ಗೆ ಆತ ತುಂಬಾ ತಿಳಿವಳಿಕೆ ಹೊಂದಿ ಪ್ರಭುತ್ವ ಸಾಧಿಸಿದ, ಮಹಾ ವಿದ್ವಾಂಸನಾದ. ಆತನ ಖ್ಯಾತಿ ದೇಶದೆಲ್ಲೆಡೆ ಹರಡಲಾರಂಭಿಸಿತು. ಆತ ಕಲಿಯುವಂಥದ್ದು ಯಾವುದೂ ಉಳಿಯಲಿಲ್ಲ. ಆಗ ಗುರು ಹೇಳಿದರು, ''ಕಲಿಸಬಹುದಾದದ್ದನ್ನೆಲ್ಲಾ ನೀನು ತಿಳಿದಿದ್ದೀಯೆ. ಈಗ ನೀನು ಹಿಂತಿರುಗಬಹುದು.''

ಗುರುಗಳು ತಿಳಿದದ್ದನ್ನೆಲ್ಲಾ ತಾನು ತಿಳಿದಿರುವೆ, ಗುರು ಎಲ್ಲವನ್ನೂ ಬೋಧಿಸಿದ್ದಾರೆ - ಆದ್ದರಿಂದ ಎಲ್ಲಾ ಮುಗಿಯಿತು, ಆಗುವಂಥಾದ್ದೇನೂ ಉಳಿದಿಲ್ಲ ಎಂದುಕೊಂಡ ಶ್ವೇತಕೇತು ಹಿಂದಿರುಗಿದ. ಭಾರಿ ಹೆಮ್ಮೆ ಮತ್ತು ಗರ್ವದಿಂದ ತಂದೆಯ ಬಳಿ ಬಂದ.

ಆತ ಹಳ್ಳಿಯನ್ನು ಪ್ರವೇಶಿಸುತ್ತಿದ್ದಾಗ ಆತನ ತಂದೆ ಉದ್ದಾಲಕ, ಕಿಟಕಿಯ ಮೂಲಕ, ವಿಶ್ವವಿದ್ಯಾಲಯದಿಂದ ಹಿಂದಿರುಗುತ್ತಿದ್ದುದನ್ನು ಕಂಡ. ತನ್ನ ಮಗನ ನಡಿಗೆಯನ್ನು ಗಮನಿಸಿದ - ಅದು ಹೆಮ್ಮೆಯಿಂದ ತುಂಬಿತ್ತು; ಮಗನ ತಲೆಯನ್ನು ನೋಡಿದ - ಅದು ಅಹಂಭಾವದಿಂದ ಸೆಟೆದುಕೊಂಡಿತ್ತು; ಮಗ ಆಚೀಚೆ ವೀಕ್ಷಿಸುತ್ತಿರುವುದನ್ನು ನೋಡಿದ - ಅದು ತನಗೆಲ್ಲಾ ಗೊತ್ತಿದೆ ಎಂಬ ಅರಿವನ್ನು ಬಿಂಬಿಸುತ್ತಿತ್ತು. ತಂದೆ ದುಃಖಿತನಾದ, ಖಿನ್ನನಾದ. ಏಕೆಂದರೆ ಅದು ನಿಜಕ್ಕೂ ತಿಳಿದವರು ನೋಡುವ ಬಗೆ ಆಗಿರಲಿಲ್ಲ, ಪರಮಜ್ಞಾನವನ್ನು ಅರಿತವರೊಬ್ಬರ ವರ್ತನೆ ಆಗಿರಲಿಲ್ಲ.

ಮಗ ಮನೆಯೊಳಗೆ ಬಂದ. ತನ್ನ ತಂದೆ ತುಂಬ ಸಂತಸಪಡಬಹುದು ಎಂದು ಆತ ಭಾವಿಸಿದ್ದ - ಆತ ದೇಶದ ಪರಮಶ್ರೇಷ್ಠ ಪಂಡಿತರ ಪೈಕಿ ಒಬ್ಬನಾಗಿದ್ದ, ಆತ ಎಲ್ಲೆಲ್ಲೂ ಪರಿಚಿತನಾಗಿದ್ದ, ಎಲ್ಲೆಲ್ಲೂ ಗೌರವಾನ್ವಿತನಾಗಿದ್ದ - ಆದರೆ ತಂದೆ ಖಿನ್ನನಾಗಿರುವುದನ್ನು ಆತ ಕಂಡ. ''ನೀವೇಕೆ ದುಃಖಿತರಾಗಿದ್ದೀರಿ?'' ಎಂದು ಕೇಳಿದ.

ತಂದೆ ಹೇಳಿದ, ''ನಾನು ನಿನಗೆ ಒಂದೇ ಒಂದು ಪ್ರಶ್ನೆಯನ್ನು ಕೇಳಬೇಕಿದೆ. ಇನ್ನೇನೂ ಕಲಿಯುವುದು ಬೇಕಿಲ್ಲ ಎಂಬಂತಹ ಕಲಿಕೆಯನ್ನು ನೀನು ಕಲಿತಿದ್ದೀಯಾ? ಯಾವುದನ್ನು ತಿಳಿದುಕೊಂಡರೆ ಎಲ್ಲಾ ಕಷ್ಟಗಳೂ ನಿವಾರಣೆಯಾಗುತ್ತವೋ ಆ ತಿಳಿವನ್ನು ಹೊಂದಿದ್ದೀಯಾ? ಯಾವುದನ್ನು ಕಲಿಸಲಾಗದೋ ಅದನ್ನು ನಿನಗೆ ಕಲಿಸಲಾಗಿದೆಯೇ?''

ಬಾಲಕನೂ ಖಿನ್ನನಾದ. ಆತ ಹೇಳಿದ, ''ಇಲ್ಲ, ನನಗೆ ಗೊತ್ತಿರುವುದೆಲ್ಲ ನನಗೆ ಬೋಧಿಸಲಾದದ್ದೇ. ಕಲಿಯುವ ಆಸಕ್ತಿ ಇರುವ ಯಾರಿಗಾದರೂ ಅವುಗಳನ್ನು, ನಾನು ಕಲಿಸಬಲ್ಲೆ.'' ಆಗ ತಂದೆ ಹೇಳಿದ, ''ಹಾಗಾದರೆ ನೀನು ಹಿಂದಿರುಗಿ ಹೋಗು. ಕಲಿಸಲು ಆಗದಿರುವುದನ್ನು

ಬೋಧಿಸಲು ಕೇಳು.'' ಬಾಲಕ ನುಡಿದ, ''ಇದು ಅಸಂಬದ್ಧ. ಕಲಿಸಲು ಆಗದಿದ್ದುದನ್ನು ಗುರುಗಳು ನನಗೆ ಹೇಗೆ ಕಲಿಸಬಲ್ಲರು?''

ತಂದೆ ಹೇಳಿದ, ''ಅದು ಗುರುವಿನ ಕಲೆ. ಆತ ಕಲಿಸಲಾಗದ್ದನ್ನು ನಿನಗೆ ಕಲಿಸಬಹುದು. ನೀನು ಮರಳು.''

ಆತ ಹಿಂದಿರುಗಿದ. ಗುರುಗಳ ಪಾದಕ್ಕೆರಗಿ ನುಡಿದ, ''ನನ್ನ ತಂದೆ ನನ್ನನ್ನು ಒಂದು ತೀರ ಅಸಂಬದ್ಧ ವಿಷಯಕ್ಕಾಗಿ ಕಳಿಸಿದ್ದಾರೆ. ಈಗ ನನಗೆ ನಾನೆಲ್ಲಿದ್ದೇನೆ, ನಿಮ್ಮನ್ನು ಏನು ಕೇಳುತ್ತಿದ್ದೇನೆ ಎಂದೆನ್ನುವುದೂ ಗೊತ್ತಿಲ್ಲ. ನಾನು, ಕಲಿಯಲಾಗದ್ದನ್ನು ಕಲಿತ ಮೇಲೆ, ಬೋಧಿಸಲಾಗದ್ದನ್ನು ಬೋಧಿಸಿಕೊಂಡ ನಂತರವೇ ಹಿಂದಿರುಗಿ ಬರಬೇಕು ಎಂದು ನನ್ನ ತಂದೆ ಹೇಳಿದ್ದಾರೆ. ಅದೇನು? ಅದೆಂತಹುದು? ನೀವು ನನಗೆ ಈ ಬಗ್ಗೆ ಎಂದೂ ತಿಳಿಸಲಿಲ್ಲವಲ್ಲ?.''

ಗುರು ಹೇಳಿದರು, ''ಕೇಳದ ಹೊರತು ಅದನ್ನು ಹೇಳಲಾಗದು; ನೀನು ಅದರ ಬಗ್ಗೆ ಎಂದೂ ಕೇಳಲಿಲ್ಲ. ಈಗ ನೀನು ಸಂಪೂರ್ಣವಾಗಿ ಹೊಸ ಪ್ರಯಾಣವನ್ನೇ ಆರಂಭಿಸುತ್ತಿದ್ದೀಯಾ. ನೆನಪಿಡು, ಅದನ್ನು ಬೋಧಿಸಲು ಆಗುವುದಿಲ್ಲ, ಅದು ಅಷ್ಟು ಸೂಕ್ಷ್ಮವಾದದ್ದು. ಆದರೆ ನಾನು ನಿನಗೆ ಪರೋಕ್ಷವಾಗಿ ಸಹಾಯಮಾಡಬಹುದು. ಒಂದು ಕೆಲಸ ಮಾಡು. ನನ್ನ ಗುರುಕುಲದಲ್ಲಿರುವ ಎಲ್ಲಾ ಪ್ರಾಣಿಗಳನ್ನು ಕರೆದುಕೊಂಡು ಹೋಗು.'' - ಅಲ್ಲಿ ಕನಿಷ್ಠ ನಾನೂರು ದನಕರುಗಳು, ಎತ್ತುಗಳಿದ್ದವು - ''ಅವುಗಳನ್ನು ಯಾರೂ ಓಡಾಡದ ದಟ್ಟ ಕಾಡಿಗೆ ಕರೆದುಕೊಂಡು ಹೋಗು. ಆ ಪ್ರಾಣಿಗಳ ಜತೆ ಮೌನವಾಗಿ ಬದುಕು. ಮಾತನಾಡಬೇಡ, ಏಕೆಂದರೆ, ಈ ಪ್ರಾಣಿಗಳಿಗೆ ಯಾವುದೇ ಭಾಷೆ ಗೊತ್ತಿಲ್ಲ. ಆದ್ದರಿಂದ ಮೌನವಾಗಿರು. ಸಂತಾನೋತ್ಪತ್ತಿಯ ಮೂಲಕ ಈ ನಾನೂರು ಪ್ರಾಣಿಗಳ ಸಂಖ್ಯೆ ಒಂದು ಸಾವಿರ ಆದಾಗ ಹಿಂದಿರುಗು.''

ನಾನೂರು ದನಗಳು ಒಂದುಸಾವಿರ ಆಗಬೇಕೆಂದರೆ ಸುದೀರ್ಘ ಕಾಲಾವಧಿಯೇ ಬೇಕಾಗಿತ್ತು. ಆತ ಯಾವುದೇ ಮಾತನಾಡದೆ, ಚರ್ಚಿಸದೆ, ಕೇಳದೆ ಹೋಗಬೇಕಾಗಿತ್ತು. ''ನೀವು ಏನು ಮಾಡಬೇಕೆಂದು ಹೇಳುತ್ತಿದ್ದೀರಿ? ಇದರಿಂದ ಆಗುವುದಾದರೂ ಏನು?'' ಎಂದೂ ಕೇಳುವಂತಿರಲಿಲ್ಲ. ಆತ ಪ್ರಾಣಿಗಳು, ಮರಗಳು ಮತ್ತು ಕಲ್ಲುಗಳ ನಡುವೆಯೇ ಬದುಕಬೇಕಾಗಿತ್ತು; ಮಾತನಾಡದೆ, ಮಾನವ ಜಗತ್ತನ್ನು ಸಂಪೂರ್ಣವಾಗಿ ಮರೆತು. ನಿಮ್ಮ ಮನಸ್ಸು ಮಾನವ ಸೃಷ್ಟಿಯಾದುದರಿಂದ ನೀವು ಮಾನವರ ನಡುವೆ ಜೀವಿಸಿದರೆ ಮನಸ್ಸಿಗೆ ನಿರಂತರವಾಗಿ ಆಹಾರ ಸಿಗುತ್ತದೆ. ಅವರೇನೋ ಹೇಳುತ್ತಾರೆ, ನೀವೇನೋ ಹೇಳುತ್ತೀರಿ, ಮನಸ್ಸು ಕಲಿಯುತ್ತ ಹೋಗುತ್ತದೆ; ಈ ಚಕ್ರ ತಿರುಗುತ್ತ ಹೋಗುತ್ತದೆ.

''ಆದ್ದರಿಂದ ಹೋಗು,'' ಗುರುಗಳು ಹೇಳಿದರು, ''ಗುಡ್ಡ ಬೆಟ್ಟಗಳತ್ತ ಕಾಡಿಗೆ. ಒಬ್ಬನೇ ಬದುಕು.

ಮಾತನಾಡಬೇಡ. ಯೋಚಿಸುವುದರಿಂದಲೂ ಏನೂ ಪ್ರಯೋಜನವಿಲ್ಲ, ಏಕೆಂದರೆ ಈ ಪ್ರಾಣಿಗಳು ನಿನ್ನ ಚಿಂತನೆಯನ್ನು ಅರಿಯಲಾರವು. ನಿನ್ನೆಲ್ಲಾ ಪಾಂಡಿತ್ಯವನ್ನು ಇಲ್ಲೇ ಗಂಟು ಕಟ್ಟಿಟ್ಟು ಹೋಗು.''

ಶ್ವೇತಕೇತು ಹಾಗೇ ಮಾಡಿದ. ಆತ ಕಾಡಿಗೆ ಹೋಗಿ ಪ್ರಾಣಿಗಳ ಜೊತೆ ಹಲವು ವರ್ಷಗಳ ಕಾಲ ಜೀವಿಸಿದ. ಕೆಲವು ದಿನಗಳ ಕಾಲ ಆತನ ಮನಸ್ಸಿನಲ್ಲಿ ಚಿಂತನೆಗಳು ಉಳಿದವು. ಅದೇ ಚಿಂತನೆಗಳು ಮತ್ತೆ ಮತ್ತೆ ಮರುಕಳಿಸಿದವು. ಆಮೇಲೆ ಅದು ಬೇಸರ ತಂದಿತು. ಹೊಸ ಯೋಚನೆಗಳು ನಿಮಗೆ ಬರದಿದ್ದರೆ ಮನಸ್ಸು ಬರೀ ಮರುಕಳಿಕೆ ಎಂದು, ಯಾಂತ್ರಿಕ ಪುನರಾವರ್ತನೆ ಎಂಬುದನ್ನು ಅರಿಯುತ್ತೀರಿ. ಕಾಡಿನಲ್ಲಿ ಹೊಸ ಜ್ಞಾನಾರ್ಜನೆಗೆ ಯಾವ ಮಾರ್ಗವೂ ಇಲ್ಲ. ಜ್ಞಾನಾರ್ಜನೆ ಇದ್ದರೆ ಮನಸ್ಸು ಉಲ್ಲಸಿತವಾಗಿರುತ್ತದೆ. ಏಕೆಂದರೆ ಅಲ್ಲಿ ಅರಿಯಲು ಏನೋ ಇರುತ್ತದೆ. ಮತ್ತೆ ತೊಡಗಿಸಿಕೊಳ್ಳಲು ಏನಾದರೂ ಇರುತ್ತದೆ. ಅದೇ ಯಾಂತ್ರಿಕತೆ ಮುಂದುವರಿಯುತ್ತದೆ.

ಶ್ವೇತಕೇತುವಿಗೆ ಗೊತ್ತಾಯಿತು. ಅಲ್ಲಿ ನಾನೂರು ಪ್ರಾಣಿಗಳು, ಪಕ್ಷಿಗಳು, ಇತರೆ ಕಾಡು ಪ್ರಾಣಿಗಳು, ಮರಗಳು, ಕಲ್ಲು ಬಂಡೆಗಳು, ನದಿಗಳು, ತೊರೆಗಳು ಇದ್ದವು. ಆದರೆ ಯಾವ ಮನುಷ್ಯನಾಗಲೀ, ಯಾವುದೇ ಮಾನವ ಸಂಪರ್ಕವಾಗಲೀ ಇರಲಿಲ್ಲ. ಅಲ್ಲಿ ಅಹಮಿಕೆಯಿಂದ ಇದ್ದು ಪ್ರಯೋಜನವಿರಲಿಲ್ಲ. ಏಕೆಂದರೆ ಪ್ರಾಣಿಗಳಿಗೆ ಶ್ವೇತಕೇತು ಎಂತಹ ಮಹಾ ವಿದ್ವಾಂಸ ಎಂಬುದು ಗೊತ್ತಿರಲಿಲ್ಲ. ಅವು ಆತನನ್ನು ಗಣನೆಗೇ ತೆಗೆದುಕೊಳ್ಳಲಿಲ್ಲ; ಆತನೆಡೆಗೆ ಗೌರವದಿಂದ ನೋಡಲಿಲ್ಲ. ಹೀಗಾಗಿ ಗರ್ವ ಕ್ರಮೇಣವಾಗಿ ಮರೆಯಾಯಿತು. ಏಕೆಂದರೆ ಪ್ರಾಣಿಗಳ ಜತೆ ಗರ್ವದಿಂದ ನಡೆಯುವುದೂ ಮೂರ್ಖತನವಾಗಿತ್ತು. ''ನಾನು ಅಹಮಿಕೆಯಿಂದಿದ್ದರೆ ಈ ಪ್ರಾಣಿಗಳು ನನ್ನನ್ನು ನೋಡಿ ನಗುತ್ತವೆ, ನಾನು ಏನು ಮಾಡಲಿ?'' ಎಂದು ಶ್ವೇತಕೇತುವಿಗೆ ಅನ್ನಿಸತೊಡಗಿತು. ಮರಗಳ ಕೆಳಗೆ ಕುಳಿತುಕೊಳ್ಳುತ್ತಾ, ತೊರೆಗಳ ಬದಿಯಲ್ಲಿ ಮಲಗುತ್ತಾ ಆತನ ಮನಸ್ಸು ಮೌನವಾಗತೊಡಗಿತು.

ಈ ಕಥೆ ಬಲು ಸೊಗಸಾದುದು. ವರ್ಷಗಳು ಉರುಳಿದವು. ಶ್ವೇತಕೇತುವಿನ ಮನಸ್ಸು ಎಷ್ಟು ಮೌನವಾಯಿತೆಂದರೆ ಆತ ಯಾವಾಗ ಹಿಂದಿರುಗಬೇಕು ಎಂಬುದನ್ನೇ ಮರೆತ. ಈ ಆಲೋಚನೆಯೇ ಅಲ್ಲಿ ಇರಲಿಲ್ಲ ಎಂಬಷ್ಟರ ಮಟ್ಟಿಗೆ ಆತ ಮೌನಿಯಾದ. ಗತಕಾಲವು ಸಂಪೂರ್ಣವಾಗಿ ಕಳಚಿಕೊಂಡಿತು. ಅದು ಕಳಚಿಕೊಂಡಿತು ಎಂದರೆ ಭವಿಷ್ಯವೂ ಕಳಚಿಕೊಳ್ಳುತ್ತದೆ. ಏಕೆಂದರೆ ಭವಿಷ್ಯವು ಗತಕಾಲದ ಮುಂದುವರಿಕೆ ಅಲ್ಲದೆ ಬೇರೇನೂ ಅಲ್ಲ - ಅತೀತ ಕೈಚಾಚಿ ಭವಿಷ್ಯವನ್ನು ಮುಟ್ಟುವಂತೆ ಅಷ್ಟೆ. ಆದ್ದರಿಂದ ಆತ, ಗುರುಗಳು ಏನು ಹೇಳಿದ್ದರು, ಯಾವಾಗ ಮರಳಬೇಕು ಎಂಬುದನ್ನೂ ಮರೆತ. ಅಲ್ಲಿ ಯಾವಾಗ, ಎಲ್ಲಿ ಎಂಬುದೇ ಇರಲಿಲ್ಲ. ಆತ

ಇಲ್ಲಿ, ಈಗ ಇದ್ದನಷ್ಟೆ. ಆತ ಪ್ರಾಣಿಗಳ ಹಾಗೆ ಕೇವಲ ಆ ಕ್ಷಣದಲ್ಲಿ ಜೀವಿಸಿದ್ದ. ಆತನೂ ಒಂದು ಹಸುವಾದ.

ಪ್ರಾಣಿಗಳ ಸಂಖ್ಯೆ ಒಂದು ಸಾವಿರದಷ್ಟಾದಾಗ ಅವು ಚಡಪಡಿಸತೊಡಗಿದವು. ಅವು ತಮ್ಮನ್ನು ಶ್ವೇತಕೇತು ಮರಳಿ ಆಶ್ರಮಕ್ಕೆ ಒಯ್ಯುವನೆಂದು ಕಾಯುತ್ತಿದ್ದವು. ಆದರೆ ಆತ ಅದನ್ನು ಮರೆತೇಬಿಟ್ಟಿದ್ದ. ಆದ್ದರಿಂದ ಅವು ಒಂದು ದಿನ ಶ್ವೇತಕೇತುವಿನ ಜೊತೆ ಮಾತನಾಡಲು ನಿರ್ಧರಿಸಿದವು. ''ಈಗ ಸಮಯ ಸಾಕಷ್ಟಾಯಿತು. ಪ್ರಾಣಿಗಳ ಸಂಖ್ಯೆ ಒಂದು ಸಾವಿರದಷ್ಟು ಆದಾಗ ನೀನು ಹಿಂದಿರುಗು ಎಂದು ಗುರುಗಳು ಹೇಳಿದ್ದನ್ನು ನಾವು ನೆನಪಿಟ್ಟುಕೊಂಡಿದ್ದೇವೆ. ಆದರೆ ನೀನು ಸಂಪೂರ್ಣ ಮರೆತಿದ್ದೀಯೆ. ಇದು ಸಕಾಲ. ನಾವು ಹಿಂತಿರುಗಬೇಕು. ನಾವು ಈಗ ಒಂದು ಸಾವಿರವಾಗಿದ್ದೇವೆ,'' ಎಂದು ಅವು ಹೇಳಿದವು.

ಆದ್ದರಿಂದ ಶ್ವೇತಕೇತು ಪ್ರಾಣಿಗಳ ಜೊತೆ ಹಿಂದಿರುಗಿದ. ಗುರುಗಳು ಆತ ಒಂದು ಸಾವಿರ ಪ್ರಾಣಿಗಳ ಜೊತೆ ಬರುತ್ತಿದ್ದುದನ್ನು ಕಂಡು ತಮ್ಮ ಇತರೆ ಶಿಷ್ಯರಿಗೆ ಹೇಳಿದರು, ''ನೋಡಿ, ಒಂದು ಸಾವಿರದ ಒಂದು ಪ್ರಾಣಿಗಳು ಬರುತ್ತಿವೆ.'' ಶ್ವೇತಕೇತು ಅಷ್ಟು ಮೌನ ಜೀವಿಯಾಗಿದ್ದ - ಅಹಮಿಕೆ ಇರಲಿಲ್ಲ, ಸ್ವಯಂ ಜ್ಞಾನಿ ಎಂಬ ಭಾವವಿರಲಿಲ್ಲ, ಪ್ರಾಣಿಗಳ ಜೊತೆ ಅವುಗಳಲ್ಲೊಂದಾಗಿ ಚಲಿಸುತ್ತಿದ್ದ.

ಗುರುಗಳು ಆತನನ್ನು ಬರಮಾಡಿಕೊಳ್ಳಲು ಬಂದರು; ಅವರು ನರ್ತಿಸುತ್ತಿದ್ದರು, ಭಾವೋದ್ರೇಕಿತರಾಗಿದ್ದರು. ''ಈಗ ನಿನಗೆ ಹೇಳಬೇಕಾದುದೇನೂ ಇಲ್ಲ. ನಿನಗೆಲ್ಲಾ ಗೊತ್ತೇ ಇದೆ. ನೀನು ಏಕೆ ಬಂದೆ? ನೀನೀಗ ಬರುವ ಅಗತ್ಯವೇ ಇರಲಿಲ್ಲ, ನಿನಗೆ ಬೋಧಿಸುವಂಥಾದ್ದೇನೂ ಇಲ್ಲ. ನಿನಗೆಲ್ಲಾ ತಿಳಿದೇ ಇದೆ.''


ಶ್ವೇತಕೇತು ಹೇಳಿದ, ''ಕೇವಲ ನಿಮಗೆ ನನ್ನ ಗೌರವ ಸಲ್ಲಿಸಲು, ಕೇವಲ ನಿಮ್ಮ ಪಾದಸ್ಪರ್ಶ ಮಾಡಲು, ಕೃತಜ್ಞತೆ ಸಲ್ಲಿಸಲು ಬಂದೆ. ವಿಸ್ಮಯವೊಂದು ಘಟಿಸಿದೆ. ನೀವು ನನಗೆ ಬೋಧಿಸಲಾಗದ್ದನ್ನು ಬೋಧಿಸಿದ್ದೀರಿ.''

'ಮಿಸ್ಟಿಸಿಸಮ್' ಪದವು 'ಮಿಸ್ಟೀರಿಯನ್' ಎಂಬ ಗ್ರೀಕ್ ಪದದಿಂದ ಬಂದಿದೆ. ಹಾಗೆಂದರೆ, ರಹಸ್ಯ ಸಮಾರಂಭ ಎಂದರ್ಥ. ಗೊತ್ತಾಗದ ವಿಷಯಗಳನ್ನು ಕಂಡವರು ಅವನ್ನು ಹಂಚಿಕೊಳ್ಳಲು ನೆರೆಯುತ್ತಾರೆ. ಆ ಹಂಚುವಿಕೆ ಮೌಖಿಕವಲ್ಲ; ಅದು ಮೌಖಿಕವಾಗುವುದು ಸಾಧ್ಯವೂ ಇಲ್ಲ. ಆ ಹಂಚುವಿಕೆ ಅವರ ಇರುವಿಕೆಯಿಂದಲೇ ಆಗುತ್ತದೆ. ಅವರು ತಮ್ಮ ಇರುವಿಕೆಯನ್ನು ಇನ್ನೊಬ್ಬರಿಗೆ ನೀಡುತ್ತಾರೆ. ಅವರೆಲ್ಲಾ ಒಟ್ಟಿಗೆ ನರ್ತಿಸುತ್ತಾರೆ, ಒಟ್ಟಿಗೆ ಹಾಡುತ್ತಾರೆ, ಪರಸ್ಪರ ದಿಟ್ಟಿಸಿ ನೋಡುತ್ತಾರೆ, ಅಥವಾ ಸುಮ್ಮನೆ ಒಟ್ಟಿಗೆ ಕುಳಿತುಕೊಳ್ಳುತ್ತಾರೆ. ಅದನ್ನೇ ಬುದ್ಧ, ಕೃಷ್ಣ, ಜೀಸಸ್‌ರ ಜೊತೆ ಮಾಡಲಾಗುತ್ತಿತ್ತು ಬೇರೆ ಬೇರೆ ವಿಧಾನಗಳಲ್ಲಿ.

ಕೃಷ್ಣನ ಪ್ರೇಮಿಗಳು ಆತನ ಜೊತೆ ನರ್ತಿಸುತ್ತಿದ್ದರು. ಅದು 'ಮಿಸ್ಟೀರಿಯನ್' ಆಗಿತ್ತು, ರಹಸ್ಯ ಸಮಾರಂಭವಾಗಿತ್ತು. ನೀವು ಏನಾಗುತ್ತಿದೆ ಎಂದು ಹೊರಗಿನಿಂದ ನೋಡಿದರೆ ನಿಮಗೆ ನಿಜಕ್ಕೂ ಏನಾಗುತ್ತಿದೆ ಎಂದು ತಿಳಿಯುವುದಿಲ್ಲ ನೀವು ಸಹಭಾಗಿ ಆಗದಿದ್ದಲ್ಲಿ.. ಏಕೆಂದರೆ ಅಲ್ಲಿ ಹಂಚಿಕೊಂಡದ್ದು ಅದೃಶ್ಯವಾದದ್ದು. ಅದೊಂದು ಸರಕಲ್ಲ. ಅದನ್ನು ಒಬ್ಬರ ಕೈಯಿಂದ ಇನ್ನೊಬ್ಬರಿಗೆ ಹಸ್ತಾಂತರಿಸಲು ಬರುವುದಿಲ್ಲ. ಹಾಗೆ ನಡೆಯುವುದನ್ನು ನೀವೆಂದೂ ಕಾಣುವುದಿಲ್ಲ. ಅದು ನಿರಪೇಕ್ಷವಲ್ಲ. ಅದು ಒಬ್ಬರ ಇರುವಿಕೆಯು ಇನ್ನೊಬ್ಬರಿಗೆ ಹರಿಯುವಂಥದ್ದು, ಶಿಷ್ಯನೊಳಗೆ ಗುರುವಿನ ಅಸ್ತಿತ್ವದ ಪ್ರವಹನೆ.

ಭಾರತದಲ್ಲಿ ಈ ಬಗೆಯ ಸಮಾರಂಭಗಳನ್ನು 'ರಾಸ' ಎಂದು ಕರೆಯಲಾಗುತ್ತದೆ. ಕೃಷ್ಣ ಸಂಪ್ರದಾಯದಲ್ಲಿ ಇದನ್ನು 'ರಾಸ' ಎಂದು ಕರೆಯಲಾಗುತ್ತದೆ. ರಾಸ ಎಂದರೆ ಸದ್ಗುರುವಿನೊಂದಿಗೆ ನೃತ್ಯ ಮಾಡುವುದು; ನಿಮ್ಮ ಶಕ್ತಿ ಹರಿಯುತ್ತಿರುತ್ತದೆ, ಗುರುವಿನ ಶಕ್ತಿಯೂ ಪ್ರವಹಿಸುತ್ತಿರುತ್ತದೆ. ಕೇವಲ ಹರಿಯುವ ಶಕ್ತಿಗಳು ಮಾತ್ರ ಪರಸ್ಪರ ಸೇರಬಲ್ಲವು. ನಿಂತ ಕೊಳಗಳೆಂದೂ ಪರಸ್ಪರ ಸಂಪರ್ಕ ಹೊಂದಲಾರವು. ನದಿಗಳು ಮಾತ್ರ ಕೂಡುತ್ತವೆ. ಕೇವಲ ಚಲನೆಯ ಮೂಲಕ ಭೇಟಿ ಸಾಧ್ಯ.

ಇದುವೇ ಬುದ್ಧರ ಸುತ್ತಲೂ ಆಗುತ್ತಿತ್ತು, ಅಲ್ಲಾವುದೇ ದೃಶ್ಯಗೋಚರ ನೃತ್ಯವಿರಲಿಲ್ಲ. ಬುದ್ಧ ಮೌನವಾಗಿ ಕುಳಿತಿರುತ್ತಿದ್ದರು. ಅವರ ಶಿಷ್ಯರು ಮೌನವಾಗಿ ಕುಳಿತಿರುತ್ತಿದ್ದರು. ಅದನ್ನು ಸತ್ಸಂಗ ಎಂದು ಕರೆಯಲಾಗುತ್ತಿತ್ತು, ಅಂದರೆ ಸತ್ಯದ ಜೊತೆಯಿರುವುದು. ಬುದ್ಧ ಜ್ಞಾನೋದಯ ಹೊಂದಿದ್ದರು, ಆತ ಬೆಳಕೇ ಆಗಿದ್ದರು. ಹಾಗೆ ಬೆಳಗಿರದವರು, ಯಾರ ಹಣತೆಗಳು ಇನ್ನೂ ಬೆಳಗಲಿಲ್ಲವೋ, ಅಂತಹವರು ಗಾಢ ಪ್ರೀತಿಯಿಂದ, ಕಕ್ಕುಲತೆಯಿಂದ ನಿಕಟವಾಗಿ, ಹತ್ತಿರದಲ್ಲಿ ಕುಳಿತು, ತಮ್ಮ ಮೌನದಲ್ಲಿ, ಪ್ರೇಮದಲ್ಲಿ ಬುದ್ಧರೆ ಹತ್ತಿರವಾಗುತ್ತಿದ್ದರು. ನಿಧಾನವಾಗಿ, ನಿಧಾನವಾಗಿ ಒಂದು ಗಳಿಗೆಯಲ್ಲಿ ಗುರು ಮತ್ತು ಶಿಷ್ಯನ ನಡುವಣ ಅಂತರ ಮಾಯವಾಗುತ್ತಿತ್ತು - ಜ್ಯೋತಿಯ ಜ್ವಾಲೆ ಗುರುವಿನಿಂದ ಶಿಷ್ಯನಿಗೆ ಹಾರುತ್ತಿತ್ತು. ಶಿಷ್ಯ ಸದಾ ಅದನ್ನು ಸ್ವೀಕರಿಸಲು ಸಿದ್ಧನಿರುತ್ತಾನೆ. ಆತ ಸ್ವತಃ ಸ್ವಾಗತವೇ ಆಗಿರುತ್ತಾನೆ. ಆತ ಸ್ತ್ರೈಣ, ಗರ್ಭದಂತೆ. ಇದು ಒಂದು ಮಿಸ್ಟೀರಿಯನ್, ಒಂದು ರಹಸ್ಯ ಸಮಾರಂಭ.



ಕಮಲದ ಹೂಗಳು

ಕಮಲದ ಹೂವು ಪೂರ್ವದಲ್ಲಿ ತೀರಾ ಸಾಂಕೇತಿಕ, ಏಕೆಂದರೆ ನೀವು ಜಗತ್ತಿನಲ್ಲಿ ಬದುಕಬೇಕು ಆದರೆ ಅದರ ಸ್ಪರ್ಶಕ್ಕೊಳಗಾಗಬಾರದು ಎಂದು ಪೂರ್ವ ಹೇಳುತ್ತದೆ. ನೀವು ಜಗತ್ತಿನೊಳಗೆ ಇರಬೇಕು, ಆದರೆ ನಿಮ್ಮೊಳಗೆ ಜಗತ್ತು ಇರಬಾರದು. ನೀವು ಈ ಜಗತ್ತಿನ ಮೂಲಕ ಯಾವುದೇ ಗುರುತು ಮೂಡಿಸಿಕೊಳ್ಳದೆ, ಪ್ರಭಾವಿತರಾಗದೆ, ಗೀಚಿಸಿಕೊಳ್ಳದೆ ಹಾದು-ಹೋಗಬೇಕು. ಸಾಯುವ ಸಮಯದಲ್ಲಿ ನಿಮ್ಮ ಪ್ರಜ್ಞೆಯು ನೀವು ಹುಟ್ಟಿದಾಗ ಇದ್ದಷ್ಟೇ ಪರಿಶುದ್ಧ, ಮುಗ್ಧವಾಗಿ ಇದೆ ಎಂದು ಹೇಳಬಲ್ಲಿರಾದರೆ, ನೀವು ಆಧ್ಯಾತ್ಮಿಕ ಬದುಕು, ಧಾರ್ಮಿಕ ಬದುಕನ್ನು ಬಾಳಿದಂತೆ.

ಆದ್ದರಿಂದ ಕಮಲದ ಹೂವು ಆಧ್ಯಾತ್ಮಿಕ ಬದುಕಿನ ಶೈಲಿಯ ಸಂಕೇತ. ಅದು ನೀರಿನ ಸ್ಪರ್ಶಕ್ಕೊಳಗಾಗದೇ ಕೊಚ್ಚೆಯಲ್ಲೇ ಬೆಳೆಯುತ್ತದೆ. ಆದರೂ ನೀರಿನಿಂದ ತೊಯ್ದಿರುವುದಿಲ್ಲ. ಅದು ರೂಪಾಂತರದ ಸಂಕೇತ. ಕೊಳಚೆ ಮಣ್ಣು ಈ ಜಗತ್ತಿನ ಅತಿ ಸುಂದರ ಮತ್ತು ಅತಿ ಪರಿಮಳದ ಹೂವಾಗಿ ರೂಪಾಂತರಗೊಳ್ಳುತ್ತದೆ. ಗೌತಮ ಬುದ್ಧ ಕಮಲದ ಬಗ್ಗೆ ಎಷ್ಟು ಪ್ರೀತಿ ಹೊಂದಿದ್ದರೆಂದರೆ, ಆತ ತನ್ನ ಸ್ವರ್ಗವನ್ನು 'ಕಮಲ ಸ್ವರ್ಗ' ಎಂದು ಕರೆದರು.

ಒಂದು ದಿನ ಬೆಳಗ್ಗೆ ರಾಜ ಪ್ರಸಂಜಿತ ಗೌತಮ ಬುದ್ಧರ ಬಳಿಗೆ ಬಂದ. ಒಂದು ಕೈಯಲ್ಲಿ ಸುಂದರ ಕಮಲದ ಹೂವು ಮತ್ತೊಂದರಲ್ಲಿ ಬೆಲೆಬಾಳುವ ವಜ್ರವನ್ನೂ ಹಿಡಿದಿದ್ದ. 'ಗೌತಮ ಬುದ್ಧ ಇಲ್ಲಿಗೆ ಬಂದಿರುವಾಗ ನೀವು ಮೂರ್ಖರೊಂದಿಗೆ ಅನಗತ್ಯ ವಿಷಯಗಳನ್ನು ಚರ್ಚಿಸುತ್ತಾ ಸಮಯ ಹಾಳು ಮಾಡುತ್ತಿರುವಿರಿ,' ಎಂದು ಆತನ ಪತ್ನಿ ಛೇಡಿಸಿದ್ದರಿಂದ ರಾಜ ಬುದ್ಧನನ್ನು ನೋಡಲು ಹೋಗಿದ್ದ.

ರಾಜನ ಪತ್ನಿ ಬಾಲ್ಯದಿಂದಲೂ ಬುದ್ಧನನ್ನು ನೋಡಲು ಹೋಗುತ್ತಿದ್ದಳು. ಅನಂತರ ಅವಳ ಮದುವೆಯಾಯಿತು. ಆದರೆ ಪ್ರಸಂಜಿತನಿಗೆ ಬುದ್ಧನನ್ನು ನೋಡಲು ಅಂತಹ ಉತ್ಸುಕತೆ ಇರಲ್ಲಿ. ಆದರೂ, ಹೆಂಡತಿ ಅಷ್ಟು ಒತ್ತಾಯಿಸುತ್ತಿದ್ದಾಳಲ್ಲ, ಅಲ್ಲದೆ ಬುದ್ಧ ಯಾವ ರೀತಿ ವ್ಯಕ್ತಿ ಇರಬಹುದು ಎಂಬುದನ್ನು ತಿಳಿಯುವುದಕ್ಕಾಗಿ ಹೋಗಲು ನಿರ್ಧರಿಸಿದ. ಪ್ರಸಂಜಿತನಿಗೆ ಬಹಳ ಅಹಂ. ಅದಕ್ಕಾಗಿ, ಬುದ್ಧನಿಗೆ ಕೊಡುವುದಕ್ಕಾಗಿ ತನ್ನ ಖಜಾನೆಯಲ್ಲಿದ್ದ ಬೆಲೆಬಾಳುವ ವಜ್ರವನ್ನು ತೆಗೆದುಕೊಂಡು ಹೋದ.

ಒಬ್ಬ ಸಾಮಾನ್ಯ ಮನುಷ್ಯನಂತೆ ಅಲ್ಲಿಗೆ ಹೋಗಬಾರದೆಂದು ಆತ ಬಯಸಿದ. ಎಲ್ಲರಿಗೂ ತಿಳಿಯಬೇಕಿತ್ತು .... ಪ್ರತಿಯೊಬ್ಬರಿಗೂ ತಿಳಿಯಬೇಕಿತ್ತು ಯಾರು ಹೆಚ್ಚು? ಗೌತಮ ಬುದ್ಧ ಹೆಚ್ಚೋ, ಪ್ರಸಂಜಿತ ಹೆಚ್ಚೋ ಎಂಬುದು. ಆ ವಜ್ರ ಎಷ್ಟೊಂದು ಅಮೂಲ್ಯವಾಗಿತ್ತೆಂದರೆ, ಅದನ್ನು ವಶಪಡಿಸಿ ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಅನೇಕ ಯುದ್ಧಗಳಾಗಿದ್ದವು.

ಪತಿಯ ನಿರ್ಧಾರಕ್ಕೆ ಪತ್ನಿ ನಕ್ಕುಬಿಟ್ಟಳು. ''ನಿಮ್ಮನ್ನು ಯಾರ ಬಳಿಗೆ ಕರೆದುಕೊಂಡು ಹೋಗುತ್ತಿದ್ದೇನೆಂಬುದು ನಿಮಗೆ ಖಂಡಿತವಾಗಿಯೂ ಗೊತ್ತಿದ್ದಂತಿಲ್ಲ. ಅವರಿಗೆ ಕೊಡಲು ಈ ಕಲ್ಲಿನ ಬದಲು ಹೂವನ್ನು ತೆಗೆದುಕೊಳ್ಳಿ,'' ಎಂದಳು. ರಾಜನಿಗೆ ಅರ್ಥವೇ ಆಗಲಿಲ್ಲ. ಆದರೂ ಹೇಳಿದ - ''ಪರವಾಗಿಲ್ಲ ಬಿಡು. ನಾನು ಎರಡನ್ನೂ ತೆಗೆದುಕೊಳ್ಳುತ್ತೇನೆ. ಏನಾಗುವುದೋ ನೋಡೋಣ.''

ರಾಜ ಬುದ್ಧನ ಬಳಿಗೆ ಹೋದಕೂಡಲೇ ತನ್ನ ಒಂದು ಕೈಯಲ್ಲಿದ್ದ ಅಮೂಲ್ಯ ವಜ್ರವನ್ನು ಕೊಟ್ಟ. ''ಅದನ್ನು ಕೆಳಗೆ ಹಾಕು!'' ಬುದ್ಧ ಹೇಳಿದರು. ಏನು ಮಾಡುವುದು? ಅದನ್ನು ಕೆಳಗೆ ಹಾಕಿದ. ಹೆಂಡತಿ ಹೇಳಿದ್ದು ನಿಜವಿರಬೇಕು ಎಂದುಕೊಂಡ. ಮತ್ತೊಂದು ಕೈಯಲ್ಲಿದ್ದ ಸುಂದರವಾದ ಕಮಲದ ಹೂವನ್ನು ಕೊಡಬೇಕೆನ್ನುವಷ್ಟರಲ್ಲಿ ಬುದ್ಧ ''ಅದನ್ನೂ ಕೆಳಕ್ಕೆ ಹಾಕು!'' ಎಂದರು.

ರಾಜ ಅದನ್ನೂ ಕೆಳಕ್ಕೆ ಹಾಕಿದ. ಆಗ ರಾಜ ಕೊಂಚ ಅಧೀರನಾದ. ತನ್ನೊಳಗೆ ಅಂದುಕೊಂಡ - ಈ ಮನುಷ್ಯ ಹುಚ್ಚನಿರಬೇಕು, ಆದರೆ ಈತನಿಗೆ ಹತ್ತು ಸಾವಿರ ಮಂದಿ ಶಿಷ್ಯರಿದ್ದಾರೆ ..... ಇಲ್ಲಿರುವವರೂ ತನ್ನನ್ನು ಹುಚ್ಚನಿರಬಹುದೆಂದು ಯೋಚಿಸುತ್ತಿರಬಹುದೆಂದು ಭಾವಿಸಿದ. ಬುದ್ಧ ಮೂರನೆ ಬಾರಿಗೆ ಹೇಳಿದರು, ''ನಾನು ಹೇಳಿದ್ದು ಕೇಳಿಸಲಿಲ್ಲವೇ? ಅದನ್ನೂ ಕೆಳಗೆ ಹಾಕು!'' ಪ್ರಸಂಜಿತ ನುಡಿದ, ''ಈತ ನಿಜಕ್ಕೂ ಹುಚ್ಚನೇ ಇರಬೇಕು. ಈಗಾಗಲೇ ವಜ್ರ ಹಾಗೂ ಕಮಲದ

ಹೂವನ್ನು ಕೆಳಗೆ ಹಾಕಿದ್ದೇನೆ; ಕೆಳಕ್ಕೆ ಹಾಕಲು ನನ್ನಲ್ಲೇನೂ ಇಲ್ಲ.''

ಆ ಘಳಿಗೆಯಲ್ಲಿ ಬುದ್ಧರ ಹಳೆಯ ಶಿಷ್ಯನಾದ ಸಾರಿಪುತ್ತ ನಗಲಾರಂಭಿಸಿದ. ನಗುವಿನ ಕಾರಣವಾಗಿ ಪ್ರಸಂಜಿತನ ಗಮನ ಸಾರಿಪುತ್ತನ ಕಡೆಗೆ ತಿರುಗಿತು. ಆತ ಕೇಳಿದ, ''ಏಕೆ ಹೀಗೆ ನಗುತ್ತಿರುವೆ?''

ಸಾರಿಪುತ್ತ ನುಡಿದ, ''ನಿಮಗೆ ಈ ಭಾಷೆ ಅರ್ಥವಾದಂತಿಲ್ಲ. ವಜ್ರವನ್ನು ಕೆಳಗೆ ಹಾಕುವಂತೆ ಬುದ್ಧ ಹೇಳುತ್ತಿಲ್ಲ. ಹೂವನ್ನೂ ಕೆಳಕ್ಕೆ ಹಾಕಲು ಹೇಳುತ್ತಿಲ್ಲ. ನಿಮ್ಮನ್ನೇ ಕೆಳಗೆ ಹಾಕುವಂತೆ ಹೇಳುತ್ತಿದ್ದಾರೆ. ನಿಮ್ಮ 'ಅಹಂ'ನ ಕೈಬಿಡಿ ಎನ್ನುತ್ತಿದ್ದಾರೆ. ನಿಮ್ಮ ಬಳಿ ವಜ್ರವಿರಲಿ, ಹೂವಿರಲಿ, ಆದರೆ 'ಅಹಂ'ನ್ನು ಬಿಸಾಡಿ. ನಿಮ್ಮೊಂದಿಗೆ ಅದನ್ನು ತೆಗೆದುಕೊಂಡು ಹೋಗಬೇಡಿ.''

ಅವು ಸುಂದರ ದಿನಗಳಾಗಿದ್ದವು, ಹಠಾತ್ತನೆ ನೀಲಾಕಾಶ ತೆರೆದುಕೊಂಡಂತೆ ರಾಜನಿಗೆ ಭಾಸವಾಯಿತು. ಬುದ್ಧರ ಚರಣ ಕಮಲವನ್ನು ಅಪ್ಪಿಕೊಂಡ ವಿನಯಪೂರ್ವಕವಾಗಿ. ಮೇಲೆ ಏಳಲೇ ಇಲ್ಲ. ಬುದ್ಧನ ಅಸಂಖ್ಯಾತ ಅನುಯಾಯಿಗಳಲ್ಲಿ ಒಬ್ಬನಾಗಿಬಿಟ್ಟ. ರಾಜ ತನ್ನ ರಾಜ್ಯವನ್ನೇ ಮರೆತ. ಸರ್ವಸ್ವವನ್ನೂ ಮರೆತ. ನೆನಪಿನಲ್ಲಿ ಉಳಿದಿದ್ದಂದರೆ - ಈ ಸುಂದರ ವ್ಯಕ್ತಿ, ಆತನ ಮನೋಹರತ್ವ, ಆತನ ಅದೃಶ ಕಾಂತಶಕ್ತಿ, ಆತನ ಕಾಂತಿಯುತ ಕಣ್ಣುಗಳು ಹಾಗೂ ದಿವ್ಯ ಮೌನ. ಇವೆಲ್ಲವೂ ಪ್ರಸಂಜಿತನನ್ನು ಬಂಧಿಸಿತ್ತು.


ಇದು ಕೇವಲ ನಂಬಿಕೆಯ ಪ್ರಶ್ನೆಯಲ್ಲ. ಇದು ಪರಿವರ್ತನೆ ಅಥವಾ ವಾದಾನುವಾದದ ಪ್ರಶ್ನೆಯಲ್ಲ - ಇದು ಪರಮೋಚ್ಚ ಪ್ರೀತಿಯ ದ್ಯೋತಕ.

ಈ ರಾಷ್ಟ್ರದಲ್ಲಿ ಧ್ಯಾನ ಎಂದೂ ಸತ್ತಿಲ್ಲ. ಕೆಲವು ಸಲ ನೆಲದ ಮೇಲೆ, ಇನ್ನೂ ಕೆಲವು ಸಲ ನೆಲದ ಅಡಿಯಲ್ಲಿ, ಇದರ ನದಿ ನಿರಂತರವಾಗಿ, ಶಾಶ್ವತವಾಗಿ ಹರಿಯುತ್ತಿದೆ. ಅದು ಇಂದೂ ಹರಿಯುತ್ತಿದೆ, ನಾಳೆಯೂ ಹರಿಯುವುದು - ಮನುಷ್ಯನ ಉಳಿವಿಗೆ ಇರುವುದು ಇದೊಂದೇ ಮಾರ್ಗ. ಧ್ಯಾನವು ಸತ್ತದಿನವೇ ಮನುಷ್ಯನೂ ಸಾಯುತ್ತಾನೆ. ಮನುಷ್ಯನ ವಾಸ್ತವ ಅಥವಾ ಯಾಥಾರ್ಥ್ಯವೇ ಧ್ಯಾನ. ಇದು ನಿಮಗೆ ಗೊತ್ತಿರಬಹುದು ಅಥವಾ ಗೊತ್ತಿಲ್ಲದಿರಬಹುದು. ನಿಮಗದರ ಅರಿವಿರಬಹುದು ಅಥವಾ ಇಲ್ಲದಿರಬಹುದು. ಆದರೆ ಧ್ಯಾನವೇ ಮಾನವನ ಆಂತರಿಕ ತಿರುಳು. ನಿಮ್ಮ ಉಸಿರಿನಲ್ಲಿ ಅಡಗಿರುವುದು, ಹೃದಯ ಬಡಿತದಲ್ಲಿ ಅವಿತುಕೊಂಡಿರುವುದು, ನೀವೇ ಆಗಿರುವುದು, ಇವೆಲ್ಲಾ ಧ್ಯಾನವಲ್ಲದೆ ಮತ್ತೇನೂ ಅಲ್ಲ.

.... ಪ್ರಪಂಚಕ್ಕೆ ಈ ರಾಷ್ಟ್ರ ಏನನ್ನಾದರೂ ನೀಡಿದ್ದರೆ, ಕೊಡುಗೆ ಏನಾದರೂ ಕೊಟ್ಟಿದ್ದರೆ, ಅದು ಧ್ಯಾನ. ಅದು ಪತಂಜಲಿ ಸ್ವರೂಪದಲ್ಲಿರಬಹುದು, ಮಹಾವೀರನ ಸ್ವರೂಪದಲ್ಲಿರಬಹುದು, ಬುದ್ಧ ಇರಬಹುದು, ಕಬೀರ್ ಇರಬಹುದು ಅಥವಾ ನಾನಕ್ ಇರಬಹುದು - ಹೆಸರು ಬೇರೆಯದಿರಬಹುದು. ಆದರೆ ಕೊಡುಗೆ ಮಾತ್ರ ಒಂದೇ. ಬೇರೆ ಜನರ ಮೂಲಕ, ವಿಭಿನ್ನ ಧ್ವನಿಗಳ ಮೂಲಕ, ಈ ಜಗತ್ತಿಗೆ ಒಂದೇ ಒಂದು ಕರೆಯನ್ನು ಕೊಡುತ್ತಿದ್ದೇವೆ, ಅದು ಯಾವುದೆಂದರೆ - ಧ್ಯಾನ.



ಚತುರ್ಭುಜ್ ಮಂದಿರ, ಖಜುರಾಹೋ



ವಿಷ್ಣುವಿನ ಕರಕಮಲ

ಮಹಾಕಶ್ಯಪನ ಹೆಸರು ಬಹಳ ಮಂದಿಗೆ ಗೊತ್ತಿಲ್ಲ. ಏಕೆಂದರೆ ಆತ ಎಂದೂ ಬರೆದಿಲ್ಲ, ಎಂದೂ ಉಪದೇಶ ಅಥವಾ ಉಪನ್ಯಾಸ ಕೊಟ್ಟಿಲ್ಲ.

ಒಂದು ದಿನ, ಮುಂಜಾನೆ ಪ್ರವಚನ ಹೇಳುವಾಗ ಬುದ್ಧನ ಕೈಯಲ್ಲಿ ಕಮಲದ ಹೂವಿತ್ತು. ಒಂದೇ ಸಮನೆ ಹೂವನ್ನು ದಿಟ್ಟಿಸುತ್ತಾ ಬುದ್ಧ ಕುಳಿತಿದ್ದರು. ಒಂದೇ ಒಂದು ಮಾತನ್ನೂ ಆಡಲಿಲ್ಲ. ಎಲ್ಲೆಡೆ ಮೌನ. ಅಲ್ಲಿ ನೆರೆದಿದ್ದ ಹತ್ತು ಸಾವಿರ ಮಂದಿಗೆ ಆಶ್ಚರ್ಯ. ಬುದ್ಧ ಹೀಗಿರುವುದನ್ನು ಅವರು ಎಂದೂ ನೋಡಿಲ್ಲ. ಬುದ್ಧ ಬರುವಾಗ ಏನನ್ನೂ ತರುತ್ತಿರಲಿಲ್ಲ. ಅಂದು ಕಮಲದ ಹೂವನ್ನು ಹಿಡಿದಿದ್ದರು. ಬಂದ ಕೂಡಲೇ ಮಾತಾಡಲು ಆರಂಭಿಸುತ್ತಿದ್ದರು, ಆದರೆ ಇಂದು ತಾಸು ಕಳೆದರೂ ಹೂವನ್ನೇ ದಿಟ್ಟಿಸುತ್ತಿದ್ದಾರೆ. ಬುದ್ಧನಿಗೆ ಹುಚ್ಚು ಹಿಡಿದಿರಬೇಕೆಂದು ಅಲ್ಲಿ ಸೇರಿದವರೆಲ್ಲಾ ಭಾವಿಸಿದ್ದರು, ಒಬ್ಬನ ಹೊರತಾಗಿ. ಆತ ಮಾತ್ರ ನಗುತ್ತಿದ್ದ. ಅವನೇ ಮಹಾಕಶ್ಯಪ. ಇವರ ನಗುವನ್ನು ಗಮನಿಸಿದ ಬುದ್ಧ ತಾನೂ ನಕ್ಕರು. ಮಹಾಕಶ್ಯಪನನ್ನು ಕರೆದು ಹೂವನ್ನು ಆತನಕೈಗಿತ್ತು ಸಭೆಯನ್ನುದ್ದೇಶಿಸಿ, ''ನಿಮಗೆ ನೀಡಬೇಕಾಗಿದ್ದನ್ನು ನೀಡಿದ್ದೇನೆ. ಮಹಾಕಶ್ಯಪನಿಗೆ ನೀಡಬೇಕಾಗಿದ್ದನ್ನು ನೀಡಿದ್ದೇನೆ. ಕಳೆದ ಅನೇಕ ವರ್ಷಗಳಿಂದ ನಿಮಗೆ ಮಾತಿನ ಮೂಲಕ ಹೇಳಿದ್ದೇನೆ. ಆದರೆ ನಿಮಗೆ ಅರ್ಥವಾಗಲಿಲ್ಲ. ಇಂದು ಮೌನದಲ್ಲಿ ಮಾತಾಡಿದ್ದೇನೆ. ತನ್ನ ನಗುವಿನ ಮೂಲಕ ಮಹಾಕಶ್ಯಪ ತನಗೆ ಅರ್ಥವಾಗಿದೆ ಎಂದು ತೋರಿಸಿಕೊಟ್ಟಿದ್ದಾನೆ,'' ಎಂದರು. ಹೀಗೆ ನಿಗೂಢರೀತಿಯಲ್ಲಿ ಉತ್ತರಾಧಿಕಾರಿ ದೊರಕಿದ: ಮಹಾಕಶ್ಯಪ ಬುದ್ಧನ ಉತ್ತರಾಧಿಕಾರಿಯಾದರು. ಎಂತಹ ವಿಚಿತ್ರ ....!

ಮಹಾಕಶ್ಯಪನ ಶಿಷ್ಯರು ಆತನ ಬಗ್ಗೆ ಕೆಲವು ಸಂಗತಿಗಳನ್ನು ಬರೆದಿದ್ದಾರೆ. ಅದನ್ನು ಆತನ ಪುಸ್ತಕವೆಂದು ಕರೆಯಬಹುದು. ಆದರೆ ಅವುಗಳನ್ನು ಆತ ಬರೆದಿಲ್ಲ. ಅದಕ್ಕೇ ಆತನ ಶಿಷ್ಯರು ಸಹಿಯನ್ನು ಹಾಕಿಲ್ಲ. ಬರೆದವರು ಅನಾಮಿಕರು. ಆದರೆ ಬರೆದಿದ್ದೆಲ್ಲವೂ ಅಮೋಘವಾದವು. ಎಲ್ಲಾ ಚೂರುಗಳು, ಪೂರ್ಣ ಚಂದ್ರನ ಚೂರುಗಳಂತೆ ..... ಅವೆಲ್ಲವನ್ನೂ ನೀವು ಕೂಡಿಸಬಲ್ಲಿರಾದರೆ, ಪೂರ್ಣಚಂದ್ರನನ್ನು ಕಾಣಬಹುದು. ಅವೆಲ್ಲವುಗಳನ್ನು ಒಂದೆಡೆ ಸೇರಿಸುವ ರಹಸ್ಯವೇ ಧ್ಯಾನ. ಮಹಾಕಶ್ಯಪ ಅನುಸರಿಸಿದ ಈ ಸಂಪ್ರಾದಾಯವೇ ಝೆನ್. ಮಹಾಕಶ್ಯಪರೇ ಝೆನ್‌ನ (ಧ್ಯಾನ) ಮೊದಲ ಅಧಿಪತಿ.

ಜಾಗೃತಿಯ ಜ್ವಾಲೆ



ಧ್ಯಾನ ಒಂದು ಸ್ಥಿತಿ.
ನೀವು ಸುಮ್ಮನಿರುತ್ತೀರಿ -
ಏಕಾಗ್ರಚಿತ್ತರಾಗಲು
ಯಾವುದೇ ಚಿಂತನೆ
ಇಲ್ಲದೆ, ಆಲೋಚಿಸಲು
ವಿಷಯಗಳಿಲ್ಲದೆ,
ಧ್ಯಾನಿಸಲು
ವಸ್ತುವಿಲ್ಲದೆ....

ಸಂತ ಪರಂಪರೆಯಲ್ಲಿನ ಮೊದಲ ಕೊಂಡಿ ಗೋರಖ್. ಹೊಸ ವಿಧದ ಧರ್ಮದ ಹುಟ್ಟಿಗೆ ಅವರೇ ಕಾರಣಭೂತರು. ಗೋರಖರು ಇರದಿದ್ದರೆ ಕಬೀರ ಸಾಧ್ಯವಾಗುತ್ತಿರಲೇ ಇಲ್ಲ. ಹಾಗೆಯೇ ದಾದೂ, ಫರೀದ್ ಮತ್ತು ಮೀರಾ ಕೂಡಾ - ಇವರೆಲ್ಲರೂ ಸಾಧ್ಯವಾಗಲು ಗೋರಖರೇ ಪ್ರೇರಕ, ಕರ್ತೃ. ಅವರ ಬಳಿಕ ಈ ದೇಗುಲ ದೊಡ್ಡದಾಯಿತು. ಈ ದೇವಾಲಯದ ಮೇಲೆ ಚಿನ್ನದ ಶೃಂಗಗಳನ್ನು ನಿರ್ಮಿಸಲಾಗಿದೆ. ಅವುಗಳನ್ನು ದೂರದಿಂದ ನೋಡಬಹುದಾದರೂ ಅವು ತಳಹದಿಗಿಂತ ಮುಖ್ಯವಲ್ಲ. ತಳಹದಿ ಯಾರಿಗೂ ಕಾಣಿಸುವುದಿಲ್ಲ, ಆದರೆ ಇದರ ಮೇಲೆ ಇಡೀ ಕಟ್ಟಡ ನಿಂತಿರುತ್ತದೆ - ಎಲ್ಲ ಗೋಡೆಗಳು, ಎಲ್ಲ ಶಿಖರಗಳು. ಜನರು ಗೋಪುರ ಶಿಖರಗಳನ್ನೇನೋ ಪೂಜಿಸುತ್ತಾರೆ. ಆದರೆ ತಳಹದಿಯನ್ನು ಮರೆತೇ ಬಿಡುತ್ತಾರೆ. ಅದೇ ರೀತಿ ಗೋರಖರನ್ನು ಸಹ ಮರೆಯಲಾಗಿದೆ .....

ಆಂತರಿಕ ಶೋಧಕ್ಕಾಗಿ ಗೋರಖ್ ಅಸಂಖ್ಯ ಅವಿಷ್ಕಾರಗಳನ್ನು ಮಾಡಿದರು. ಪ್ರಾಯಶಃ ಇಷ್ಟೊಂದು ಅವಿಷ್ಕಾರಗಳನ್ನು ಮತ್ಯಾರೂ ಮಾಡಿರಲಿಕ್ಕಿಲ್ಲ. ಅವರು ಎಷ್ಟೊಂದು ವಿಧಾನಗಳನ್ನು ತಿಳಿಸಿಕೊಟ್ಟರು. ಈ ವಿಧಾನಗಳೇ ಸಾಕು, ಅವರು ಮಹಾನ್ ಶೋಧಕ ಎನ್ನಲು .... ಅವರು ಎಷ್ಟೊಂದು ವಿಧಾನಗಳನ್ನು ತಿಳಿಸಿದರೆಂದರೆ, ಅವುಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಎಂದು ತಿಳಿಯಲಾರದೆ ಜನರಲ್ಲಿ ಗೊಂದಲ ಉಂಟಾಯಿತು.....

ಗೋರಖರಿಗೆ ಅಪರೂಪ ವ್ಯಕ್ತಿತ್ವ ಹಾಗೂ ಸ್ವಕೀಯತೆ ಇತ್ತು, ಐನ್‌ಸ್ಟೀನ್‌ರಂತೆ. ಬ್ರಹ್ಮಾಂಡದ ಸತ್ಯಗಳ ಅನ್ವೇಷಣೆಗೆ ಐನ್‌ಸ್ಟೀನ್ ಕೆಲವು ವಿಸ್ಮಯಕರ ವಿಧಾನಗಳನ್ನು ನೀಡಿದರು. ಇಂಥದ್ದನ್ನು ಅವರಿಗಿಂತ ಮುಂಚೆ ಯಾರೂ ತೋರಿಸಿಕೊಟ್ಟಿರಲಿಲ್ಲ. ಹೌದು, ಈಗ ಈ ವಿಧಾನಗಳನ್ನು ಮತ್ತಷ್ಟು ಸುಧಾರಿಸಬಹುದು, ಅಭಿವೃದ್ಧಿಪಡಿಸಬಹುದು. ಆದರೆ ಪ್ರಾಥಮಿಕ ಕೆಲಸವನ್ನು ಐನ್‌ಸ್ಟೀನ್ ಈಗಾಗಲೇ ಮಾಡಿದ್ದಾರೆ. ಮೊದಲ ಪಥವನ್ನು ತೋರಿಸಿದವರೇ ಆತ. ಈಗ ಬೇರೆಯವರು ಬರುತ್ತಾರೆ: ಅವರು ಆ ಪಥವನ್ನು ನಿರ್ಮಿಸುತ್ತಾರೆ. ಇಕ್ಕೆಲಗಳಲ್ಲಿ ಮೈಲಿಗಲ್ಲುಗಳನ್ನಿಡುತ್ತಾರೆ. ಪಥವನ್ನು ಸುಂದರಗೊಳಿಸುತ್ತಾರೆ. ಓಡಾಟಕ್ಕೆ ಹಿತವಾಗುವಂತೆ ಮಾಡುತ್ತಾರೆ. ಆದರೆ ಐನ್‌ಸ್ಟೀನ್‌ನ ಜಾಗವನ್ನು ಯಾರೂ ತುಂಬಲಾರರು. ಆಂತರಿಕ ಪ್ರಪಂಚದಲ್ಲಿ ಗೋರಖರ ಸ್ಥಿತಿಯೂ ಇಂಥದ್ದೇ.

ಆದರೆ ಜನರು ಗೋರಖರನ್ನು ಮರೆತದ್ದೇಕೆ? ಜನರು ಪಥವನ್ನು ಅಲಂಕರಿಸಿದವರನ್ನು ನೆನೆಯುತ್ತಾರೆ. ಆದರೆ ಪಥವನ್ನು ಮೊದಲಬಾರಿಗೆ ನಿರ್ಮಿಸಿದವರನ್ನು ಜನ ಮರೆಯುತ್ತಾರೆ - ಕೊನೆಗೆ ಬಂದವರಿಗೆ ಪಥವನ್ನು ಆರಾಮವಾಗಿ ಸುಧಾರಿಸರಲು ಸಮಯವಿತ್ತು, ಮೊದಲು ಬರುವವರು ನಯ ಅಥವ ಹೊಳಪನ್ನು ಹೊಂದಿಲ್ಲದಿರಬಹುದು. ಹಾಗೆ ಗೋರಖ್ ಕೂಡ ಗಣಿಯಿಂದ ಆಗತಾನೆ ಹೆಕ್ಕಿ ತೆಗೆದ ವಜ್ರದಂತೆ.

ಗೋರಖ್ ಮತ್ತು ಕಬೀರ್ ಒಂದೆಡೆ ಕುಳಿತಿದ್ದರೆ, ನೀವು ಕಬೀರರಿಂದ ಪ್ರಭಾವಿತರಾಗುತ್ತೀರಿ, ಗೋರಖರಿಂದಲ್ಲ; ಏಕೆಂದರೆ ಗೋರಖ್ ಈಗ ತಾನೆ ಗಣಿಯಿಂದ ಎತ್ತಿದ ವಜ್ರ, ಆದರೆ ಕಬೀರ್ ..... ಆಭರಣಕಾರರು ಸಾಕಷ್ಟು ತಿದ್ದಿ ತೀಡಿ, ತಿಕ್ಕಿ ಹೊಳಪು ಮಾಡಿದ ವಜ್ರ.

ಗೋರಖರ ಮೇಲೆ ಭಾರತದ ಸಂತ ಸಾಹಿತ್ಯದ ಅರಮನೆಯೇ ನಿಂತಿದೆ. ಇವೆಲ್ಲಾ ಈ ಒಬ್ಬ ವ್ಯಕ್ತಿಯನ್ನು ಆಧರಿಸಿವೆ. ಗೋರಖರು ಹೇಳಿದ್ದೆಲ್ಲಾ ಕ್ರಮೇಣ ಅಸಂಖ್ಯ ಬಣ್ಣಗಳಿಂದ ಕೂಡಿದ ಉಜ್ವಲ ಕಾಂತಿಯಾಯಿತು. ಜನರು 'ಸಾಧನ'ವನ್ನು ಮಾಡುತ್ತಾರೆ. ಶತಮಾನಗಳ ಕಾಲ ಧ್ಯಾನವನ್ನೂ ಮಾಡುತ್ತಾರೆ; ಈ ಸಾಧನೆಯಿಂದ ಎಷ್ಟು ಮಂದಿ ಆಧ್ಯಾತ್ಮ ಜೀವಿಗಳು ಹಾಗೂ ಬುದ್ಧಿವಂತರು ಜನ್ಮ ತಾಳುತ್ತಾರೆಂದು ಯಾರಿಗೆ ಗೊತ್ತು?

'ಪ್ರಾಣ ತ್ಯಜಿಸು, ಓ ಯೋಗಿಯೇ, ಪ್ರಾಣ ತ್ಯಜಿಸು; ಪ್ರಾಣ ತ್ಯಜಿಸು, ಸಾಯುವುದು ಮಧುರ.'

ಗೋರಖರು ಹೇಳುತ್ತಾರೆ, ''ನಾನು ಎಚ್ಚರಗೊಂಡ ಬಳಿಕ ಬಂದ ಸಾವಿನ ಬಗ್ಗೆ ಹೇಳುತ್ತೇನೆ, ಸಾವಿನ ಬಗ್ಗೆ ಕಲಿಸುತ್ತೇನೆ. ಅದು ನಿದ್ದೆಯ ಸಾವೇ ಹೊರತು ನನ್ನದಲ್ಲ, ಉಭಯತ್ವ ಸತ್ತಿತು, ಏಕತ್ವ ಹುಟ್ಟಿತು. ಕಾಲ ಸತ್ತಿತು, ನಾನು ಅನಂತವನ್ನು ಸಾಧಿಸಿದೆ. ಸಣ್ಣ ಸಂಕುಚಿತ ಜೀವನ ಒಡೆದು ಹೋಯಿತು ಹಾಗೂ ಒಂದು ಚಿಕ್ಕ ಹನಿ ಸಾಗರವಾಯಿತು.''

ಹೌದು, ಒಂದು ರೀತಿಯಲ್ಲಿ, ಹನಿಯೊಂದು ಸಮುದ್ರದಲ್ಲಿ ಬಿದ್ದರೆ ಅದು ನಿಶ್ಚಿತವಾಗಿಯೂ ಅಲ್ಲಿ ಲೀನವಾಗಿ ಸಾಯುತ್ತದೆ. ಅದು ಹನಿಯಾಗಿಯಷ್ಟೇ ಸಾಯುತ್ತದೆ. ಇನ್ನೊಂದು ರೀತಿಯಲ್ಲಿ ಆ ಒಂದು ಹನಿಯು ಸಮುದ್ರ ಸೇರಿ ಮೊದಲ ಬಾರಿಗೆ ಮಹಾನ್ ಜೀವನ ಸ್ವರೂಪ ಪಡೆಯುತ್ತದೆ - ಸಮುದ್ರವಾಗಿ ಬಾಳುತ್ತದೆ - ಲೀನ ಹಾಗೂ ಸಾಯುವಿಕೆ - ದಿವ್ಯ ಸದೃಶ ಸಂಯೋಗ. ಇಲ್ಲವಾಗಿ, ಆಗ ಶೋಧನೆ ಸಫಲವಾಗುವುದು ಹಾಗೂ ನಿಮ್ಮೊಳಗಿನಿಂದ ಹೊಸ ಅಭಿವ್ಯಕ್ತಿ ಹೊರಹೊಮ್ಮುವುದು....

'ನೆತ್ತಿಯಿಂದ ಮಗುವೊಂದು ಹೇಳುವುದು: ಅದಕ್ಕೆ ಹೇಗೆ ಹೆಸರಿಡುವುದು?'

ಸಾವಿರಾರು ದಳ ಅಥವಾ ಪಕಳೆಗಳ ಕಮಲದ ಹೂವು ನೆತ್ತಿಯಲ್ಲಿ ಅರಳಿದಾಗ 'ಅಮನ'ದ ಜನನವಾಗುವುದು. ಎಲ್ಲ ವಿಚಾರಗಳೂ ಹೊರಟುಹೋದಾಗ, ಅಹಂ ತೊಲಗಿದಾಗ, 'ನಾನು' ಎಂಬ ಭಾವನೆಯೂ ಸಹ ಇಲ್ಲವಾದಾಗ, ಕೇವಲ ಮೌನ, ಶಾಂತಿ, ಶೂನ್ಯ ಉಳಿಯುವುದು - ಅದನ್ನು 'ಸಮಾಧಿ' ಎಂದು ಕರೆಯುತ್ತಾರೆ.

ಪೂರ್ವಾತ್ಯ ದೇಶಗಳು ಭಾವ-ಪ್ರಧಾನ ಗುಣ ಹೊಂದಿದ್ದರೆ ಪಾಶ್ಚಿಮಾತ್ಯ ದೇಶಗಳು ಬುದ್ಧಿ-ಪ್ರಧಾನ ಗುಣ ಹೊಂದಿವೆ. ಪಾಶ್ಚಿಮಾತ್ಯ ಮನಸ್ಸು ಮಹಾನ್ ವೈಜ್ಞಾನಿಕ ತಳಹದಿಯನ್ನು ಹಾಕಿಕೊಟ್ಟಿದೆ. ಆದರೆ ಪೂರ್ವಾತ್ಯ ಚಿತ್ತಕ್ಕೆ ಇದು ಸಾಧ್ಯವಾಗಿಲ್ಲ. ಮುಗ್ಧತೆ ವಿಜ್ಞಾನವನ್ನು ಸೃಷ್ಟಿಸುವುದಾದರೂ ಹೇಗೆ? ಅದು ಅಸಾಧ್ಯ. ಆದ್ದರಿಂದ ಪೂರ್ವಾತ್ಯ ರಾಷ್ಟ್ರಗಳು ಅವೈಜ್ಞಾನಿಕ ಬದುಕು ಬದುಕುತ್ತಿವೆ.

ಆದರೆ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಈ ತನಕ ಧ್ಯಾನ ಎಂದರೆ ಏನೆಂಬುದು ಗೊತ್ತಿಲ್ಲ. ಅತಿ ಹೆಚ್ಚೆಂದರೆ ಅವರು ಪ್ರಾರ್ಥಿಸಿಯಾರು. ಆದರೆ ಪ್ರಾರ್ಥನೆ ಇಲ್ಲಿ ಮುಖ್ಯವಲ್ಲ. ಪ್ರಾರ್ಥನೆಗೆ ಮನಸ್ಸು ಅವಶ್ಯ; ಸೂತ್ರಗಳನ್ನು ಪದೇ ಪದೇ ಹೇಳಬಹುದು. ಎಲ್ಲಿ ಮನಸ್ಸು ಗೈರುಹಾಜರಿರುತ್ತದೋ ಅಲ್ಲಿ ಪ್ರಾರ್ಥನೆ ಮೌನವಾಗಿರುತ್ತದೆ. ಆಗ ನೀವು ಪ್ರಾರ್ಥಿಸಲಾರಿರಿ. ಅಲ್ಲಿ ಯಾವುದೇ ಪದಗಳಿರುವುದಿಲ್ಲ. ಹೃದಯದೊಂದಿಗೆ ಕೇವಲ ಪ್ರಾರ್ಥನೆ ಸಾಧ್ಯ.

ಪಾಶ್ಚಿಮಾತ್ಯ ದೇಶಗಳಲ್ಲಿ ಆಧ್ಯಾತ್ಮಿಕ ವಿಜ್ಞಾನವನ್ನು ಅಭಿವೃದ್ಧಿಪಡಿಸಿಲ್ಲ, ಧ್ಯಾನದ ಅಭಿವೃದ್ಧಿ ಸಾಧ್ಯವಾಗಿಲ್ಲ. ಅವರು ಧ್ಯಾನವನ್ನು ಏಕಾಗ್ರತೆ ಅಥವಾ ಆಲೋಚನೆಯಾಗಿಸಿದ್ದಾರೆ - ಧ್ಯಾನ ಇವೆರಡೂ ಅಲ್ಲ - ಆದ್ದರಿಂದ ಅವರು ಮೂಲಾಂಶವನ್ನೇ ಬಿಟ್ಟಿದ್ದಾರೆ. ಏಕಾಗ್ರತೆ ಮನಸ್ಸಿನ ಪ್ರಕ್ರಿಯೆ. ಮನಸ್ಸು ಏಕಾಗ್ರವಾದಾಗ ಹಾಗೂ ಇಡೀ ವಿಚಾರ ಪ್ರಕ್ರಿಯೆ ಕೇಂದ್ರೀಕೃತವಾದಾಗ, ಅದು ವಿಚಾರಶೀಲವಾಗುವುದು. ಇದು ಹೃದಯಕ್ಕೆ ಸಂಬಂಧಿಸಿದ ಪ್ರಶ್ನೆಯಲ್ಲ.

ಧ್ಯಾನ ಆಲೋಚನೆಯೂ ಅಲ್ಲ, ಏಕಾಗ್ರತೆಯೂ ಅಲ್ಲ. ಅದು ಅಮಾನಸಿಕ, ಅ-ಮನ ಜೀವನ. ಧ್ಯಾನ ಎಂದರೆ ಪ್ರಪಂಚ ಮತ್ತು ನಿಮ್ಮ ನಡುವೆ ಅ-ಮನದ ಸಂಪರ್ಕ. ಯಾವಾಗ ಮನಸ್ಸು ಗೈರುಹಾಜರಿರುವುದೋ, ಆಗ ನಿಮ್ಮ ಮತ್ತು ಅಸ್ತಿತ್ವದ ನಡುವೆ ಅಂತರ ಇರುವುದಿಲ್ಲ. ನಿಮ್ಮ ಮತ್ತು ದೈವಿಕದ ಮಧ್ಯೆ ಅಂತರ ಇರುವುದಿಲ್ಲ. ಏಕೆಂದರೆ ಹೃದಯ ಗಡಿರೇಖೆ ಹಾಕುವುದಿಲ್ಲ, ಅದು ವ್ಯಾಖ್ಯಾನಿಸುವುದೂ ಇಲ್ಲ.

ವ್ಯಾಖ್ಯಾನದಿಂದ ಮನಸ್ಸು ಸರಹದ್ದು, ಗಡಿರೇಖೆ, ಎಲ್ಲೆಯನ್ನು ನಿರ್ಮಿಸುತ್ತದೆ. ಆದರೆ ಹೃದಯದ ಒಡಗೂಡಿದಾಗ ಅಸ್ತಿತ್ವ ಸರಹದ್ದನ್ನು ಹೊಂದಿರುವುದಿಲ್ಲ. ನೀವು ಎಲ್ಲೋ ಮುಗಿದುಹೋಗುವುದಿಲ್ಲ ಹಾಗೂ ಮತ್ತೊಬ್ಬರು ಎಲ್ಲೋ ಮೊದಲಾಗುವುದಿಲ್ಲ. ನೀವು ಎಲ್ಲೆಡೆ ಇರುತ್ತೀರಿ. ಇಡೀ ಅಸ್ತಿತ್ವದಲ್ಲಿ ಒಂದಾಗಿರುತ್ತೀರಿ......

ಗುರು-ಶಿಷ್ಯ ಸಂಬಂಧ ಹೃದಯಗಳ ಅರಿಯುವಿಕೆ.[11]

ಪೂರ್ವಾತ್ಯ ದೇಶಗಳಲ್ಲಿ ಅದೆಷ್ಟೋ ರಹಸ್ಯ ಕೀಲಿಗಳಿವೆ. ಆದರೆ ಒಂದೇ ಒಂದು ಬೀಗದಕ್ಕೆ ಸಾಕು. ಏಕೆಂದರೆ ಒಂದೇ ಕೀಲಿಯಿಂದ ಸಾವಿರಾರು ಬೀಗಗಳನ್ನು ತೆಗೆಯಬಹುದು. ಗುರು ಮತ್ತು ಶಿಷ್ಯನ ನಡುವಿನ ಸಂಬಂಧ ಅಂತಹ ಕೀಲಿಗಳ ಪೈಕಿ ಒಂದು.[12]

ಸರಹರ ಮೂಲ ಹೆಸರು 'ರಾಹುಲ.' ಆತನ ತಂದೆ ಆ ಹೆಸರನ್ನಿಟ್ಟಿದ್ದರು. ರಾಹುಲ ಹೇಗೆ ಸರಹರಾದರೆಂಬುದು ಸ್ವಾರಸ್ಯಪೂರ್ಣ ಕತೆ. ಅವರು ಶ್ರೀಕೀರ್ತಿಯವರನ್ನು ಭೇಟಿಯಾದಾಗ ಅವರು ಹೇಳಿದರು - ''ನೀನು ಕಲಿತಿದ್ದೆಲ್ಲವನ್ನೂ ಮರೆತುಬಿಡು. ವೇದಗಳನ್ನು ಮರೆತುಬಿಡು.'' ಇದು ಕಷ್ಟವೆನಿಸಿದರೂ, ಎಲ್ಲವನ್ನು ತ್ಯಜಿಸಲು ಸರಹ ಸಿದ್ಧರಾದರು. ಶ್ರೀಕೀರ್ತಿಯವರಲ್ಲಿರುವ ಯಾವುದೋ ಒಂದು ಅಂಶ ಆತನನ್ನು ಬಹುವಾಗಿ ಆಕರ್ಷಿಸಿತು. ಶ್ರೀಕೀರ್ತಿ ಅಸಾಧಾರಣ ಚುಂಬಕ. ಸರಹ ತಾನು ಕಲಿತಿದ್ದುದೆಲ್ಲವನ್ನೂ ತ್ಯಜಿಸಿದರು. ಅಶಿಕ್ಷಿತರಾದರು.

ವರ್ಷಗಳು ಉರುಳಿಹೋದುವು. ಕಲಿತಿದ್ದೆಲ್ಲವನ್ನೂ ಅಳಿಸಿಹಾಕಿದರು. ಎಲ್ಲವನ್ನೂ ಮರೆತರು. ಮಹಾನ್ ಧ್ಯಾನಾಸಕ್ತನಾದರು. ಹಿಂದೊಮ್ಮೆ ಮಹಾನ್ ವಿದ್ವಾಂಸ ಎಂಬ ಖ್ಯಾತಿ ಹರಡಿದಂತೆ ಇಂದು ಸರಹ ಮಹಾನ್ ಧ್ಯಾನಿ ಎಂದು ಎಲ್ಲೆಡೆ ಖ್ಯಾತಿ ಹರಡಿತು. ಮುಂಜಾವಿನಲ್ಲಿ ಹುಲ್ಲಿನ ಮೇಲೆ ಆವರಿಸುವ ಇಬ್ಬನಿಯಂತೆ, ಆಗ ತಾನೆ ಮೂಡಿದ ಚಿಗುರೆಲೆಯಂತೆ ಮುಗ್ಧನಾಗಿರುವ ಈ ಯುವಕನನ್ನು ನೋಡುವುದಕ್ಕಾಗಿ ಜನರು ಬಹಳ ದೂರಗಳಿಂದ ಬರಲಾರಂಭಿಸಿದರು.

ಒಂದು ದಿನ ಸರಹ ಧ್ಯಾನದಲ್ಲಿ ಮುಳುಗಿದ್ದಾಗ ದೃಶ್ಯವೊಂದನ್ನು ಕಂಡರು. ಮುಂದೊಂದು ದಿನ ಮಾರುಕಟ್ಟೆಯ ಹೆಂಗಸೊಬ್ಬಳು ತನ್ನ ನಿಜವಾದ ಗುರು ಆಗಲಿರುವಳು ಎಂಬುದೇ ಆ ದೃಶ್ಯ. ಶ್ರೀಕೀರ್ತಿ ಮಾರ್ಗದರ್ಶನ ಮಾಡಿದರು. ಆದರೆ, ನಿಜವಾದ ವಿದ್ಯೆ ಹೆಂಗಸೊಬ್ಬಳಿಂದ ಸಿಗಬೇಕಿತ್ತು. ಇದನ್ನು ತಿಳಿಯುವುದು ಅವಶ್ಯ: ಯಾವತ್ತೂ ಪುರುಷ-ಮೇಲುಗೈ ಸಾಧಿಸಲು ಸಾಧ್ಯವಾಗದಿರುವುದು ತಂತ್ರದಲ್ಲಿ ಮಾತ್ರ. ನಿಜವಾಗಿ ಹೇಳುವುದಾದರೆ, ತಂತ್ರವನ್ನು ಅರಿಯಬೇಕಾದರೆ ಬುದ್ಧಿವಂತ ಹೆಂಗಸಿನ ಸಹಾಯ ಬೇಕು. ಜಾಣೆಯೊಬ್ಬಳ ಸಹಕಾರವಿಲ್ಲದೆ ತಂತ್ರವೆಂಬ ಸಂಕೀರ್ಣ ಜಗದೊಳಪೆ ಪ್ರವೇಶಿಸುವುದು ಅಸಾಧ್ಯ.

ಅವರು ಕಂಡ ದೃಶ್ಯ - ಮಾರುಕಟ್ಟೆಯಲ್ಲಿ ಹೆಂಗಸು. ಮೊದಲಾಗಿ ಹೆಂಗಸು ಮತ್ತು ಎರಡನೆಯದಾಗಿ ಮಾರುಕಟ್ಟೆಯಲ್ಲಿ. ಮಾರುಕಟ್ಟೆಯಲ್ಲಿ, ದಟ್ಟ ಜೀವನದಲ್ಲಿ ತಂತ್ರ ವೃದ್ಧಿಸುತ್ತದೆ. ಇದು ನಿರಾಕರಣೆಯ ಸೂಚಕವಲ್ಲ, ಇದು ಗರಿಣಾತ್ಮಕ. ಸರಹ ತಕ್ಷಣ ಎದ್ದು ನಿಂತರು. ಶ್ರೀಕೀರ್ತಿ ಕೇಳಿದರು, ''ಎಲ್ಲಿಗೆ ಹೋಗುತ್ತಿದ್ದೀಯಾ?'' ಅದಕ್ಕೆ ಸರಹ ನುಡಿದರು, ''ನೀವು ನನಗೆ ದಾರಿಯನ್ನು ತೋರಿದ್ದೀರಿ. ನಾನು ಕಲಿತಿದ್ದೆಲ್ಲವನ್ನು ತ್ಯಜಿಸುವಂತೆ ಮಾಡಿದ್ದೀರಿ. ಕಲಿಕೆ-ಯೆಲ್ಲವನ್ನೂ ತೆಗೆದುಹಾಕಿದಿರಿ. ನೀವು ಅರ್ಧ ಕೆಲಸವನ್ನು ಮಾಡಿದ್ದೀರಿ, ನನ್ನ ಸ್ಲೇಟನ್ನು ಸ್ವಚ್ಛಗೊಳಿಸಿದ್ದೀರಿ. ಉಳಿದರ್ಧವನ್ನು ಮುಗಿಸಲು ನಾನೀಗ ಸಿದ್ಧನಾಗಿದ್ದೇನೆ.'' ಮುಗುಳ್ನಗುತ್ತಿದ್ದ ಶ್ರೀಕೀರ್ತಿಗಳಿಂದ ಆಶೀರ್ವಚನವನ್ನು ಪಡೆದು ಸರಹ ಹೊರಟರು.

ಸರಹ ನೇರವಾಗಿ ಮಾರುಕಟ್ಟೆಯನ್ನು ತಲುಪಿದರು. ಅಲ್ಲಿಯ ದೃಶ್ಯವನ್ನು ನೋಡಿ ಆಶ್ಚರ್ಯಚಕಿತರಾದರು. ಧ್ಯಾನದಲ್ಲಿ ಕಂಡ ಹೆಂಗಸನ್ನು ನಿಜವಾಗಿಯೂ ಕಂಡರು. ಆ ಹೆಂಗಸು ಬಾಣವನ್ನು ತಯಾರಿಸುತ್ತಿದ್ದಳು. ಆಕೆ ಬಾಣ ತಯಾರಿಸುವ ಕಸುಬಿನವಳು.

ತಂತ್ರದ ಬಗ್ಗೆ ನೆನಪಿಡಬೇಕಾದ ಮೂರನೆಯ ಅಂಶವೆಂದರೆ: ಹೆಚ್ಚು ಸುಸಂಸ್ಕೃತರು ಹಾಗೂ ಸಂಸ್ಕಾರವಂತರು ತಂತ್ರದ ಪ್ರಭಾವಕ್ಕೊಳಗಾಗಿ ಪರಿವರ್ತಿತರಾಗುವ ಸಾಧ್ಯತೆ ಕಡಿಮೆ. ಕಡಿಮೆ ಸಂಸ್ಕಾರವಂತರು ಮತ್ತು ಅಸಂಸ್ಕೃತರು ಯಾವತ್ತೂ ಹೆಚ್ಚು ಜೀವಂತವಾಗಿಯೂ, ಜೀವನೋತ್ಸಾಹವನ್ನು ತುಂಬಿ-ಕೊಂಡೂ ಇರುತ್ತಾರೆ. ಹೆಚ್ಚು ಹೆಚ್ಚು ಸುಸಂಸ್ಕೃತರಾದ ಹಾಗೆಲ್ಲಾ ನೀವು ಹೆಚ್ಚು 'ಪ್ಲಾಸ್ಟಿಕ್' ಆಗುತ್ತೀರಿ, ಅಪ್ರಾಕೃತಿಕರಾಗುತ್ತೀರಿ. ಹೀಗಾದಾಗ ನೀವು ಮೂಲಸತ್ವ ಮತ್ತು ಮೂಲಬೇರನ್ನು ಕಳೆದುಕೊಳ್ಳುತ್ತೀರಿ. ಈ ಕೊಳಕು ಜಗತ್ತನ್ನು ಕಂಡು ಭಯ ಬೀಳುತ್ತೀರಿ. ಅಂತಹ ಜಗತ್ತಿನಿಂದ ದೂರ ಸರಿಯುತ್ತೀರಿ. ಈ ಜಗಕ್ಕೆ ಸೇರದವರಂತೆ ಸೋಗುಹಾಕುತ್ತೀರಿ. ತಂತ್ರ ಹೇಳುತ್ತದೆ - ನಿಜವಾದ ವ್ಯಕ್ತಿಯನ್ನು ಹುಡುಕಬೇಕಾದರೆ ಮೂಲಕ್ಕೆ ಹೋಗಬೇಕು .... ಬಾಣ ತಯಾರಿಸುವ ಹೆಂಗಸು ಕೆಳಸ್ತರದವಳು. ನೀಚ ಕುಲದವಳು. ಸರಹ ವಿದ್ಯಾವಂತರು, ಉಚ್ಚ ಬ್ರಾಹ್ಮಣ ಕುಲೀನ, ರಾಜನ ಆಸ್ಥಾನಕ್ಕೆ ಸೇರಿದವರು. ಇಂಥವರು ಬಾಣ ತಯಾರಿಸುವ ಹೆಂಗಸಿನೆಡೆ ಹೋಗುವುದು ಸಾಂಕೇತಿಕ. ಪಂಡಿತ ಜೀವ ಶಕ್ತಿಯೆಡೆಗೆ ಹೋಗಬೇಕು. ಪ್ಲಾಸ್ಟಿಕ್, ಕೃತಕ ನೈಜತೆಯೆಡೆಗೆ ಹೋಗಬೇಕು.

ಸರಹ ಆ ಹೆಂಗಸನ್ನು ನೋಡುತ್ತಾರೆ. ಯೌವನ ತುಂಬಿದಾಕೆ, ಲವಲವಿಕೆಯಿಂದಿದ್ದಾಳೆ. ಜೀವನೋತ್ಸಾಹ ಪುಟಿಯುತ್ತಿದೆ. ಬಾಣದ ಸಲಾಕೆಯನ್ನು ಕತ್ತರಿಸುತ್ತಿದ್ದಾಳೆ. ಬಲಕ್ಕೂ ನೋಡುತ್ತಿಲ್ಲ ಎಡಕ್ಕೂ ನೋಡುತ್ತಿಲ್ಲ. ಬಾಣ ತಯಾರಿಕೆಯಲ್ಲಿ ತಲ್ಲೀನಳಾಗಿದ್ದಾಳೆ. ಅವರು ಆಕೆಯಲ್ಲಿ ಏನೋ ಅಸಾಧಾರಣವಾದುದನ್ನು ಗಮನಿಸಿದರು. ಅಂಥದ್ದನ್ನು ಅವರು ಹಿಂದೆಂದೂ ನೋಡಿರಲಿಲ್ಲ. ಈ ಹೆಂಗಸಿನ ಮುಂದೆ ತನ್ನ ಗುರು ಶ್ರೀಕೀರ್ತಿ ಸಪ್ಪೆ ಎನಿಸಿತು. ಎಷ್ಟೊಂದು ಲವಲವಿಕೆ, ಎಷ್ಟೊಂದು ನಿಷ್ಕಲ್ಮಷ, ಮೂಲ ಸೆಲೆಯಿಂದಲೇ ಮೂರ್ತಿವೆತ್ತಂತಿದ್ದಾಳೆ. ಸರಹ ಮತ್ತೊಮ್ಮೆ ಕೂಲಂಕಷವಾಗಿ ನೋಡಿದರು. ಆ ಹೆಂಗಸು ಒಂದು ಕಣ್ಣನ್ನು ಮುಚ್ಚಿ, ಇನ್ನೊಂದನ್ನು ತೆರೆದು ಅದೃಶವಾದ ಗುರಿಯತ್ತ ಬಾಣ ನೆಟ್ಟಿದ್ದಾಳೆ. ಸರಹ ಮತ್ತೂ ಸ್ವಲ್ಪ ಮುಂದೆ ಬಂದು ದಿಟ್ಟಿಸಿದರು. ಆಕೆ ಒಂದು ಕಣ್ಣನ್ನು ಮುಚ್ಚಿ, ಇನ್ನೊಂದನ್ನು ತೆರೆದು ಕಾಣದ ಗುರಿಯೆಡೆಗೆ ಬಾಣವನ್ನು ಹೂಡಿದ್ದಾಳೆ. ಅಗೋಚರ, ಅದೃಶ ಗುರಿಯತ್ತ, ಸರಹರಿಗೆ ಇದರಿಂದ ಒಂದು ಸಂಗತಿ ಅರಿವಿಗೆ ಬರಲಾರಂಭಿಸಿತು. ಈ ಭಂಗಿ ಸಾಂಕೇತಿಕ ಎನಿಸಿತಾದರೂ ಅದು ಸ್ಪಷ್ಟವಾಗಿರಲಿಲ್ಲ. ಎಲ್ಲವೂ ಮಬ್ಬು ಮಬ್ಬಾಗಿತ್ತು. ಅವರಿಗೆ ಏನೋ ಅನಿಸತೊಡಗಿತು. ಆದರೆ, ಅಲ್ಲಿ ಏನು ನಡೆಯುತ್ತಿದೆ ಎಂಬುದು ಸ್ಪಷ್ಟವಾಗಲಿಲ್ಲ.

ಕೊನೆಗೆ ಸರಹ ಆಕೆಯನ್ನು ಕೇಳಿದರು - ''ಬಾಣಗಳ ತಯಾರಿಕೆ ನಿನ್ನ ವೃತ್ತಿಯೇ?'' ಅದನ್ನು ಕೇಳಿ ಆಕೆ ಗೊಳ್ಳೆಂದು ನಕ್ಕಳು. ''ಮೂರ್ಖ ಬ್ರಾಹ್ಮಣನೇ! ನೀನು ವೇದಗಳನ್ನು ಬಿಟ್ಟಿದ್ದೀಯೆ. ಆದರೆ ಬುದ್ಧನ ಮಾತುಗಳನ್ನು ಧಮ್ಮಪದವನ್ನು ಪೂಜಿಸುತ್ತಿದ್ದೀಯೆ, ಅದರಿಂದೇನು ಪ್ರಯೋಜನ? ಕೇವಲ ಪುಸ್ತಕಗಳನ್ನು ಬದಲಿಸಿರುವೆ. ಸಿದ್ಧಾಂತಗಳನ್ನು ಬದಲಿಸಿರುವೆ. ಆದರೆ ನೀನು ಮಾತ್ರ ಯಾವತ್ತೂ ಅದೇ ಮೂರ್ಖನಂತೆಯೇ ಇದ್ದೀಯೆ.''

ಸರಹ ಒಮ್ಮೆಗೆ ಬೆಚ್ಚಿಬಿದ್ದರು. ಕಂಗಾಲಾದರು. ಯಾರೂ ಅವರನ್ನು ಹೀಗೆ ಅವಹೇಳನ ಮಾಡಿರಲಿಲ್ಲ. ಅಸಂಸ್ಕೃತ ಹೆಂಗಸು ಮಾತ್ರ ಹೀಗೆ ಮಾತನಾಡಬಲ್ಲಳು. ಅವಳ ನಗು, ನಕ್ಕ ರೀತಿ ಎಷ್ಟೇ ಅನಾಗರೀಕವಾಗಿದ್ದರೂ, ಅದರಲ್ಲಿ ಏನೋ ಒಂದು ಜೀವಂತಿಕೆ ಇತ್ತು. ಯಾರೋ ಅವರನ್ನು ಹಿಡಿದು ಎಳೆದಂತೆನಿಸಿತು. ಆಕೆ ಅಸಾಧಾರಣ ಆಯಸ್ಕಾಂತ ಹಾಗೂ ಇವರು ಕಬ್ಬಿಣದ ಚೂರು.

ಆಕೆ ಕೆಣಕಿದಳು: ''ನೀನೊಬ್ಬ ಬೌದ್ಧ ಎಂದು ಭಾವಿಸಿರುವೆಯೋ?'' ಅವರು ಸುಮ್ಮನಿದ್ದರು. ಆಕೆ ಪುನಃ ನಕ್ಕು ನುಡಿದಳು - ''ಕೇವಲ ಕ್ರಿಯೆಗಳಿಂದ ಮಾತ್ರ ಬುದ್ಧನ ಅರ್ಥವನ್ನು ತಿಳಿಯಬಹುದು. ಮಾತಿನಿಂದ ಅಲ್ಲ, ಪದಗಳಿಂದ ಅಲ್ಲ, ಪುಸ್ತಕಗಳಿಂದಲೂ ಅಲ್ಲ. ನಿನಗೆ ಇನ್ನೂ ಸಾಕಾಗಿಲ್ಲವೇ? ಇವೆಲ್ಲವುಗಳಿಂದ ನಿನಗೆ ಜಿಗುಪ್ಸೆ ಬಂದಿಲ್ಲವೆ? ಇಂತಹ ವ್ಯರ್ಥ ಪ್ರಯತ್ನದಲ್ಲಿ ನಿನ್ನ ಸಮಯವನ್ನು ಹಾಳು ಮಾಡಬೇಡ. ಬಾ, ನನ್ನನ್ನು ಹಿಂಬಾಲಿಸು.''

ಆಗ ಅವರಲ್ಲಿ ಏನೋ ಘಟಿಸಿತು. ಒಂದು ರೀತಿಯ ಸಂಸರ್ಗ ಅಥವಾ ಸಂಯೋಗ ಘಟಿಸಿತು. ಇಂತಹ ಅನುಭವ ಈಮೊದಲು ಅವರಿಗೆ ಎಂದೂ ಆಗಿರಲಿಲ್ಲ. ಆ ಸಂದರ್ಭದಲ್ಲಿ ಆಕೆ ಮಾಡುತ್ತಿದ್ದುದರ ಆಧ್ಯಾತ್ಮಿಕ ಮಹತ್ವ ಸರಹರಿಗೆ ಹೊಳೆಯಿತು. ಬಲಕ್ಕೂ ನೋಡದೆ, ಎಡಕ್ಕೂ ನೋಡದೆ, ಕೇವಲ ಮಧ್ಯವನ್ನು ದಿಟ್ಟಿಸುತ್ತಿದ್ದ ಆಕೆಯನ್ನು ಸರಹ ಗಮನಿಸಿದರು. ಬುದ್ಧನ ಹೇಳಿಕೆ, ''ಅಕ್ಷರೇಖೆಯನ್ನು ಬಿಟ್ಟು ಮಧ್ಯದಲ್ಲಿರುವುದು,'' ಎಂದರೇನೆಂಬುದು ಮೊದಲಬಾರಿಗೆ ಅರಿವಾಯಿತು. ಮೊದಲು ಅವರು ತತ್ವಜ್ಞಾನಿಯಾಗಿದ್ದರು. ಈಗ ತತ್ವಜ್ಞಾನದ ವಿರೋಧಿ. ಮೊದಲು ಆರಾಧಿಸುತ್ತಿದ್ದುದರ 'ವಿರುದ್ಧ'ವನ್ನು ಈಗ ಆರಾಧಿಸುತ್ತಿದ್ದಾರೆ. ಆದರೆ, ಆರಾಧನೆ ಮುಂದುವರೆದಿದೆ. ನೀವು ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಹೋಗಬಹುದು. ಆದರೆ ಅದರಿಂದ ಪ್ರಯೋಜನ ಏನು? ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಚಲಿಸುವ ಗಡಿಯಾರದ ಲೋಲಕದ ಹಾಗೆ.

ಇದನ್ನೇ ಶ್ರೀಕೀರ್ತಿ ಅನೇಕಬಾರಿ ಹೇಳಿದ್ದನ್ನು ಸರಹ ಕೇಳಿದ್ದರು. ಈ ಕುರಿತು ಸಾಕಷ್ಟು ಓದಿದ್ದರು. ಪರ್ಯಾಲೋಚಿಸಿದ್ದರು. ಚಿಂತಿಸಿದ್ದರು. ಇತರರೊಂದಿಗೆ, ಮಧ್ಯದಲ್ಲಿರುವುದೇ ಸರಿಯೆಂದು ವಾದಿಸಿದ್ದರು ಕೂಡ.

ಮೊದಲಬಾರಿಗೆ ಮಧ್ಯದಲ್ಲಿರುವುದನ್ನು ಕ್ರಿಯೆಯಲ್ಲಿ ಕಂಡರು. ಆ ಹೆಂಗಸು ಎಡಕ್ಕೂ ನೋಡುತ್ತಿರಲಿಲ್ಲ ಬಲಕ್ಕೂ ನೋಡುತ್ತಿರಲಿಲ್ಲ ..... ಆಕೆ ತದೇಕ ಚಿತ್ತದಿಂದ ಮಧ್ಯವನ್ನಷ್ಟೆ ನೋಡುತ್ತಿದ್ದಳು. ಮಧ್ಯದಲ್ಲಿ ದೃಷ್ಟಿ ನೆಟ್ಟಿದ್ದಳು. ಆಕೆ ಎಷ್ಟೊಂದು ತಲ್ಲೀನಳಾಗಿದ್ದಳೆಂದರೆ, ಪಕ್ಕದಲ್ಲಿಯೇ ನಿಂತು ತನ್ನನ್ನು ನೋಡುತ್ತಿರುವ ಸರಹರನ್ನೂ ಗಮನಿಸಿರಲಿಲ್ಲ. ಆಕೆ ತನ್ನ ಕಾಯಕ, ಕ್ರಿಯೆಯಲ್ಲಿ ಗಾಢವಾಗಿ ಮುಳುಗಿಹೋಗಿದ್ದಳು - ಇದೂ ಕೂಡ ಬುದ್ಧನ ಸಂದೇಶವೇ: ಕ್ರಿಯೆಯಲ್ಲಿ ಸಂಪೂರ್ಣವಾಗಿ ತೊಡಗಿರುವುದೆಂದರೆ ಕ್ರಿಯೆಯಿಂದ ಸಂಪೂರ್ಣ ಮುಕ್ತನಾಗಿರುವುದು.

ಆಕೆ ಸಂಪೂರ್ಣ ಮಗ್ನಳಾಗಿದ್ದಳು. ಅದಕ್ಕಾಗಿ ಅವಳ ಮುಖದಲ್ಲಿ ಕಾಂತಿ ಲಾಸ್ಯವಾಡುತ್ತಿತ್ತು. ಅವಳಲ್ಲಿ ಸೌಂದರ್ಯ ಮನೆಮಾಡಿತ್ತು. ಆಕೆ ಸಾಮಾನ್ಯ ಹೆಂಗಸಾಗಿದ್ದರೂ ಆಕೆಯ ಸೌಂದರ್ಯ ಮಾತ್ರ ಅಲೌಕಿಕವಾಗಿತ್ತು. ಅವಳ ತಲ್ಲೀನತೆ ಆ ಸೌಂದರ್ಯವನ್ನು ತಂದುಕೊಟ್ಟಿತ್ತು. ಆಕೆ ಅತಿಗಾಮಿಯಲ್ಲದ್ದರಿಂದ ಆಕೆಗೆ ಸೌಂದರ್ಯ ಬಂದಿತ್ತು. ಆಕೆ ಮಧ್ಯದಲ್ಲಿ ಸಮತೋಲನದಲ್ಲಿ ಇದ್ದುದರಿಂದ ಆಕೆಗೆ ಸೌಂದರ್ಯ ಬಂದಿತ್ತು.

ಕೇವಲ ದೈಹಿಕವಾಗಿ ಮಾತ್ರವಲ್ಲದೆ ಆಧ್ಯಾತ್ಮಿಕವಾಗಿಯೂ ಸುಂದರಳಾದ ಹೆಂಗಸನ್ನು ಸರಹ ಮೊದಲಬಾರಿಗೆ ಎದುರಿಸಿದ್ದರು. ಸ್ವಾಭಾವಿಕವಾಗಿ ಅವರು ಶರಣಾದರು. ಸಂಪೂರ್ಣ ತಲ್ಲೀನತೆ ..... ಕಾಯಕವೇನೆ ಇರಲಿ ಅದರಲ್ಲಿ ಆಕೆಯ ಮಗ್ನತೆ ..... ಮೊಟ್ಟಮೊದಲಿಗೆ ಅವರಿಗೆ ಒಂದು ಸಂಗತಿ ಅರಿವಿಗೆ ತಂದಿತ್ತು - ಧ್ಯಾನವೆಂದರೆ ಇದೇ. ಧ್ಯಾನವೆಂದರೆ ವಿಶೇಷ ಸಮಯ, ಸಂದರ್ಭದಲ್ಲಿ ಕುಳಿತು ಮಂತ್ರ ಪಠಿಸುವುದಲ್ಲ, ದೇವಾಲಯ, ಚರ್ಚ್, ಮಸೀದಿಗಳಿಗೆ ಹೋಗುವುದಲ್ಲ. ಸದಾ ಜೀವನ ಅಥವಾ ಬದುಕಿನೊಂದಿಗೆ ಇರುವುದು. ಅಪ್ರಯೋಜಕ ಕೆಲಸ ಮಾಡುವಾಗ ಸಹ, ಪ್ರತಿ ಕ್ರಿಯೆಯಲ್ಲೂ ಅಗಾಧತೆ ವ್ಯಕ್ತವಾಗುವಂತಹ ತಲ್ಲೀನತೆ ಹೊಂದುವುದು.

ಮೊದಲ ಬಾರಿಗೆ ಧ್ಯಾನವೆಂದರೆ ಏನೆಂಬುದು ಅವರ ಅನುಭವಕ್ಕೆ ಬಂದಿತ್ತು. ಆ ದಿವ್ಯ ಅನುಭವ ಅವರದಾಗಿತ್ತು.

ಆ ಹೆಂಗಸಿನ ಕ್ರಿಯೆಯಿಂದ ಇಷ್ಟೆಲ್ಲವನ್ನೂ ಅರಿತುಕೊಂಡ, ಸತ್ಯವನ್ನು ಕಂಡುಕೊಂಡ ಅವರನ್ನು ಆ ಹೆಂಗಸು, 'ಸರಹ' ಎಂದು ಕರೆದಳು. ಅವರ ಹೆಸರು ರಾಹುಲ, ಆದರೆ ಆಕೆ ಆತನನ್ನು 'ಸರಹ' ಎಂದು ಕರೆದಳು. 'ಸರಹ' ಒಂದು ಸುಂದರ ಪದ. ಇದರ ಅರ್ಥ: 'ಸರ' ಎಂದರೆ ಬಾಣ. 'ಹ' ಎಂದರೆ ಹೊಡೆ. 'ಸರಹ' ಎಂದರೆ ಬಾಣ ಬಿಡುವವ ಅಥವಾ ಬಾಣ ಹೊಡೆಯುವವ. ತನ್ನ ಕ್ರಿಯೆಯನ್ನು ಗುರುತಿಸಿದ, ಸಾಂಕೇತಿಕ ಭಂಗಿಯನ್ನು ಅರ್ಥೈಸಿದ, ತಾನೇನು ಮಾಡುತ್ತಿದ್ದೆ ಎಂಬುದನ್ನು ಅರಿತುಕೊಂಡ ಅವರ ಬಗ್ಗೆ ಆಕೆಗೆ ಹೆಮ್ಮೆ ಮೂಡಿತು. ಸಂತೋಷ ಒಮ್ಮೆಗೆ ಕಟ್ಟೆಯೊಡೆಯಿತು. ಆಕೆ ಖುಷಿಯಿಂದ

ನರ್ತಿಸುತ್ತಾ 'ಸರಹ' ಎಂದು ಕರೆಯತೊಡಗಿದಳು. ''ಇಂದಿನಿಂದ, ಈಗಿಂದ ನಿನ್ನನ್ನು 'ಸರಹ' ಎಂದು ಕರೆಯುತ್ತೇನೆ. ಅದೇ ನಿನ್ನ ಹೆಸರು. ನೀನು ಬಾಣವನ್ನು ಹೊಡೆದಿದ್ದೀಯ. ನನ್ನ ಕ್ರಿಯೆಯ ಪ್ರಾಮುಖ್ಯವನ್ನು ಅರ್ಥೈಸಿಕೊಂಡು, ಅದರ ಮರ್ಮ ಭೇದಿಸಿದ್ದೀಯಾ,'' ಎಂದು ನುಡಿದಳು. ರಾಹುಲ ಸರಹ ಆದರು.

ಈ ಹೆಂಗಸು ಮತ್ಯಾರೂ ಅಲ್ಲ, ಹುದುಗಿದ್ದ ಅಥವಾ ಅಗೋಚರ ಬುದ್ಧ ಎಂದು ದಂತಕತೆಗಳು ಹೇಳುತ್ತವೆ. ಧರ್ಮ ಶಾಸ್ತ್ರ ಅಥವಾ ಪುರಾಣ ಗ್ರಂಥಗಳಲ್ಲಿ ಬುದ್ಧರ ಹೆಸರು ಸುಖನಾಥ - ಸತ್ವಶಾಲಿ ಸರಹನ ಸಹಾಯಕ್ಕೆ ಆಗಮಿಸಿದ ಬುದ್ಧ. ಸುಖನಾಥ ಹೆಸರಿನ ಬುದ್ಧ ಹೆಂಗಸಿನ ಸ್ವರೂಪ ಪಡೆದರು. ಏಕೆ? ಹೆಂಗಸಿನ ರೂಪವೇ ಏಕೆ? ಏಕೆಂದರೆ, ಹೆಣ್ಣಿನಿಂದ ಮನುಷ್ಯ ಹುಟ್ಟುವ ಹಾಗೆ ಶಿಷ್ಯನ ಜನನವೂ ಹೆಂಗಸಿನಿಂದಲೇ ಎಂದು ತಂತ್ರ ಭಾವಿಸಿದೆ. ನಿಜವಾಗಿ ಹೇಳುವುದಾದರೆ ಎಲ್ಲ ಗುರುಗಳೂ ತಂದೆಗಿಂತ ಹೆಚ್ಚು ತಾಯಿಯಾಗಿರುತ್ತಾರೆ. ಅವರೆಲ್ಲಾ ಸ್ತ್ರೀ ಸಹಜ ಗುಣ ಹೊಂದಿರುತ್ತಾರೆ. ಬುದ್ಧ, ಮಹಾವೀರರಂತೆ ಕೃಷ್ಣನಲ್ಲಿ ಕೂಡ ಸ್ತ್ರೀಸಹಜ ಗುಣವಿತ್ತು. ಅವರಲ್ಲಿ ಸ್ತ್ರೀಸಹಜ ಕಾಂತಿ, ಲಾವಣ್ಯ, ಸೌಂದರ್ಯವನ್ನೂ ನೀವು ನೋಡಬಹುದು. ಅವರಲ್ಲಿ ನೀವು ಪುರುಷಸಹಜ ಆಕ್ರಮಣಕಾರಿತನ ಕಾಣಲಾರಿರಿ.

ಆದ್ದರಿಂದ, ಬುದ್ಧ ಹೆಂಗಸಿನ ರೂಪ ತಾಳಿದ್ದು ಸಾಂಕೇತಿಕ ಹಾಗೂ ಸಹಜ. ಬುದ್ಧಂದಿರು ಹೆಣ್ಣಿನ ರೂಪವನ್ನು ಯಾವತ್ತೂ ಪಡೆಯುತ್ತಾರೆ. ಅವರು ಪುರಷ ದೇಹದಲ್ಲಿ ವಾಸಿಸಬಹುದು. ಆದರೆ ಅವರು ಸ್ತ್ರೀಸಹಜ ಗುಣ ಹೊಂದಿರುತ್ತಾರೆ. ಏಕೆಂದರೆ ಹುಟ್ಟುವುದೆಲ್ಲವೂ ಸ್ತ್ರೀಸಹಜ ಶಕ್ತಿಯಿಂದಲೇ ಹುಟ್ಟುವುದು. ಪುರುಷ ಶಕ್ತಿ ವಿಯೋಜಕವಾದರೂ ಅದು ಜನ್ಮ ನೀಡಲಾರದು.

ಗುರುವೊಬ್ಬ ತನ್ನ ಗರ್ಭದಲ್ಲಿ ಜೀವಿಯೊಂದನ್ನು ತಿಂಗಳು, ವರ್ಷ ಅಥವಾ ಅನೇಕ ವರ್ಷಗಳ ಕಾಲ ಇಟ್ಟುಕೊಳ್ಳಬಲ್ಲ. ಆ ಜೀವಿ ಜನ್ಮತಾಳುವುದು ಯಾವಾಗ ಎಂಬುದು ಯಾರಿಗೂ ಗೊತ್ತಿರುವುದಿಲ್ಲ. ಗುರು ತಾಯಿಯಾಗಿರಬೇಕು. ಅಸಾಧಾರಣ ಸ್ತ್ರೀಸಹಜ ಶಕ್ತಿಯನ್ನು ಹೊಂದಿರಬೇಕು. ಆ ಮೂಲಕ ಆತ ನಿಮ್ಮ ಮೇಲೆ ಪ್ರೀತಿಯನ್ನು ಸುರಿಯಬಲ್ಲ - ಅನಂತರ ಆತ ನಿಮ್ಮನ್ನು ನಾಶಪಡಿಸಬಹುದು. ಆತನ ಪ್ರೀತಿಯ ಬಗ್ಗೆ ಭರವಸೆ ತಾಳದಿದ್ದರೆ, ನಿಮ್ಮನ್ನು ನಾಶಮಾಡಲು ನೀವು ಅವಕಾಶ ಕೊಡಲಾರಿರಿ. ನೀವು ಅವರನ್ನು ಹೇಗೆ ನಂಬುತ್ತೀರಿ? ಆತನ ಪ್ರೀತಿಯೊಂದೇ ಆತನನ್ನು ನಂಬುವಂತೆ ಮಾಡುವುದು. ನಂಬಿಕೆಯ ಮೂಲಕ ಆತ ಅಂಗ ಅಂಗವನ್ನೇ ಕತ್ತರಿಸುತ್ತಾ ಹೋಗುತ್ತಾರೆ. ಒಂದು ದಿನ ನೀವು ಹಠಾತ್ತನೆ ಇಲ್ಲವಾಗುತ್ತೀರಿ, ಅದೃಶರಾಗುತ್ತೀರಿ. *ಗತೇ ಗತೇ ಪರಾಗತೇ* ... ನಿಧಾನ .... ನಿಧಾನ ..... ನಿಧಾನವಾಗಿ .... ಹೊರಟೇ ಹೋಗುತ್ತೀರಿ. ಆಗ ಹೊಸತು ಹುಟ್ಟುವುದು.[13]

ಪೂರ್ವಾತ್ಯ ದೇಶಗಳಲ್ಲಿ ಅಂತಿಮ ಸತ್ಯ ಅಥವಾ ಪರಮಸತ್ಯವನ್ನು ಸತ್-ಚಿತ್-ಆನಂದ ಎಂದು ವ್ಯಾಖ್ಯಾನಿಸಲಾಗಿದೆ. 'ಸತ್' ಎಂದರೆ ಸತ್ಯ. 'ಚಿತ್' ಎಂದರೆ ಪ್ರಜ್ಞೆ ಅಥವಾ ಜಾಗೃತಿ ಅಥವಾ ತಿಳಿವು. 'ಆನಂದ' ಎಂದರೆ ಪರಮ ಸುಖ ಅಥವಾ ಸ್ವರ್ಗ ಸುಖ. ಇವೆಲ್ಲಾ ಒಂದೇ ವಾಸ್ತವದ ಮೂರು ಮುಖಗಳು. ನಿಜವಾದ ತ್ರಿಮೂರ್ತಿಗಳೆಂದರೆ - ಸತ್ಯ, ಪ್ರಜ್ಞೆ ಹಾಗೂ ಪರಮ ಸುಖ. ಇವು ಪ್ರತ್ಯೇಕ ಅಲ್ಲ. ಒಂದೇ ಶಕ್ತಿ ಮೂರು ವಿಧಗಳಲ್ಲಿ ಕಾರ್ಯ ನಿರ್ವಹಿಸುವ ಬಗೆ. ಒಂದು ಶಕ್ತಿಗಿರುವ ಮೂರು ಮುಖಗಳು. ಆದ್ದರಿಂದ ಪೂರ್ವಾತ್ಯ ರಾಷ್ಟ್ರಗಳಲ್ಲಿ ದೇವರಿಗೆ ನಾವು ತ್ರಿಮೂರ್ತಿ ಎನ್ನುತ್ತೇವೆ - ದೇವರಿಗೆ ಮೂರು ಮುಖಗಳು. ಇವೇ ನಿಜವಾದ ಮುಖಗಳು ಹೊರತು ಬ್ರಹ್ಮ, ವಿಷ್ಣು ಮಹೇಶ ಅಲ್ಲ. ಬ್ರಹ್ಮ, ವಿಷ್ಣು ಮಹೇಶ - ಆಧ್ಯಾತ್ಮಿಕವಾಗಿ ಅಪ್ರಾಕೃತವಾಗಿ, ಅಪ್ರಬುದ್ಧರಾಗಿರುವವರಿಗೆ ಅಥವಾ ಮಕ್ಕಳಿಗೆ.

ಸತ್ಯ, ಪ್ರಜ್ಞೆ ಹಾಗೂ ಪರಮ ಸುಖ - ಇವು ಅಂತಿಮ ಅಥವಾ ಪರಮ ಸತ್ಯಗಳು. ಮೊದಲಿಗೆ ಸತ್ಯ: ನೀವು ಒಳಗೆ ಪ್ರವೇಶಿಸಿದೊಡನೆ ನಿಮ್ಮ ಅನಂತ ವಾಸ್ತವ ನಿಮಗೆ ಅರಿವಾಗುವುದು: ಸತ್, ಸತ್ಯ. ವಾಸ್ತವದಲ್ಲಿ ಮತ್ತಷ್ಟು ಆಳಕ್ಕೆ ಹೋದರೆ, ನಿಮ್ಮ ಸತ್ಯದೊಳಕ್ಕಿಳಿದರೆ ಅಗಾಧ ಪ್ರಜ್ಞೆಯ ಅರಿವು ನಿಮಗಾಗುವುದು. ಎಲ್ಲವೂ ಉಜ್ವಲ ಬೆಳಕು. ಕತ್ತಲೆಂಬುದೇ ಇಲ್ಲ. ಎಲ್ಲವೂ ಜಾಗೃತ. ಅಜಾಗೃತವೇ ಇಲ್ಲ. ನೀವು ಪ್ರಜ್ಞೆ ಅಥವಾ ಜಾಗೃತಿಯ ಜ್ವಾಲೆ, ಅಪ್ರಜ್ಞೆ ಅಥವಾ ಅಜಾಗೃತಿಯ ನೆರಳೂ ಎಲ್ಲೂ ಇಲ್ಲ. ನೀವು ಮತ್ತಷ್ಟು ಆಳಕ್ಕೆ ಇಳಿದರೆ ಅಂತಿಮ ತಿರುಳು - ಪರಮ ಸುಖ.


ಬುದ್ಧ ಹೇಳುತ್ತಾನೆ - ಈಗ ನೀವು ಅರ್ಥಪೂರ್ಣ, ಪ್ರಮುಖ ಎಂದು ಪರಿಗಣಿಸಿದ್ದೆಲ್ಲವನ್ನೂ ಮರೆತು ಬಿಡಿ. ಈ ಪರಮ ಸುಖಕ್ಕಾಗಿ ಎಲ್ಲವನ್ನೂ ತ್ಯಾಗಮಾಡಿ. ಏಕೆಂದರೆ ಇದೊಂದೇ ನಿಮ್ಮನ್ನು ಸಂತೃಪ್ತರನ್ನಾಗಿಡಬಲ್ಲುದು. ಅದು ನಿಮ್ಮಲ್ಲಿ ಬುಗ್ಗೆಯನ್ನು ಚಿಮ್ಮಿಸಬಹುದು .... ಆಗ ನಿಮ್ಮಲ್ಲಿ ಸಾವಿರದೊಂದು ಹೂವುಗಳು ಅರಳಬಹುದು.[14]

ಪೂರ್ವಾತ್ಯ ದೇಶಗಳಲ್ಲಿ ಮತ್ತೊಂದು ಪದವಿದೆ. ಅದು ಧ್ಯಾನ. ಇದರ ಅರ್ಥ ಏಕಾಗ್ರತೆ ಅಲ್ಲ, ಆಲೋಚನೆಯೂ ಅಲ್ಲ. ಇದರ ಅರ್ಥ ಅ-ಮನ ಅಥವಾ ಮನಸ್ಸುರಹಿತ ಸ್ಥಿತಿ. ಏಕಾಗ್ರತೆ, ಆಲೋಚನೆ ಮತ್ತು ಆಯೋಜನೆ ಈ ಮೂರು ಮನಸ್ಸಿನ ಚಟುವಟಿಕೆಗಳು. ನೀವು ಇವುಗಳಲ್ಲಿ ತೊಡಗಿದ್ದಾಗ ನೀವು ಬಾಹ್ಯ ಸಂಬಂಧಿ. ಈ ಪ್ರಕ್ರಿಯೆಗಳು ಭಿನ್ನವಾಗಿರಬಹುದು. ಆದರೆ ಗಡಿ ರೇಖೆ ಮಾತ್ರ ಸ್ಪಷ್ಟ. ಇವು ಮನಸ್ಸಿನ ಒಳಗಿರುವುವು. ಏನೇ ತೋಂದರೆ ಇಲ್ಲದೆ ಇವೆಲ್ಲವುಗಳನ್ನೂ ಮನಸ್ಸು ನಿರ್ವಹಿಸಬಲ್ಲದು.

ಧ್ಯಾನವೆಂಬುದು ಮನಸ್ಸಿನ ಪರಿಧಿಗೆ ನಿಲುಕದಿರುವುದು. ಮನಸ್ಸನ್ನು ಮೀರಿದ್ದು.

ಧ್ಯಾನ ಯಾವುದಾದರೊಂದರ ಮೇಲೆ ಇರಬೇಕಿಲ್ಲ. ಧ್ಯಾನದಲ್ಲಿ ತೊಡಗಿದರೆಂದರೆ ನೀವು ಎಲ್ಲ ವಸ್ತು ಅಥವಾ ದ್ರವ್ಯವನ್ನು ಮೀರಿ ನಡೆದಿದ್ದೀರೆಂದೇ ಅರ್ಥ. ನೀವು ಇರುತ್ತೀರಿ ಅಷ್ಟೆ. ಧ್ಯಾನ ಒಂದು ಪ್ರಕ್ರಿಯೆ ಅಲ್ಲ, ಅದೊಂದು ಸ್ಥಿತಿ. ವಿಷಯ ಮತ್ತು ವಸ್ತುವಿನ ನಡುವಿನ ಉಭಯತ್ವವೂ ಅಲ್ಲ. ಕಮಲದ ಹೂವಿನ ಪಕಳೆಯ ತುದಿಯಿಂದ ಸಮುದ್ರಕ್ಕೆ ಬೀಳುವ ಇಬ್ಬನಿಯ ಹನಿ! ಧ್ಯಾನ ಒಂದು ಸ್ಥಿತಿ. ನೀವು ಸುಮ್ಮನೆ ಮೌನವಾಗಿದ್ದೀರಿ - ಮನಸ್ಸನ್ನು ಕೇಂದ್ರೀಕರಿಸಲು ಯಾವ ವಿಚಾರಗಳೂ ಇಲ್ಲ. ಆಲೋಚಿಸಲು ಯಾವ ವಿಷಯಗಳಿಲ್ಲ. ಚಿಂತನೆಗೆ ಯಾವುದೇ ವಸ್ತುಗಳೂ ಇಲ್ಲ .... ಮನಸ್ಸೇ ತಡೆಗೋಡೆ, ಅಡಚಣೆ. ಮನಸ್ಸನ್ನು ಹೆಚ್ಚು ಕೇಂದ್ರೀಕರಿಸಿದಂತೆ ನೀವು ಹೆಚ್ಚು ವಿಚಾರಿಸಲು ತೊಡಗುತ್ತೀರಿ. ಹೆಚ್ಚು ಚಿಂತನೆ ಮಾಡಿದಂತೆಲ್ಲಾ ನೀವು ಮನಸ್ಸನ್ನು ಬಿಟ್ಟು ಹೊರಗೆ ಹೋಗುವುದಿಲ್ಲ. ನಾನು ಪ್ರಸ್ತಾಪಿಸಿದ ಇಬ್ಬನಿ ಹನಿ ಎಂದರೆ ಮನಸ್ಸು. ಆದ್ದರಿಂದ ಮೊದಲು ತಿಳಿಯಬೇಕಾದುದು ಧ್ಯಾನ ..... ಪೂರ್ವಾತ್ಯ ದೇಶಗಳಲ್ಲಿ, ಅದರಲ್ಲೂ ವಿಶೇಷವಾಗಿ ಭಾರತದಲ್ಲಿ, ಈ ಪದವನ್ನು ರೂಪಿಸಿ ಬಳಸಲಾಯಿತು. ಪ್ರಸುತ್ತ ಭಾಷೆಯಲ್ಲಿ ವ್ಯಕ್ತಪಡಿಸುವುದು ಸಾಧ್ಯವಾಗದಂತಹ ಅನುಭವ ಆದಾಗ ಮಾತ್ರವೇ ನೀವು ಸೂಕ್ತವಾದ, ಹೊಸ ಪದಗಳನ್ನು ಸೃಷ್ಟಿಸಬಲ್ಲಿರಿ.

ಕಳೆದ ಹತ್ತು ಸಾವಿರ ವರ್ಷಗಳಿಂದ ಭಾರತ ತನ್ನ ಮೇಧಾವಿತನವನ್ನು ಈ ಒಂದು ಕಾಯಕಕ್ಕಾಗಿ ಧಾರೆ ಎರೆಯುತ್ತಿದೆ. ಅದೇ ಧ್ಯಾನ. ನೀವು ಧ್ಯಾನ ಎಂಬ ಪದ ಬಳಸಿದರೆ "ಯಾವುದರ ಮೇಲೆ?" ಎಂಬ ಪ್ರಶ್ನೆ ಕೇಳುವುದಿಲ್ಲ. ಧ್ಯಾನವೆಂಬ ಪದದಲ್ಲಿ ಸಹಜ ಉಭಯತ್ವ ಇಲ್ಲ. ಧ್ಯಾನವೆಂದರೆ ಬರೀ ಮೌನ. ದಿವ್ಯ ಮೌನ. ಶಾಂತತೆ.[15]



ತ್ರಿಮೂರ್ತಿಗಳ ವಿಗ್ರಹ, ಸಮಿಧೇಶ್ವರ, ಚಿತ್ತೋಡ್‌ಗಢ್ ಕೋಟೆ, ರಾಜಾಸ್ಥಾನ್

ಒಂದು ಕಥೆ ನೆನಪಿಗೆ ಬರುತ್ತಿದೆ. ಮರ ಕಡಿಯುವವನೊಬ್ಬ ಪ್ರತಿ ದಿನವೂ ಕಾಡಿಗೆ ಹೋಗುತ್ತಿದ್ದ. ಕೆಲವೊಮ್ಮೆ ಮಳೆ, ಬಿಸಿಲು, ಚಳಿಯಿಂದ ಕಾಡಿನಲ್ಲಿ ಆತ ಹಸಿವಿನಿಂದ ಇರಬೇಕಾಗುತ್ತಿತ್ತು.

ಅದೇ ಕಾಡಿನಲ್ಲಿ ಒಬ್ಬ ಸಂತ ವಾಸಿಸುತ್ತಿದ್ದ. ಮರ ಕಡಿಯುವವನ ತಾಪತ್ರಯಗಳನ್ನು ಆತ ಗಮನಿಸುತ್ತಿದ್ದ. ದಿನವಿಡೀ ಕಷ್ಟಪಡುವುದನ್ನು ನೋಡುತ್ತಿದ್ದ. ಒಂದು ದಿನ ಸಂತ ಹೇಳಿದ: ''ಇಲ್ಲಿ ಕೇಳು, ನೀನೇಕೆ ಮತ್ತಷ್ಟು ದೂರ ಹೋಗಬಾರದು?'' ಅದಕ್ಕೆ ಮರ ಕಡಿಯುವವ ನುಡಿದ: ''ಇನ್ನಷ್ಟು ಮುಂದೆ ಹೋದರೆ ಏನು ಸಿಗುವುದು? ಹೆಚ್ಚು ಕಟ್ಟಿಗೆಯೇ? ಅನಗತ್ಯವಾಗಿ ಅವುಗಳನ್ನು ಅಷ್ಟು ದೂರದಿಂದ ಹೊತ್ತು ತರಬೇಕಲ್ಲ?'' ಸಂತ ಹೇಳಿದ, ''ಇಲ್ಲ, ಇನ್ನಷ್ಟು ಮುಂದೆ ಹೋದರೆ ತಾಮ್ರದ ಗಣಿ ಸಿಗುವುದು. ನೀನು ತಾಮ್ರವನ್ನು ತೆಗೆದುಕೊಂಡು ಪಟ್ಟಣಕ್ಕೆ ಹೋಗಿ ಮಾರಾಟ ಮಾಡಿದರೆ ಏಳು ದಿನಗಳಿಗೆ ಸಾಕಾಗುವಷ್ಟು ಹಣ ಸಿಗುವುದು. ಆಗ ನೀನು ಕಟ್ಟಿಗೆ ಕಡಿಯಲು ಪ್ರತಿದಿನವೂ ಕಾಡಿಗೆ ಬರಬೇಕಿಲ್ಲ.'' ಮರ ಕಡಿಯುವವನಿಗೆ, ''ನಾನೇಕೆ ಪ್ರಯತ್ನಿಸಬಾರದು?'' ಎಂದೆನಿಸಿತು ....

ಆತ ಕಾಡಿನಲ್ಲಿ ಸ್ವಲ್ಪ ದೂರ ಹೋದಾಗ ಗಣಿ ಕಾಣಿಸಿತು. ಆತನಿಗೆ ಅತೀವ ಆನಂದವಾಯಿತು .... ಆತ ವಾಪಸ್ಸು ಬಂದು ಸಂತನ ಪಾದಕ್ಕೆರಗಿದ. ಸಂತ ಹೇಳಿದ, ''ಈಗಲೇ ಅತಿ ಹೆಚ್ಚು ಆನಂದ ಪಡಬೇಡ. ನೀನು ಇನ್ನಷ್ಟು ದೂರ ಹೋಗಬೇಕಾಗಬಹುದು.''

ಮರ ಕಡಿಯುವವ ಕೇಳಿದ: ''ಪ್ರಯೋಜನವೇನು? ಈಗಾಗಲೇ ನನಗೆ ಏಳು ದಿನಗಳಿಗೆ ಸಾಕಾಗುವಷ್ಟು ಹಣ ಸಿಕ್ಕಿದೆ.'' ಅದಕ್ಕೆ ಸಂತ ಉತ್ತರಿಸಿದ, ''ಆದರೂ ನೀನು ಮತ್ತಷ್ಟು ದೂರ ಕಾಡಿನಲ್ಲಿ ಹೋಗಬೇಕು.'' ಇದಕ್ಕೆ ಮರ ಕಡಿಯುವವ ಹೇಳಿದ, ''ಕಾಡಿನಲ್ಲಿ ಇನ್ನಷ್ಟು ದೂರ ಹೋದರೆ ಸಿಕ್ಕಿರುವ ತಾಮ್ರದ ಗಣಿಯನ್ನೂ ಕಳೆದುಕೊಳ್ಳುತ್ತೇನೆ.''

ಸಂತ ಆತನ ಮನವೊಲಿಸುತ್ತಾ ''ಮತ್ತಷ್ಟು ದೂರ ಹೋಗು. ನೀನು ತಾಮ್ರದ ಗಣಿ ಕಳೆದುಕೊಂಡರೂ ಬೆಳ್ಳಿಯ ಗಣಿ ಸಿಗುತ್ತದೆ. ನೀನು ಅಲ್ಲಿಂದ ತರುವ ಬೆಳ್ಳಿಯನ್ನು ಮಾರಾಟ ಮಾಡಿದರೆ ಮೂರು ತಿಂಗಳಿಗೆ ಸಾಕಾಗುವಷ್ಟು ಹಣ ಸಂಪಾದಿಸಬಹುದು.''

ಮರ ಕಡಿಯುವವ ತನ್ನಲ್ಲೇ ಯೋಚಿಸತೊಡಗಿದ. ತಾಮ್ರದ ಗಣಿ ವಿಚಾರದಲ್ಲಿ ಸಂತ ಹೇಳಿದ್ದು ಸತ್ಯವಾಗಿದೆ. ಹೀಗಿರುವಾಗ ಆತ ಬೆಳ್ಳಿ ಗಣಿ ಬಗ್ಗೆ ಹೇಳಿರುವುದೂ ಕೂಡ ನಿಜವಾಗಬಹುದು.

ಮರ ಕಡಿಯುವವ ಕಾಡಿನಲ್ಲಿ ಮತ್ತಷ್ಟು ಮುಂದೆ ಹೋದ ಕೂಡಲೇ ಆತನಿಗೆ ಬೆಳ್ಳಿಯ ಗಣಿ ಕಂಡಿತು. ಸಂತಸದಲ್ಲಿ ಕುಣಿದಾಡುತ್ತಾ ಸಂತನ ಬಳಿ ಬಂದು, ''ನಿಮ್ಮ ಉಪಕಾರವನ್ನು ಹೇಗೆ ತೀರಿಸುವುದು? ನಿಮಗೆ ಹೇಗೆ ಕೃತಜ್ಞತೆ ಸಲ್ಲಿಸಬೇಕೋ ತಿಳಿಯದಾಗಿದೆ,'' ಎಂದ.

ಸಮಾಧಾನ ಚಿತ್ತದಿಂದ ಸಂತ ನುಡಿದ, ''ಆತುರ ಪಡಬೇಡ. ಕಾಡಿನಲ್ಲಿ ಇನ್ನಷ್ಟು ಮುಂದೆ ಹೋಗು.'' ಮರ ಕಡಿಯುವವ ತಾನು ಹೋಗುವುದಿಲ್ಲವೆಂದೂ, ಹೋದರೆ ಬೆಳ್ಳಿಯ ಗಣಿಯೂ ಕೈತಪ್ಪಿಹೋಗುವುದೆಂದೂ ವಾದಿಸಿದ. ಆದರೆ ಸಂತ ಆತನನ್ನು ಮನವೊಲಿಸಿದ. ಇನ್ನಷ್ಟು ದೂರ ಹೋದರೆ ಚಿನ್ನದ ಗಣಿ ಸಿಗುವುದೆಂದು ಹೇಳಿದ. ಆದರೆ ಮರ ಕಡಿಯುವವ ಒಂದು ಕ್ಷಣ ಹಿಂದೇಟು ಹಾಕಿದರೂ, ಈ ಸಂತ ಹೇಳುವುದು ನಿಜವಾದರೂ ಆಗಬಹುದು, ಯಾರಿಗೆ ಗೊತ್ತು? ಎಂದು ಭಾವಿಸಿದ. ಹೌದು, ಆತನಿಗೆ ಚಿನ್ನದ ಗಣಿಯೂ ಸಿಕ್ಕಿಬಿಟ್ಟಿತು. ಇನ್ನು ವರ್ಷಕ್ಕೆ ಒಂದು ಸಲ ಮಾತ್ರ, ಕಾಡಿಗೆ ಬಂದರೆ ಸಾಕು ಎಂದು ಮನದಲ್ಲೇ ಅಂದುಕೊಂಡ.

ಇದನ್ನು ಅರಿತ ಸಂತ ಹೇಳಿದ, ''ಒಂದು ವರ್ಷ ಬಹಳ ದೀರ್ಘ ಸಮಯ. ಮುಂದಿನ ವರ್ಷ ನೀನು ಬರುವ ಹೊತ್ತಿಗೆ ನಾನು ಇನ್ನಷ್ಟು ಮುದುಕನಾಗಿರುತ್ತೇನೆ. ನಾನು ಬದುಕುಳಿಯದೇ ಇರಬಹುದು. ಆದ್ದರಿಂದ ನೀನು ಚಿನ್ನದ ಗಣಿಗೇ ತೃಪ್ತನಾಗದೆ ಮತ್ತಷ್ಟು ಮುಂದಕ್ಕೆ ಹೋಗು.''

ಮರ ಕಡಿಯುವವ ಆಶ್ಚರ್ಯಚಕಿತನಾಗಿ ಕೇಳಿದ, ''ಏಕೆ? ಇನ್ನಷ್ಟು ಮುಂದಕ್ಕೆ ಏಕೆ ಹೋಗಲಿ? ನೀವು ನನಗೆ ಒಂದನ್ನು ಪಡೆಯುವಂತೆ ಹೇಳುತ್ತೀರಿ, ಅದು ಸಿಕ್ಕ ತಕ್ಷಣ ಅದನ್ನು ಬಿಟ್ಟು ಮುಂದಕ್ಕೆ ಹೋಗುವಂತೆ ಹೇಳುತ್ತೀರಿ!''

ಶಾಂತಚಿತ್ತನಾಗಿ ಸಂತ ಹೇಳಿದ, ''ನೀನು ಕಾಡಿನಲ್ಲಿ ಇನ್ನಷ್ಟು ದೂರ ಹೋದರೆ ನಿನಗೆ ವಜ್ರದ ಗಣಿ ಸಿಗುವುದು.'' ಮರ ಕಡಿಯುವವ ಹಾಗೇ ಮಾಡಿದ. ಆತನಿಗೆ ವಜ್ರದ ಗಣಿಯೂ ಸಿಕ್ಕಿತು. ಆತ ಕೈಗೆ ಸಿಕ್ಕ ವಜ್ರದ ಹರಳುಗಳನ್ನು ಆರಿಸಿಕೊಂಡ. ''ಇವು ನನ್ನ ಜೀವಿತದ ಕೊನೆಯವರೆಗೂ ಸಾಕು,'' ಎಂದ. ಸಂತ ಹೇಳಿದ, ''ಬಹುಶಃ ಇನ್ನು ಮುಂದೆ ನಾವು ಪುನಃ ಭೇಟಿಯಾಗಲಿಕ್ಕಿಲ್ಲ. ಹೀಗಿರುವಾಗ ನನ್ನ ಕೊನೆಯ ಸಂದೇಶವೆಂದರೆ - ನಿನಗೆ ಈಗಾಗಲೇ ನಿನ್ನ ಜೀವನಕ್ಕೆ ಸಾಕಾಗುಷ್ಟು ಸಿಕ್ಕಿದೆ, ಇನ್ನು ಅಂತರಾಳಕ್ಕೆ ಇಳಿ. ಈ ಅರಣ್ಯ, ತಾಮ್ರದ ಗಣಿ, ಬೆಳ್ಳಿ ಗಣಿ, ವಜ್ರದ ಗಣಿ .... ಎಲ್ಲವನ್ನೂ ಮರೆತು ಬಿಡು. ಈಗ ನಾನು ನಿನಗೆ ನಿನ್ನೊಳಗಿರುವ ಪರಮ ರಹಸ್ಯ, ಪರಮ ಸಂಪತ್ತನ್ನು ಕೊಡುತ್ತೇನೆ. ನಿನ್ನ ಬಾಹ್ಯ ಆಗತ್ಯಗಳೆಲ್ಲ ಈಡೇರಿವೆ. ಈಗ ನಾನು ಕುಳಿತಂತೆ ಕುಳಿತುಕೋ.''

ಆ ಬಡವ ಹೇಳಿದ, ''ನನಗೆ ಅಚ್ಚರಿಯಾಗುತ್ತಿತ್ತು. ನೀವು ಹೀಗೇಕೆ ಕುಳಿತಿದ್ದೀರಿ ಎಂದು. ನನಗೆ ಈ ಪ್ರಶ್ನೆ ಆನೇಕ ಸಲ ಮೂಡಿದೆ. ಈ ಬೆಳ್ಳಿ, ಚಿನ್ನ, ವಜ್ರಗಳು ಅಲ್ಲಿರುವುದನ್ನು ತಿಳಿದೂ, ಈ ಮರದಡಿಯಲ್ಲಿ ಹೀಗೇಕೆ ನೀವು ಕುಳಿತಿರುವಿರಿ?''

ಸಂತ ಹೇಳಿದ, ''ವಜ್ರವನ್ನು ಪಡೆದ ಬಳಿಕ, ನನ್ನ ಗುರು ನನಗೆ ಹೇಳಿದ, 'ಇನ್ನು ಈ ಮರದಡಿ ಕುಳಿತು ನಿನ್ನೊಳಕ್ಕೆ ಹೋಗು.' ''

ಮರ ಕಡಿಯುವವ ಒಮ್ಮೆಗೆ ಎಲ್ಲ ವಜ್ರದ ಹರಳುಗಳನ್ನು ಬಿಸಾಡಿದ. ''ಸ್ವಾಮಿ, ಪುನಃ ನಾವು

ಭೇಟಿಯಾಗಲಿಕ್ಕಿಲ್ಲ. ನಾನು ಮನೆಗೆ ಹೋಗುವುದಿಲ್ಲ. ನಾನು ನಿಮ್ಮ ಪಕ್ಕದಲ್ಲಿಯೇ ಕುಳಿತುಕೊಳ್ಳುತ್ತೇನೆ. ನಾನು ಮರಕಡಿಯುವವ. ನನಗೆ ಅಂತರಂಗದೊಳಗೆ ಪ್ರವೇಶಿಸುವುದು ಹೇಗೆಂಬುದನ್ನು ತಿಳಿಸಿಕೊಡಿ. ನನಗೆ ಕಾಡಿನೊಳಕ್ಕೆ ದೂರಕ್ಕೆ ಹೋಗುವುದು ಗೊತ್ತು. ಆದರೆ ಅಂತರಂಗದೊಳಗೆ ಹೋಗುವುದು ಗೊತ್ತಿಲ್ಲ.''

ಸಂತ ನುಡಿದ, ''ನೀನು ಅಂತರಂಗದೊಳಗೆ ಹೋದರೆ ಈ ತಾಮ್ರ, ಬೆಳ್ಳಿ, ಚಿನ್ನ, ವಜ್ರಗಳೆಲ್ಲಾ ಮೌಲ್ಯ ಕಳೆದುಕೊಳ್ಳುವವು.'' ಮರ ಕಡಿಯುವವ, ''ಅದರ ಬಗ್ಗೆ ಯೋಚನೆ ಬಿಡಿ. ಇಲ್ಲಿಯವರೆಗೆ ನೀವು ನನಗೆ ಸರಿಯಾಗಿಯೇ ಮಾರ್ಗದರ್ಶನ ಮಾಡಿದ್ದೀರಿ. ಈ ಕೊನೆಯ ಹಂತದಲ್ಲಿ ಕೂಡ ನೀವು ನನಗೆ ಸೂಕ್ತವಾದುದನ್ನೇ ಸೂಚಿಸುವಿರೆಂದು ನನಗೆ ನಂಬಿಕೆ ಇದೆ,'' ಎಂದ.

ಗುರುವಿನ ಮೂಲ ಕರ್ತವ್ಯ ನಿಮ್ಮನ್ನು ಶರೀರ ಶಾಸ್ತ್ರದಿಂದ ಮನಃಶಾಸ್ತ್ರದೆಡೆಗೆ ಹೊರಳುವಂತೆ ಮನಃಪರಿವರ್ತಿಸುವುದು. ಅನಂತರ ಮನಸ್ಸಿನಿಂದ ಹೃದಯದೆಡೆಗೆ ತೆರಳುವಂತೆ ಮಾಡುವುದು. ಕೊನೆಗೆ ಹೃದಯದಿಂದ ಜೀವ ಅಥವಾ ಅಸ್ತಿತ್ವದೆಡೆಗೆ ಚಲಿಸುವಂತೆ ಮಾಡುವುದು.[16]

ನಮಗೆ ನೆನಪಿರುವಷ್ಟು ಅನಾದಿ ಕಾಲದಿಂದಲೂ, ಜನರು ತಮ್ಮ ಗುರುವಿನ ಸುತ್ತ ಮೌನವಾಗಿ ಕುಳಿತುಕೊಳ್ಳುತ್ತಿದ್ದರು. ಪೂರ್ವಾತ್ಯ ದೇಶಗಳಲ್ಲಿ ಇದನ್ನು 'ದರ್ಶನ' ಎಂದು ಕರೆಯುತ್ತಾರೆ. ಪಾಶ್ಚಿಮಾತ್ಯ ದೇಶಗಳ ಜನರಿಗೆ ಇದರ ಅರ್ಥವೇ ಆಗಿಲ್ಲ. ಅವರಿಗೆ ಇದು ಮೂರ್ಖತನದ ಪರಮಾವಧಿ ಎಂದು ತೋರುತ್ತದೆ. ಗುರುವನ್ನು ನೋಡಲು ಹೋಗುವ ಬದಲು, ಮನೆಯಲ್ಲಿ ಅವರ ಫೋಟೋವನ್ನು ಏಕೆ ಇಟ್ಟುಕೊಳ್ಳಬಾರದು ಎಂಬುದು ಅವರ ಪ್ರಶ್ನೆ. ಸರಿ, ಅವರನ್ನು ನೋಡಬೇಕೆಂದು ಅನ್ನಿಸಿದರೆ ಯಾವಾಗಾದರೂಮ್ಮೆ ನೋಡಿದರೆ ಮುಗಿಯಿತು. ಪ್ರತಿ ದಿನವೂ ನೋಡುವುದೆಂದರೇನು? ಏನು ತಲೆ ಕೆಟ್ಟಿದೆಯೇ? ಎಂಬುದು ಅವರ ವಾದ.

ಸ್ವಯಂ-ಅನ್ನು ಅರಿತ ವ್ಯಕ್ತಿಯ ಪ್ರಭಾವವಲಯದಲ್ಲಿ ಇರುವುದು, ಆತನ ಕಣ್ಣುಗಳಲ್ಲಿ ಇಣುಕುವುದು, ಆತನ ಕೈಗಳ ಸ್ಪರ್ಶವನ್ನು ಅನುಭವಿಸುವುದು, ಆತನ ಮೌನಗಳನ್ನು ಆಲಿಸುವುದು, ಆತನ ವಚನಗಳನ್ನು ಆಲಿಸುವುದು 'ದರ್ಶನ'ದ ನಿಜವಾದ ಅರ್ಥ ಎಂಬುದು ಪಾಶ್ಚಿಮಾತ್ಯರಿಗೆ ಗೊತ್ತೇ ಇಲ್ಲ. ದರ್ಶನದ ನಿಜ ಅರ್ಥವೇ ಅವರಿಗೆ ಗೊತ್ತಿಲ್ಲ.[17]

ಗೌತಮ ಬುದ್ಧರ ಪ್ರಮುಖ ಶಿಷ್ಯರುಗಳ ಪೈಕಿ ಸಾರಿಪುತ್ತ ಕೂಡ ಒಬ್ಬರು. ಬುದ್ಧನ ಕಾಲದಲ್ಲಿ ಜ್ಞಾನೋದಯ ಹೊಂದಿದ ಕೆಲವರಲ್ಲಿ ಇವರೂ ಒಬ್ಬರು. ಸಾರಿಪುತ್ತ ಬುದ್ಧರ ಬಳಿಗೆ ಬಂದದ್ದು ಅವರ ಜೊತೆ ವಾದ ಮಾಡಲು. ಸಾರಿಪುತ್ತ ಸುಪ್ರಸಿದ್ಧ ಶಿಕ್ಷಕರಾಗಿದ್ದರು. ಬಹುತೇಕ ಮಂದಿ ಅವರನ್ನು ಮಹಾನ್ ಗುರು ಎಂದೇ ಭಾವಿಸಿದ್ದರು. ಕೆಲವು ಮೂಲ ತತ್ವಗಳ ಬಗ್ಗೆ ಬುದ್ಧರೊಂದಿಗೆ ವಾದಿಸುವುದಕ್ಕಾಗಿ ಆತ ತಮ್ಮ ಐದು ಸಾವಿರ ಶಿಷ್ಯರೊಂದಿಗೆ ಆಗಮಿಸಿದರು.

ಸಾರಿಪುತ್ತರನ್ನು ಪ್ರೀತಿಯಿಂದ ಬರಮಾಡಿಕೊಂಡ ಬುದ್ಧ ತನ್ನ ಹಾಗೂ ಅವರ ಶಿಷ್ಯರನ್ನುದ್ದೇಶಿಸಿ, ''ಇಲ್ಲಿಗೆ ಶ್ರೇಷ್ಠ ಶಿಕ್ಷಕರೊಬ್ಬರು ಆಗಮಿಸಿದ್ದಾರೆ. ಇವರು ಮುಂದೊಂದು ದಿನ ಶ್ರೇಷ್ಠ ಗುರುವಾಗುವುದರಲ್ಲಿ ಸಂದೇಹವೇ ಇಲ್ಲ'' ಎಂದರು. ಬುದ್ಧರ ಈ ಮಾತು ಅಲ್ಲಿ ನೆರೆದಿದ್ದವರಿಗೆಲ್ಲಾ ಒಗಟಾಗಿ ಕಂಡಿತು. ಸಾರಿಪುತ್ತರಿಗೂ ಅರ್ಥವಾಗಲಿಲ್ಲ. ಅವರು ಕೇಳಿದರು, ''ಹಾಗೆಂದರೆ ಏನು? ನಿಮ್ಮ ಮಾತಿನ ತಾತ್ಪರ್ಯವೇನು?''

ಬುದ್ಧ ನುಡಿದರು: ''ನೀವು ಚೆನ್ನಾಗಿ ವಾದ ಮಾಡುತ್ತೀರ. ಸ್ಪಷ್ಟವಾಗಿ ನಿಮ್ಮ ವಿಚಾರಗಳನ್ನು ಮಂಡಿಸುತ್ತೀರ. ನೀವು ಪ್ರಭಾವಿ ಬುದ್ಧಿ ಜೀವಿ. ಉತ್ತಮ ಶಿಕ್ಷಕನಿಗಿರಬೇಕಾದ ಎಲ್ಲಾ ಗುಣ ಲಕ್ಷಣಗಳೂ ನಿಮ್ಮಲ್ಲಿವೆ. ನಿಮಗೆ ಐದು ಸಾವಿರ ಮಂದಿ ಬುದ್ಧಿವಂತ ಶಿಷ್ಯಂದಿರಿದ್ದಾರೆ. ಆದರೂ ನೀವು ಗುರು ಅಲ್ಲ. ನೀವು ಗುರುವಾಗಿದ್ದರೆ ನಾನೇ ನಿಮ್ಮ ಬಳಿಗೆ ಬರುತ್ತಿದ್ದೆ. ನೀವು ನನ್ನ ಬಳಿಗೆ ಬರಬೇಕಾಗಿರಲಿಲ್ಲ. ನೀವೊಬ್ಬ ಮಹಾನ್ ತತ್ವಜ್ಞಾನಿ, ಆದರೆ ನಿಮಗೇನೂ ಗೊತ್ತಿಲ್ಲ.

''ನಿಮ್ಮ ಬುದ್ಧಿವಂತಿಕೆಯಲ್ಲಿ ನನಗೆ ನಂಬಿಕೆ ಇದೆ. ನೀವು ಸುಳ್ಳು ಹೇಳುವುದಿಲ್ಲ ಎಂದು ಭಾವಿಸುತ್ತೇನೆ: 'ನಾನೊಬ್ಬ ಚಿಂತಕ ಆದರೆ ನನಗೆ ಯಾವ ಅನುಭವವೂ ಇಲ್ಲವೆಂದು,' ಇಲ್ಲಿ ಸೇರಿದವರ ಮುಂದೆ ಹೇಳು. ಅನುಭವವಿದೆ ಎಂದು ಹೇಳಿದರೆ ನಿನ್ನೊಂದಿಗೆ ಚರ್ಚಿಸಲು ಸಿದ್ಧ. ನೆನಪಿರಲಿ ಸುಳ್ಳು ಹೇಳುವುದರಿಂದ ಪ್ರಯೋಜನವಿಲ್ಲ. ನೀವು ತಕ್ಷಣ ಸಿಕ್ಕಿಬೀಳುತ್ತೀರಿ. ಏಕೆಂದರೆ ಅನುಭವ ಹಲವಾರು ಸಂಗತಿಗಳನ್ನು ಒಳಗೊಂಡಿದೆ. ಅವು ಧರ್ಮಗ್ರಂಥಗಳಲ್ಲಿ ಸಿಗಲಾರವು. ಆದ್ದರಿಂದ ಇವುಗಳ ಬಗ್ಗೆ ಸ್ಪಷ್ಟವಾಗಿರುವುದು ಒಳ್ಳೆಯದು.''

''ಸತ್ಯದ ಅನುಭವವಾಗಿದೆ ಎಂದು ನೀವು ಹೇಳಿದರೆ ನಿಮ್ಮೊಂದಿಗೆ ವಾದ ಅಥವಾ ಚರ್ಚೆಗೆ ನಾನು ಸಿದ್ಧ. ಸತ್ಯದ ಅನುಭವವಾಗಿಲ್ಲವೆಂದು ಹೇಳಿದರೆ ನಿಮ್ಮನ್ನು ನಾನು ಶಿಷ್ಯನಾಗಿ ಸ್ವೀಕರಿಸಲು ಸಿದ್ಧ. ಅದಲ್ಲದೆ ನಿಮ್ಮನ್ನು ನಾನು ಗುರುದೇವನನ್ನಾಗಿ ಮಾಡುತ್ತೇನೆ - ಇದು ನನ್ನ ಆಶ್ವಾಸನೆ. ಯಾಕೆಂದರೆ ನಿಮ್ಮಲ್ಲಿ ಆ ಸಾಧ್ಯತೆಯನ್ನು ನಾನು ಕಾಣುತ್ತಿರುವೆ. ನನ್ನೊಂದಿಗೆ ಸುಳ್ಳು ಹೇಳಿ ಚರ್ಚೆ ನಡೆಸುವಿರೋ ಅಥವಾ ಸತ್ಯವಂತರಾಗಿ ಶಿಷ್ಯನಾಗಿ ನನ್ನೊಂದಿಗಿರುವಿರೋ - ಇವೆರಡರಲ್ಲಿನ ಆಯ್ಕೆ ನಿಮಗೆ

ಬಿಟ್ಟಿದ್ದು. ಮುಂದೊಂದು ದಿನ ನೀವು ಗುರುದೇವನಾಗಿ ನನ್ನೊಂದಿಗೆ ಚರ್ಚಿಸಲು ಬಯಸಿದರೆ ನನಗೆ ಅತೀವ ಆನಂದವಾಗುವುದು.''

ಸ್ವಲ್ಪ ಸಮಯ ಗಾಢ ಮೌನ ಆವರಿಸಿತು. ನಿಜಕ್ಕೂ ಸಾರಿಪುತ್ತ ಸತ್ಯವಂತ. ಅವರು ಹೇಳಿದರು, ''ಬುದ್ಧರು ಹೇಳುವುದು ನಿಜ. ಅನುಭವದ ಬಗ್ಗೆ ಕೇಳಬಹುದೆಂದು ನಾನೆಂದೂ ಯೋಚಿಸಿರಲಿಲ್ಲ. ದೇಶದೆಲ್ಲೆಡೆ ನಾನು ವಾದ, ಚರ್ಚೆಗಳಲ್ಲಿ ಭಾಗವಹಿಸಿ ಬುದ್ಧಿವಂತ ಶಿಕ್ಷಕರು ಎನಿಸಿಕೊಂಡವರನ್ನೆಲ್ಲಾ ಸೋಲಿಸಿ ಅವರನ್ನು ನನ್ನ ಶಿಷ್ಯರನ್ನಾಗಿ ಮಾಡಿಕೊಂಡಿರುವೆ.'' - ಇದು ಭಾರತದಲ್ಲಿರುವ ನಿಯಮ. ಚರ್ಚೆಯಲ್ಲಿ ಯಾರೇ ಸೋಲಲಿ, ಸೋತವರು ಗೆದ್ದವರ ಶಿಷ್ಯರಾಗಬೇಕು.

ಸಾರಿಪುತ್ತ ಮಾತನ್ನು ಮುಂದುವರೆಸಿದರು, ''ನನ್ನ ಬಹುತೇಕ ಶಿಷ್ಯರು ಶಿಕ್ಷಕರು. ಆದರೆ ಇವರಾರೂ ಅನುಭವದ ಬಗ್ಗೆ ನನ್ನನ್ನು ಕೇಳಲಿಲ್ಲ. ನನಗೆ ಅನುಭವವೇ ಇಲ್ಲ. ಆದ್ದರಿಂದ ಅದನ್ನು ಕುರಿತು ಚರ್ಚಿಸುವ ಪ್ರಶ್ನೆಯೇ ಇಲ್ಲ. ಈಗಲೇ ನಾನು ಬುದ್ಧರ ಚರಣಕಮಲಗಳನ್ನು ಸ್ಪರ್ಶಿಸುತ್ತೇನೆ. ಅಲ್ಲದೆ ಅನುಭವ ಸಂಪಾದಿಸುವ ತನಕ, ನಾನೇ ಗುರುವಾಗುವ ತನಕ ಕಾಯುತ್ತೇನೆ.''

ಬುದ್ಧರ ಜೊತೆಗೆ ಮೂರು ವರುಷ ಕಳೆದ ನಂತರ ಅವರಿಗೆ ಜ್ಞಾನೋದಯವಾಯಿತು. ಜ್ಞಾನೋದಯವಾದ ದಿನ ಬುದ್ಧ ಅವರನ್ನು ಕರೆದು ಕೇಳಿದರು, ''ಈಗ ನೀವು ಚರ್ಚಿಸಲು ಬಯಸುವಿರಾ?'' ಪುನಃ ಸಾರಿಪುತ್ತ ಗೌತಮ ಬುದ್ಧರ ಪಾದಕ್ಕೆ ಎರಗಿ ಹೇಳಿದರು, ''ಅಂದು ನಾನು ನಿಮ್ಮ ಪಾದಕ್ಕೆರಗಿದಾಗ ನನಗೆ ಯಾವುದೇ ಅನುಭವವಿರಲಿಲ್ಲ. ಇಂದು ನಾನು ನಿಮ್ಮ ಪಾದಕ್ಕೆ ಎರಗುತ್ತಿದ್ದೇನೆ. ಏಕೆಂದರೆ ನನಗೆ ಅನುಭವ ಆಗಿದೆ. ಆದ್ದರಿಂದ ಚರ್ಚೆಯ ಪ್ರಶ್ನೆ ಉದ್ಭವಿಸುವುದಿಲ್ಲ. ಆಗ ಅದನ್ನು ಚರ್ಚಿಸುವುದು ಅಸಾಧ್ಯವಾಗಿತ್ತು. ಈಗ ಅದನ್ನು ಚರ್ಚಿಸುವುದೂ ಅಸಾಧ್ಯ. ಚರ್ಚಿಸಲು ಏನೂ ಇಲ್ಲ. ನನಗೂ ಗೊತ್ತು, ನಿಮಗೂ ಗೊತ್ತು. ತಿಳುವಳಿಕೆ ಮಾತ್ರ ಒಂದೇ. ಅಲ್ಲದೆ ನಾನು ನಿಮ್ಮ ಶಿಷ್ಯ. ನಾನು ಬೇರೆಯವರಿಗೆ ಗುರುವಾಗಬಹುದು. ಆದರೆ ನಾನು ನಿಮ್ಮ ಶಿಷ್ಯನಾಗಿಯೇ ಇರುತ್ತೇನೆ. ನೀವು ನನ್ನ ಇಡೀ ಜೀವನವನ್ನೇ ಪರಿವರ್ತಿಸಿದಿರಿ. ಇಲ್ಲದಿದ್ದಲ್ಲಿ ನಾನು ಅನಗತ್ಯವಾಗಿ ವಾದ ವಿವಾದ ಮಾಡುತ್ತಾ ನನ್ನ ಸಮಯವನ್ನೆಲ್ಲಾ ಹಾಳು ಮಾಡಿಕೊಳ್ಳುತ್ತಿದ್ದೆ. ಜೊತೆಗೆ ಬೇರೆಯವರದ್ದನ್ನೂ ಹಾಳು ಮಾಡುತ್ತಿದ್ದೆ.''[18]

ಭಾರತದಲ್ಲಿ ನಾವು ಮನುಷ್ಯನ ಜೀವನವನ್ನು ನಾಲ್ಕು ಆಶ್ರಮಗಳಾಗಿ ವಿಂಗಡಿಸಿದ್ದೇವೆ. ಇದೊಂದು ವೈಜ್ಞಾನಿಕ ಪ್ರಯೋಗವಾಗಿದ್ದು ಮನುಕುಲದ ಇತಿಹಾಸದಲ್ಲಿಯೇ ಅಭೂತಪೂರ್ವವಾಗಿದೆ. ಮನುಷ್ಯನ ಜೀವಿತ ಅವಧಿ ಒಂದು ನೂರು ವರುಷಗಳಾಗಿದ್ದರೆ ಪ್ರತಿ ಇಪ್ಪತ್ತೈದು ವರ್ಷಗಳಂತೆ ನಾಲ್ಕು ಹಂತಗಳಲ್ಲಿ ವಿಭಜಿಸಲಾಗಿದೆ. ಮೊದಲ ಇಪ್ಪತ್ತೈದು ವರ್ಷವನ್ನು ಬ್ರಹ್ಮಚರ್ಯ ಆಶ್ರಮ ಎಂದು ಕರೆಯುತ್ತಾರೆ. ಈ ಅವಧಿಯಲ್ಲಿ ವ್ಯಕ್ತಿಯೊಬ್ಬನ ಮುಖ್ಯ ಗುರಿ ಶಕ್ತಿ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುವುದು. ಇದರಿಂದ ಗೃಹಸ್ಥಾಶ್ರಮಕ್ಕೆ ಕಾಲಿಟ್ಟಾಗ ಜೀವನದ ಎಲ್ಲಾ ವೈಭೋಗ ಸುಖವನ್ನು ಅನುಭವಿಸಬಹುದಾಗಿದೆ.

ಭಾರತೀಯ ಮುನಿಗಳು, ಸಂತರು ಧೈರ್ಯಶಾಲಿ-ಗಳಾಗಿದ್ದರು. ಅವರು ಎಂದೂ ಪಲಾಯನ-ವಾದಿಗಳಾಗಿರಲಿಲ್ಲ. ಇಪ್ಪತ್ತೈದು ವರ್ಷಗಳ ಮೊದಲ ಹಂತ ಶಕ್ತಿ ವರ್ಧನೆಗೆ ಮೀಸಲಿಡುವ ಮೂಲಕ ಎರಡನೇ ಹಂತದ ಸಾಂಸಾರಿಕ ಜೀವನವನ್ನು ಅತಿ ಸುಖಮಯವಾಗಿ ಕಳೆಯಲು ಸಾಧ್ಯವಾಗುವುದು. ನಕಾರಾತ್ಮತೆಯಿಂದಲೂ ನೀವು ಮುಕ್ತರಾಗಬಯಸಿದಲ್ಲಿ ಅದನ್ನು ಸಂಪೂರ್ಣವಾಗಿ ಬಾಳಿ, ಅನುಭವಿಸಿದರೆ ಮಾತ್ರ ಸಾಧ್ಯ. ಯಾವುದೇ ಆಗಲಿ ನಿಮಗೆ ಚೂರು ಪಾರು ಅಥವಾ ಭಾಗಶಃ ಗೊತ್ತಿರಲಿ, ನಿಮ್ಮ ಮನಸ್ಸು ಉಳಿದ ಭಾಗವನ್ನು ತಿಳಿದುಕೊಳ್ಳಲು ತವಕಿಸುತ್ತಿರುತ್ತದೆ. ಅದು ಕೇವಲ ಕುತೂಹಲಕ್ಕಾದರೂ ಇರಬಹುದು.

ಮುಲ್ಲಾ ನಸರುದ್ದೀನ್ ಮರಣ ಶಯ್ಯೆಯಲ್ಲಿದ್ದ. ಅಂತಿಮ ಸಂಸ್ಕಾರ ಮಾಡುವುದಕ್ಕಾಗಿ ಪುರೋಹಿತರು ಆಗಮಿಸಿದರು. ಅವರು ಮುಲ್ಲಾನನ್ನು ಕೇಳಿದರು, ''ನಿಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಡುತ್ತೀರೇನು?'' ಮುಲ್ಲಾ ಕಣ್ಣುಗಳನ್ನು ತೆರೆದು ನುಡಿದ, ''ನಾನು ಪಶ್ಚಾತ್ತಾಪ ಪಡುತ್ತಿದ್ದೇನೆ! ನೀವು ನನಗೆ ಏನು ಮಾಡಬೇಕೆಂದು ಹೇಳುತ್ತಿರುವುದಕ್ಕೂ ನಾನು ಮಾಡುತ್ತಿರುವುದಕ್ಕೂ ಸ್ವಲ್ಪ ವ್ಯತ್ಯಾಸವಿದೆ - ನನಗೆ ಮಾಡಲು ಸಾಧ್ಯವಾಗದ ಪಾಪಕ್ಕಾಗಿ ನಾನು ಪಶ್ಚಾತ್ತಾಪ ಪಡುತ್ತಿದ್ದೇನೆ! ಆ ಪಾಪಗಳನ್ನು ಮಾಡಿದ್ದರೆ ನಾನೇನು ಪಡೆಯುತ್ತಿದ್ದೆನೋ ಯಾರಿಗೆ ಗೊತ್ತು! ಅದಕ್ಕಾಗಿ ನನ್ನಲ್ಲಿ ತೀವ್ರ ಆಕ್ರೋಶವಿದೆ. ನಾನು ಏನು ಮಾಡಿದ್ದೇನೋ ಅದರಿಂದೇನೂ ನನಗೆ ಸಿಕ್ಕಿಲ್ಲ. ನಾನೇನೂ ಮಾಡಲಿಲ್ಲವೋ ಅದನ್ನು ಮಾಡಿದ್ದರೆ ಅದೂ ಕೂಡ ನನಗೇನನ್ನೂ ನೀಡುತ್ತಿರಲಿಲ್ಲವೆಂಬುದರ ಬಗ್ಗೆ ಖಾತ್ರಿ ಏನಿದೆ?''

ತಾನು ಏನನ್ನು ಮಾಡಿದ್ದನೋ ಅದರಿಂದ ಏನನ್ನೂ ಪಡೆಯಲಿಲ್ಲ. ಬಹುಶಃ ತಾನು ಮಾಡದಿದ್ದುದರಲ್ಲಿಯೇ ಸಂಪತ್ತು ಅಡಗಿದ್ದಿರಬೇಕು ಎಂದು ಮುಲ್ಲಾ ಭಾವಿಸಿದ್ದ. ಆದರೆ, ಅದು ಹಾಗಲ್ಲ ಎಂದು ಆತನಿಗೆ ಭರವಸೆ ನೀಡಬಲ್ಲವರಾರು?

ನಸರುದ್ದೀನನಿಗೆ ಒಂದು ನೂರು ವರ್ಷವಾದಾಗ ಆತ ತನ್ನ ನೂರನೇ ಜನ್ಮದಿನವನ್ನು ಆಚರಿಸಿದ. ಆ ಸಂದರ್ಭದಲ್ಲಿ ಪತ್ರಕರ್ತರು ಆತನನ್ನು ಕೇಳಿದರು. ''ಪುನಃ ನಿಮ್ಮ ಜೀವನವನ್ನು ಬದುಕುವುದಾದರೆ ನೀವು ಮಾಡಿದ ತಪ್ಪುಗಳನ್ನು ಪುನಃ ಮಾಡುವಿರೇನು?''

ನಸರುದ್ದೀನ್ ಹೇಳಿದ, ''ಖಂಡಿತವಾಗಿಯೂ ಆ ತಪ್ಪುಗಳನ್ನು ಪುನಃ ಮಾಡುತ್ತೇನೆ. ನನಗೆ ಮಾಡಲಾಗದಿದ್ದ ತಪ್ಪುಗಳನ್ನೂ ಮಾಡುತ್ತೇನೆ. ನಾನು ಮಾಡುವ ಬದಲಾವಣೆ ಎಂದರೆ ಅದೊಂದೇ. ಈ ಜೀವನದಲ್ಲಿ ಬಹಳ ತಡವಾಗಿ ತಪ್ಪುಗಳನ್ನು ಮಾಡಲು ಆರಂಭಿಸಿದೆ. ನನ್ನ ಜೀವನವನ್ನು ಪುನರಾರಂಭಿಸುವ ಅವಕಾಶ ಸಿಕ್ಕರೆ, ಮೊದಲಿನಿಂದಲೇ ತಪ್ಪುಗಳನ್ನು ಎಸಗಲು ಸಾಧ್ಯವಾಗುವುದು.''

ಅನಂತರ ಪತ್ರಕರ್ತರು ಮತ್ತೊಂದು ಪ್ರಶ್ನೆ ಕೇಳಿದರು: ''ನಿಮ್ಮ ದೀರ್ಘ ಬದುಕಿನ ರಹಸ್ಯವೇನು?'' ನಸರುದ್ದೀನ್ ಹೇಳಿದ, ''ನನಗೆ ಹತ್ತು ವರುಷವಾಗುವ ತನಕ ನಾನು ಕುಡಿಯಲಿಲ್ಲ. ನಾನು ಸಿಗರೇಟ್ ಸೇದಲಿಲ್ಲ ಅಲ್ಲದೆ ನಾನು ಹುಡುಗಿಯರನ್ನು ಮುಟ್ಟಲೂ ಇಲ್ಲ. ಇವುಗಳ ಹೊರತಾಗಿ ನನ್ನ ದೀರ್ಘಾಯುಷ್ಯಕ್ಕೆ ಬೇರೆ ರಹಸ್ಯಗಳಿವೆ ಎಂದು ನನಗೆ ಅನಿಸುವುದಿಲ್ಲ. ನನಗೆ ಇನ್ನೊಂದು ಜೀವನವಿದ್ದರೆ ಈ ಎಲ್ಲ ತಪ್ಪುಗಳನ್ನು ಸ್ವಲ್ಪ ಮುಂಚೆಯೇ ಮಾಡುತ್ತೇನೆ.''

ತನಗೆ ಬದುಕಿನಲ್ಲಿ ಅನುಭವಿಸಲು ಸಮಯ ದೊರಕಲಿಲ್ಲವೆಂಬ ಕಾರಣಕ್ಕಾಗಿ ಮನುಷ್ಯ ಮರುಗುತ್ತಾನೆ, ಪಶ್ಚಾತ್ತಾಪ ಪಡುತ್ತಾನೆ. ಈಗಾಗಲೇ ಜೀವಿಸಿದ ಬದುಕಿನ ಅನುಭವಗಳನ್ನು ತಾನು ಸವಿದಿರುವುದಿಲ್ಲ. ಆ ಅನುಭವಗಳನ್ನು ಅನುಭವಿಸಲಿಲ್ಲ ಅಥವಾ ಸವಿಯಲಿಲ್ಲ ಎಂಬ ಹಂಬಲ ನಮ್ಮನ್ನು ಕಾಡುತ್ತದೆ.

ಭಾರತದ ಋಷಿ, ಮುನಿಗಳು ಬುದ್ಧಿವಂತರು, ಜಾಣರು. ಅವರು ಹೇಳುತ್ತಾರೆ - ಇಪ್ಪತ್ತೈದು ವರ್ಷಗಳ ವರೆಗೆ ಶಕ್ತಿ, ಚೇತನ, ಸಾಮರ್ಥ್ಯವನ್ನು ಸಂಪಾದಿಸಬೇಕು. ಈ ಶಕ್ತಿ ಸಂಗ್ರಹವಾಗಲಿ. ಅನಂತರ ನೀವು ಇಂದ್ರಿಯಭೋಗ ಜೀವನಕ್ಕೆ ಕಾಲಿಟ್ಟಾಗ, ಆಗ ನಿಮ್ಮಲ್ಲಿ ಅಗಾಧ ಶಕ್ತಿ, ಸಾಮರ್ಥ್ಯ ತುಂಬಿ ತುಳುಕುತ್ತದೆ. ಆಗ ನೀವು ಮನೋಕಾಮನೆಗಳನ್ನು ಅನುಭವಿಸಬಹುದು. ಆಗ ಈ ಜಗತ್ತು ತೋರಿಸುವುದೆಲ್ಲವನ್ನೂ ನೀವು ನೋಡಬಲ್ಲಿರಿ. ಬದುಕಿನ ಈ ಭಾಗ ಮುಗಿದ ಬಳಿಕ ನೀವು ಪಶ್ಚಾತ್ತಾಪ ಪಡುವುದಿಲ್ಲ. ಅಲ್ಲದೇ ಬದುಕಿನ ಈ ಭಾಗಕ್ಕಾಗಿ ಹಂಬಲಿಸುವುದಿಲ್ಲ. ಬ್ರಹ್ಮಚರ್ಯ ಆಶ್ರಮದ ಅರ್ಥ ಇದು. ಜನರೆಲ್ಲ ಮುನಿಗಳು ಅಥವ ಸಾಧು ಸಂತರಾಗಬೇಕು ಹಾಗೂ ಇದಕ್ಕಾಗಿ ಬ್ರಹ್ಮಚರ್ಯವನ್ನು ಪಾಲಿಸಬೇಕು ಎಂಬುದು ಇದರರ್ಥವಲ್ಲ. ಮನುಷ್ಯನ ಜೀವನದ ಇಂದ್ರಿಯಭೋಗಗಳನ್ನು ಅನುಭವಿಸಬೇಕು. ಎಷ್ಟೊಂದು ಸಂಪೂರ್ಣವಾಗಿ ಅನುಭವಿಸಬೇಕೆಂದರೆ

ಅದರ ನಿರರ್ಥಕತೆ ಅವನಿಗೆ ಸ್ಪಷ್ಟವಾಗುವವರೆಗೆ. ಆಗಲೇ ನಿಜವಾದ 'ಸಂತ'ತನ ಹುಟ್ಟುವುದು.

ಈ ಇಪ್ಪತ್ತೈದು ವರ್ಷಗಳ ಬ್ರಹ್ಮಚರ್ಯ ಆಶ್ರಮದ ಅವಧಿ ಮುಗಿದ ಬಳಿಕ, ಮನುಷ್ಯ ಸಾಂಸಾರಿಕ ಜೀವನ - ಗೃಹಸ್ಥಾಶ್ರಮವನ್ನು ಆರಂಭಿಸಬೇಕು. ಸಾಂಸಾರಿಕ ಜೀವನ ಅಥವಾ ಮನೋಕಾಮನೆಗಳ ಸಾಕ್ಷಾತ್ಕಾರದಿಂದ ಮೊದಲ ಇಪ್ಪತ್ತೈದು ವರ್ಷಗಳ ಕಾಲ ಕಾಳಜಿ-ಪೂರ್ವಕವಾಗಿ ದೂರವಾಗಿಟ್ಟ ಮನುಷ್ಯನನ್ನು, ಅನಂತರದ ಇಪ್ಪತ್ತೈದು ವರ್ಷಗಳಲ್ಲಿ ಸಾಂಸಾರಿಕ ಜೀವನ ನಡೆಸಲು ಬಿಡಲಾಗುವುದು. ಈ ಪದ್ಧತಿಯನ್ನು ರೂಪಿಸಿದ ಅವರು ನಿಜಕ್ಕೂ ಬುದ್ಧಿವಂತರು.

ಹಿಂದಿಗಿಂತಲೂ ಈಗ ಸೆಕ್ಸ್ ಹೆಚ್ಚು ಮುಕ್ತವಾಗಿದ್ದರೂ, ಸುಲಭವಾಗಿ ಸಿಗುತ್ತಿದ್ದರೂ, ಪೂರ್ವಾತ್ಯ ಮತ್ತು ಪಾಶ್ಚಿಮಾತ್ಯ ದೇಶಗಳಲ್ಲಿನ ಕೆಲವೇ ಮಂದಿ ಲೈಂಗಿಕವಾಗಿ ತೃಪ್ತರಾಗಿದ್ದಾರೆ. ಲೈಂಗಿಕ ಚಟುವಟಿಕೆಗಳಿಗೆ ಬೇಕಾದ ಶಕ್ತಿ, ಸಾಮರ್ಥ್ಯ ಸಂಗ್ರಹವಾಗುವ ಮೊದಲೇ ಅದು ವ್ಯಯವಾಗುವುದೇ ಇದಕ್ಕೆ ಕಾರಣ. ಹಣ್ಣು ಮಾಗುವ ಮೊದಲೇ, ಬೇರುಗಳು ನಿಸ್ಸತ್ವಗೊಳ್ಳಲಾರಂಭಿಸಿದಂತೆ. ಸರಿಯಾಗಿ ಮಾಗಲು ಹಣ್ಣಿಗೆ ಅವಕಾಶವೇ ಇಲ್ಲ. ಮಾಗದ ಹಣ್ಣುಗಳು ಮರದಿಂದ ಬೀಳುವುದಿಲ್ಲ. ಮಾಗಿದ ಹಣ್ಣು ಸ್ವಾಭಾವಿಕವಾಗಿ ಬೀಳುವುದು. ಅವು ಯಾವಾಗ ಬೀಳುವುವೆಂದು ಮರಕ್ಕೂ ಗೊತ್ತಿರುವುದಿಲ್ಲ. ಹಣ್ಣು ಈ ರೀತಿ ಮಾಗುವುದು ಅಗತ್ಯ. ಜೀವನ ಅನುಭವ ಮಾಗಲು ಶಕ್ತಿ, ಸಾಮರ್ಥ್ಯ ಅವಶ್ಯಕ.

ಈ ಕಾರಣದಿಂದ ಜೀವನದ ಮೊದಲ ಇಪ್ಪತ್ತೈದು ವರ್ಷಗಳು ಶಕ್ತಿ, ಸಾಮರ್ಥ್ಯಗಳ ಸಂಗ್ರಹ ಮತ್ತು ಸೃಷ್ಟಿಗೆ ರೂಪಿತವಾಗಿರಬೇಕು. ಪ್ರತಿಯೊಬ್ಬನೂ ಶಕ್ತಿಯ ಜಲಾಶಯವಾಗಬಹುದು. ಆತ ಪ್ರತಿಯೊಬ್ಬನೂ ತನ್ನ ಶಕ್ತಿಯಿಂದ ಉಲ್ಲಾಸಭರಿತನಾಗಬಲ್ಲ. ಆಗ ಆತ ಈ ಜಗವನ್ನು ಶಕ್ತಿಯ ಸಂಪೂರ್ಣ ಸಾಮರ್ಥ್ಯದಿಂದ ಎದುರಿಸಬಲ್ಲ. ಒಂದು ಸಂಗತಿ ನೆನಪಿರಲಿ, ಹೆಚ್ಚು ಸಾಮರ್ಥ್ಯಗಳಿರುವ ಮನುಷ್ಯ ಬಹು ಬೇಗನೆ ತನ್ನ ಕಾಮನೆಗಳಿಂದ ಮುಕ್ತನಾಗಬಲ್ಲ. ಅಶಕ್ತನು ಅಥವಾ ದುರ್ಬಲನು, ಈ ಕಾಮನೆಗಳಿಂದ ಮುಕ್ತನಾಗುವುದೇ ಇಲ್ಲ. ಏಕೆಂದರೆ, ಅಶಕ್ತನಿಗೆ ತನ್ನ ಕಾಮನೆಗಳ ಸಂಪೂರ್ಣ ಅನುಭವ ಆಗುವುದೇ ಇಲ್ಲ. ಆದ್ದರಿಂದ ಆತ ಸ್ವಾಭಾವಿಕವಾಗಿ ಅವುಗಳಿಂದ ಮುಕ್ತನಾಗುವುದಿಲ್ಲ. ಯಾವುದು ಸಂಪೂರ್ಣವಾಗಿ ತಿಳಿಯುವುದಿಲ್ಲವೋ, ಅನುಭವವಾಗುವುದಿಲ್ಲವೋ ಅದು ನಮ್ಮಿಂದ ಹೋಗುವುದಿಲ್ಲ. ಯಾವುದಾದರಿಂದ ಮುಕ್ತವಾಗಲು ಅದರ ಸಂಪೂರ್ಣ ಅನುಭವ ಅಗತ್ಯ. ಮನುಷ್ಯ ಜೀವನದ ವಿವೇಚನಾಪೂರ್ಣ ವಿಂಗಡಣೆಯನ್ನು ಈ ಪ್ರಪಂಚ ಸ್ವೀಕರಿಸುವ ತನಕ, ತನ್ನ ಕಾಮನೆಗಳಿಂದ ಮುಕ್ತನಾಗಲು ಮನುಷ್ಯನಿಗೆ ಅಸಾಧ್ಯ.

ಜೀವನದ ಮೊದಲ ಹಂತದ ಅಧ್ಯಯನ ಮತ್ತು ಎರಡನೆಯ ಹಂತದ ಜೀವನದ ಅನುಭವ ಮುಗಿಯುವ ವೇಳೆಗೆ ಮನುಷ್ಯ ತನ್ನ ಐವತ್ತನೆ ವರ್ಷಕ್ಕೆ ಕಾಲಿಟ್ಟಿರುತ್ತಾನೆ. ಈ ವೇಳೆಗೆ ಆತನ ಮಕ್ಕಳು ತಮ್ಮ ಅಧ್ಯಯನವನ್ನು ಮುಗಿಸುವ ಹಂತದಲ್ಲಿರುತ್ತಾರೆ. ಮಕ್ಕಳಿಗೀಗ ಸುಮಾರು ಇಪ್ಪತ್ತೈದು ವರ್ಷಗಳಾಗಿರುತ್ತವೆ. ಅವರಿಗೆ ಮದುವೆ ಆಗಿದ್ದಲ್ಲಿ ಅವರು ಇಂದ್ರಿಯಭೋಗವನ್ನು ಅನುಭವಿಸಲು ತೊಡಗಿರುತ್ತಾರೆ. ಈ ಸಂದರ್ಭದಲ್ಲಿ ತಂದೆಯಾದವನೂ ಮಕ್ಕಳನ್ನು ಹುಟ್ಟಿಸುತ್ತಿದ್ದರೆ ಅದು ನಗೆಪಾಟಲು, ಅಪಹಾಸ್ಯಕರ. ತಮ್ಮ ಮಕ್ಕಳು ಐಹಿಕ ಜೀವನದಲ್ಲಿ ಮುಳುಗಿ ತಮ್ಮ ಲೈಂಗಿಕ ಕಾಮನೆಗಳನ್ನು ಈಡೇರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ತಂದೆಯೂ ಅದನ್ನೇ ಮಾಡುತ್ತಿದ್ದರೆ, ಮಕ್ಕಳು ತನಗೆ ಗೌರವ ಕೊಡಬೇಕೆಂದು ತಂದೆ ಹೇಗೆ ತಾನೆ ನಿರೀಕ್ಷಿಸಬಹುದು? ತನ್ನ ಮಕ್ಕಳ ಗೌರವ ಹಾಗೂ ನಂಬಿಕೆಯನ್ನು ಆತ ಹೇಗೆ ಗಳಿಸಬಹುದು?

ಇಲ್ಲ, ಮಗ ಮದುವೆಯಾದ ಬಳಿಕ ತಂದೆ ವಾನಪ್ರಸ್ಥಾಶ್ರಮವನ್ನು ಪ್ರವೇಶಿಸಬೇಕು ಎಂಬುದು ಸಂಪ್ರದಾಯ. ಇದು ಮೂರನೇ ಹಂತ. ಈಗ ಅವರ ಪೂರ್ಣ 'ಕೇಳಿ' ಮುಗಿದಂತೆ. ಮಕ್ಕಳು ತಮ್ಮ ಇಂದ್ರಿಯಭೋಗವನ್ನು ಈಡೇರಿಸಿಕೊಳ್ಳುವ ಹಂತದಲ್ಲಿ ಇದ್ದಾಗ, ತಂದೆಯಾದವನು ಸ್ವಾಭಾವಿಕವಾಗಿ ಪರಿತ್ಯಾಗದ ಅಥವಾ ವೈರಾಗ್ಯದ ಹಂತಕ್ಕೆ ಕಾಲಿಡಬೇಕು. ಇಲ್ಲದಿದ್ದಲ್ಲಿ ತಂದೆ ಮತ್ತು ಮಕ್ಕಳ ಮಧ್ಯೆ ವ್ಯತ್ಯಾಸವಿರುವುದಿಲ್ಲ.

ಐವತ್ತನೇ ವರ್ಷದಲ್ಲಿ ವ್ಯಕ್ತಿಯು ವಾನಪ್ರಸ್ಥಾಶ್ರಮಕ್ಕೆ ಕಾಲಿಡುತ್ತಾನೆ. ಇದರ ಅರ್ಥ: ಮನುಷ್ಯ ತನ್ನ ಮುಖವನ್ನು ಅರಣ್ಯ ಅಥವಾ ಕಾಡಿನತ್ತ ತಿರುಗಿಸುವುದು. ಆತ ಈಗಲೇ ಕಾಡಿಗೆ ಹೋಗುವುದಿಲ್ಲ. ಅಧ್ಯಯನ ಮುಗಿಸಿ ಬಂದ ಮಕ್ಕಳಿಗೆ ಆತ ಮಾರ್ಗದರ್ಶನ ಮಾಡಬೇಕು ಹಾಗೂ ತನ್ನ ಜೀವನದ ಅನುಭವಗಳನ್ನು, ಲಾಭವನ್ನು ಅವರೊಂದಿಗೆ ಹಂಚಿಕೊಳ್ಳಬೇಕು. ಇದು ತಂದೆಯಾದವನ ಜವಾಬ್ದಾರಿ. ಈ ಹಂತದಲ್ಲಿ ತಂದೆಯಾದವನು ಕಾಡಿಗೆ ಹೋದರೆ, ಒಂದು ಪೀಳಿಗೆಯಿಂದ ಮುಂದಿನ ಪೀಳಿಗೆಗೆ ಜ್ಞಾನದ ವರ್ಗಾವಣೆಯಾಗುವುದಿಲ್ಲ. ಏಕೆಂದರೆ ಈ ಸಂದರ್ಭದಲ್ಲಿ ಮಕ್ಕಳು ಅಧ್ಯಯನ ಮುಗಿಸಿ ಬಂದಿರುತ್ತಾರಷ್ಟೆ. ಅವರು ಅಕ್ಷರಾಭ್ಯಾಸ ಮಾಡಿರುತ್ತಾರೆ. ಧರ್ಮಗ್ರಂಥಗಳನ್ನು ಓದಿರುತ್ತಾರೆ. ಜೀವನದ ಬಗ್ಗೆ ಉತ್ಸಾಹ ಮತ್ತು ಲವಲವಿಕೆ ಹೊಂದಿರುತ್ತಾರೆ. ಯೌವನ ಸಹಜ ಉಲ್ಲಾಸದೊಂದಿಗೆ ಅವರು ವಾಪಸು ಮನೆಗೆ ಬಂದಿರುತ್ತಾರೆ. ಈ ಸಮಯದಲ್ಲಿ ತಂದೆಯಾದವನ ಮುಖ್ಯ ಕರ್ತವ್ಯವೆಂದರೆ, ತನ್ನ ಇಪ್ಪತ್ತೈದು ವರ್ಷಗಳ ಕೌಟುಂಬಿಕ ಜೀವನದ ಅನುಭವಗಳನ್ನು ಮಕ್ಕಳಿಗೆ ಸೂಕ್ಷ್ಮವಾಗಿ ತಿಳಿಸಿಕೊಡುವುದು ಹಾಗೂ ಅವರಿಗೆ ಸೂಕ್ಷ್ಮ ಮಾರ್ಗದರ್ಶನ ನೀಡುವುದು.

ಪಾಲಕರಿಗೆ ಎಪ್ಪತ್ತೈದು ವರ್ಷವಾದಾಗ, ಮಕ್ಕಳ ಮಕ್ಕಳು ಅಂದರೆ ಮೊಮ್ಮಕ್ಕಳು ಅಧ್ಯಯನ ಮುಗಿಸಿ ಬರುತ್ತಾರೆ. ಆಗ ಅಜ್ಜ-ಅಜ್ಜಿ ಯಾರಿಗಾಗಿಯೂ ಕಾಯಬೇಕಾಗಿಲ್ಲ. ಈ ವೇಳೆಗೆ ಮಗನಿಗೆ ಐವತ್ತು ವರ್ಷ ಆಗಿರುತ್ತದೆ. ಆತ ಅವರನ್ನು ವಿಚಾರಿಸಿಕೊಳ್ಳುತ್ತಾನೆ. ಮಗ ಪ್ರಬುದ್ಧನಾಗಿರುತ್ತಾನೆ. ಅನುಭವ ಪಡೆದಿರುತ್ತಾನೆ. ಆತ ತನ್ನ ಅನುಭವಗಳನ್ನು ಮಕ್ಕಳಿಗೆ ತಿಳಿಸಿಕೊಡುತ್ತಾನೆ.

ಈ ಹಂತದಲ್ಲಿ ಅಜ್ಜ ಅಜ್ಜಿಯರಿಗೆ ಸಂನ್ಯಾಸ ಸ್ವೀಕರಿಸುವುದಕ್ಕೆ ಸಕಾಲ, ಅವರು ಕಾಡಿಗೆ ತೆರಳಿ, ಆಧ್ಯಾತ್ಮಿಕ ಶೋಧದಲ್ಲಿ ತಲ್ಲೀನರಾಗಬಹುದು. ಈ ರೀತಿಯಲ್ಲಿ ಈ ಸುಂದರವಾದ ವರ್ತುಲವನ್ನು ನಿರ್ಮಿಸಲಾಗಿದೆ.[19]

ಮುಪ್ಪಿಗೆ ಅದರದ್ದೇ ಆದ ಘನತೆ, ಗಾಂಭೀರ್ಯವಿದೆ. ವ್ಯಕ್ತಿಯೊಬ್ಬ ನಿಜವಾಗಿಯೂ ಪ್ರಬುದ್ಧನಾದಾಗ ಮುಪ್ಪು ಅದರದೇ ಆದ ಸೌಂದರ್ಯ, ಸೊಬಗನ್ನು ಪಡೆದುಕೊಳ್ಳುತ್ತದೆ. ಅದು ಯುವಕನಲ್ಲಿ ಕಾಣಲಾರದು. ಯೌವನದಲ್ಲಿ ಸಡಗರ, ಸಂಭ್ರಮವಿರಬಹುದು ಆದರೆ ಪ್ರಸನ್ನತೆ ಅಥವಾ ಪ್ರಶಾಂತತೆ ಇರಲಾರದು. ಅಲ್ಲಿ ಚಂದ್ರನ ಶಾಂತತೆ ಇರಲಾರದು. ಯೌವನದಲ್ಲಿ ಭಾರೀ ಗಡಿಬಿಡಿ, ಆತುರವಿರುವುದು. ಅವಸರ ಯಾವತ್ತೂ ಅಸಹ್ಯ, ಕುರೂಪ. ಅದರಲ್ಲಿ ಸೊಬಗಿಲ್ಲ. ಸೌಂದರ್ಯವೆಂದರೆ ನಿಧಾನವಾಗಿ, ಶಾಂತವಾಗಿ ಹರಿಯುವ ನದಿಯಿದ್ದಂತೆ. ಯೌವನದಲ್ಲಿ ಎಷ್ಟೊಂದು ಶಕ್ತಿಸಾಮರ್ಥ್ಯವಿರುವುದೆಂದರೆ, ಅದನ್ನು ಬಳಸಲು ಭಾರಿ ಅಸಹನೆ ಹಾಗೂ ಆತುರವಿರುತ್ತದೆ.

ಯೌವನ ಯಾವತ್ತೂ ಮಾನಸಿಕವಾಗಿ ಸ್ಥಿರವಲ್ಲ. ಯೌವನದಲ್ಲಿ ಆರೋಗ್ಯ ತುಂಬಿ ತುಳುಕುತ್ತಿರುತ್ತದೆ ಎಂದು ನೀವು ಹೇಳಬಹುದು. ಆದರೆ ಈ ಆರೋಗ್ಯ ದೇಹದ್ದು. ಮಾನಸಿಕವಾಗಿ ಯೌವನ ಅಸ್ತಿಮಿತ ಮತ್ತು ಕ್ಷುಬ್ಧ ಸ್ಥಿತಿ. ಈ ದೃಷ್ಟಿಯಿಂದ ಕೇವಲ ವಯಸ್ಸಾದವರು ಮಾನಸಿಕವಾಗಿ ಶಾಂತಿಯಿಂದ ಇರಬಲ್ಲರು. ಆದರೆ ಇದಕ್ಕೆ ಅವರು ಪ್ರಬುದ್ಧತೆಯನ್ನು ಹೊಂದಿರಬೇಕಾದುದು ಅವಶ್ಯ. ನಿಜವಾದ ಪ್ರಬುದ್ಧತೆಯ ಲಕ್ಷಣ, ಮನಸ್ಸಿನೊಳಗೆ ಯುವಕ ಸಹಜ ಹಂಬಲಗಳು ಸದಾ ಕಾಡದೆ, ಕಿರುಕುಳ ಕೊಡದೆ ಇರುವುದು. ಇಲ್ಲದಿದ್ದರೆ ದೇಹ ಮುಪ್ಪಾದರೂ ಮನಸ್ಸು ಮಾತ್ರ ತಾರುಣ್ಯದ್ದಾಗಿರುತ್ತದೆ. ಹೀಗಾದಾಗ ಮುದುಕರು ಅಥವಾ ವಯಸ್ಸಾದವರು ಕುರೂಪವಾಗಿ ಕಾಣುತ್ತಾರೆ. ಆಗ ಅವರ ಜೀವಕ್ಕೆ ಮುಪ್ಪಾಗಿರುತ್ತದೆ. ಅವರ ಮನಸ್ಸು ಅಸ್ತಿಮಿತ ಹಾಗೂ ಕ್ಷುಬ್ಧವಾಗಿರುತ್ತದೆ.

ಕುತೂಹಲಕರ ಸಂಗತಿ ಏನೆಂದರೆ ಮಕ್ಕಳು ಸುಂದರವಾಗಿ ಕಾಣುತ್ತಾರೆ, ಯುವಕ ಯುವತಿಯರು ಸುಂದರವಾಗಿ ಕಾಣುತ್ತಾರೆ. ಆದರೆ ಮುದುಕರು, ವಯಸ್ಸಾದವರು ಮಾತ್ರ ಸುಂದರರಾಗಿ ಕಾಣುವುದಿಲ್ಲ. ಸುಂದರನಾಗಿ ಕಾಣುವ ವಯಸ್ಸಾದವನು ಸಿಗುವುದು ಅಪರೂಪ. ರಬೀಂದ್ರನಾಥ್ ಟಾಗೋರ್ ಹೇಳುತ್ತಾರೆ: ''ಜೀವನದ ಪೂರ್ಣ ಅನುಭವದೊಂದಿಗೆ ವಯಸ್ಸಾದವ ಮುಪ್ಪಿನ ಸೌಂದರ್ಯ ಪಡೆದರೆ, ಆತ ಆತನ ಬಿಳಿ ಕೂದಲು ಹಿಮಾಲಯದ ಶಿಖರದ ಮೇಲಿನ ಹಿಮರಾಶಿಯಂತೆ ಕಂಗೊಳಿಸುತ್ತದೆ - ಶಾಂತ, ಸೌಮ್ಯ. ತುತ್ತತುದಿಯಲ್ಲಿ, ಆಕಾಶವನ್ನು ಸ್ಪರ್ಶಿಸುವಂತೆ. ಅಲ್ಲಿ ಮೋಡಗಳು ಗೌರವಪೂರ್ವಕವಾಗಿ ತಲೆಬಾಗುತ್ತವೆ. ಅಂತಹ ವಯಸ್ಸಾದವರನ್ನು ನಾವು ಗುರುಗಳು, ಗುರುವರ್ಯರು ಎಂದು ಕರೆಯುತ್ತೇವೆ.''[20]

ಯಾವಾಗ ವ್ಯಕ್ತಿಯೊಬ್ಬ ಸಂತೋಷ, ಅಸಂತೋಷ ಮತ್ತು ಈ ಉಭಯತ್ವಗಳನ್ನು ಮೀರಿ ಹೋಗುತ್ತಾನೋ, ಇವೆಲ್ಲವನ್ನೂ ಯಥೇಚ್ಛವಾಗಿ ಪಡೆದಿರುತ್ತಾನೋ, ಆಗ ಪರಮಸುಖ ಅರಸುವ ಪ್ರಯತ್ನ ಆರಂಭವಾಗುತ್ತದೆ. ಆಗ ಆತ ನಿರಂತರವಾದುದನ್ನು, ಶಾಶ್ವತೆಯನ್ನು ಅರಸುತ್ತಾನೆ ಹಾಗೂ ಶೋಧಿಸುತ್ತಾನೆ. ಪೂರ್ವಾತ್ಯ ದೇಶಗಳಲ್ಲಿ ಇದನ್ನೇ ಸಂನ್ಯಾಸ ಎಂದು ಕರೆಯುತ್ತಾರೆ. ಸಂನ್ಯಾಸದ ಸೃಷ್ಟಿಗೆ ಇದೇ ಕಾರಣ. ಪೂರ್ವಾತ್ಯ ದೇಶಗಳು ಪಾಶ್ಚಿಮಾತ್ಯ ದೇಶಗಳಿಗಿಂತ ಸಾಕಷ್ಟು ಪ್ರಾಚೀನವಾಗಿವೆ. ಪಾಶ್ಚಿಮಾತ್ಯ ದೇಶಗಳು ಇನ್ನೂ ಸಾಕಷ್ಟು ತಾರುಣ್ಯಾವಸ್ಥೆಯಲ್ಲಿವೆ. ಆದ್ದರಿಂದ ಸಂತೋಷ, ಅಸಂತೋಷಗಳಲ್ಲಿ ಆಸಕ್ತಿ ತಾಳಿವೆ. ಇವುಗಳಿಗೆ ಪೂರ್ವಾತ್ಯ ದೇಶಗಳು ಸಾಕಷ್ಟು ಪುರಾತನವಾಗಿವೆ. ಈ ಎಲ್ಲ ಆಟಗಳು ಹಾಗೂ ಅವುಗಳ ವ್ಯರ್ಥತೆ ಗೊತ್ತು. ಮನುಕುಲಕ್ಕೆ ಪೂರ್ವಾತ್ಯದ ಮಹಾನ್ ಕೊಡುಗೆ ಎಂದರೆ ಧ್ಯಾನ.[21]

ಪ್ರಜ್ಞೆಯ ಸುವರ್ಣ ಶಿಖರ




ಪೂರ್ವಾತ್ಯ ದೇಶಗಳಲ್ಲಿ
ಅಸಂಖ್ಯಾತ ಗುಪ್ತ
ಕೀಲಿಗಳಿವೆ. ಅವುಗಳಲ್ಲಿ
ಒಂದೇ ಒಂದು ಕೀಲಿ
ಸಿಕ್ಕಿದರೂ ಸಾಕು.
ಏಕೆಂದರೆ ಒಂದು
ಕೀಲಿಯಿಂದ ಸಾವಿರಾರು
ಬೀಗಗಳನ್ನು
ತೆಗೆಯಬಹುದು.

ರಾಜನಿಗಿಂತ ಭಿಕ್ಷುವಿನ ಸ್ಥಾನವೇ ಹೆಚ್ಚಿನದು ಎಂಬ ಮೌಲ್ಯವನ್ನು ಕಟ್ಟಿದ್ದು ಜಗತ್ತಿನಲ್ಲಿ ಭಾರತವೊಂದೇ. ಇಂತಹ ಅಪರೂಪದ ಸಂಗತಿಯನ್ನು ಜಗತ್ತಿನ ಬೇರೆ ಕಥೆಗಳಲ್ಲಿ ಕಾಣುವುದು ಅಸಾಧ್ಯ. ಈ ಭೂಮಿಯ ಮೇಲೆ ರಾಜನಿಗಿಂತ ಹೆಚ್ಚಿನವರು, ಮಿಗಿಲಾದವರು ಯಾರೂ ಇಲ್ಲ ಎಂದೇ ಪರಿಗಣಿಸಲಾಗುತ್ತದೆ. ಆದರೆ ಭಾರತ ದೇಶ ರಾಜನಿಗಿಂತ ಉನ್ನತ ಸ್ಥಾನವನ್ನು ಭಿಕ್ಷುವಿಗೆ ನೀಡಿದ ಏಕಮಾತ್ರ ರಾಷ್ಟ್ರ.

ರಾಜನಾದವನು ಸದಾ ಇಂದ್ರಿಯಾಸಕ್ತಿ ಅಥವಾ ಭೋಗಾಸಕ್ತಿಯಲ್ಲಿ ತೊಡಗಿರುತ್ತಾನೆ. ಆದರೆ ಭಿಕ್ಷು ಪರಿತ್ಯಾಗದ ಪರಮತುದಿಯಲ್ಲಿರುತ್ತಾನೆ. ರಾಜನಾದವನು ಸದಾ ಹುಚ್ಚನಂತೆ ಸಂಗ್ರಹಣೆಯಲ್ಲೇ ತೊಡಗಿರುತ್ತಾನೆ. ಸಿಕ್ಕಿದ್ದನ್ನೆಲ್ಲ ಸಂಗ್ರಹಿಸುವುದೇ ಅವನ ಕೆಲಸ. ಆದರೆ ಭಿಕ್ಷು ಏನನ್ನೂ ಸಂಗ್ರಹಿಸುವುದಿಲ್ಲ, ತನ್ನ ಹೊರತಾಗಿ. ರಾಜನಾದವನು ಯಾವತ್ತೂ ಪ್ರಾಪಂಚಿಕ ಅಥವಾ ಲೌಕಿಕ ವಸ್ತುಗಳನ್ನು ಸಂಗ್ರಹಿಸುತ್ತಲಿರುತ್ತಾನೆ. ಆದರೆ ಭಿಕ್ಷು ಸದಾ ತನ್ನ ಆತ್ಮದ ಬಗ್ಗೆ ಚಿಂತಿಸುತ್ತಿರುತ್ತಾನೆ. ಐಹಿಕ ವಸ್ತುಗಳನ್ನು ರಾಜನು ಕೂಡಿಸಿಡುವುದರಲ್ಲಿ ತೊಡಗಿದರೆ, ಭಿಕ್ಷು ಆ ವಸ್ತುಗಳಿಂದ ಮುಕ್ತನಾಗಿ ತನ್ನೊಳಗೆ ಪ್ರವೇಶಿಸಲು ಪ್ರಯತ್ನಿಸುತ್ತಾನೆ. ರಾಜನಿಗೆ ಪ್ರಾಪಂಚಿಕ ಹಂಬಲಗಳು ಕಾಡತೊಡಗಿದರೆ, ಭಿಕ್ಷುವಿಗೆ ಆಂತರಿಕ ಪ್ರವಾಸ .....

ಭಿಕ್ಷು ಯಾರು? - ಯಾರು ನಿಜವಾಗಿಯೂ ಮಾಲಿಕನೋ ಅವನು. ಆದರೆ ನಿಜವಾದ ಮಾಲೀಕತ್ವ ತನ್ನ ಮೇಲೆ ಮಾತ್ರ ಸಾಧ್ಯ. ಬೇರೆಯವರಿಗೂ ಇದಕ್ಕೂ ಸಂಬಂಧವಿಲ್ಲ. ಎಲ್ಲಿಯವರೆಗೆ ಒಬ್ಬ ಮತ್ತೊಬ್ಬರನ್ನು ದಾಸ್ಯಕ್ಕೆ ತಳ್ಳುವ ಪ್ರಯತ್ನ ಮಾಡುತ್ತಿರುತ್ತಾನೋ, ಅಲ್ಲಿಯವರೆಗೆ ಆತನ ಜೀವನ ವ್ಯರ್ಥ. ಈ ಕೆಲಸ ನಿರರ್ಥಕ, ಯಾವ ಉದ್ದೇಶವೂ ಈಡೇರುವುದಿಲ್ಲ. ಆತ ಎಲ್ಲಿಗೂ ತಲುಪುವುದಿಲ್ಲ. ಆತ ತನ್ನನ್ನು ತಾನೇ ಸೊರಗಿಸಿಕೊಳ್ಳುತ್ತಾನೆ, ತಾನೇ ಹಾಳುಮಾಡಿಕೊಳ್ಳುತ್ತಾನೆ, ತಾನೇ ನಾಶಪಡಿಸಿಕೊಳ್ಳುತ್ತಾನೆ .....

ಮಹಾವೀರರ ದಾರಿ ಇದಕ್ಕೆ ಸರಿ ವಿರುದ್ಧ. ನೀವು ಬಾಹ್ಯದಲ್ಲಿ ಯಜಮಾನನಾಗಿರುವ ಕಲ್ಪನೆಯನ್ನೇ ಬಿಟ್ಟುಬಿಡುತ್ತೀರಿ. ನಿಮ್ಮೊಳಗೆ ಒಂದು ವಿಶ್ವವೇ ಇದೆ. ಒಂದು ಸಾಮ್ರಾಜ್ಯವಿದೆ, ವಿಶಾಲತೆಯಿದೆ, ಆಕಾಶವಿದೆ - ನೀವೇ ಅದರ ಮಾಲಿಕ. ನೀವು ಅದರ ಮಾಲಿಕತ್ವ ಸಾಧಿಸಬಹುದು.[22]



ಪಾರ್ಶ್ವನಾಥ ಮಂದಿರ, ಖಜುರಾಹೋ

ಜಗತ್ತಿನ ಇತಿಹಾಸದಲ್ಲೇ ಮಹಾನ್ ರಾಜನೆಂಬ ಅಭಿದಾನ ಪಡೆದ ರಾಜನ ನೆನಪಾಗುತ್ತದೆ. ಆತನ ಹೆಸರು ಅಶೋಕ. ಅಲೆಗ್ಸಾಂಡರ್‌ನಿಗಿಂತ ಸುಲಭವಾಗಿ ಈತ ಇಡೀ ವಿಶ್ವವನ್ನು ಜಯಿಸಬಹುದಿತ್ತು. ಅಶೋಕನ ಬಳಿ ಅಲೆಗ್ಸಾಂಡರ್‌ನಿಗಿಂತ ದೊಡ್ಡ ಸೇನಾಪಡೆಯಿತ್ತು. ಆಧುನಿಕ ಶಸ್ತ್ರಾಸ್ತ್ರಗಳಿದ್ದವು. ಸಂಪತ್ತೂ ಕೂಡ ಇತ್ತು. ಆತ ಇಡೀ ವಿಶ್ವದ ಸಾಮ್ರಾಟನಾಗುವ ಹಂತದಲ್ಲಿದ್ದ. ಮೊದಲ ಗೆಲುವೊಂದೇ ಸಾಕಾಗಿತ್ತು. ಆತ ಈಗೀನ ರಾಜ್ಯವಾದ ಒರಿಸ್ಸಾವನ್ನು ಜಯಿಸಿದ್ದ. ಆಗ ಅದನ್ನು ಕಳಿಂಗ ಎಂದು ಕರೆಯುತ್ತಿದ್ದರು. ಆತ ಕಳಿಂಗ ರಾಷ್ಟ್ರವನ್ನು ಸ್ವಾಧೀನಪಡಿಸಿಕೊಂಡ.

ಲಕ್ಷಾಂತರ ಜನರನ್ನು ಕೊಲ್ಲಲಾಯಿತು. ಅಸಂಖ್ಯ ಮಂದಿ ಹತ್ಯೆಗೊಳಗಾದರು. ನರಮೇಧವೇ ನಡೆಯಿತು. ಅವರು ಸಾಯಲು ಸಿದ್ಧರಾಗಿದ್ದರೇ ಹೊರತು ಸೋಲಲಲ್ಲ. ಒಬ್ಬನೇ ಒಬ್ಬಯೋಧ ಬದುಕಿ ಉಳಿಯದವರೆಗೂ ಯುದ್ಧ ಮುಂದುವರೆಯುವ ಸಂದರ್ಭ ನೆಲೆಸಿತ್ತು. ಲಕ್ಷಾಂತರ ಹೆಣಗಳ ಮೇಲೆ ಅಶೋಕ ವಿಜಯ ಮೆರೆಯಬಹುದಿತ್ತು. ಲಕ್ಷಾಂತರ ಜನರ ಹತ್ಯೆಯನ್ನು ಕಂಡು, ಇವರು ಯಾವುದೇ ಕಾರಣಕ್ಕೂ ಜಗ್ಗುವವರಲ್ಲ ಸ್ವತಂತ್ರ ಬಾಳ್ವೆ ಇಲ್ಲದಿದ್ದರೆ ಸಾವನ್ನು ಎದುರಿಸಲು ಹಿಂಜರಿಯುವವರಲ್ಲ ಎಂಬುದು ಗೊತ್ತಾದಾಗ ಅಶೋಕ ತಲ್ಲಣಿಸಿದ. ಅವರು ಯಾವುದೇ ವಿಧದ ಗುಲಾಮಗಿರಿಗೆ ಸಿದ್ಧರಿರಲಿಲ್ಲ.

ಈ ಸಂಗತಿ ಅಶೋಕನಿಗೆ ದೃಢವಾದ ಬಳಿಕ, ಲಕ್ಷಾಂತರ ಶವಗಳ ನಟ್ಟನಡುವೆ ನಿಂತು ಯೋಚಿಸತೊಡಗಿದ - ''ಇದು ಸರಿಯೇ? ಇದರ ಪ್ರಯೋಜನವೇನು? ಇಂತಹ ಶೂರರನ್ನು ಕೊಲ್ಲುವುದು ಹಾಗೂ ಸತ್ತ ಜನರ ದೇಹದ ಮೇಲೆ ವಿಜಯ ಸಾಧಿಸುವುದು .... ಜೀವನವಿಡೀ ಪಶ್ಚಾತ್ತಾಪ, ಮರುಕ ಪಡಬೇಕಾಗುವುದು. ಏಕೆಂದರೆ ಅಷ್ಟೊಂದು ಜೀವಿಗಳನ್ನು ಸಾಯಿಸಿದ್ದಕ್ಕಾಗಿ. ಅವರೇನೂ ಸಾಮಾನ್ಯ ಜನರಲ್ಲ, ಶೂರರು, ಧೀರರು. ಎರಡರಲ್ಲಿ ಒಂದನ್ನು ಮಾತ್ರ ಆಯ್ದುಕೊಳ್ಳುವವರು - 'ಸ್ವಾತಂತ್ರ್ಯದಲ್ಲಿ ಜೀವಿಸುವೆವು ಇಲ್ಲವೇ ಸ್ವಾತಂತ್ರ್ಯದಲ್ಲಿಯೇ ಸಾಯುವೆವು. ದಾಸ್ಯವನ್ನು ಮಾತ್ರ ಒಪ್ಪಿಕೊಳ್ಳಲಾರೆವು. ನೀನು ಮಹಾನ್ ಸಾಮ್ರಾಟನಿರಬಹುದು, ನಿನಗೆ ಅಸಾಮಾನ್ಯ ಶಕ್ತಿ ಅಧಿಕಾರಗಳಿರಬಹುದು, ಆದರೆ ನಮಗೆ ಕನಿಷ್ಠ ಸಾಯುವ ಅಧಿಕಾರವಾದರೂ ಇದೆ - ನೀನು ಅದನ್ನು ನಮ್ಮಿಂದ ಕಿತ್ತುಕೊಳ್ಳಲಾರೆ.' ''

ಅದು ಬಡ ದೇಶ. ಅಶೋಕನ ವಿಶಾಲ ಸಾಮ್ರಾಜ್ಯಕ್ಕೆ ಅದು ಸರಿಸಾಟಿಯಲ್ಲ. ಅಶೋಕನ ಅಂದಿನ ಭಾರತ ಸಾಮ್ರಾಜ್ಯ ಭವ್ಯವಾದದ್ದು. ಅಂತಹ ಮಹಾನ್ ರಾಷ್ಟ್ರ - ಭಾರತವನ್ನು ಯಾರೂ ನೋಡಿಲ್ಲ. ಅಫ್‌ಘಾನಿಸ್ತಾನ, ಪಾಕಿಸ್ತಾನ, ಶ್ರೀಲಂಕಾ, ಬರ್ಮಾ, ನೇಪಾಳ, ಭೂತಾನ್ ..... ಇವುಗಳೆಲ್ಲಾ ಈಗ ಪ್ರತ್ಯೇಕ ದೇಶಗಳಾಗಿವೆ. ಅಶೋಕನ ಭಾರತದಲ್ಲಿ ಈ ಎಲ್ಲ ದೇಶಗಳೂ

ಒಂದಾಗಿದ್ದುವು. ಭಾರತದಲ್ಲಿ ಲೀನವಾಗಿದ್ದುವು. ಭಾರತದ ನಕಾಶೆ ಅಶೋಕನ ಕಾಲದಲ್ಲಿದ್ದಷ್ಟು ದೊಡ್ಡದಾಗಿ ಎಂದೂ ಇರಲಿಲ್ಲ.

ಕಳಿಂಗ ಎಂಬ ಪುಟ್ಟ ದೇಶ, ಬಡತನದಿಂದ ಕೂಡಿದ ಸ್ವತಂತ್ರ ದೇಶವಾಗಿತ್ತು. ಆ ದೇಶಕ್ಕೆ ಸೇನೆ ಇರಲಿಲ್ಲ. ತಂತ್ರಜ್ಞಾನವಿರಲಿಲ್ಲ. ಅವರಲ್ಲಿ ಇದ್ದದ್ದು ಧೈರ್ಯ ಮಾತ್ರ. ಎಂತಹ ಧೈರ್ಯವೆಂದರೆ ಅವರಿಗೆ ಕಂಡಿದ್ದು ಎರಡು ಪರ್ಯಾಯಗಳು ಮಾತ್ರ. ''ನಾವು ಸ್ವತಂತ್ರರಾಗಿ ಬದುಕಬೇಕು ಇಲ್ಲವೇ ಸ್ವತಂತ್ರರಾಗಿ ಸಾಯಬೇಕು. ಇದನ್ನು ಬಿಟ್ಟು ಅನ್ಯ ಮಾರ್ಗವಿಲ್ಲ.''

ಒಂದು ರೀತಿಯಲ್ಲಿ ಇದು ಅಶೋಕನಿಗೆ ಸವಾಲು. ಏಕೆಂದರೆ ಇವರುಗಳು ಶತಮಾನಗಳಿಂದ ಸೇನೆಯ ನೆರವಿಲ್ಲದೆಯೇ ಸ್ವಾತಂತ್ರ್ಯವನ್ನು ಉಳಿಸಿಕೊಂಡಿದ್ದ ಬಗೆ ಹೇಗೆ ಎಂಬುದು ಆತ ತಿಳಿಯಬಯಸಿದ್ದ. ಅವರಲ್ಲಿದ್ದುದು ಕೇವಲ ಮಾನವ ಸಾಹಸ, ಘನತೆ ಹಾಗೂ ಪ್ರತಿಷ್ಠೆ. ಅಶೋಕ ಅವರನ್ನು ಯಾವುದೇ ಪ್ರಯತ್ನವಿಲ್ಲದೇ ಸದೆ ಬಡಿಯಬಹುದಿತ್ತು. ಈಗಾಗಲೇ ಆತ ಆ ದೇಶದ ಅರ್ಧದಷ್ಟು ಜನರನ್ನು ಕೊಂದುಹಾಕಿದ್ದ.

ಆದರೆ ಅಶೋಕನ ಪ್ರಜ್ಞೆ ಹಾಗೂ ಒಳ ಅರಿವಿಗೆ ಹಠಾತ್ತನೆ ಒಂದು ಅಂಶ ವೇದ್ಯವಾಯಿತು. ಇದು ಬಹಳ ಮೂರ್ಖತನದ್ದೆಂದೂ ಅವನಿಗೆ ಗೊತ್ತಾಯಿತು - ''ನೀನು ಸುಂದರ ಹಾಗೂ ಆತ್ಮಾಭಿಮಾನವುಳ್ಳ ಜನರನ್ನು ನಾಶಮಾಡುತ್ತಿರುವೆ. ನಿನ್ನಲ್ಲಿ ದೊಡ್ಡ ಸೇನೆ ಇರುವುದರಿಂದ ಹೆಚ್ಚು ಶಸ್ತ್ರಾಸ್ತ್ರ ಇರುವುದರಿಂದ, ಉತ್ತಮ ಕುದುರೆಗಳು ಇರುವುದರಿಂದ ಅವರ ನಾಶ ಸಾಧ್ಯವಾಗುತ್ತಿದೆ. ನೀನು ಕೊಲ್ಲುತ್ತಿರುವ ಜನರಿಗಿಂತ ಉತ್ತಮವಾದ ಜನರು ನಿನ್ನ ಬಳಿಯಲ್ಲಿ ಇಲ್ಲ. ನಿನ್ನವರು ಕೇವಲ ಸೇವಕರು, ಕೂಲಿಗಾಗಿ ದುಡಿಯುವವರು. ಆದರೆ ಆ ಜನರು ಶಸ್ತ್ರಾಸ್ತ್ರಗಳಿಲ್ಲದೇ, ಕುದುರೆಗಳಿಲ್ಲದೇ ಹೋರಾಡುವರು. ಕಾರಣ ಅವರು ಸ್ವಾತಂತ್ರ್ಯವನ್ನು ಪ್ರೀತಿಸುತ್ತಾರೆ. ಈ ಜನರನ್ನು ನಾಶಮಾಡುವುದು ಹೇಯವಾದುದು. ಇದೊಂದು ಸುಂದರ ತಳಿಯನ್ನು ನಾಶಮಾಡಿದಂತೆಯೇ ಸರಿ.''

ಅಶೋಕ ಮನೆಗೆ ಮರಳಿದ. ಸೇನಾನಿಗಳು ಕೇಳಿದರು, ''ಏತಕ್ಕೆ? ನಾವು ಜಯಗಳಿಸುತ್ತಿದ್ದೇವೆ.'' ಅಶೋಕ ಹೇಳಿದ, ''ಇದು ಜಯವಲ್ಲ. ಇದು ಕಗ್ಗೊಲೆ. ನಾನು ಕೊಲೆಗಡುಕನಲ್ಲ. ನಾನು ಅವರನ್ನು ಜೀವಂತವಾಗಿ ಜಯಿಸದಿದ್ದರೆ ನನಗೆ ಗೆಲ್ಲುವುದು ಬೇಕಾಗಿಲ್ಲ. ಹೆಣಗಳನ್ನು ಜಯಿಸಿದವ ಎಂದು ಇತಿಹಾಸ ನನ್ನನ್ನು ಕರೆಯುವುದು ನನಗೆ ಇಷ್ಟವಿಲ್ಲ. ಅದನ್ನು ಮರೆತುಬಿಡಿ.''

ಈ ಎಲ್ಲ ಸಂಗತಿಗಳು ಅಶೋಕನನ್ನು ಎಷ್ಟೊಂದು ತೀವ್ರವಾಗಿ ಕಾಡಲಾರಂಭಿಸಿತೆಂದರೆ, ಅರಮನೆಯನ್ನು ತಲುಪುವ ಹೊತ್ತಿಗೆ ಪರಿವರ್ತನೆಯ ಬಿಂದುವನ್ನು ತಲುಪಿದ್ದ: ಆತ ತನ್ನ ಸಾಮ್ರಾಜ್ಯವನ್ನು ಪರಿತ್ಯಜಿಸಿದ.

ಅಶೋಕ ಹೇಳಿದ, ''ಈ ಇಡೀ ಸಾಮ್ರಾಜ್ಯದ ಪ್ರಯೋಜನವೇನು? ಸಾಕು, ಸಾಕು! ಜಯಗಳಿಸುವುದು

ನನಗೆ ಬೇಕಾಗಿಲ್ಲ. ಯಾರನ್ನಾದರೂ ಗೆಲ್ಲುವುದೂ ಬೇಕಾಗಿಲ್ಲ. ಇತರರ ಮೇಲೆ ದಾಳಿಮಾಡುವುದೂ, ಚಕ್ರಾಧಿಪತ್ಯವನ್ನು ಹೊಂದುವುದೂ ಬೇಡ.''

ಅಶೋಕ ಗೌತಮ ಬುದ್ಧರ ಶಿಷ್ಯನಾದ. ಗೌತಮ ಬುದ್ಧ ಎರಡು ನೂರು ವರ್ಷಗಳ ಮೊದಲೇ ನಿಧನರಾಗಿದ್ದರೂ ಅವರ ಶಿಷ್ಯರು ಇನ್ನೂ ಇದ್ದರು. ಜ್ಞಾನೋದಯ ಹೊಂದಿದ ಶಿಷ್ಯರೂ ಇನ್ನೂ ಇದ್ದರು. ಇವರು ಮೂರು ಅಥವಾ ನಾಲ್ಕನೆಯ ಪೀಳಿಗೆಗೆ ಸೇರಿದವರಾದರೂ ಅದೇ ಕಾಂತಿ, ಮನೋಭಾವ ಹಾಗೂ ಮಾಂತ್ರಿಕ ಶಕ್ತಿಯನ್ನು ಹೊಂದಿದ್ದರು.

ಅಶೋಕ ಬುದ್ಧರ ಶಿಷ್ಯನಾಗಿ ಸರ್ವಸ್ವವನ್ನೂ ಪರಿತ್ಯಜಿಸಿ ತನ್ನದೇ ರಾಜಧಾನಿಯಲ್ಲಿ ಬಿಕ್ಷುಕನಂತೆ ಜೀವಿಸತೊಡಗಿದ. ಪ್ರತಿದಿನ ತನ್ನ ರಾಜ್ಯದಲ್ಲೇ ಆಹಾರಕ್ಕಾಗಿ ಬೇಡತೊಡಗಿದ.[23]

ಶರೀರವೆಂಬುದು ಕೇವಲ ಭ್ರಾಂತಿ ಎಂದು ಪೂರ್ವಾತ್ಯ ರಾಷ್ಟ್ರಗಳ ಸಾಧು ಸಂತರು, ಮುನಿಗಳು, ಯೋಗಿಗಳು ಹೇಳುತ್ತಿರುವುದನ್ನು ಹಾಗೂ ಆಂತರಿಕ ಪ್ರಜ್ಞೆಯೆಂದರೇನೆಂಬುದನ್ನು ತಿಳಿಯುವುದಕ್ಕಾಗಿ ಪೂರ್ವಾತ್ಯ ಮನಸ್ಸು ನಿರಂತರವಾಗಿ ಪ್ರಯತ್ನಿಸುತ್ತಲೇ ಬಂದಿದೆ. ಅವಿಭಾಜಿತ ಜೀವಿಯ ಶೋಧದ ಹಿನ್ನೆಲೆಯಲ್ಲಿ ಈ ಹುಡುಕಾಟ ನಡೆಯುತ್ತಿದೆ.

ನಮಗೆ ಶರೀರವೇ ನೈಜ ಅಥವಾ ವಾಸ್ತವ ಹಾಗೂ ಪ್ರಜ್ಞೆ ಕೇವಲ ಒಂದು ಪದವಾಗಿದೆ. ಆದರೆ, ಪೂರ್ವಾತ್ಯ ದೇಶಗಳ ಸಾಧು ಸಂತರು, ಮುನಿಗಳು ಈ ಪ್ರಜ್ಞೆಯೇ ನಿಮ್ಮ ವಾಸ್ತವ ಎಂದು ಪ್ರತಿಪಾದಿಸಿದ್ದರಿಂದ, ಶರೀರದ ಪರವಾಗಿ ನಿರ್ಧರಿಸುವ ಮೊದಲು, ಪೂರ್ವಾತ್ಯರು ಈ ವಾಸ್ತವ ಎಂದರೆ ಏನೆಂಬುದನ್ನು ತಿಳಿಯಲು ಯತ್ನಿಸಿದರು. ಶರೀರದ ಪರವಾಗಿ ನಿರ್ಧರಿಸುವುದು ಸಾಮಾನ್ಯ ನಡವಳಿಕೆ. ಏಕೆಂದರೆ, ಶರೀರ ಇಲ್ಲಿಯೇ ಇದೆ, ಅದು ನಮಗೆ ಕಾಣಿಸುತ್ತಿದೆ. ಪ್ರಜ್ಞೆ ಅಥವಾ ಜಾಗೃತಿಯನ್ನು ನಾವು ಶೋಧಿಸಬೇಕು. ನಾವು ಅದಕ್ಕಾಗಿ ಅಂತರಂಗ ಯಾತ್ರೆ ಕೈಗೊಳ್ಳಬೇಕು. ಏಕೆಂದರೆ ಗೌತಮ ಬುದ್ಧ ಮತ್ತು ಮಹಾವೀರರ ಪ್ರಾಮಾಣಿಕತೆಯನ್ನು ಪೂರ್ವ ದೇಶಗಳು ಅಲ್ಲಗಳೆಯಲು ಶಕ್ಯವಿಲ್ಲ. ಅವರ ಪ್ರಾಮಾಣಿಕತೆ ಅಷ್ಟೊಂದು ಸ್ಪಷ್ಟ. ಅವರ ಇರುವಿಕೆ ಅಷ್ಟೊಂದು ಪರಿಣಾಮಕಾರಿ. ಅವರ ಮಾತುಗಳು ಅಷ್ಟೊಂದು ಅಧಿಕಾರಯುತ ..... ಇದನ್ನು ಅಲ್ಲಗಳೆಯಲು ಸಾಧ್ಯವೇ ಇಲ್ಲ. ಇದರ ಮುಂದೆ ಯಾವ ವಾದವೂ ಇಲ್ಲ. ಏಕೆಂದರೆ ಈ ವ್ಯಕ್ತಿಗಳೇ ಅವರ ವಾದ. ಅವರೇ ಸಮಂಜಸತೆ.

ಅಲ್ಲದೆ ಅವರು ಶಾಂತಿಶೀಲರೂ, ಸಂತೃಪ್ತರೂ, ವಿಶ್ರಾಂತರೂ, ಭಯಹೀನರೂ ಆಗಿದ್ದರು. ಪ್ರತಿ ಮನುಷ್ಯ ಬಯಸುವ ಎಲ್ಲವನ್ನೂ ಅವರು ಹೊಂದಿದ್ದರು .... ಒಂದು ರೀತಿಯಲ್ಲಿ ಅವರಲ್ಲಿ ಏನೂ ಇರಲಿಲ್ಲ. ನಿಜವಾಗಿಯೂ ಅವರು ತಮ್ಮಲ್ಲಿಯ ಐಶ್ವರ್ಯ ಅಥವಾ ಸಂಪತ್ತಿನ ಸೆಲೆಯನ್ನು ಕಂಡುಕೊಂಡಿದ್ದರು. ಇದರ ಶೋಧಕ್ಕಾಗಿ ನೀವು ಸಾಕಷ್ಟು ಸಮಯವನ್ನು ಕೊಡದೇ ಅದನ್ನು ನಿರಾಕರಿಸುವಂತಿಲ್ಲ. ಯಾವುದೇ ಪ್ರಜ್ಞೆ ಇಲ್ಲವೆಂದು ಮನವರಿಕೆಯಾದ ಹೊರತು ನೀವು ಅದನ್ನು ಅಲ್ಲಗಳೆಯುವಂತಿಲ್ಲ. ನಮ್ಮಲ್ಲಿ ಸುಗಂಧ ಬೀರುವ ವ್ಯಕ್ತಿಗಳಿದ್ದಾರೆ .... ಆದರೆ ನಮಗೆ ಅವರಲ್ಲಿನ ಗುಲಾಬಿಗಳು ಕಾಣಲಾಗಲಿಲ್ಲ ಆದರೆ ಆ ಸುಗಂಧ ಎಷ್ಟು ಗಾಢವಾಗಿದೆ ಎಂದರೆ ಪೂರ್ವದೇಶದ ಜನರು ತಮ್ಮೊಳಗೇ ನೋಡಲು ಪ್ರಯತ್ನಿಸಿದರು. ಈಗ ಅವರಿಗೆ ಒಂದು ಅಂಶ ವೇದ್ಯವಾಗಿದೆ - ಆತ್ಮವೇ ನಿಜಕ್ಕೂ ವಾಸ್ತವ ಹಾಗೂ ಶರೀರ ಕೇವಲ ಹೊರ ರೂಪ ಅಥವಾ ತೋರಿಕೆ. ಭೌತವಸ್ತು ಭ್ರಾಂತಿ, ಭೌತ ವಸ್ತುವೆಂಬುದು ಅಸ್ತಿತ್ವದಲ್ಲಿಲ್ಲ. ಅಲ್ಲದೆ ಅದು ಅಸ್ತಿತ್ವದಲ್ಲಿದ್ದಂತೆ ತೋರುತ್ತದೆ ಎಂಬುದನ್ನು ಆಧುನಿಕ ವಿಜ್ಞಾನ ಕೂಡ ಸಾರಿದೆ ಎಂಬುದನ್ನು ಗಮನಿಸಬೇಕು.[24]

ಇದು ಪೂರ್ವ ರಾಷ್ಟ್ರಗಳಲ್ಲಿ ಬಹಳ ಪುರಾತನ ಸಂಪ್ರದಾಯ. ಪಾಶ್ಚಿಮಾತ್ಯ ರಾಷ್ಟ್ರಗಳ ಜನರು ಪೂರ್ವದೇಶಗಳಿಗೆ ಬಂದಾಗ ಈ ಸಂಪ್ರದಾಯ ಅರ್ಥವಾಗುವುದಿಲ್ಲ. ಇಲ್ಲಿ ಏನು ನಡೆಯುತ್ತಿದೆಯೆಂಬುದು ಗೊತ್ತಾಗುವುದಿಲ್ಲ. ತಮ್ಮ ಗುರುವನ್ನು ನೋಡಲು ಭಾರತ ಅಥವಾ ಇರಾನ್ ಅಥವಾ ಅರೇಬಿಯಾದಲ್ಲಿ ಜನರು ಸಾವಿರಾರು ಮೈಲಿ ಪ್ರಯಾಣಮಾಡುತ್ತಾರೆ. ಅವರ ಉದ್ದೇಶ ಕೇವಲ ತಮ್ಮ ಗುರುವನ್ನು ನೋಡುವುದು. ಅವರು ಒಂದೇ ಒಂದು ಪ್ರಶ್ನೆಯನ್ನೂ ಕೇಳುವುದಿಲ್ಲ. ಸುಮ್ಮನೆ ಹೋಗುತ್ತಾರೆ. ಇದು ದೀರ್ಘ ಹಾಗೂ ಕ್ಲಿಷ್ಟದಾಯಕ ಯಾತ್ರೆ. ಕೆಲವು ಸಲ ಜನರು ತಮ್ಮ ಗುರುವನ್ನು ನೋಡುವುದಕ್ಕಾಗಿ ಸಾವಿರಾರು ಮೈಲಿ ದೂರವನ್ನು ಕಾಲ್ನಡಿಗೆಯಲ್ಲೇ ಕ್ರಮಿಸುತ್ತಾರೆ.

ಪಾಶ್ಚಿಮಾತ್ಯ ಮನಸ್ಸುಗಳಿಗೆ ಇದು ಅರ್ಥ ಆಗುವುದಿಲ್ಲ. ನಿಮ್ಮಲ್ಲಿ ಕೇಳುವುದೇನೂ ಇಲ್ಲವೆಂದಾದರೆ ಅಲ್ಲಿಗೆ ಹೋಗುವುದಾದರೂ ಏಕೆ ಹಾಗೂ ಯಾವ ಪುರುಷಾರ್ಥಕ್ಕಾಗಿ ಎಂಬುದು ಅವರ ಪ್ರಶ್ನೆ. ಪಾಶ್ಚಿಮಾತ್ಯ ಮನಸ್ಸುಗಳಿಗೆ ಹೇಗೆ ಸಂಭಾಷಿಸುವುದು ಎಂಬುದು ಗೊತ್ತು. ಆದರೆ ಜೊತೆಗೂಡಿರುವುದು ಹೇಗೆ ಎಂಬುದು ಗೊತ್ತಿಲ್ಲ. ಹಾಗೆಯೇ ಏನನ್ನು ಕೇಳಬೇಕೆಂಬುದು ಗೊತ್ತು. ಆದರೆ ಸೇವನೆ ಗೊತ್ತಿಲ್ಲ. ಅದಕ್ಕೆ ಬೌದ್ಧಿಕ ಮಾರ್ಗ ಗೊತ್ತು. ಆದರೆ ಹೃದಯದ ಬಾಗಿಲಿನ ಬಗ್ಗೆ ಗೊತ್ತಿಲ್ಲ. ಅಂದರೆ ಪದಗಳನ್ನು ಮೀರಿದ ಸಂಬಂಧ ಹಾಗೂ ಸ್ಪಂದನೆಯ ಬಗ್ಗೆ ಗೊತ್ತಿಲ್ಲ. ಪದಗಳಿಗೆ ನಿಲುಕದ ಸಹಭಾಗಿತ್ವದ ಮಾರ್ಗ ತಿಳಿದಿಲ್ಲ. ಗುರುವಿನ ಪಾದವನ್ನು ಮುಟ್ಟಿ, ನಮಸ್ಕರಿಸಿ, ಅವರಿಂದ ಆಶೀರ್ವಾದ ಪಡೆಯುವುದಕ್ಕಾಗಿ ಪೂರ್ವದೇಶದ ಜನರು ಸಾವಿರಾರು ಮೈಲಿಗಳ ದೀರ್ಘ, ಕಷ್ಟದಾಯಕ ಹಾಗೂ ಕೆಲವೊಮ್ಮೆ ಅಪಾಯಕರ ಪ್ರವಾಸವನ್ನು ಏಕೆ ಕೈಗೊಳ್ಳುತ್ತಾರೆಂಬುದು ಪಾಶ್ಚಿಮಾತ್ಯ ದೇಶದ ಜನರಿಗೆ ಇನ್ನೂ ಒಗಟಾಗಿಯೇ ಉಳಿದಿದೆ. ಗುರುವಿನ ಚರಣಕಮಲಗಳಿಗೆ ಎರಗಿ ಕೃತಾರ್ಥರಾಗುವುದು ಅವರಿಗೆ ರಹಸ್ಯವಾಗಿಬಿಟ್ಟಿದೆ.

ಅನೇಕ ಶತಮಾನಗಳಿಂದ ಪೂರ್ವದೇಶಗಳು ತಮ್ಮ ವಿಭಿನ್ನ ಮತ್ತು ವಿಶಿಷ್ಟವಾದ ಸಂವಹನಕ್ಕಾಗಿ ಪ್ರಸಿದ್ಧಿ ಪಡೆದಿದೆ - ಅದೇ ಸಂಯೋಗ ಅಥವಾ ಭಾವೈಕ್ಯ. ವ್ಯಕ್ತಿಯೊಬ್ಬ ಬರುತ್ತಾನೆ, ಗುರುಗಳ ಪಾದವನ್ನು ಸ್ಪರ್ಶಿಸುತ್ತಾನೆ, ಸಾಷ್ಟಾಂಗ ನಮಸ್ಕರಿಸುತ್ತಾನೆ, ಗುರುವಿನೆಡೆಗೆ ದೃಷ್ಟಿ ಬೀರುತ್ತಾನೆ, ಸುತ್ತಲಿರುವ ಸುವಾಸನೆಯನ್ನು ಆಘ್ರಾಣಿಸುತ್ತಾನೆ. ಆ ಮೂಲಕ ಕೃತಾರ್ಥನಾಗುತ್ತಾನೆ. ಅಸಾಧ್ಯವಾದುದು ಸಂಭವಿಸುವುದನ್ನು ನೋಡಲು ಬರುತ್ತಾನೆ. ಇಂತಹ ಅಸಾಧ್ಯ, ಬುದ್ಧನ ಕಾಲದಲ್ಲಿ ಸಂಭವಿಸಿದ್ದನ್ನು ಆತ ಕೇಳಿದ್ದ. ಮಹಮ್ಮದನ ಕಾಲದಲ್ಲಿ ಸಂಭವಿಸಿದ್ದನ್ನು ಕೇಳಿದ್ದ. ಅಬ್ದುಲ್ ಅಜೀಜ್‌ರಂತಹ ಮಹಾನ್ ಗುರುವರ್ಯರ

ಕಾಲದಲ್ಲಿ ನಡೆದಿದ್ದನ್ನು ಕೇಳಿದ್ದ. ಆತ ಅನೇಕ ಕಥೆಗಳನ್ನು ಕೇಳಿದ್ದ. ಅವು ಈಗಲೂ ಸಂಭವಿಸುವುದೇ ಎಂಬುದನ್ನು ತಿಳಿಯಲು ಉತ್ಸುಕನಾಗಿದ್ದ. ಬುದ್ಧ ಈಗಲೂ ಜೀವಂತವಾಗಿರುವರೋ, ಮಹಮ್ಮದನಂತಹ ಆದರ್ಶ ಪುರುಷರನ್ನು ಈಗಲೂ ಕಾಣಲು ಸಾಧ್ಯವೇ, ನಮ್ಮ ಧರ್ಮಗ್ರಂಥಗಳು ಈಗಲೂ ಪ್ರಸ್ತುತವೇ ಎಂಬುದನ್ನು ತಿಳಿಯಲು ಕಾತರಗೊಂಡಿದ್ದ. ಪ್ರತಿಯೊಬ್ಬ ಗುರುವೂ ಪುನರ್ ಪ್ರಸ್ತುತವಾಗುತ್ತಾನೆ. ಪ್ರತಿಯೊಬ್ಬ ಗುರುವೂ ಕಾಲ ಕಾಲಕ್ಕೆ ಅನಂತ ಸತ್ಯಕ್ಕೆ ಸಾಕ್ಷಿಯಾಗುತ್ತಾನೆ. ಅಂತಹ ಸತ್ಯವನ್ನು ಮನಗಾಣಬಹುದು, ಅನುಭವಿಸಬಹುದು.

ಈಗ ನೀವು ಬುದ್ಧನನ್ನು ಕಾಣಲಾರಿರಿ. ಅದಕ್ಕಾಗಿ ಪೂರ್ವದೇಶದ ಜನರು ತಾವೇ ಖುದ್ದಾಗಿ ನೋಡುವುದಕ್ಕಾಗಿ ದೀರ್ಘಯಾತ್ರೆ ಕೈಗೊಳ್ಳುತ್ತಾರೆ. ಇಪ್ಪತ್ತೈದು ಸಾವಿರ ವರ್ಷಗಳು ಗತಿಸಿದವು. ಇದು ಇತಿಹಾಸ. ಅದರ ಒಂದು ಭಾಗ. ನೀವು ಅದರ ಬಗ್ಗೆ ಕೇವಲ ಓದಬಹುದು. ಈಗ ನೀವು ಕೃಷ್ಣನನ್ನು ಕಾಣಲಾರಿರಿ. ಈಗ ಆತ ಕಾಲ್ಪನಿಕ ವ್ಯಕ್ತಿ ಅಥವಾ ಮಿಥ್ಯೆ. ಕೃಷ್ಣ ಬುದ್ಧ ಮಹಮ್ಮದ್ ಅಥವಾ ಕ್ರಿಸ್ತನಂತಿರುವ ಯಾರಾದರೊಬ್ಬರನ್ನು ನೋಡಲು ಪೂರ್ವದ ಜನರು ಬಯಸುತ್ತಾರೆ. ಜನರು ಆ ಕಣ್ಣುಗಳಲ್ಲಿ ಇಣುಕಿ ನೋಡಲು ಬಯಸುತ್ತಾರೆ. ಆ ಮೂಲಕ ದೇವರು ಈ ಜಗವನ್ನು ತೊರೆದಿಲ್ಲ, ಇವೆಲ್ಲವೂ ಪುನಃ ಕಾಲ ಕಾಲಕ್ಕೆ ಸಂಭವಿಸಬಹುದೆಂದು ನಂಬಬಹುದು, ಪುನಃ ಭರವಸೆ ಹೊಂದಬಹುದು ಎಂದು ಜನರು ಭಾವಿಸುತ್ತಾರೆ. ಅದು ಕೇವಲ ಇತಿಹಾಸದ ಕಥೆಯಲ್ಲ, ವಾಸ್ತವದ ಒಂದು ಭಾಗ.[25]

ನೀವು ಈ ಮೊದಲು ಯಾವತ್ತೂ ಮಾಡಿರದಿರುವುದನ್ನು ಶೀಘ್ರದಲ್ಲೇ ಮತ್ತು ಜರೂರಾಗಿ ಮಾಡಬೇಕಾದ ಅಗತ್ಯವಿದೆ. ಅದು ನೀವು ನಿಮ್ಮನ್ನೇ ಶೋಧಿಸುವುದು. ಈ ಜಗತ್ತಿನಲ್ಲಿರುವುದರ ಎಲ್ಲವುಗಳ ಹಿಂದೆ ನೀವು ಓಡಿದ್ದೀರಿ. ಅದು ನಿಮ್ಮನ್ನು ಎಲ್ಲಿಗೂ ಕರೆದುಕೊಂಡು ಹೋಗಿಲ್ಲ. ಜಗತ್ತಿನಲ್ಲಿರುವ ಎಲ್ಲ ರಸ್ತೆಗಳೂ ಸುತ್ತುತ್ತಲೇ ಇರುತ್ತವೆ. ಅವು ಯಾವುದೇ ಗುರಿಯನ್ನೂ ತಲುಪುವುದಿಲ್ಲ. ಅವುಗಳಿಗೆ ಗುರಿಯೇ ಇಲ್ಲ.


ಈ ಯಥಾಸ್ಥಿತಿಯ ಅರಿವಾದಾಗ ವ್ಯಕ್ತಿ ಪ್ರೇಮ, ವ್ಯವಹಾರ, ಹೊಡೆದಾಟ, ಸಿಟ್ಟು, ದುರಾಸೆ, ಅಸೂಯೆ ಮುಂತಾದುವುಗಳಿಂದ ಬೇಸತ್ತು ಮೊದಲ ಬಾರಿಗೆ ಆತ ಯೋಚಿಸತೊಡಗುತ್ತಾನೆ, ''ಈಗ ನಾನು ಯಾರ ಹಿಂದೆಯೂ ಓಡದ ಮಾರ್ಗವನ್ನು ಕಂಡುಕೊಳ್ಳಬೇಕು. ಆ ಮೂಲಕ ನಾನು ಸ್ವಗೃಹಕ್ಕೆ ಹಿಂದಿರುಗಬಹುದು. ಲಕ್ಷಾಂತರ ಜನ್ಮಗಳಲ್ಲಿ ನಾನು ಬಹಳ ದೂರ ಬಂದುಬಿಟ್ಟಿದ್ದೇನೆ.''

ಇದು ಪೂರ್ವದೇಶಗಳ ವಿವೇಚನೆಯ ಅಡಿಗಲ್ಲು. ಇದು ಹುಟ್ಟು ಸಾವುಗಳ ನಿರಂತರ ವಿಷವರ್ತುಲದ ಬಗ್ಗೆ

ಬೇಸರವನ್ನು ಹುಟ್ಟಿಸುತ್ತದೆ. 'ಸಂಸಾರ' ಪದದ ಮೂಲ ಅರ್ಥವೇ ಇದು. ಸಂಸಾರ ಚಕ್ರ, ಸದಾ ಸುತ್ತುತ್ತಲೇ ಇರುತ್ತದೆ. ಇದಕ್ಕೆ ಚಲಿಸದಿರುವುದು ಗೊತ್ತಿಲ್ಲ. ನೀವು ಇದರ ಹೊರಗೆ ಜಿಗಿಯಬಹುದು. ಆದರೆ ನೀವು ಅದಕ್ಕೇ ಅಂಟಿಕೊಂಡಿರುತ್ತೀರಿ.

ನಿಮ್ಮ ಜ್ಞಾನೇಂದ್ರಿಯವನ್ನು ನಿಮ್ಮಲ್ಲಿಗೆ ತರುವ ಮೂಲಭೂತ ಸಾಧನವಿದು.

ನೀವು ಸಾಕಷ್ಟು ಹುಚ್ಚಾಟವನ್ನು ನಡೆಸಿದ್ದೀರಿ. ಇನ್ನಾದರೂ ಇದನ್ನು ನಿಲ್ಲಿಸಿ. ಶತಮಾನಗಳಿಂದ ಮಾಡದೇ ಬಿಟ್ಟಿದ್ದನ್ನು, ನಾಳೆ ಮಾಡೋಣ ಎಂದು ತಳ್ಳಿಹಾಕುತ್ತಿದ್ದನ್ನು, ಮಾಡಲಾರಂಭಿಸಿ.[26]



ಕರ್ಣಿ ಮಾತಾ ಮಂದಿರ, ದೇಶ್ನೋಕ್

ಬುದ್ಧರ ಕಾಲದಲ್ಲಿ ಒಬ್ಬಳು ಸುಂದರ ಮಹಿಳೆ ಇದ್ದಳು. ಅವಳು ವೇಶ್ಯೆಯಾಗಿದ್ದಳು. ಅವಳ ಹೆಸರು ಆಮ್ರಪಾಲಿ. ಅವಳ ಮನೆಯ ಮುಂದೆ ಸದಾ ರಾಜರು, ರಾಜಕುಮಾರರು, ಶ್ರೀಮಂತರು ಕಾದು ನಿಲ್ಲುತ್ತಿದ್ದರು. ಅವಳ ಅಂತಃಪುರವನ್ನು ಪ್ರವೇಶಿಸಲು ಅನುಮತಿ ಸಿಗುವುದೇ ಕಷ್ಟವಾಗಿತ್ತು. ಅವಳು ಗಾಯಕಿ, ಸಂಗೀತಗಾರ್ತಿ ಮತ್ತು ನೃತ್ಯಗಾರ್ತಿಯೂ ಆಗಿದ್ದಳು.

ಪೂರ್ವದೇಶಗಳಲ್ಲಿ ವೇಶ್ಯೆಯ ಅರ್ಥ ಪಾಶ್ಚಿಮಾತ್ಯ ದೇಶಗಳಲ್ಲಿರುವುದಕ್ಕಿಂತ ಬಲು ಭಿನ್ನ. ಪಾಶ್ಚಿಮಾತ್ಯ ದೇಶಗಳಲ್ಲಿ ಆಕೆ ಕೇವಲ ಒಂದು ಲೈಂಗಿಕ ವಸ್ತು. ಒಬ್ಬನು ವೇಶ್ಯೆಯ ಬಳಿಗೆ ಹೋಗುತ್ತಿದ್ದಾನೆಂದರೆ ಆಕೆಯನ್ನು ಒಂದು ವಸ್ತುವಾಗಿ, ಪದಾರ್ಥವಾಗಿ ಪರಿಗಣಿಸಿ ಹೋಗುತ್ತಿದ್ದಾನೆಂದು ಅರ್ಥ. ತಾನು ಪಡೆಯುವ ಲೈಂಗಿಕ ಸುಖಕ್ಕಾಗಿ ಆತ ಹಣ ಕೊಡುತ್ತಾನೆ.

ಪೂರ್ವದೇಶಗಳಲ್ಲಿ ವೇಶ್ಯೆ ಕೇವಲ ಲೈಂಗಿಕ ವಸ್ತುವಲ್ಲ. ನಿಜವಾಗಿ ಹೇಳುವುದಾದರೆ, ವೇಶ್ಯೆಯನ್ನು ಲೈಂಗಿಕ ವಸ್ತುವಾಗಿಸುವುದು ಸುಲಭವಲ್ಲ. ವಿಶೇಷವಾಗಿ ಹಿಂದಿನಕಾಲದಲ್ಲಂತೂ ಪರಿಸ್ಥಿತಿ ಹೀಗೆ ಇತ್ತು.....

ತಮ್ಮ ರಾಣಿಯಾಗುವಂತೆ, ಪತ್ನಿಯಾಗುವಂತೆ ರಾಜರು, ರಾಜಕುಮಾರರು ಹಾಗೂ ಶ್ರೀಮಂತರು - ಇವರುಗಳು ಸ್ಪುರದ್ರೂಪಿಗಳೂ ಆಗಿದ್ದರು - ಆಮ್ರಪಾಲಿಯನ್ನು ಒತ್ತಾಯಿಸುತ್ತಿದ್ದರು. ಆಕೆಯನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಆದರೆ ಅವಳಿಗೆ ಗೌತಮ ಬುದ್ಧರಲ್ಲಿ ಪ್ರೀತಿ ಹುಟ್ಟಿತು. ಆಕೆ ಅವರನ್ನು ಪ್ರೀತಿಸುತ್ತಿದ್ದಳು.

ಆಮ್ರಪಾಲಿಯು ವಾಸಿಸುತ್ತಿದ್ದ ವೈಶಾಲಿ ನಗರಕ್ಕೆ ಬುದ್ಧ ಬಂದರು. ಅವರನ್ನು ಸ್ವಾಗತಿಸಲು ಎಲ್ಲರೂ ಹೋದರು. ರಾಜನೂ ಹೋದ, ಮಂತ್ರಿಯೂ ಹೋದ. ತನ್ನ ಚಿನ್ನದ ರಥದಲ್ಲಿ ಆಮ್ರಪಾಲಿಯೂ ಹೋದಳು. ಬುದ್ಧರನ್ನು ನೋಡುತ್ತಿದ್ದಂತೆ ....

ಆಕೆ ತನ್ನ ಜೀವನದಲ್ಲಿ ಅದೆಷ್ಟೋ ಸ್ಪುರದ್ರೂಪಿ ಗಂಡಸರನ್ನು ಕಂಡಿದ್ದಳು. ಆದರೆ ಅವಳು ಶಾಂತ, ಪ್ರಸನ್ನ, ಮೌನ, ವಿಶ್ರಾಂತನಾಗಿರುವ ಗಂಡಸನ್ನು ಹಿಂದೆಂದೂ ನೋಡಿರಲೇ ಇಲ್ಲ..... ಬುದ್ಧ ನಡೆಯುತ್ತಲೇ ನಗರವನ್ನು ಪ್ರವೇಶಿಸಿದರು. ಅವರ ನಡಿಗೆಯಲ್ಲಿ ಒಂದು ರೀತಿಯ ಮನೋಹರತೆಯಿತ್ತು, ಸೊಬಗು, ವಿಲಾಸ, ರಮ್ಯತೆಯಿತ್ತು.

ಆಮ್ರಪಾಲಿ ಬುದ್ಧರ ಪಾದಕ್ಕೆರಗಿ ನುಡಿದಳು, ''ನಿಮ್ಮ ಶಿಷ್ಯೆಯಾಗಿ ನನ್ನನ್ನು ಸ್ವೀಕರಿಸಿ. ನನಗೆ ಸಂನ್ಯಾಸ ದೀಕ್ಷೆಯನ್ನು ನೀಡಿ.''

ಅಲ್ಲಿ ನೆರೆದಿದ್ದ ರಾಜರಿಗೆ, ರಾಜಕುಮಾರರಿಗೆ, ಶ್ರೀಮಂತರಿಗೆ ಹಾಗೂ ಗಣ್ಯವ್ಯಕ್ತಿಗಳಿಗೆ ತಮ್ಮ ಕಿವಿಗಳನ್ನು ನಂಬಲಾಗಲಿಲ್ಲ. ಅವರೆಲ್ಲ ಬೆಕ್ಕಸಬೆರಗಾಗಿ ಮುಖ ಮುಖ ನೋಡಿಕೊಳ್ಳಲಾರಂಭಿಸಿದರು. ಆಮ್ರಪಾಲಿಗೆ ಬುದ್ಧ ಹೇಳಿದರು, ''ನೋಡು, ನೀನು ಈ ಬಗ್ಗೆ ಸರಿಯಾಗಿ ಆಲೋಚಿಸುವುದು ಒಳ್ಳೆಯದು. ನೀನು ಅತಿ

ಸುಂದರಳಾಗಿದ್ದೀಯ. ಯೌವನವಿದೆ. ನಿನಗಾಗಿ ಅದೆಷ್ಟೋ ಮಂದಿ ಕಾಯುತ್ತಾರೆ. ಅವರೆಲ್ಲರೂ ನೀನು ಬಯಸಿದ್ದೆಲ್ಲವನ್ನೂ ಕೊಡುತ್ತಾರೆ. ಆದರೆ ನೀನು ಅವೆಲ್ಲವನ್ನೂ ಪರಿಗಣಿಸಿದಂತಿಲ್ಲ. ನಾನು ಬಡವ, ಭಿಕ್ಷುಕ. ನನ್ನ ಶಿಷ್ಯೆ ಆಗುವುದೆಂದರೆ ಭಿಕ್ಷುಕಿಯಾದಂತೆ. ಇನ್ನೊಮ್ಮೆ ಆಲೋಚಿಸು. ಇದು ಬಹಳ ಕಷ್ಟದಾಯಕ ಜೀವನ. ನಾವು ದಿನದಲ್ಲಿ ಒಂದೇ ಸಲ ಆಹಾರ ಸೇವಿಸುತ್ತೇವೆ. ಕಾಲ್ನಡಿಗೆಯಲ್ಲೇ ಸಾಗುತ್ತೇವೆ. ನನ್ನ ಕಾಲನ್ನೊಮ್ಮೆ ನೋಡು. ನೀನು ಇನ್ನೊಮ್ಮೆ ಯೋಚಿಸು.''

ಆಮ್ರಪಾಲಿಗೆ ಸಂನ್ಯಾಸತ್ವ ನೀಡಲು ಬುದ್ಧರಿಗೆ ಮನಸ್ಸಿರಲಿಲ್ಲ. ಅವಳು ಶ್ರೀಮಂತಿಕೆಯಲ್ಲಿ ಬೆಳೆದಿದ್ದಳು. ಅವಳನ್ನು ಕಂಡು ಅವರಿಗೆ ಅಯ್ಯೋ ಎನಿಸಿತು. ಆದರೆ ಆಮ್ರಪಾಲಿ ಹೇಳಿದಳು, ''ಹೌದು, ನನಗಾಗಿ ಸಾಕಷ್ಟು ಜನ ಕಾಯುತ್ತಾರೆ. ಆದರೆ ನಾನು ನಿಮಗಾಗಿ ಕಾಯುತ್ತಿರುವೆ. ಅವರು ಕೊಡುವುದನ್ನು ನಾನು ಬಯಸುವುದಿಲ್ಲ. ಅವರು ನನಗಾಗಿ ಇಡೀ ಜಗತ್ತನ್ನೇ ಕೊಡಬಹುದು. ಆದರೆ ನನಗೆ ಅದು ಬೇಕಿಲ್ಲ. ಮಣ್ಣು ರಸ್ತೆಯಲ್ಲಿ, ಬರಿಗಾಲಲ್ಲಿ ನಿಮ್ಮನ್ನು ಹಿಂಬಾಲಿಸುವುದನ್ನು ಇಷ್ಟಪಡುತ್ತೇನೆ. ದಿನದಲ್ಲಿ ಒಂದೇ ಸಲ ಆಹಾರ ಸೇವಿಸುವುದೆಂದರೆ ನನಗೂ ಬಹಳ ಇಷ್ಟ. ನಾನು ಭಿಕ್ಷುಕಿಯಾಗಲೂ ಸಿದ್ಧ. ನಿಮ್ಮ ನೆರಳಿನಲ್ಲಿದ್ದರೆ ಸಾಕು.''

ಆಮ್ರಪಾಲಿ ನಿಸರ್ಗಸಹಜವಾಗಿ ಬೆಳೆದವಳು. ಸಹಜ ಪ್ರವೃತ್ತಿಯ ಬಾಳ್ವೆ ಬಾಳಿದವಳು. ಬುದ್ಧ ಆಕೆಗೆ ಸಂನ್ಯಾಸ ದೀಕ್ಷೆ ನೀಡಿದರು. ಆದರೆ ಯಾವುದೇ ಮಾರ್ಗದರ್ಶಕ ಸೂತ್ರಗಳನ್ನು ನೀಡಲಿಲ್ಲ. ಇದು ಬಲು ಪ್ರಮುಖ ಸಂಗತಿ. ಅಲ್ಲಿಯವರೆಗೆ ಬುದ್ಧರು ಸಾವಿರಾರು ಮಂದಿಗೆ ದೀಕ್ಷೆ ನೀಡಿದ್ದರು. ಆದರೆ ಆಮ್ರಪಾಲಿಗೆ ವಿಶೇಷ ವಿನಾಯಿತಿ. ಆಕೆಗೆ ಮಾತ್ರ ಯಾವುದೇ ನಿಯಮ ಹಾಗೂ ಮಾರ್ಗದರ್ಶಕ ಸೂತ್ರಗಳನ್ನು ನೀಡಲಿಲ್ಲ.

ಬುದ್ಧ ಆಕೆಗೆ ಹೇಳಿದರು, ''ನೀನು ಸರಿಯಾದ ಮಾರ್ಗದಲ್ಲಿದ್ದೀಯ. ಅದೇ ಮಾರ್ಗದಲ್ಲಿ ಸಾಗು. ನೀನು ಸರಿಯಾದ ಮಾರ್ಗದಲ್ಲಿ ಇರದಿದ್ದರೆ ನೀನು ನನ್ನನ್ನು ಆಯ್ದುಕೊಳ್ಳುತ್ತಿರಲಿಲ್ಲ. ನನ್ನಲ್ಲೇನೂ ಇಲ್ಲ. ಆದರೆ ಮತ್ತೊಂದೆಡೆ ಇಡೀ ವಿಶ್ವವೇ ಇದೆ. ಆದರೆ ನೀನು ನನ್ನನ್ನು ಆಯ್ದುಕೊಂಡೆ. ಈ ತನಕ ನೀನು ಸರಿಯಾದ ಮಾರ್ಗದಲ್ಲಿದ್ದಿ ಎಂಬುದಕ್ಕೆ ಅದೇ ಸಾಕ್ಷಿ. ಯಾವುದೇ ನೀತಿ, ನಿಯಮ, ಮಾರ್ಗದರ್ಶಕ ಸೂತ್ರಗಳ ಬಗ್ಗೆ ಕೇಳಬೇಡ. ಅದು ಗೊಂದಲವನ್ನು ಹುಟ್ಟಿಸುತ್ತದೆ. ನೀನು ಸುಮ್ಮನೆ ನಿನ್ನ ಅಂತಃಸಾಕ್ಷಿ ಹೇಳಿದಂತೆ ನಡೆದುಕೋ.''

ಅಂದು ಆಮ್ರಪಾಲಿಗೆ ಜ್ಞಾನೋದಯವಾಯಿತು.[27]

ಬುದ್ಧ ತಮ್ಮ ಸಂನ್ಯಾಸಿಗಳನ್ನು 'ಭಿಕ್ಕು' ಎಂದು ಕರೆಯುತ್ತಿದ್ದರು. ಪಾಲಿ ಭಾಷೆಯಲ್ಲಿ ಭಿಕ್ಕು ಎಂದು ವ್ಯಂಗ್ಯವಾಡುತ್ತಿದ್ದರು. ಇದು ವ್ಯಂಗ್ಯವಾದರೂ, ಅದರಲ್ಲಿ ಗಾಢ, ಗಹನ ವಿಚಾರವಿರುವುದು ಸೋಜಿಗ.

ಒಂದು ದಿನ ಬುದ್ಧ ಭಿಕ್ಷಾಪಾತ್ರೆಯನ್ನು ಹಿಡಿದು ಹಳ್ಳಿಗೆ ಬೇಡಲು ಹೋದರು. ಆ ದಿನಗಳಲ್ಲಿ ಬುದ್ಧ ಸ್ಪುರದ್ರೂಪಿಯಾಗಿದ್ದರು. ಅವರಷ್ಟು ಸುಂದರನಾದ ಮತ್ತೊಬ್ಬ ವ್ಯಕ್ತಿಯನ್ನು ಕಾಣುವುದು ಕಷ್ಟವಾಗಿತ್ತು. ಬುದ್ಧ ಬೇಡುತ್ತಿದ್ದಾಗ ಆ ಊರಿನ ಶ್ರೀಮಂತನೊಬ್ಬ ಅವರನ್ನು ಕೇಳಿದ, ''ಏನಿದು? ಕೈಯಲ್ಲಿ ಭಿಕ್ಷಾಪಾತ್ರೆ ಹಿಡಿದು ರಸ್ತೆಯಲ್ಲಿ ನಿಂತು, ನಿಮ್ಮಂತಹ ಸುಂದರ ವ್ಯಕ್ತಿ ಬೇಡಬಹುದೇ? ಏಕೆ ಬೇಡುತ್ತಿದ್ದೀರಾ? ನೀವು ರಾಜನಾಗಲು ಸೂಕ್ತವಾಗಿದ್ದೀರಿ. ನೀವು ಯಾರು, ನೀವು ಏನು ಮಾಡುತ್ತಿರುವಿರಿ, ನಿಮ್ಮ ಜಾತಿ ಯಾವುದು, ಧರ್ಮ ಯಾವುದು? ಕುಟುಂಬ ಯಾವುದು....? ಇವೆಲ್ಲ ನನಗೆ ಬೇಕಿಲ್ಲ. ನಿಮಗೆ ನನ್ನ ಮಗಳನ್ನು ಕೊಟ್ಟು ಮದುವೆ ಮಾಡುತ್ತೇನೆ. ನೀವು ನನ್ನೆಲ್ಲ ಆಸ್ತಿ ಪಾಸ್ತಿ ಐಶ್ವರ್ಯಕ್ಕೆ ಒಡೆಯನಾಗುವಿರಿ. ಏಕೆಂದರೆ ನನಗೆ ಒಬ್ಬ ಮಗಳ ಹೊರತಾಗಿ ಬೇರೆ ಮಕ್ಕಳಿಲ್ಲ.''

ಬುದ್ಧ ನುಡಿದರು, ''ನಾನು ಭಿಕ್ಷು ಹಾಗೂ ನೀವು ರಾಜನಾಗಿರುವುದು ಸತ್ಯವಾಗಿದ್ದರೆ ಚೆನ್ನಾಗಿತ್ತು. ಆದರೆ ನಿಜ ಸಂಗತಿ ಏನೆಂದರೆ ತಾನೇ ಒಡೆಯನೆಂದು ಭಾವಿಸುವ ನಿಮ್ಮಂತಹ ಭಿಕ್ಷುಕರನ್ನು ಕಂಡು, ನನ್ನ ಕೈಯಲ್ಲಿ ಭಿಕ್ಷಾಪಾತ್ರೆಯನ್ನು ಇಟ್ಟುಕೊಂಡೆ. ಇಂತಹ ಸನ್ನಿವೇಶದಲ್ಲಿ ನನ್ನನ್ನೇ ನಾನು 'ಒಡೆಯ'ನೆಂದು ಕರೆದುಕೊಳ್ಳುವುದು ಸರಿಯಲ್ಲ. ನೀವು ನಿಮ್ಮನ್ನು ಒಡೆಯನೆಂದು ಕರೆದುಕೊಳ್ಳುವಿರಿ. ನಾವು ನಮ್ಮನ್ನು 'ಭಿಕ್ಷು' ಎಂದೇ ಕರೆದುಕೊಳ್ಳಲು ಹೆಮ್ಮೆ ಪಡುತ್ತೇವೆ! ಏಕೆಂದರೆ ಯಾವ ಜಗತ್ತಿನಲ್ಲಿ ಭಿಕ್ಷುಕರು ತಮ್ಮನ್ನು ಒಡೆಯನೆಂದು ಭಾವಿಸುತ್ತಾರೋ, ಆ ಜಗತ್ತಿನಲ್ಲಿ ಒಡೆಯರು ತಮ್ಮನ್ನು ತಾವು 'ಭಿಕ್ಷು' ಎಂದು ಕರೆದುಕೊಳ್ಳುವುದೇ ಸೂಕ್ತ.''


ಅಲ್ಲಿ ಅಪರೂಪದ ಘಟನೆ ಒಂದು ನಡೆಯಿತು. ಈ ಭೂಮಿಯ ಮೇಲೆ ಕೆಲವೇ ಕೆಲವು ರಾಜರು ಭಿಕ್ಷುಕರಾಗುವ ಧೈರ್ಯ ತೋರಿ ಮಹಾನರಾಗಿದ್ದಾರೆ. ಬುದ್ಧ ಮತ್ತು ಮಹಾವೀರರಂತಹ ವ್ಯಕ್ತಿಗಳು ರಸ್ತೆಗಿಳಿದು ಬೇಡಿದ್ದು ಈ ಇಡೀ ಭೂಮಿಯಲ್ಲಿ ಕೇವಲ ಭಾರತದಲ್ಲಿ ಮಾತ್ರ. ಆದರೆ ಇದು ಆಂತರಿಕ ರಹಸ್ಯದ ಸೂಚಕ ಹಾಗೂ ಇದೊಂದು ದೊಡ್ಡ ಜೋಕ್ ..... ದೊಡ್ಡ ಅಣಕ!!

ಯಾರು ಒಳಗೆ ಭಿಕ್ಷಾಪಾತ್ರೆಯನ್ನು ಮಾತ್ರ ಹಿಡಿದಿರುತ್ತಾರೋ, ಅವರು ತಮ್ಮನ್ನು ಒಡೆಯನೆಂದು ಭಾವಿಸಿಕೊಂಡು ಭ್ರಮೆಯಲ್ಲಿ ಬದುಕುತ್ತಿರುತ್ತಾರೆ. ಯಾರ

ಬಯಕೆ ಹಾಗೂ ಆಕಾಂಕ್ಷೆ ಮಾಯವಾಗಿರುವುದೋ, ಅವರು ಭಿಕ್ಷಾ ಪಾತ್ರೆ ಹಿಡಿದು ಬೀದಿಗಿಳಿದಿರುತ್ತಾರೆ. ಎಂತಹ ಕೌತುಕಮಯ ಸಂಗತಿ! ಇದೊಂದು ಸ್ವಾರಸ್ಯಕರ ಅಣಕ. ಆದರೆ ಬುದ್ಧರಂತಹ ವ್ಯಕ್ತಿಗಳ ಅಣಕ ಏನೆಂಬುದನ್ನು ಅರ್ಥಮಾಡಿಕೊಳ್ಳಲು ನಮಗೆ ಸಾಧ್ಯವಾಗಿಲ್ಲ. ಇದುವೇ ದೊಡ್ಡ ಸಮಸ್ಯೆ.[28]

ಶತಮಾನಗಳಿಂದ ಭಾರತ ಆಂತರಿಕ ಯಾತ್ರೆಯ ಸಂಕೇತ. ಭಾರತ ಕೇವಲ ರಾಜಕೀಯ ಅಸ್ತಿತ್ವವಲ್ಲ. ಅದೊಂದು ಆಧ್ಯಾತ್ಮಿಕ ಅನುಭೂತಿ. ಅನಾದಿ ಕಾಲದಿಂದಲೂ ತಮ್ಮನ್ನು ಹುಡುಕಲೆಂದೇ ಜಗತ್ತಿನ ಎಲ್ಲೆಡೆಯಿಂದ ಜನರು ಭಾರತಕ್ಕೆ ಬರುತ್ತಿದ್ದರು. ಈ ಮಣ್ಣಿನಲ್ಲಿ, ಈ ಗಾಳಿಯಲ್ಲಿ ಯಾವುದೋ ವಿಶೇಷ ಗುಣವಿದೆ ....

ನಾನು ಈ ವಿಶ್ವದೆಲ್ಲೆಡೆ ಸಂಚರಿಸಿದ್ದೇನೆ. ನಾನು ಈ ವ್ಯತ್ಯಾಸವನ್ನು ಗುರುತಿಸಬಲ್ಲೆ. ಬಹುಶಃ ಪೂರ್ವ ದೇಶದ ಮಹಾನ್ ಪ್ರತಿಭಾಶಾಲಿಗಳು ಸಾವಿರಾರು ವರ್ಷಗಳಿಂದ ಆತ್ಮದ ಹುಡುಕಾಟದಲ್ಲಿ ನಿರಂತರವಾಗಿ ತೊಡಗಿರುವುದರ ಪರಿಣಾಮ ಒಂದು ರೀತಿಯ ವಾತಾವರಣ ಇಲ್ಲಿ ನಿರ್ಮಾಣವಾಗಿದೆ. ಪೂರ್ವ ದೇಶಗಳಲ್ಲಿ ಧ್ಯಾನಕ್ಕೆ ತೊಡಗಿದ್ದರೆ ಗಾಳಿ, ಮಣ್ಣು ಮರಗಳೆಲ್ಲಾ ಸಹಾಯಕ್ಕೆ ಬಂದಂತೆ ಭಾಸವಾಗುತ್ತದೆ. ನೀವು ಅಮೆರಿಕದಲ್ಲಿ ಧ್ಯಾನಕ್ಕೆ ತೊಡಗಿದ್ದರೆ ನೀವೊಬ್ಬರೇ ಧ್ಯಾನದಲ್ಲಿ ತೊಡಗಿರುತ್ತೀರಿ – ಬೇರೆಡೆಯಿಂದ ಸಹಾಯ ಸಿಗುವುದಿಲ್ಲ.[29]



ಚೌಮುಖ ಮಂದಿರ, ರಾನಕ್‌ಪುರ್, ರಾಜಾಸ್ಥಾನ್

ಜೈನ ತತ್ವಜ್ಞಾನಿಗಳಲ್ಲಿ ಪ್ರಮುಖರಾದ ಮಹಾವೀರರ ಬದುಕಿನಲ್ಲಿ ನಡೆದ ಒಂದು ಘಟನೆ ನೆನಪಿಗೆ ಬರುತ್ತದೆ .... ತಮ್ಮ ಶಿಷ್ಯ ಗೋಶಾಲಕನೊಂದಿಗೆ ಮಹಾವೀರರು ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗುತ್ತಿದ್ದರು. ಅವರಿಬ್ಬರು ಒಂದು ಪ್ರಶ್ನೆ ಬಗ್ಗೆ ಚರ್ಚಿಸುತ್ತಿದ್ದರು. ಮಹಾವೀರ ಹೇಳಿದರು, ''ಅಸ್ತಿತ್ವದೆಡೆಗೆ ನೀನು ತೋರುವ ಹೊಣೆಗಾರಿಕೆಯಿಂದ ನಿನ್ನ ಸ್ವ-ಸ್ವಭಾವವನ್ನು ಹೊಂದುವಿಕೆಯಲ್ಲಿ ಎಷ್ಟರ ಮಟ್ಟಿಗೆ ಸಫಲನಾಗಿರುವೆ ಎಂಬುದು ಗೊತ್ತಾಗುವುದು. ನಾನು ನಿನ್ನ ಯಥಾರ್ಥ ವಾಸ್ತವನ್ನು ಕಾಣಲಾರೆ ಆದರೆ, ನಿನ್ನ ಹೊಣೆಗಾರಿಕೆಯನ್ನು ಕಾಣಬಹುದು.''

ಅವರು ನಡೆದುಕೊಂಡು ಹೋಗುತ್ತಿರುವಾಗ ಅವರಿಗೊಂದು ಸಣ್ಣ ಗಿಡವೊಂದು ಕಂಡಿತು. ಗೋಶಾಲಕ ತರ್ಕಶಾಸ್ತ್ರ ಪ್ರವೀಣ. ಆತ ಗಿಡವನ್ನು ಕಿತ್ತು ಎಸೆದ. ಅದೊಂದು ಚಿಕ್ಕ ಚಿಕ್ಕ ಬೇರುಗಳಿದ್ದ ಸಣ್ಣ ಗಿಡ. ಅದನ್ನು ಕಂಡು ಮಹಾವೀರ ಹೇಳಿದರು, ''ಇದು ಶುದ್ಧ ಬೇಜವಾಬ್ದಾರಿ ಕೃತ್ಯ. ಅಸ್ತಿತ್ವದ ವಿರುದ್ಧ ನೀನು ಏನನ್ನೂ ಮಾಡಲಾರೆ. ನೀನು ಪ್ರಯತ್ನಿಸಬಹುದು. ಆದರೆ ಅದು ತಿರುಗೇಟಾಗುವುದು.''

ಗೋಶಾಲಕ ನುಡಿದ, ''ಈ ಅಸ್ತಿತ್ವ ನನಗೇನು ಮಾಡಬಲ್ಲದು? ಈಗ ನಾನು ಈ ಗಿಡವನ್ನು ಕಿತ್ತಿದ್ದೇನೆ. ಈಗ ಈ ಅಸ್ತಿತ್ವ ಅದಕ್ಕೆ ಪುನಃ ಜೀವವನ್ನು ತಂದುಕೊಡಲಾರದು.''

ಆತನ ಮಾತಿಗೆ ಮಹಾವೀರರು ನಕ್ಕರು. ಅವರಿಬ್ಬರೂ ಭಿಕ್ಷಾಟನೆಗಾಗಿ ಒಂದು ಪಟ್ಟಣದ ಕಡೆ ಹೊರಟಿದ್ದರು. ಆಹಾರ ಸೇವಿಸಿದ ಬಳಿಕ ಅವರು ಹೋದ ದಾರಿಯಲ್ಲಿಯೇ ವಾಪಸ್ ಬರುತ್ತಿದ್ದರು. ಅವರಿಗೊಂದು ಆಶ್ಚರ್ಯ ಕಾದಿತ್ತು. ಗೋಶಾಲಕ ಕಿತ್ತೆಸೆದ ಗಿಡದ ಬೇರುಗಳು ಭೂಮಿಯೊಳಗೆ ಇಳಿದಿದ್ದವು. ಆ ಗಿಡ ಬದುಕಿಕೊಂಡಿತ್ತು. ಅವರು ಪಟ್ಟಣದೆಡೆ ಹೋದಾಗ ಬಿದ್ದ ಮಳೆ ನೀರಿನ ಸಹಾಯದಿಂದ ಬೇರುಗಳು ನೆಲದೊಳಕ್ಕೆ ಇಳಿದಿದ್ದವು. ಬೀಸುತ್ತಿದ್ದ ಗಾಳಿಯ ನೆರವಿನಿಂದ ಗಿಡ ಎದ್ದು ನಿಂತಿತ್ತು. ಅವರು ವಾಪಸ್ ಅಲ್ಲಿಗೆ ಬಂದಾಗ ಗಿಡ ಮೊದಲಿನಂತೆಯೇ ಇತ್ತು.

ಮಹಾವೀರ ಹೇಳಿದರು, ''ಆ ಗಿಡವನ್ನು ನೋಡಿದೆಯಾ? ಅಸ್ತಿತ್ವದ ವಿರುದ್ಧ ನೀನೇನನ್ನೂ ಮಾಡಲಾರೆ ಎಂದು ನಿನಗೆ ಹೇಳಿದೆ. ನೀನು ಪ್ರಯತ್ನಿಸಬಹುದು ಆದರೆ ಅದು ನಿನ್ನ ವಿರುದ್ಧ ಕೆಲಸ ಮಾಡುತ್ತದೆ. ಏಕೆಂದರೆ ಅದು ನಿನ್ನನ್ನು ಅಸ್ತಿತ್ವದಿಂದ ಪ್ರತ್ಯೇಕಿಸುತ್ತದೆ. ಅದು ನಿನ್ನನ್ನು ಹತ್ತಿರಕ್ಕೆ ಕೊಂಡೊಯ್ಯಲಾರದು.

''ಆ ಗಿಡವನ್ನೊಮ್ಮೆ ನೋಡು. ಹೀಗಾಗಬಹುದೆಂದು ಯಾರೂ ಊಹಿಸಿರಲಿಲ್ಲ. ಗಾಳಿ ಮತ್ತು ಮಳೆ ಸೇರಿ ಆ ಗಿಡವನ್ನು ಬದುಕಿಸಬಹುದೆಂದು ಯಾರೂ ಕಲ್ಪಿಸಿರಲಿಲ್ಲ. ಇನ್ನು ಮುಂದೆ ಅದು ತನ್ನ ಜೀವನವನ್ನು ಬದುಕುತ್ತದೆ. ಇದೊಂದು ಸಣ್ಣ ಸಸ್ಯವೆಂದು ಅನ್ನಿಸಬಹುದು. ಆದರೆ

ಅದು ಈ ಬ್ರಹ್ಮಾಂಡದ ಒಂದು ಚಿಕ್ಕ ಭಾಗ. ಈ ಅಸ್ತಿತ್ವದ ಒಂದು ಭಾಗ. ಅದರಲ್ಲಿ ಮಹಾಶಕ್ತಿ ಇದೆ.''

ಮಹಾವೀರ ತನ್ನ ಮಾತನ್ನು ಮುಂದುವರೆಸಿದರು, ''ಇಂದಿನಿಂದ ನಮ್ಮ ದಾರಿ ಬೇರೆ ಬೇರೆಯಾಗುವುದು. ಈ ಅಸ್ತಿತ್ವದ ವಿರೋಧಿ ಹಾಗೂ ಜವಾಬ್ದಾರಿ ಇಲ್ಲದಿರುವಾತ ನನ್ನೊಂದಿಗಿರುವುದನ್ನು ನಾನು ಸಹಿಸುವುದಿಲ್ಲ.''

ಮಹಾವೀರರ ಇಡೀ ಅಹಿಂಸಾ ತತ್ವವನ್ನು ಅಸ್ತಿತ್ವದೆಡೆಗೆ ಪೂಜ್ಯ ಭಾವನೆ ಹೊಂದಿರುವಿಕೆ ಎಂದು ಸಮೀಕರಿಸಬಹುದು. ಅಹಿಂಸೆ ಇದರಲ್ಲಿನ ಒಂದು ಭಾಗ ಅಷ್ಟೆ.

ಇವು ಘಟಿಸುತ್ತಲೇ ಇರುತ್ತವೆ. ನೀವು ನಿಮ್ಮನ್ನು ಹೆಚ್ಚು ಹೆಚ್ಚು ಕಂಡು ಕೊಂಡಂತೆಲ್ಲಾ ಈ ಮೊದಲು ನೀವು ಕಾಳಜಿ ವಹಿಸದಿದ್ದ ಅನೇಕ ಸಂಗತಿಗಳಿಗೆ ನೀವು ಜವಾಬ್ದಾರರು ಎಂಬ ಅರಿವು ಮೂಡುವುದು. ಇದುವೇ ನಿಮ್ಮ ಮಾನದಂಡವಾಗಲಿ: ಜನಗಳು, ವಸ್ತುಗಳು, ಅಸ್ತಿತ್ವದ ಬಗ್ಗೆ ನೀವು ಹೆಚ್ಚು ಹೆಚ್ಚು ಜವಾಬ್ದಾರಿಯುತರಾಗುತ್ತಿರುವಿರಿ ಎಂಬುದು ಕಂಡಲ್ಲಿ ನೀವು ಸರಿಯಾದ ಪಥದಲ್ಲಿ ಚಲಿಸುತ್ತಿದ್ದೀರಿ.[30]

ಈ ಸಂಗತಿಯ ಎನ್ನು ತಿಳಿಯುವುದು ತೀರ ಅವಶ್ಯಕ. ಮಹಾವೀರರಂತಹವರು ಬತ್ತಲೆಯಾದಾಗ ಅದು ರೂಢಿ ಅಥವಾ ನಡವಳಿಕೆಯಾಗಿರಲಿಲ್ಲ. ಮಹಾವೀರ ರಾಜನಾಗಿದ್ದರು. ಆತ ತಮ್ಮ ಆಸ್ತಿ ಭೂಮಿ, ಹಣವನ್ನೆಲ್ಲಾ ಹಂಚಿದರು. ತಮ್ಮಲ್ಲಿರುವುದೆಲ್ಲವನ್ನೂ ಜನರಿಗೆ ಕೊಟ್ಟರು. ಹೆಗಲ ಮೇಲೆ ಒಂದು ಶಾಲನ್ನು ಹೊದ್ದು ಪಟ್ಟಣವನ್ನು ತೊರೆದರು. ಮಹಾವೀರರು ಪಟ್ಟಣವನ್ನು ಇನ್ನೇನು ಬಿಟ್ಟು ಹೋಗಬೇಕೆನ್ನುವಷ್ಟರಲ್ಲಿ ಕುಂಟ ಭಿಕ್ಷುಕನನ್ನು ಭೇಟಿ ಮಾಡಿದರು. ಮಹಾವೀರರು ತಮ್ಮಲ್ಲಿರುವುದೆಲ್ಲವನ್ನೂ ಜನರಿಗೆ ಹಂಚುತ್ತಿರುವ ವಿಷಯ ಗೊತ್ತಾಗಿ ಆ ಭಿಕ್ಷುಕ ಪಟ್ಟಣದೆಡೆಗೆ ಆಗಮಿಸುತ್ತಿದ್ದ. ಕಾಲಿಲ್ಲದ ಆತ ತೆವಳುತ್ತಾ ಬರುತ್ತಿದ್ದುದರಿಂದ ತಡವಾಯಿತು.

ಭಿಕ್ಷುಕ ಮಹಾವೀರರಿಗೆ ಹೇಳಿದ, ''ನನಗೆ ಕಾಲುಗಳಿಲ್ಲದಿರುವುದರಿಂದ ತೆವಳುತ್ತಾ ಬಂದೆ. ಹೀಗಾಗಿ ತಡವಾಯ್ತು. ನೀವು ಈಗ ಹೊರಟುಹೋಗುತ್ತಿದ್ದೀರಿ. ನಿಮ್ಮ ರಾಜ್ಯದ ಈ ಕಡು ಬಡವನಿಗೆ ಏನೂ ಸಿಕ್ಕಿಲ್ಲ.''

ಆಗ ಮಹಾವೀರ ಶಾಂತನಾಗಿ ಹೇಳಿದರು, ''ಈಗ ನನ್ನಲ್ಲಿ ಈ ಶಾಲಿನ ಹೊರತಾಗಿ ಮತ್ತೇನೂ ಇಲ್ಲ. ಆದರೆ ಈ ಶಾಲು ಅತಿ ಅಮೂಲ್ಯವಾದುದು. ಇದಕ್ಕೆ ವಜ್ರದ ಗುಬಟವಿದೆ.''

ಆ ಶಾಲನ್ನು ಸರಿಯಾಗಿ ಅರ್ಧಕ್ಕೆ ತುಂಡರಿಸಿ, ಒಂದರ್ಧವನ್ನು ಭಿಕ್ಷುಕನಿಗೆ ನೀಡಿದರು. ''ಈ ಅರ್ಧ

ಶಾಲು ನಿನ್ನ ಇಡೀ ಜೀವನಕ್ಕೆ ಸಾಕು. ಉಳಿದರ್ಧದಲ್ಲಿ ನಾನು ಹೇಗೋ ಸಂಭಾಳಿಸುತ್ತೇನೆ,'' ಎಂದು ಮಹಾವೀರರು ಹೇಳಿದರು. ಉಳಿದ ಅರ್ಧ ಶಾಲನ್ನು ಮಹಾವೀರ 'ಟವೆಲ್'ನಂತೆ ಸುತ್ತಿಕೊಂಡರು.

ಮಹಾವೀರರು ಕಾಡನೊಳಕ್ಕೆ ಪ್ರವೇಶಿಸುತ್ತಿದ್ದಂತೆ ಅವರು ಸುತ್ತಿಕೊಂಡಿದ್ದ ಅರ್ಧ ಶಾಲು ಗುಲಾಬಿ ಪೊದೆಯೊಂದಕ್ಕೆ ಸಿಕ್ಕಿ ಬಿಚ್ಚಿಕೊಂಡಿತು. ಮಹಾವೀರ ಬತ್ತಲಾದರು. ಗುಲಾಬಿ ಪೊದೆಯಿಂದ ಶಾಲನ್ನು ಬಿಡಿಸ ಹೊರಟವರು ಹಠಾತ್ತನೆ ಯೋಚಿಸತೊಡಗಿದರು. ''ಇದರಿಂದ ಏನು ಪ್ರಯೋಜನ? ಈಗಲೋ ಆಗಲೋ ಈ ಶಾಲನ್ನು ನಾನು ಕಳೆದುಕೊಳ್ಳಲೇ ಬೇಕು. ಇದು ಅಮೂಲ್ಯವಾಗಿರುವುದರಿಂದ ನಿದ್ರೆಯಲ್ಲೂ ನಾನು ಇದರ ಬಗ್ಗೆ ಕಾಳಜಿ ವಹಿಸಿರಬೇಕು. ಗುಲಾಬಿ ಪೊದೆ ಅದನ್ನು ಕಿತ್ತುಕೊಂಡಿದ್ದು ಒಳ್ಳೆಯದೇ ಆಯಿತು. ನಾನೀಗ ಅದರಿಂದ ಸಂಪೂರ್ಣ ಮುಕ್ತನಾದೆ. ಯಾವುದಕ್ಕೂ ಈಗ ನಾನು ಹೆದರಬೇಕಿಲ್ಲ. ನನ್ನಿಂದ ಯಾರೂ ಏನನ್ನೂ ಕದಿಯಲಾರರು. ಹುಟ್ಟಿದ್ದಾಗ ಹೇಗಿದ್ದೆನೋ ಹಾಗೆಯೇ ಇದ್ದೇನೆ.''

ಇದು ರೂಢಿ ಅಥವಾ ನಡವಳಿಕೆ ಅಲ್ಲ. ಇದು ಅರಿವು, ತಿಳಿವಳಿಕೆ, ವಿವೇಚನೆ.[31]

ಯೋಗ ಅಪ್ಪಟ ವಿಜ್ಞಾನ. ಯೋಗವೆಂಬ ಪ್ರಪಂಚದಲ್ಲಿ ಪತಂಜಲಿ ಅಗ್ರಗಣ್ಯರು. ಇಂತಹವರು ಬಲು ವಿರಳ. ಪತಂಜಲಿಯೊಂದಿಗೆ ಹೋಲಿಸಲು ಬೇರೆ ಹೆಸರುಗಳಿಲ್ಲ. ಮನುಕುಲದ ಇತಿಹಾಸದಲ್ಲಿ ಮೊದಲ ಬಾರಿಗೆ ಧರ್ಮವನ್ನು ವಿಜ್ಞಾನದ ಸ್ಥಿತಿಗೆ ತರಲಾಯಿತು. ಪತಂಜಲಿ ಧರ್ಮವನ್ನು ವಿಜ್ಞಾನದ ನಿಯಮವನ್ನಾಗಿ ಮಾಡಿದರು. ಇಲ್ಲಿ ನಂಬಿಕೆಗಳು ಅನವಶ್ಯ.

ಜ್ಞಾನಿಗಳ ಜಗತ್ತಿನಲ್ಲಿ ಪತಂಜಲಿ ಐನ್‌ಸ್ಟೀನ್‌ರ ಹಾಗೆ. ಆತನೊಂದು ವಿಸ್ಮಯ. ಪತಂಜಲಿಗೆ ವೈಜ್ಞಾನಿಕ ಮನಸ್ಸಿಗಿರುವ ಪ್ರಖರತೆ, ಮನೋಭಾವ ಹಾಗೂ ದೃಷ್ಟಿಕೋನ ಇತ್ತು. ಆತ ಕೃಷ್ಣನ ಹಾಗೆ ಕವಿಯಾಗಿರಲಿಲ್ಲ. ಆತ ಮಹಾವೀರರಂತೆ ನೀತಿವಂತರಾಗಿರಲಿಲ್ಲ. ಅವರು ಮೂಲತಃ ನಿಯಮಗಳ ರೂಪದಲ್ಲಿ ಯೋಚಿಸುವ ವಿಜ್ಞಾನಿ. ಪತಂಜಲಿ, ಮಾನವನ ಮೂಲಭೂತ ನಿಯಮಗಳು, ಮಾನವ ಮನಸ್ಸಿನ ಕಾರ್ಯಸ್ವರೂಪ ಹಾಗೂ ವಾಸ್ತವದ ಬಗ್ಗೆ ಅನುಪಮ ಸೂತ್ರಗಳನ್ನು ಪ್ರತಿಪಾದಿಸಿದರು.

ನೀವು ಪತಂಜಲಿಯನ್ನು ಅನುಸರಿಸಿದರೆ, ಅವರು ಒಂದು ಗಣಿತದ ಸೂತ್ರದ ಹಾಗೆ ನಿಖರವೆಂಬುದು ಗೊತ್ತಾಗುವುದು. ಸುಮ್ಮನೆ ಆತ ಹೇಳಿದಂತೆ ಮಾಡಿದಲ್ಲಿ ಫಲಿತಾಂಶ ಬರುವುದು. ಫಲಿತಾಂಶ ಬರಲೇಬೇಕು. ಎರಡು ಮತ್ತು ಎರಡು ಕೂಡಿದರೆ ನಾಲ್ಕು ಎಂದ ಹಾಗೆಯೇ ಇದು. ನೀವು ನೀರನ್ನು ನೂರು ಡಿಗ್ರಿ ತಾಪಕ್ಕೆ ಕಾಯಿಸಿದರೆ ಆವಿಯಾಗುವ ಹಾಗೆ. ಯಾವುದೇ ನಂಬಿಕೆ, ಮತಶ್ರದ್ಧೆ ಬೇಕಿಲ್ಲ. ಸುಮ್ಮನೆ ಮಾಡಿನೋಡಿ ತಿಳಿಯಬಹುದು. ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಅನುಪಮವೆಂದು. ಈ ಭೂಮಿಯ ಮೇಲೆ ಪತಂಜಲಿಯಂತಹ ಇನ್ನೊಬ್ಬ ವ್ಯಕ್ತಿ ಜೀವಿಸಿರಲಿಲ್ಲ.[32]

ಭಾರತದ ಶ್ರೇಷ್ಠ ಮಹಿಳಾ ಯೋಗಿ ಮೀರಾಳ ಬಗ್ಗೆ ಒಂದು ಸುಂದರ ಕಥೆ ಇದೆ. ಆಕೆ ನಿಜಕ್ಕೂ ಹುಚ್ಚು ಭಕ್ತೆ. ಅನನ್ಯ ಪ್ರೀತಿ ಮತ್ತು ಆನಂದಪರವಶತೆ, ಆಕೆಯ ದೈವ ಭಕ್ತಿಯ ಕುರುಹಾಗಿದ್ದವು. ರಾಣಿಯಾಗಿದ್ದಳು ಬೀದಿಯಲ್ಲಿ ನರ್ತಿಸ ತೊಡಗಿದಳು. ಕುಟುಂಬದವರು ಆಕೆಯನ್ನು ಹೊರಕ್ಕೆ ಅಟ್ಟಿದರು. ರಾಜವಂಶಕ್ಕೆ ಕೆಟ್ಟ ಹೆಸರು ಬರಬಹುದೆಂದು ಕುಟುಂಬದವರೇ ವಿಷಪ್ರಾಶನಕ್ಕೆ ಯತ್ನಿಸಿದರು. ಇದರಿಂದ ಆಕೆಯ ಪತಿ ಕಸಿವಿಸಿಗೊಂಡ. ಆತನಿಗೆ ಏನು ಮಾಡಬೇಕೆಂಬುದು ತೋಚದಾಯಿತು. ಆತ ಪೇಚಿಗೆ ಸಿಲುಕಿದ. ಇದು ನಡೆದಿದ್ದು ದೇಶದ ಮಹತ್ತರ ಸಂಪ್ರದಾಯಬದ್ಧ ಪ್ರದೇಶವಾದ ರಾಜಸ್ಥಾನ್‌ನಲ್ಲಿ. ಅಲ್ಲಿ ಶತಮಾನಗಳಿಂದ ಜನರು ಹೆಂಗಸರ ಮುಖವನ್ನೇ ನೋಡಿಲ್ಲ. ಅಲ್ಲಿನ ಹೆಂಗಸರು ಸದಾ ಮುಖವನ್ನು ಮುಚ್ಚಿಕೊಂಡಿರುತ್ತಾರೆ. ಹಗಲಿನಲ್ಲಿ ಗಂಡನಿಗೆ ಕೂಡ ತನ್ನ ಪತ್ನಿಯನ್ನು ಗುರುತಿಸುವುದು ಕಷ್ಟ. ಏಕೆಂದರೆ, ಅವರು ರಾತ್ರಿಯಲ್ಲಿ ಕತ್ತಲಿನಲ್ಲಿ ಮಾತ್ರ ಸೇರುತ್ತಾರೆ.

ಅಂತಹ ದಿನಗಳಲ್ಲಿ, ಅಂತಹ ಮೂರ್ಖ ಪರಿಸರದಲ್ಲಿ ರಾಣಿಯಾದವಳು ಬೀದಿಯಲ್ಲಿ ಕುಣಿಯುತ್ತಿದ್ದಾಳೆ! ಜನರು ಗುಂಪು ಸೇರಿ ನೋಡತೊಡಗುತ್ತಾರೆ. ದೈವತ್ವದ ಮತ್ತಿನಲ್ಲಿದ್ದ ಆಕೆಗೆ ತನ್ನ ಸೀರೆಯ ಸೆರಗು ಜಾರಿದ್ದರ ಅರಿವೂ ಇರುತ್ತಿರಲಿಲ್ಲ. ಅವಳ ಮುಖ, ಕೈಗಳು ಜನರ ದೃಷ್ಟಿಗೆ ಬೀಳುತ್ತಿದ್ದವು. ಇದರಿಂದಾಗಿ ಕುಟುಂಬದವರೆಲ್ಲಾ ಕಳವಳಗೊಂಡಿದ್ದರು.

ಆದರೆ ಮೀರಾ ಇದಾವುದರ ಪರಿವೆ ಇಲ್ಲದೆ ಸುಮಧುರ ಹಾಡುಗಳನ್ನು ಹಾಡುತ್ತಿದ್ದಳು. ಅಷ್ಟೊಂದು ಇಂಪಾದ ಹಾಡನ್ನು ಯಾರೂ ಹಾಡಿರಲಿಕ್ಕಿಲ್ಲ. ಏಕೆಂದರೆ ಅವು ಹೃದಯದಾಳದಿಂದ ಮೂಡುತ್ತಿದ್ದವು. ಆ ಹಾಡುಗಳನ್ನು ಯಾರೂ ಸಂಯೋಜಿಸಿರಲಿಲ್ಲ. ಅವು ಸ್ವಯಂಪ್ರೇರಿತವಾಗಿ ಹೊರಹೊಮ್ಮುತ್ತಿದ್ದವು.

ಮೀರಾ ಕೃಷ್ಣಭಕ್ತೆ. ಕೃಷ್ಣನನ್ನು ಬಹುವಾಗಿ ಪ್ರೀತಿಸುತ್ತಿದ್ದಳು. ಆಕೆ ತನ್ನ ಗಂಡನಿಗೆ ಹೇಳಿದಳು, "ನೀವು ನನ್ನ ಗಂಡನೆಂಬುವುದನ್ನು ನಂಬಬೇಡಿ. ನನ್ನ ಪತಿ ಕೃಷ್ಣ. ನೀವು ನನ್ನ ಪತಿ ಅಲ್ಲವೇ ಅಲ್ಲ."

ಮೀರಾಳ ವರ್ತನೆ ಕಂಡು ರಾಜನಿಗೆ ವಿಪರೀತ ಸಿಟ್ಟುಬಂದಿತು. ಆತ ಆಕೆಯನ್ನು ತನ್ನ ರಾಜ್ಯದಿಂದ ಹೊರಗಟ್ಟಿದ. ಗಡಿಯೊಳಗೆ ಕಾಲಿಡದಂತೆ ಮಾಡಿದ. ಆಕೆ ಕೃಷ್ಣನ ಸ್ಥಳವಾದ ಮಥುರಾಕ್ಕೆ ನಡೆದಳು. ಸಾವಿರಾರು ವರ್ಷಗಳ ಹಿಂದೆಯೇ ಕೃಷ್ಣ ಸತ್ತಿದ್ದರೂ, ಆಕೆಯ ಪಾಲಿಗೆ ಮಾತ್ರ ಆತ ಬದುಕಿದ್ದ. ಪ್ರೀತಿಯ ರಹಸ್ಯವೇ ಇದು. ಅದು ಕಾಲ ಮತ್ತು ಸ್ಥಳದ ಎಲ್ಲಾ ಅಡಚಣೆಗಳನ್ನು ದಾಟಿ ನಡೆಯುತ್ತದೆ. ಮೀರಾ ಪಾಲಿಗೆ ಕೃಷ್ಣ ಒಂದು ಕಲ್ಪನೆಯಾಗಿರಲಿಲ್ಲ. ಆತ ವಾಸ್ತವವಾಗಿದ್ದ. ಆಕೆ ಕೃಷ್ಣನೊಂದಿಗೆ ಮಾತನಾಡುತ್ತಿದ್ದಳು, ಆತನೊಂದಿಗೆ ಮಲಗಿದಳು, ಆತನನ್ನು ಆಲಿಂಗಿಸಿದಳು, ಚುಂಬಿಸಿದಳು. ಬೇರೆಯವರಿಗೆ ಕೃಷ್ಣ ಕಾಣಿಸುತ್ತಿರಲಿಲ್ಲ. ಆದರೆ ಆಕೆ ಮಾತ್ರ ಕೃಷ್ಣನನ್ನು ಕಂಡಿದ್ದಳು. ಅಸ್ತಿತ್ವದ ಲವಲವಿಕೆ,

ಸ್ಫೂರ್ತಿಯನ್ನು ಕೃಷ್ಣನಲ್ಲಿ ಕಂಡಿದ್ದಳು. ಅದನ್ನೇ ಬುದ್ಧ ಧಮ್ಮ ಅಥವಾ ಕಟ್ಟಳೆ ಎಂದು ಕರೆದಿದ್ದಾರೆ. ಅದು ಗಂಡಸಿನ ಭಾಷೆ, ಪುರುಷ ಅಭಿವ್ಯಕ್ತಿ : ಕಟ್ಟಳೆ. ಕೃಷ್ಣನನ್ನು ಮೀರಾ, ''ನನ್ನ ಪ್ರಿಯಕರ,'' ಎಂದು ಕರೆಯುತ್ತಿದ್ದಳು. ಹೊರತು ಕಟ್ಟಳೆ ಅಥವಾ ನಿಯಮ ಎಂದಲ್ಲ. ಇದು ಹೆಣ್ಣುಹೃದಯ.

ಕೃಷ್ಣನ ಭವ್ಯ ಮಂದಿರವಿರುವ ಮಥುರಾವನ್ನು ಆಕೆ ತಲುಪಿದಳು. ಈ ಮಂದಿರದ ಮುಖ್ಯ ಅರ್ಚಕ ಜೀವನದಲ್ಲಿ ಯಾವುದೇ ಹೆಣ್ಣನ್ನು ಕಣ್ಣೆತ್ತಿ ನೋಡುವುದಿಲ್ಲವೆಂಬ ಪ್ರತಿಜ್ಞೆ ತೆಗೆದುಕೊಂಡಿದ್ದ. ಮೂವತ್ತು ವರ್ಷಗಳ ಕಾಲ ಆತ ಯಾವುದೇ ಹೆಣ್ಣನ್ನು ನೋಡಿರಲಿಲ್ಲ. ಯಾವ ಹೆಂಗಸಿಗೂ ಮಂದಿರದ ಒಳಗೆ ಪ್ರವೇಶಿಸಲು ಅನುಮತಿ ನೀಡಿರಲಿಲ್ಲ. ಅರ್ಚಕ ಮಂದಿರವನ್ನು ಬಿಟ್ಟು ಹೊರಗೆ ಎಲ್ಲೂ ಹೋಗಿರಲಿಲ್ಲ.

ಮೀರಾ ಮಂದಿರ ತಲುಪಿದ ಅನಂತರ ಬಾಗಿಲು ಬಳಿಯೇ ನರ್ತಿಸಲಾರಂಭಿಸಿದಳು. ಆಕೆಯ ನೃತ್ಯವನ್ನು ಕಂಡ ಕಾವಲುಗಾರರು ಮೋಡಿಗೊಳಗಾದರು. ಆಕೆಯನ್ನು ತಡೆಯಬೇಕೆಂಬುದರ ಪರಿವೆ ಅವರಿಗಿರಲಿಲ್ಲ. ಮೀರಾ ದೇವಾಲಯವನ್ನು ಪ್ರವೇಶಿಸಿದಳು - ಮೂವತ್ತು ವರ್ಷಗಳ ಅವಧಿಯಲ್ಲಿ ದೇವಾಲಯವನ್ನು ಪ್ರವೇಶಿಸಿದ ಮೊದಲ ಮಹಿಳೆ.

ಆ ಸಮಯದಲ್ಲಿ ಮುಖ್ಯ ಅರ್ಚಕರು ಕೃಷ್ಣನನ್ನು ಪೂಜಿಸುತ್ತಿದ್ದರು. ಮೀರಾಳನ್ನು ಕಂಡ ಅರ್ಚಕರು ತಮ್ಮ ಕಣ್ಣುಗಳನ್ನು ತಾವೇ ನಂಬದಾದರು. ಅವರಿಗೆ ಸಿಟ್ಟು ನೆತ್ತಿಗೇರಿತು. ಮೀರಾಳನ್ನು ಬಯ್ಯತೊಡಗಿದರು. ''ಇಲ್ಲಿಂದ ತೊಲಗು! ಏ, ಹೆಂಗಸೇ, ಇಲ್ಲಿಂದ ತೊಲಗು! ಹೆಂಗಸರಿಗೆ ಇಲ್ಲಿ ಪ್ರವೇಶ ಇಲ್ಲವೆಂಬುದು ಗೊತ್ತಿಲ್ಲವೇನು?''

ಇದಕ್ಕೆ ಮೀರಾ ನಕ್ಕು ನುಡಿದಳು, ''ನನಗೆ ಗೊತ್ತಿರುವ ಹಾಗೆ, ಪರಮಾತ್ಮನ ಹೊರತಾಗಿ ಉಳಿದವರೆಲ್ಲರೂ ಹೆಂಗಸರೇ. ನೀನೂ ಕೂಡಾ. ಮೂವತ್ತು ವರ್ಷ ಕೃಷ್ಣನನ್ನು ಪೂಜಿಸಿದ ಮೇಲೂ ನೀನು ಗಂಡಸೆಂದು ನಿನಗನ್ನಿಸುವುದೇನು?''

ಮೀರಾಳ ಮಾತು ಮುಖ್ಯ ಅರ್ಚಕರ ಕಣ್ಣನ್ನು ತೆರೆಯಿಸಿತು. ಅವರು ಆಕೆಯ ಕಾಲಿಗೆ ಎರಗಿದರು. ಧನ್ಯರಾಗಿ ನುಡಿದರು, ''ಈ ಸಂಗತಿಯನ್ನು ನನಗೆ ಯಾರೂ ಈ ಮೊದಲು ಹೇಳಿರಲಿಲ್ಲ. ಇದನ್ನು ನಾನು ನೋಡಬಲ್ಲೆ, ಅನುಭವಿಸಬಲ್ಲೆ. ಇದು ಸತ್ಯ.''

ಪ್ರೀತಿಯ ಮಾರ್ಗದಲ್ಲೇ ನಡೆಯಿರಿ ಅಥವಾ ಧ್ಯಾನ ಮಾರ್ಗದಲ್ಲಿ, ನೀವು ತುತ್ತತುದಿಯನ್ನು ತಲುಪಿದಾಗ, ನೀವು ಹೆಂಗಸಿನಂತಾಗುತ್ತೀರಿ.....

ಬುದ್ಧ ಲಾವೊ ತ್ಸು ಮುಂತಾದವರೆಲ್ಲಾ ಹೆಂಗರುಳಿನವರಂತೆ ಕಾಣುವರು. ಏಕೆಂದರೆ ನಿಮಗೆ ಅವರ ಪರಿಚಯ ಆಗುವ ವೇಳೆಗೆ ಅವರಾಗಲೇ ತುತ್ತತುದಿ ತಲುಪಿ ಆಗಿತ್ತು. ಆದರೆ ನಮಗೆ ಅವರು ಅನುಸರಿಸಿದ ಮಾರ್ಗ ಗೊತ್ತಿಲ್ಲ. ಅವರ ಯಾತ್ರೆ ಗೊತ್ತಿಲ್ಲ. ಅವರ ಯಾತ್ರೆ ಪುರುಷ ಸಹಜ, ಹೊರತು ಸ್ತ್ರೀ ಸಹಜವಲ್ಲ.[33]

ಕೃಷ್ಣನ ಭಕ್ತರ ಪೈಕಿ ಚೈತನ್ಯರ ಹೆಸರು ಪ್ರಮುಖವಾದುದು. ''ಅಚಿಂತ್ಯ ಭೇದಭೇದವಾದ್'' ಎಂಬುದರಲ್ಲಿ ಯೋಚಿಸಲಾಗದ್ದು ಎಂಬ ಅರ್ಥ ಬರುವ 'ಅಚಿಂತ್ಯ' ಪದ ಅಮೂಲ್ಯವಾದುದು. ತಮ್ಮ ವಿಚಾರದ ಮೂಲಕ ತಿಳಿಯುವವರು ವಸ್ತು ಅಥವಾ ಆತ್ಮ 'ಭೇದ' ಬೇರೆ ಬೇರೆ ಎಂದು ಹೇಳುತ್ತಾರೆ. ಇಲ್ಲವೇ 'ಅಭೇದ' ಎರಡೂ ಒಂದೇ ಎಂದು ಹೇಳುತ್ತಾರೆ. ಚೈತನ್ಯರು ಹೇಳುತ್ತಾರೆ, 'ಅವು ಎರಡೂ ಸಹ, ಒಂದೇ ಮತ್ತು ಬೇರೆ ಬೇರೆಯೂ ಸಹ .... '

ಆದರೆ ಇದು ಕೂಡಾ ಯೋಚನೆಯ ಪರಿಧಿಯೊಳಗೆ ಬರುವುದು. ಸಮುದ್ರ ಮತ್ತು ಅದರ ಅಲೆಗಳು ಒಂದೇ ಮತ್ತು ಬೇರೆ ಬೇರೆಯೂ ಸಹ ಎಂಬ ನಿರ್ಧಾರಕ್ಕೆ ಚಿಂತನೆಯ ಮೂಲಕ ಬರಬಹುದು. ಆದರೆ, ಚೈತನ್ಯರು ಇದಕ್ಕೆ ಮತ್ತೊಂದು ಪದ ಸೇರಿಸುತ್ತಾರೆ. ಮತ್ತೊಂದು ಸ್ವರೂಪ ಕೊಡುತ್ತಾರೆ. ಅದು 'ಅಚಿಂತ್ಯ' ಅಂದರೆ ಯೋಚಿಸಲಾಗದ್ದು. ಈ ಪದ ಬಹಳ ಮುಖ್ಯವಾದದ್ದು. ಜಗತ್ತು ಮತ್ತು ದೇವರು, ವಸ್ತು ಮತ್ತು ಆತ್ಮ ಇವುಗಳು ಬೇರೆ ಬೇರೆ ಹಾಗೂ ಪ್ರತ್ಯೇಕಿಸಲಾಗದ್ದೂ ಸಹ ಎಂಬುದನ್ನು ನೀವು ಚಿಂತನೆಯ ಮೂಲಕ ತಿಳಿದರೆ ಅದರಲ್ಲಿ ಹುರುಳಿಲ್ಲ ಎಂದು ಚೈತನ್ಯ ಹೇಳುತ್ತಾರೆ. ಇದು ಕಲ್ಪನೆ, ಸಿದ್ಧಾಂತ, ನಿಯಮಗಳಿಗಿಂತ ಹೆಚ್ಚೇನೂ ಅಲ್ಲ. ಯೋಚನೆ ಇಲ್ಲದೆ, ಪದಗಳಿಲ್ಲದೆ, ಅ-ಮನ ಸ್ಥಿತಿಯಲ್ಲಿ, ಆಲೋಚನೆಯ ಎಲ್ಲೆ ಮೀರಿ ಅನ್ವೇಷಕನಿಗೆ ಈ ಅರಿವು ಮೂಡಿದರೆ, ಅದು ಅನುಭವವಾಗುತ್ತದೆ. ಆಗ ಅದು ಸಾರ್ಥಕ, ವಾಸ್ತವ ಹಾಗೂ ಅಸಾಧಾರಣ.

ಚೈತನ್ಯ ಯೋಚಿಸಲಾಗದ್ದು ಎಂದಾಗ, ಅವರು ಈ ಪದಗಳ ಅರ್ಥಕ್ಕಿಂತ ಹೆಚ್ಚಿನದನ್ನು ಹೇಳುತ್ತಿದ್ದಾರೆ. ಮೀರಾ ಕೂಡಾ ಇದನ್ನು ಯೋಚಿಸಲಾಗದ್ದು ಎಂದು ಹೇಳಬಹುದು. ಆದರೆ ಆಕೆ ಎಂದೂ ಗಂಭೀರ ಚಿಂತನೆಗೆ ತೊಡಗಿದವಳಲ್ಲ. ಆಕೆ ಸಂಪೂರ್ಣವಾಗಿ ಭಾವನೆಗಳನ್ನು ಹೊತ್ತ ಹೆಂಗಸು. ಆದರೆ ಚೈತನ್ಯರ ಬಗ್ಗೆ ಹೇಳುವುದಾದರೆ, ಆತ ಮಹಾ ತಾರ್ಕಿಕ ವ್ಯಕ್ತಿ. ತಮ್ಮ ಪ್ರಖರ ಮನಸ್ಸಿಗೆ ಹಾಗೂ ಚಾಣಾಕ್ಷ ತರ್ಕಕ್ಕೆ ಪ್ರಸಿದ್ಧರು. ಅವರು ಆಲೋಚನೆಯ ತುತ್ತತುದಿಯನ್ನು ತಲುಪಿದವರು. ಅವರ ಜೊತೆ ವಾದಕ್ಕಿಳಿಯಲು ಪಂಡಿತರು ಹೆದರುತ್ತಿದ್ದರು. ಚರ್ಚಾಪಟುವಾಗಿ ಅಸಾಮಾನ್ಯ. ಯಾರೊಂದಿಗೂ ಹೋಲಿಸಲು ಅಸಾಧ್ಯ. ತತ್ವಶಾಸ್ತ್ರ ಹಾಗೂ ಚರ್ಚೆಗಳಲ್ಲಿ ಅವರಿಗೆ ಅನೇಕ ಬಹುಮಾನಗಳು ಸಿಕ್ಕಿದ್ದವು. ಅವರ ಪ್ರತಿಭೆಯನ್ನು ಕಂಡು ವಿದ್ವಾಂಸರು ಬೆರಗಾಗಿದ್ದರು.

ಇಂತಹ ಅಸಾಮಾನ್ಯ ಬುದ್ಧಿವಂತ, ಪದಗಳು ಮತ್ತು ಸಿದ್ಧಾಂತಗಳನ್ನು ಕೂದಲು ಸೀಳುವಂತಹ ಅತಿ ಸೂಕ್ಷ್ಮ ತರ್ಕ ಅರ್ಥಗಳನ್ನು ನೀಡುತ್ತಿದ್ದವರು, ನವದೀಪದ ಬೀದಿ ಬೀದಿಗಳಲ್ಲಿ ಹಾಡುತ್ತಾ, ಕುಣಿಯಲಾರಂಬಿಸಿದರು. ಆದರೆ ಮೀರಾ ಹಾಗಲ್ಲ. ಆಕೆ ಎಂದೂ ಧರ್ಮಶಾಸ್ತ್ರ ಓದಿದವಳಲ್ಲ. ಪಾಂಡಿತ್ಯ ಗಳಿಸಲು ಶ್ರಮಿಸಿದವಳಲ್ಲ.

ಅವಳಿಗೂ ತರ್ಕಶಾಸ್ತ್ರಕ್ಕೂ ಏನೂ ಸಂಬಂಧವಿಲ್ಲ. ಆಕೆ ಪ್ರೀತಿಪಾತ್ರ ಹೆಂಗಸು .....

ಆದರೆ, ಚೈತನ್ಯ ಮಾತ್ರ ಮೀರಾಳ ಸರಿ ವಿರುದ್ಧ. ಅವರಿಗೆ ಪ್ರೀತಿ ತಿಳಿಯದು. ಆದರೂ ಅವರು ಪ್ರೀತಿ, ಭಕ್ತಿಯೆಡೆಗೆ ಹೊರಳಿದರು. ಅದು ನಿಜಕ್ಕೂ ಒಂದು ಪವಾಡ. ಅವರ ಜೀವನದಲ್ಲಿ ಒಂದು ನೂರಾಎಂಬತ್ತು ಡಿಗ್ರಿ ತಿರುವು. ಇದು ತರ್ಕದ ಮೇಲೆ ಪ್ರೀತಿಯ ಗೆಲುವನ್ನು ತೋರಿಸುತ್ತದೆ. ಚೈತನ್ಯ ತಮ್ಮ ತರ್ಕದಿಂದ ಸಮಕಾಲಿನರೆಲ್ಲರನ್ನೂ ಮಣಿಸಿದ್ದರು. ಆದರೆ ತಮ್ಮ ವಿಷಯಕ್ಕೆ ಬಂದಾಗ ಈ ಅಧ್ಯಯನ ಪದ್ಧತಿ ಸ್ವ-ವಿನಾಶಿ ಎಂಬುದನ್ನು ಕಂಡುಕೊಂಡರು. ಅವರು ಅ-ಮನ ಸ್ಥಿತಿಯನ್ನು ತಲುಪಿದರು. ಆಗ ಜೀವನ ಹಾಗೂ ಪ್ರೀತಿ ಗೆದ್ದಿತು. ಈ ಹಂತವನ್ನು ಮೀರಿ ಯಾರೇ ಆಗಲಿ ಜೀವನ ಮತ್ತು ಪ್ರೀತಿಯೊಂದಿಗೆ ಮಾತ್ರ ಹೋಗಬಲ್ಲರು.

ಅದಕ್ಕಾಗಿಯೇ ನಾನು ಹೇಳುವೆ, ಕೃಷ್ಣನ ಮಾರ್ಗವನ್ನು ಅನುಸರಿಸಿದವರಲ್ಲಿ ಚೈತನ್ಯ ಮಾತ್ರ ಅಸಾಧಾರಣ, ಅಸಾಮಾನ್ಯ ಮತ್ತು ಅನುಪಮ.

ಚೈತನ್ಯರಂತಹ ತಾರ್ಕಿಕ ಮನಸ್ಸಿನವರು ತಮ್ಮ ದಂತಗೋಪುರದಿಂದ ಹೊರಬಂದು ಕೈಯಲ್ಲಿ ಮದ್ದಲೆ ಹಿಡಿದು, ಮಾರ್ಗದಲ್ಲಿ ಹಾಡುತ್ತಾ ಕುಣಿಯುವುದನ್ನು ಊಹಿಸಲು ಅಸಾಧ್ಯ. ಲಂಡನ್‌ನ ಬೀದಿಗಳಲ್ಲಿ ಬರ್ಟ್ರಾಂಡ್ ರಸ್ಸಲ್ ಹಾಡುವುದನ್ನು, ಕುಣಿಯುವುದನ್ನು ಯೋಚಿಸಲು ಸಾಧ್ಯವೇ? ಚೈತನ್ಯ ರಸೆಲ್‌ರ ಹಾಗೆ ಬುದ್ಧಿಜೀವಿ. ನೂರಕ್ಕೆ ನೂರರಷ್ಟು. ಈ ಕಾರಣಕ್ಕಾಗಿಯೇ ಅವರ ಹೇಳಿಕೆಗಳು ಬಹಳ ಮಹತ್ವವೆನಿಸುತ್ತವೆ. ವಾಸ್ತವವನ್ನು ಪದಗಳಿಲ್ಲದೆ ಯೋಚಿಸಲಾಗದು. ಅದು ಕೈಯಲ್ಲಿ ಮದ್ದಲೆ ಹಿಡಿದು ಕುಣಿಯುತ್ತಾ, ಹಾಡುತ್ತಾ ಸಾಧಿಸುವಂತಹುದು ಎಂದು ಅವರು ಹೇಳುತ್ತಿದ್ದರು. ಹೀಗೆ ಬೀದಿಯಲ್ಲಿ ಹಾಡುವುದು, ಕುಣಿಯುವುದು ಸಾಮಾನ್ಯ ಸಂಗತಿಯಲ್ಲ. ಏಕೆಂದರೆ ಅವರನ್ನು ಎಲ್ಲರೂ ಅಖಂಡ ಪಂಡಿತ, ಬುದ್ಧಿವಂತರೆಂದು ಗೌರವಿಸುತ್ತಿದ್ದರು. ಈ ರೀತಿ ಮನಸ್ಸನ್ನು ತೊರೆದು, ಯೋಚನೆಯನ್ನು ತೊರೆದು, ಘೋಷಿಸುತ್ತಾರೆ, ''ವಾಸ್ತವ ಎಂಬುದು ಯೋಚನೆಯನ್ನು ಮೀರಿದ್ದು. ಅದು ಯೋಚಿಸಲಾಗದ್ದು.''

ಚೈತನ್ಯರಿಂದ ಒಂದು ಸಂಗತಿ ಸ್ಪಷ್ಟವಾಗುವುದು. ಯೋಚನೆಯ ಆಳಕ್ಕೆ ಇಳಿದು ಒಳಹೊಕ್ಕು ನೋಡಿದವರು ಮಾತ್ರ ಯೋಚನೆಯನ್ನು ಮೀರಿ ಸಾಗಬಲ್ಲರು. ಈ ಸ್ಥಿತಿಯಲ್ಲಿ ಯೋಚನೆ ಸ್ಥಗಿತಗೊಂಡು ಯೋಚಿಸಲಾಗದ್ದು ಅಥವಾ ಅಚಿಂತ್ಯ ಆರಂಭವಾಗುವ ಬಿಂದುವನ್ನು ಅವರು ತಲುಪುತ್ತಾರೆ.

ಈ ರೀತಿಯ ಹೇಳಿಕೆಗಳು ಮನಸ್ಸಿನ ಕಟ್ಟಕಡೆಯ ಸರಹದ್ದಿನಲ್ಲಿ ಹುಟ್ಟುತ್ತವೆ.[34]

ಹಾಡು ಮತ್ತು ನೃತ್ಯದ ಮೂಲಕ ಚೈತನ್ಯ ಅಂತಿಮವಾದುದನ್ನು ಸಾಧಿಸಿದರು. ಮಹಾವೀರ ಮತ್ತು ಬುದ್ಧ ಧ್ಯಾನ ಮತ್ತು ಶಾಂತತೆಯಿಂದ ಸಾಧಿಸಿದ್ದನ್ನೇ ಚೈತನ್ಯ ನೃತ್ಯದ ಮೂಲಕ ಸಾಧಿಸಿದರು.

ಅಚ್ಚು ಅಥವಾ ಇರ್ಚಿಗೆ, ಕೇಂದ್ರ ಬಿಂದುವಿಗೆ, ಬರಲು ಎರಡು ಮಾರ್ಗಗಳಿವೆ. ಒಂದು ಸ್ಥಿರವಾಗಿ, ನಿಶ್ಚಲವಾಗಿ, ಅಚಲರಾಗುವುದು ಹಾಗೂ ಆ ಮೂಲಕ ಕೇಂದ್ರ ಬಿಂದುವಿಗೆ ಬರುವುದು. ಎರಡನೆಯದು ಇದಕ್ಕೆ ಸರಿ ವಿರುದ್ಧವಾದುದು. ಚಕ್ರ ವಿಪರೀತ ವೇಗದಲ್ಲಿ ಚಲಿಸುವುದರಿಂದ ಅದರ ಕೇಂದ್ರ ಬಿಂದು ಸ್ಪಷ್ಟವಾಗಿ ಕಾಣುವುದು. ಈ ಎರಡನೆಯ ಮಾರ್ಗ ಮೊದಲಿನದಕ್ಕಿಂತ ಸುಲಭವಾದದ್ದು.

ಚಕ್ರ ಚಲಿಸುತ್ತಿದ್ದರೆ ಅದರ ಅಚ್ಚನ್ನು ತಿಳಿಯುವುದು ಸುಲಭ. ಇದನ್ನು ಮಹಾವೀರರು ಶಾಂತತೆ ಹಾಗೂ ನಿಶ್ಚಲತೆಯಿಂದ ಕಂಡುಕೊಂಡರು. ಧ್ಯಾನದಿಂದ ಅನುಭವಿಸಿದರು. ಕೃಷ್ಣ ನೃತ್ಯದ ಮೂಲಕ ಕಂಡುಕೊಂಡರು. ಅವರ ಕುಣಿತ ಉಜ್ವಲವಾದದ್ದು. ಅದು ಅನುಪಮ. ಬಹುಶಃ ಈ ಭೂಮಿಯ ಮೇಲೆ ಚೈತನ್ಯರಷ್ಟು ಯಾರೂ ಕುಣಿದಿರಲಾರರು. ಮನುಷ್ಯರಿಗೂ ಪರಿಧಿ ಹಾಗೂ ಕೇಂದ್ರ ಬಿಂದು ಇರುವುದು ಎಂಬುದನ್ನು ಈ ಸಂದರ್ಭದಲ್ಲಿ ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಆತನ ದೇಹವೇ ಪರಿಧಿ. ಅದು ಸದಾ ಚಲಿಸುತ್ತಾ ಬದಲಾಗುತ್ತಿರುತ್ತದೆ. ಆತನ ಕೇಂದ್ರ ಬಿಂದು - ಆತ್ಮ ಶಾಂತವಾಗಿ ನಿಶ್ಚಲವಾಗಿರುತ್ತದೆ. ಇದು ಶಾಶ್ವತ, ಚಿರಂತನ.[35]



ಜೈನ ದೇವಸ್ಥಾನ, ಜೈಸಲ್ಮೇರ್, ರಾಜಾಸ್ಥಾನ್

''ಗುರು'' ಪದದ ಭಾವರೂಪ ಪೂರ್ವದೇಶಗಳದ್ದು. ಈ ಪದವನ್ನು ಸರಿಯಾಗಿ ಭಾಷಾಂತರಿಸುವುದು ಅಸಾಧ್ಯ. ಇದನ್ನು ನಾವು ''ಮಾಸ್ಟರ್'' ಎಂದು ಭಾಷಾಂತರಿಸಿದರೆ, ಅದರ ಬಹುಮಟ್ಟಿನ ಅರ್ಥ ಹೋದಂತೆಯೇ. ಏಕೆಂದರೆ ಮಾಸ್ಟರ್ ಎಂದರೆ ಶಿಕ್ಷಕ ಎಂದರ್ಥ. ಗುರು ಕೇವಲ ಶಿಕ್ಷಕನಲ್ಲ. ಪಾಶ್ಚಿಮಾತ್ಯ ಸಂದರ್ಭದಲ್ಲಿ ಗುರುವಿನ ಅಸ್ತಿತ್ವವೇ ಇಲ್ಲ. ಆ ಒಂದು ಅನುಭೂತಿ ಪೂರ್ವದ್ದು..... ಅದು ಮೂಲತಃ ಪೂರ್ವದ್ದು. ಇದನ್ನು ಅರಿಯಬೇಕು.

ಯಾರು ಸತ್ಯದ ಜ್ಞಾನ ಮೂಡಿಸಬಲ್ಲರೋ ಅವರನ್ನು ನಾವು 'ಗುರು' ಎಂದು ಕರೆಯುತ್ತೇವೆ. ಹೀಗೆಂದ ಮಾತ್ರಕ್ಕೆ ಸತ್ಯವನ್ನು ಕಲಿಸಬಹುದು ಎಂದಲ್ಲ. ಸತ್ಯವನ್ನು ಕಲಿಸಲಾಗದು ಅದನ್ನು ಹಿಡಿಯಬಹುದು. ಗುರುವಿನ ಉಪಸ್ಥಿತಿ ಅದನ್ನು ಹಿಡಿಯಲು ಸಹಾಯಕವಾಗಬಹುದು, ... ಕ್ರಿಯಾವರ್ಧಕದಂತೆ. ಆತ ಏನನ್ನೂ ಮಾಡುವುದಿಲ್ಲ. ನಿಜವಾದ ಅರ್ಥದಲ್ಲಿ ಹೇಳುವುದಾದರೆ, ಒಬ್ಬನು ಯಾವಾಗ ಗುರುವಾಗುತ್ತಾನೆಂದರೆ ಆತ ಸಂಪೂರ್ಣವಾಗಿ ಕೃರ್ತೃತ್ವವನ್ನು ಕಳೆದುಕೊಂಡಾಗ. ಆಗ ಅಲ್ಲಿ ಕರ್ತೃವೇ ಇರುವುದಿಲ್ಲ. ಕರ್ತೃ ಹೋದ ಬಳಿಕ, ಅಹಂ ಕೂಡ ಹೋದಂತೆಯೇ. ಆಗ ಆತ ಸಂಪೂರ್ಣ ಅನಾಸಕ್ತ ಅಥವಾ ನಿಷ್ಕ್ರಿಯ. ಆಗ ಆತನಲ್ಲಿ ಹಂಬಲ, ಬಯಕೆಗಳ ಸಣ್ಣ ಅಲೆಯೂ ಏಳುವುದಿಲ್ಲ. ಯಾವಾಗ ಹಂಬಲ, ಬಯುಕೆಗಳೂ ಇರುವುದಿಲ್ಲವೋ, ಆಗ ಮಾಡುವುದು ಏನೂ ಇರುವುದಿಲ್ಲ. ಕರ್ತೃತ್ವತೆಗೆ ಹಂಬಲವಿರಬೇಕು ಹಾಗೂ ಕರ್ತೃ ಬೇಕು.

ಮಾಸ್ಟರ್ ಅಥವಾ ಗುರು ಒಬ್ಬ ನಾನ್-ಎಂಟಿಟಿ, ಯಾರೂಅಲ್ಲದ ವ್ಯಕ್ತಿ. ಆದರೆ ಈ ಯಾರೂ ಅಲ್ಲದತನದ ಮೂಲಕ ಅನಂತತೆ ಪ್ರವಹಿಸಲು ಆರಂಭವಾಗುತ್ತದೆ. ಅವರಲ್ಲಿಯ ಶೂನ್ಯದ ಮೂಲಕ ಅಸ್ತಿತ್ವ ಕೋಡಿ ಹರಿಯುತ್ತದೆ. ಗುರು ಎಂತಹ ಉಪಪಸ್ಥಿತಿ ಎಂದರೆ, ಅವರ ಸಾನ್ನಿಧ್ಯದಲ್ಲಿ ಸತ್ಯವನ್ನು ಹಿಡಿಯಬಹುದು.

ಬಹುಮಟ್ಟಿಗೆ ಇದು ಶಿಷ್ಯನನ್ನೇ ಆಧರಿಸಿರುತ್ತದೆ. ಏಕೆಂದರೆ ಗುರು ಎಂದೂ ಕರ್ತೃ ಅಲ್ಲ. ಅವರು ಸುಮ್ಮನೆ ಬೆಳಕಿನ ಜ್ವಾಲೆಯಂತೆ ಇರುತ್ತಾರೆ. ನೀವು ಕಣ್ಣನ್ನು ತೆರೆದರೆ, ನಿಮ್ಮ ಕಣ್ಣಲ್ಲಿ ಬೆಳಕು ತುಂಬಿಕೊಳ್ಳುವುದು. ನೀವು ಕಣ್ಣನ್ನು ಮುಚ್ಚಿದ್ದರೆ ಜ್ವಾಲೆ ಅಲ್ಲಿರುವುದು. ಆದರೆ ಅದು ಅಷ್ಟೊಂದು ಪ್ರಖರವಾಗಿರುವುದಿಲ್ಲ. ಅದು ನಿಮ್ಮ ಕಣ್ಣು ರೆಪ್ಪೆಗಳನ್ನು ತಟ್ಟಿ ''ನಿಮ್ಮ ಕಣ್ಣುಗಳನ್ನು ತೆರೆಯಿರಿ,'' ಎಂದು ಹೇಳುವುದಿಲ್ಲ. ಅದು ಏನನ್ನೂ ಹೇಳುವುದಿಲ್ಲ. ಅದು ಸುಮ್ಮನೆ ಅಲ್ಲಿರುತ್ತದೆ ..... ಅದು ಎಂದೂ ಮಧ್ಯ ಪ್ರವೇಶಿಸುವುದಿಲ್ಲ.

ನಿಮ್ಮ ಕಣ್ಣನ್ನು ತೆರೆದರೆ, ನೀವು ಕೃತಾರ್ಥರಾಗುತ್ತೀರಿ. ನೀವು ಕಣ್ಣುಗಳನ್ನು ತೆರೆಯದಿದ್ದರೆ, ಆ ಅವಕಾಶ ಕಳೆದುಕೊಳ್ಳುತ್ತೀರಿ.[36]

ಕೃಷ್ಣ ನಿಜಕ್ಕೂ ಅನುಪಮ, ಅದ್ವಿತೀಯ. ಕೃಷ್ಣನ ಅದ್ವಿತೀಯತೆ ಏನೆಂದರೆ ಆತ ಘಟಿಸಿದ್ದು ಅತೀತದಲ್ಲಾದರೂ ನಿಜವಾಗಿ ಅವರು ಭವಿಷ್ಯಕ್ಕೆ ಸಲ್ಲುವವರು. ಕೃಷ್ಣನ ಸಮಕಾಲೀನರಾಗಲು ಮಾನವ ಇನ್ನೂ ಮಹತ್ತರ ಬೆಳವಣಿಗೆಯನ್ನು ಹೊಂದಬೇಕು.

ನಮ್ಮ ಇಡೀ ಇತಿಹಾಸದಲ್ಲಿ ಕೃಷ್ಣ ಒಬ್ಬ ಮಹಾನ್ ವ್ಯಕ್ತಿ. ಪ್ರಜ್ಞೆಯ ಆಳ ಮತ್ತು ಎತ್ತರವನ್ನು ತಲುಪಿದವರು. ಆದರೂ ಅವರು ಗಂಭೀರರಲ್ಲ, ದುಃಖಿಯಲ್ಲ ಎಂಬುದೇ ಆತನ ಮಹೋನ್ನತೆಗೆ ಪ್ರಮುಖ ಕಾರಣ. ಸಾಮಾನ್ಯವಾಗಿ ಧಾರ್ಮಿಕ ವ್ಯಕ್ತಿಯ ಮುಖ್ಯ ಗುಣಲಕ್ಷಣವೆಂದರೆ ಅವರು ವಿಷಣ್ಣನಾಗಿರುತ್ತಾನೆ, ಖಿನ್ನನಾಗಿರುತ್ತಾನೆ. ಸದಾ ಗಂಭೀರ, ಜೀವನವೆಂಬ ಯುದ್ಧದಲ್ಲಿ ಸೋತು ಸುಣ್ಣವಾದಂತೆ, ಜೀವನಕ್ಕೆ ಹೆದರಿ ಓಡಿ ಹೋದವನಂತೆ ಇರುತ್ತಾನೆ. ಮಹಾನ್ ಋಷಿಗಳ ದೀರ್ಘಸಾಲಿನಲ್ಲಿ ಕೃಷ್ಣ ಮಾತ್ರ ಭಿನ್ನ. ಹಾಡುತ್ತಾ, ಕುಣಿಯುತ್ತಾ, ನಗುತ್ತಾ ಬರುವುದು ಕೃಷ್ಣ ಮಾತ್ರ.

ಹಿಂದಿನ ಧರ್ಮಗಳು ಜೀವನ ವಿರೋಧಿ ಮತ್ತು ಆತ್ಮಕ್ರೌರ್ಯಿ. ಕ್ಲೇಶ, ವ್ಯಥೆ ಮತ್ತು ನೋವನ್ನು ಮಹಾಗುಣಗಳೆಂದು ಅವು ಕಲಿಸಿವೆ. ಜೀವನವನ್ನು ಸಂಪೂರ್ಣವಾಗಿ ಸ್ವೀಕರಿಸುವ ಧರ್ಮ - ನಗುವ ಧರ್ಮ, ಇನ್ನೂ ಹುಟ್ಟಬೇಕಿದೆ. ಒಂದು ಉತ್ತಮವಾದ ಸಂಗತಿಯೆಂದರೆ ಹಳೆಯ ಧರ್ಮಗಳು ಸತ್ತಿವೆ. ಅದರ ಜೊತೆಗೆ ಹಳೆಯ ದೇವರೂ. ಇಲ್ಲಿಯವರೆಗೆ ಎಲ್ಲಾ ಧರ್ಮಗಳೂ ಜೀವನವನ್ನು ಎರಡು ಭಾಗಗಳಾಗಿ ವಿಭಜಿಸಿವೆ. ಒಂದು ಭಾಗವನ್ನು ಸ್ವೀಕರಿಸಿದರೆ ಇನ್ನೊಂದು ಭಾಗವನ್ನು ತಿರಸ್ಕರಿಸುತ್ತವೆ. ಜೀವನದ ಸಂಪೂರ್ಣತೆಯನ್ನು ಸ್ವೀಕರಿಸುವುದು ಕೃಷ್ಣ ಮಾತ್ರ. ಜೀವನ ಸ್ವೀಕೃತಿ ಸಂಪೂರ್ಣತೆಯ ತುತ್ತತುದಿಯನ್ನು ಮುಟ್ಟಿದ್ದು ಕೃಷ್ಣನಲ್ಲಿ.[37]

ಮಹಾರಾಷ್ಟ್ರದಲ್ಲಿ ಒಂದು ದೇವಾಲಯವಿದೆ. ಅದು ಭಾರತದಲ್ಲಿಯೇ ಪ್ರಮುಖ ಪವಿತ್ರಸ್ಥಳಗಳಲ್ಲಿ ಒಂದು. ಅದು ವಿಠೋಬ ದೇವಾಲಯ. ಕೃಷ್ಣನಿಗಿರುವ ಅನೇಕ ಹೆಸರುಗಳ ಪೈಕಿ ವಿಠೋಬ ಕೂಡಾ ಒಂದು. ಒಂದು ಕಥೆ ಇದೆ. ಕೃಷ್ಣ ಭಕ್ತನೊಬ್ಬ ಎಷ್ಟೊಂದು ಗಾಢ ಧ್ಯಾನದಲ್ಲಿ ನಿರತನಾಗಿದ್ದರೆಂದರೆ ಅವರ ಬಳಿಗೆ ಕೃಷ್ಣ ಬರಲೇ ಬೇಕಾಯಿತು.

ಆತ ಬಂದಾಗ ಭಕ್ತ ತನ್ನ ತಾಯಿಯ ಪಾದಗಳನ್ನು ಒತ್ತುತ್ತಿದ್ದ. ಕೃಷ್ಣ ಬಂದು ಬಾಗಿಲನ್ನು ಬಡಿದರು. ಬಾಗಿಲು ತೆರೆದೇ ಇತ್ತು. ತನ್ನ ಭಕ್ತನ ಹಿಂದೆ ಕುಳಿತರು. ತನ್ನಲ್ಲಿಗೆ ಬರುವಂತೆ ಭಕ್ತ ಕೃಷ್ಣನನ್ನು ದೈನ್ಯನಾಗಿ ಕೇಳಿಕೊಂಡಿದ್ದ, ಅಂಗಲಾಚಿದ್ದ, ಬೇಡಿದ್ದ. ಭಕ್ತ ತನ್ನ ತಲೆಯನ್ನು ಸ್ವಲ್ಪ ತಿರುಗಿಸಿದರೆ ಕೃತಾರ್ಥನಾಗಬಹುದಿತ್ತು. ಆತನ ದೀರ್ಘ

ಪ್ರಯತ್ನ ನೆರವೇರುವುದು. ಕೃಷ್ಣ ಹೇಳಿದ, ''ನೋಡು, ನಾನು ಬಂದಿದ್ದೇನೆ. ನನ್ನನ್ನೊಮ್ಮೆ ನೋಡು.'' ಭಕ್ತ ಹೇಳಿದ, ''ಸ್ವಲ್ಪ ತಾಳು!'' ಏಕೆಂದರೆ ಕೃಷ್ಣ ಸರಿಯಾದ ಸಂದರ್ಭದಲ್ಲಿ ಬಂದಿರಲಿಲ್ಲ. ಭಕ್ತ ತನ್ನ ತಾಯಿಯ ಪಾದಗಳನ್ನು ಒತ್ತುತ್ತಿರುವಾಗ ಬಂದಿದ್ದ. ಕೃಷ್ಣನನ್ನು ಆತನ ಭಕ್ತ ಸ್ವಾಗತಿಸಲೂ ಇಲ್ಲ, ವಂದಿಸಲೂ ಇಲ್ಲ, ಆತನನ್ನು ನೋಡಲೂ ತಿರುಗಲೂ ಇಲ್ಲ. ತಾನು ಕುಳಿತಿದ್ದ ಇಟ್ಟಿಗೆಯನ್ನು ಸರಿಸಿ ಅದರ ಮೇಲೆ ಕುಳಿತುಕೊಳ್ಳಲು ಕೃಷ್ಣನಿಗೆ ಹೇಳಿದ.

ಇಟ್ಟಿಗೆಯ ಮೇಲೆ ಕೃಷ್ಣ ಇಡೀ ರಾತ್ರಿ ಕುಳಿತುಕೊಂಡೇ ಇದ್ದ. ಭಕ್ತನ ತಾಯಿಗೆ ನಿದ್ರೆ ಬರುತ್ತಿರಲಿಲ್ಲ. ಆಕೆ ಸಾಯುವ ಸ್ಥಿತಿಯಲ್ಲಿದ್ದಳು. ಹೀಗಾಗಿ ಭಕ್ತನಿಗೆ ತನ್ನ ತಾಯಿಯನ್ನು ಬಿಟ್ಟು ಬರುವಂತಿರಲಿಲ್ಲ. ದೇವರು ಕಾಯಬಲ್ಲ. ಬೆಳಗಾಯ್ತು. ಇಡೀ ಪಟ್ಟಣದಲ್ಲಿ ಬೆಳಕು ಆವರಿಸಿತು. ಬೇರೆಯವರು ತನ್ನನ್ನು ನೋಡಬಹುದೆಂದು ಕೃಷ್ಣನಿಗೆ ಅನಿಸಿತು. ಆತ ಕೂಡಲೇ ಪ್ರತಿಮೆಯಾಗಿ ಬಿಟ್ಟ.

ದೇವಾಲಯದಲ್ಲಿರುವುದು ಈ ಪ್ರತಿಮೆಯೇ. ಹಿಂತಿರುಗಿ ನೋಡದ ತನ್ನ ಭಕ್ತನಿಗಾಗಿ ಕಾಯುತ್ತಾ ಇಟ್ಟಿಗೆಯ ಮೇಲೆ ಕೃಷ್ಣ ನಿಂತಿದ್ದಾನೆ! ಇದೊಂದು ಅಸಾಧಾರಣ ಕಥೆ .... ಇಂತಹ ಪರಿತ್ಯಾಗದ ಆಳವಾದ ಕ್ಷಣಗಳಲ್ಲಿ - ದೇವರನ್ನು ನೋಡುವ ಬಯಕೆಯೂ ಇಲ್ಲ - ಭಕ್ತನಿಗೆ ಜ್ಞಾನೋದಯವಾಯಿತು.[38]

ರಾಮಕೃಷ್ಣರು ದೇಹತ್ಯಾಗಮಾಡಿದರು. ಭಾರತದಲ್ಲಿ ಗಂಡ ಸತ್ತ ಕೂಡಲೇ ಹೆಂಡತಿಯಾದವಳು ತನ್ನ ಬಳೆಗಳನ್ನು ಒಡೆದುಕೊಳ್ಳಬೇಕು, ತನ್ನೆಲ್ಲ ಆಭರಣಗಳನ್ನು ಕಳಚಬೇಕು, ತಲೆಕೂದಲನ್ನು ಬೋಳಿಸಬೇಕು ಹಾಗೂ ಯಾವತ್ತೂ ಬಿಳಿ ಸೀರೆಯನ್ನೇ ಉಡಬೇಕು. ಜೀವನ ಪರ್ಯಂತ ಸಂತಾಪ, ಜೀವನವಿಡೀ ಹತಾಶೆ ಹಾಗೂ ಜೀವನವಿಡೀ ಏಕಾಂಗಿತನ. ಇದು ನಡೆದದ್ದು ಕಳೆದ ಶತಮಾನದಲ್ಲಿ - ರಾಮಕೃಷ್ಣರು ದೇಹತ್ಯಾಗಮಾಡಿದಾಗ ಅವರ ಪತ್ನಿ ಶಾರದಾದೇವಿ ಹತ್ತು ಸಾವಿರ ವರ್ಷಗಳ ಈ ಸಂಪ್ರದಾಯವನ್ನು ಅನುಸರಿಸಲು ನಿರಾಕರಿಸಿದರು.

ಆಕೆಯ ವಾದ ಇದಾಗಿತ್ತು - ''ರಾಮಕೃಷ್ಣರು ಸಾಯುವುದಕ್ಕೆ ಸಾಧ್ಯವೇ ಇಲ್ಲ, ಕನಿಷ್ಠ ನನ್ನ ಪಾಲಿಗೆ. ಅವರು ನಿಮ್ಮ ಪಾಲಿಗೆ ಸತ್ತಿರಬಹುದು, ನನ್ನ ಮಟ್ಟಿಗಂತೂ ಅಲ್ಲ. ಅವರ ಶರೀರ ನನಗೆ ಅನೇಕ ವರ್ಷಗಳ ಹಿಂದೆಯೇ ಅಪ್ರಸ್ತುತವಾಗಿತ್ತು. ಅವರ ಸಾನ್ನಿಧ್ಯ, ಉಪಸ್ಥಿತಿ, ಅನುಭವ ನನಗೆ ವಾಸ್ತವ, ಅವು ನನ್ನೊಂದಿಗಿವೆ. ಅವು ನನ್ನನ್ನು ತೊರೆಯದ ತನಕ, ನಾನು ಬಳೆಗಳನ್ನು ಒಡೆಯುವುದಿಲ್ಲ, ತಲೆಕೂದಲನ್ನು ಬೋಳಿಸುವುದಿಲ್ಲ. ನನ್ನ ಪಾಲಿಗೆ ರಾಮಕೃಷ್ಣ ಇನ್ನೂ ಜೀವಂತವಾಗಿದ್ದಾರೆ.''

ಆಕೆಗೆ ಹುಚ್ಚು ಹಿಡಿದಿದೆಯೆಂದು ಜನರು ಭಾವಿಸಿದರು. ''ಪತಿಯ ಸಾವಿನ ಆಘಾತ ಆಕೆಯಿಂದ ತಡೆದುಕೊಳ್ಳಲಾಗಲಿಲ್ಲ ಎನಿಸುತ್ತದೆ - ಒಂದೇ ಒಂದು ಹನಿ ಕಣ್ಣೀರನ್ನೂ ಹಾಕಲಿಲ್ಲ.'' ರಾಮಕೃಷ್ಣರ ಪಾರ್ಥಿವ ಶರೀರವನ್ನು ಅಂತ್ಯಸಂಸ್ಕಾರಕ್ಕೆ ತೆಗೆದುಕೊಂಡು ಹೋದಾಗಲೂ, ಆಕೆ ಮನೆಯಿಂದ ಹೊರಗೆ ಬರಲಿಲ್ಲ. ಆಕೆ ತನ್ನ ಪತಿಗಾಗಿ ಊಟವನ್ನು ಸಿದ್ಧಪಡಿಸುತ್ತಿದ್ದರು. ಗಂಡ ಸತ್ತಿದ್ದಾರೆ. ಅಂತ್ಯಸಂಸ್ಕಾರಕ್ಕಾಗಿ ಶವವನ್ನು ಸ್ಮಶಾನಕ್ಕೆ ಕೊಂಡೊಯ್ಯಲಾಗಿದೆ. ಪತ್ನಿಯಾದವಳು ಪತಿಗೆ ಊಟವನ್ನು ಸಿದ್ಧಪಡಿಸುತ್ತಿದ್ದಾಳೆ.

ಯಾರೋ ಆಕೆಗೆ ಹೇಳಿದರು, ''ಶಾರದಾ, ಇದೇನು? ನಿನಗೆ ಹುಚ್ಚು ಹಿಡಿದಿದೆಯೇ? ಅವರು ನಿನ್ನ ಪತಿಯ ದೇಹವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಿದ್ದಾರೆ.''

ಇದನ್ನು ಕೇಳಿ ಶಾರದಾ ನಕ್ಕರು. ''ಅವರು ನನ್ನ ಪತಿಯ ಶವವನ್ನು ಕೊಂಡೊಯ್ದಿದ್ದಾರೆ. ಆದರೆ ನನ್ನಲ್ಲಿರುವ ಅವರ ಉಪಸ್ಥಿತಿಯನ್ನು ಕೊಂಡೊಯ್ಯಲಾರರು. ಅವರ ಉಪಸ್ಥಿತಿ ನನ್ನಲ್ಲಿಯೇ ಇದೆ. ನಾನು ಹುಚ್ಚಿಯಲ್ಲ. ನಿಜವಾಗಿ ಹೇಳುವುದಾದರೆ, ಅವರು ಸಾಯುವ ಮೂಲಕ ಅವರ ಕಲಿಕೆ ಹಾಗೂ ಉಪದೇಶ ನನ್ನ ಹೃದಯದೊಳಗೆ ಇಳಿದಿದೆಯೇ ಇಲ್ಲವೇ ಎಂಬುದನ್ನು ಅರಿಯಲು ಅವಕಾಶ ಮಾಡಿಕೊಟ್ಟಿದ್ದಾರೆ,'' ಎಂದರು.

ಇದಾದ ಅನೇಕ ವರ್ಷಗಳ ಕಾಲ ಶಾರದಾ ಬದುಕಿದ್ದರು. ಎಂದಿನಂತೆಯೇ ದಿನಕ್ಕೆರಡು ಸಲ ಊಟ ಸಿದ್ಧ ಪಡಿಸುತ್ತಿದ್ದರು. ಗಂಡ ಊಟ ಮಾಡುತ್ತಿರುವಾಗ ಹೆಂಡತಿಯಾದವಳು ಬಡಿಸುತ್ತಾ, ಗಾಳಿ ಬೀಸುವ ಹಿಂದೂ ಪತ್ನಿಯಂತೆ, ಖಾಲಿ ಮಣೆಗೆ ಬೀಸಣಿಕೆಯಿಂದ ಗಾಳಿ ಹಾಕುತ್ತಿದ್ದರು. ರಾಮಕೃಷ್ಣರಿಗಾಗಿ ಬಟ್ಟಲಲ್ಲಿ

ಬಡಿಸುತ್ತಿದ್ದರು. ರಾಮಕೃಷ್ಣ ಮಾತ್ರ ಅಲ್ಲಿರಲಿಲ್ಲ. ಆದರೆ ಆಕೆಯ ಪಾಲಿಗೆ ಮಾತ್ರ ಅವರು ಜೀವಂತವಾಗಿದ್ದರು. ಅಕ್ಕಪಕ್ಕದ ಮನೆಯಲ್ಲಿ ನಡೆದ ಘಟನೆಗಳ ಬಗ್ಗೆ ಗಂಡನಿಗೆ ಸಮಾಚಾರ ತಿಳಿಸುತ್ತಿದ್ದರು. ಗಂಡನೊಂದಿಗೆ ಈಗಲೂ ಹರಟುತ್ತಿದ್ದರು. ಸಂಜೆಯಾಯಿತೆಂದರೆ ಊಟ ಸಿದ್ಧಪಡಿಸುತ್ತಿದ್ದರು. ರಾತ್ರಿ ಗಂಡನಿಗೆ ಹಾಸಿಗೆಯನ್ನು ಹಾಸಿ, ಸೊಳ್ಳೆಗಳು ಕಾಡದಂತೆ ಸೊಳ್ಳೆ ಪರದೆಯನ್ನೂ ಕಟ್ಟುತ್ತಿದ್ದರು. ಅನಂತರ ಗಂಡನ ಪಾದಕ್ಕೆ - ಅದು ಆಕೆ ಸದೃಶವಾದುದು, ಬೇರೆಯಾರಿಗೂ ಅಲ್ಲ - ನಮಸ್ಕರಿಸಿ, ದೀಪವನ್ನು ಆರಿಸಿ, ಮಲಗುತ್ತಿದ್ದರು.

ಬೆಳಗಾಯಿತೆಂದರೆ, ಮೊದಲು ಗಂಡನನ್ನು ಏಳಿಸುವಂತೆ ಎಬ್ಬಿಸುತ್ತಿದ್ದರು. ಆಗ ಹೇಳುತ್ತಿದ್ದರು, ''ಪರಮಹಂಸದೇವ, ಏಳಿರಿ. ಸಮಯವಾಯಿತು. ನಿಮ್ಮ ಶಿಷ್ಯರು ಸೇರತೊಡಗಿದ್ದಾರೆ. ನೀವು ತಯಾರಾಗಬೇಕು - ಸ್ನಾನಮಾಡಿ, ಅನಂತರ ಚಹ ಕುಡಿಯುವಿರಂತೆ.''

ಕ್ರಮೇಣ, ಬುದ್ಧಿಗಿಂತ ಭಾವಪ್ರಧಾನರಾದ ಜನರು, ಶಾರದಾದೇವಿಯಲ್ಲಿ ಹುಚ್ಚಿನ ಯಾವುದೇ ಲಕ್ಷಣಗಳು ಇಲ್ಲದಿರುವುದನ್ನು ಕಂಡುಕೊಂಡರು. ರಾಮಕೃಷ್ಣರು ಇದ್ದಾಗ ಜನರು ಈಕೆಯನ್ನು ಅಷ್ಟಾಗಿ ಪರಿಗಣಿಸಿರಲಿಲ್ಲ; ಆಕೆ ಯಾವತ್ತೂ ಅವರ ಹಿಂದೆಯೇ ಇರುತ್ತಿದ್ದರು.

ಆದರೆ ಈಗ ರಾಮಕೃಷ್ಣರಿಲ್ಲ. ಈಕೆ ಅವರ ಸಂಗಾತಿ. ಜನರು ನಿಧಾನವಾಗಿ ಆಕೆಯ ಸಲಹೆ, ಉಪದೇಶಗಳನ್ನು ಕೇಳಲು ಆರಂಭಿಸಿದರು. ಅವರ ಸಲಹೆ, ಉಪದೇಶ ಎಷ್ಟೊಂದು ಕರಾರುವಕ್ಕಾಗಿ ಇರುತ್ತಿತ್ತೆಂದರೆ, ಆಕೆಯನ್ನು ಹುಚ್ಚಿ ಎಂದು ಪರಿಗಣಿಸಲು ಸಾಧ್ಯವೇ ಇರಲಿಲ್ಲ.

ತಮ್ಮ ಕೊನೆಯ ಉಸಿರಿರುವವರೆಗೂ ಶಾರದಾದೇವಿ, ರಾಮಕೃಷ್ಣರ ಸಾನ್ನಿಧ್ಯ ಹಾಗೂ ಉಪಸ್ಥಿತಿಯನ್ನು ಅನುಭವಿಸಿದರು. ಸಾಯುವ ಮೊದಲು ...... ಅದೇ ಮೊದಲ ಬಾರಿಗೆ ಗೋಳಿಟ್ಟರು, ಅತ್ತರು. ಯಾರೋ ಕೇಳಿದರು, ''ರಾಮಕೃಷ್ಣರು ನಿಧನರಾದಾಗ ನೀವು ಅಳಲಿಲ್ಲ, ಕಣ್ಣೀರುಹಾಕಲಿಲ್ಲ. ಈಗೇಕೆ ಅಳುತ್ತಲಿರುವಿರಿ?'' ಆಗ ಆಕೆ ಹೇಳಿದರು, ''ನಾನೀಗ ಏಕೆ ರೋಧಿಸುತ್ತಿದ್ದೇನೆಂದರೆ ಇನ್ನು ರಾಮಕೃಷ್ಣರನ್ನು ಯಾರು ನೋಡಿಕೊಳ್ಳುತ್ತಾರೆ? ಯಾರು ಅವರಿಗೆ ಊಟ-ತಿಂಡಿ ಸಿದ್ಧಪಡಿಸಿ ಕೊಡುತ್ತಾರೆ? ಅವರಿಗೆ ಏನು ಇಷ್ಟವೆಂದು ಯಾರಿಗೂ ಗೊತ್ತಿಲ್ಲ, ನನ್ನ ಹೊರತಾಗಿ. ಅವರಿಗೆ ಹಾಸಿಗೆ ಹಾಸಿಕೊಡುವವರಾರು? ಆ ಜಾಗ ಸೊಳ್ಳೆಗಳಿಂದ ತುಂಬಿಹೋಗಿದೆ. ಸೊಳ್ಳೆಪರದೆಯನ್ನು ಸರಿಯಾಗಿ ಹಾಕದಿದ್ದರೆ, ಸೊಳ್ಳೆ ಒಳಹೊಕ್ಕು ರಾಮಕೃಷ್ಣರಿಗೆ ಇಡೀ ರಾತ್ರಿ ಬಲು ಕಷ್ಟವಾಗುತ್ತದೆ. ಈಗ ನಾನು ಸಾಯುತ್ತಿರುವೆ. ನಾನಿರುವುದಿಲ್ಲ ಇಲ್ಲಿ. ಅವರು ಸತ್ತಿದ್ದಾರೆಂದು ನೀವೆಲ್ಲ ತಿಳಿದಿರುವುದರಿಂದ ನಿಮ್ಮನ್ನು ನಾನು ನಂಬುವಂತಿಲ್ಲ.''

ಮೌನ ಹಾಗೂ ಎದುರುನೋಡುವ ಹೃದಯದ ತುಡಿತವಿದು. ಸಾವಾಗಲಿ, ದೂರವಾಗಲಿ ಯಾವುದೇ ವ್ಯತ್ಯಾಸವನ್ನು ಉಂಟುಮಾಡುವುದಿಲ್ಲ.[39]

ಬುದ್ಧರಿಗೆ ಜ್ಞಾನೋದಯವಾದಾಗ ಹೂ ಅರಳುವ ಋತುವಲ್ಲದಿದ್ದರೂ ಮರಗಳು ಹೂ ಬಿಟ್ಟವೆಂದು ಹೇಳಲ್ಪಟ್ಟಿದೆ. ಮರಗಳಲ್ಲಿ ಹೂ ಅರಳಿರಲಿಕ್ಕಿಲ್ಲ. ಇದು ವೈಜ್ಞಾನಿಕ ಹೇಳಿಕೆ ಅಲ್ಲದಿರಬಹುದು. ಯಾವುದೇ ಹೇಳಿಕೆ ಸತ್ಯ ಆಗಿರಲು ವೈಜ್ಞಾನಿಕವಾಗಿ ಇಲ್ಲವೇ ಐತಿಹಾಸಿಕವಾಗಿ ಸತ್ಯವಾಗಿರಬೇಕಿಲ್ಲ. ಸತ್ಯ ಬಹಳಷ್ಟು ಸ್ತರಗಳದ್ದು. ಕಾವ್ಯಾತ್ಮಕ ಸತ್ಯಕ್ಕೆ ತನ್ನದೇ ಆದ ವಿಶಿಷ್ಟ ಗುಣವೊಂದಿದೆ. ಇದು ಐತಿಹಾಸಿಕವೂ ಅಲ್ಲ ವೈಜ್ಞಾನಿಕವೂ ಅಲ್ಲ. ಆದರೆ ಇದು ಎಲ್ಲ ರೀತಿಯಿಂದಲೂ ಸತ್ಯ. ಇದು ಕಾವ್ಯಾತ್ಮಕ ಸತ್ಯ. ಯಾವತ್ತೂ ಕಾವ್ಯಾತ್ಮಕ ಸತ್ಯ, ವೈಜ್ಞಾನಿಕ ಸತ್ಯಕ್ಕಿಂತ ಮೇಲಿನದಾಗಿರುತ್ತದೆ. ಏಕೆಂದರೆ ವೈಜ್ಞಾನಿಕ ಸತ್ಯ ಸದಾ ಬದಲಾಗುತ್ತಲಿರುತ್ತದೆ. ಆದರೆ ಕಾವ್ಯಾತ್ಮಕ ಸತ್ಯ ಶಾಶ್ವತ. ವೈಜ್ಞಾನಿಕ ಸತ್ಯ ಹೆಚ್ಚು ಕಮ್ಮಿ ನಿಜಾಂಶ. ಕಾವ್ಯಾತ್ಮಕ ಸತ್ಯ ನಿಜಾಂಶ ಅಲ್ಲ ಆದರೆ ಅರ್ಥಗರ್ಭಿತ, ಮಿಥ್ಯೆ.[40]

ಮಹಾವೀರರು ಬೆತ್ತಲಾಗಿರುತ್ತಿದ್ದರು. ಮೈಮೇಲೆ ಬಟ್ಟೆಗಳಿರುತ್ತಿರಲಿಲ್ಲ. ಕಾಲಿಗೆ ಚಪ್ಪಲಿಗಳಿರುತ್ತಿರಲಿಲ್ಲ. ಒಂದು ಊರಿನಿಂದ ಮತ್ತೊಂದಕ್ಕೆ ಹೋಗುವಾಗ ದಾರಿಗಳಲ್ಲಿ ಪಾದಗಳನ್ನು ಕತ್ತರಿಸುವಂತಹ ಮುಳ್ಳುಗಳು ಇರುತ್ತಿದ್ದವು. ಆದರೆ ಈ ಮುಳ್ಳುಗಳು ಪಕ್ಕಕ್ಕೆ ಸರಿದು ಮಹಾವೀರರ ಪಾದಗಳನ್ನು ರಕ್ಷಿಸುತ್ತಿದ್ದವಂತೆ. ಮುಳ್ಳುಗಳು ಹೀಗೆ ಮಾಡಬೇಕಿರಲಿಲ್ಲ. ಮುಳ್ಳುಗಳಿಂದ ಯಾರೂ ಏನನ್ನೂ ನಿರೀಕ್ಷಿಸುವುದಿಲ್ಲ. ಕೆಲವೊಮ್ಮೆ ಮನುಷ್ಯನಿಂದಲೂ ಕೂಡ. ಆದರೂ ಕಲ್ಪನೆ ಮಾತ್ರ ಅರ್ಥವತ್ತಾದ್ದು. ಇದು ಒಂದು ಸಂಗತಿಯನ್ನು ಸ್ಪಷ್ಟಪಡಿಸುತ್ತದೆ: ನಾವು ಪರಸ್ಪರ ಸಂಬಂಧಿಗಳು. ಮುಳ್ಳುಗಳು ಕೂಡ ನಮ್ಮ ಭಾಗವೇ. ಹಾಗೆಯೇ ನಾವು ಕೂಡ ಮುಳ್ಳುಗಳ ಭಾಗವೇ. ಹೂಗಳು ಸಹ ನಮ್ಮ ಭಾಗ ಮತ್ತು ನಾವು ಸಹ ಹೂವುಗಳ ಭಾಗ. ನಾವೆಲ್ಲ ಒಂದೇ ಕುಟುಂಬಕ್ಕೆ ಸೇರಿದವರು. ನಾವು ಅಪರಿಚಿತರಲ್ಲ, ಪ್ರತ್ಯೇಕ ದ್ವೀಪಗಳಲ್ಲ - ಪರಸ್ಪರ ಬೆಸೆದುಕೊಂಡ ವಿಶಾಲ ಭೂಖಂಡ, ಪರಸ್ಪರ ಸಂಬಂಧಿತ ಅಸ್ತಿತ್ವಗಳು .[41]

ಪೂರ್ವದ ಸುಗಂಧ

ಭಾರತದ ಇಡೀ
ಕಥೆಯು
ಅಹಿಂಸೆಯದ್ದು. ಈ
ಅರ್ಥದಲ್ಲಿ
ಪ್ರಪಂಚದ ಮತ್ತ್ಯಾವ
ದೇಶವೂ
ಭಾರತದಷ್ಟು
ಸ್ತ್ರೈಣವಲ್ಲ.

ಪಾಂಡಿತ್ಯ, ವಿದ್ವತ್ತು ಸಾಕು. ಪಾಂಡಿತ್ಯವೆಂಬುದು ಕೇವಲ ಸಾಮಾನ್ಯ ಅಥವಾ ಕೆಳ ಮಟ್ಟದ ಯೋಗ್ಯತೆ; ಆಧುನಿಕ ವಿಜ್ಞಾನದೊಂದಿಗೆ ಆಧ್ಯಾತ್ಮಯೋಗವನ್ನು ಪಾಂಡಿತ್ಯ ಕೂಡಿಸಲಾರದು, ಬೆಸೆಯಲಾರದು. ನಮಗೆ ಬುದ್ಧರು ಬೇಕು, ಬುದ್ಧನ ಬಗ್ಗೆ ಗೊತ್ತಿರುವವರು ಬೇಡ. ನಮಗೆ ಧ್ಯಾನಿಗಳು, ಪ್ರೇಮಿಗಳು, ಅನುಭವಿಕರು ಬೇಕು. ಕಾಲಮಾಗಿ ದಿನ ಕೂಡಿ ಬಂದಾಗ, ವಿಜ್ಞಾನ ಮತ್ತು ಧರ್ಮ ಸಂಧಿಸಿ ಬೆರೆತಾಗ, ಅವೆರಡನ್ನೂ ಬೆಸೆಯಬಹುದು. ಮಾನವ ಇತಿಹಾಸದಲ್ಲಿ ಆ ಕ್ಷಣ ಅದ್ಭುತವಾದುದು. ಆ ದಿನ ಸ್ಮರಣೀಯ, ಅನುಪಮ, ಅಸಾಮಾನ್ಯ. ಏಕೆಂದರೆ ಅಂದಿನಿಂದ ಮಾನವತೆಯ ಸ್ಕಿಜೋಫ್ರೇನಿಯಾ, ದ್ವಂದ್ವ ವ್ಯಕ್ತಿತ್ವದ ಮಾನಸಿಕ ಖಾಯಿಲೆ ಈ ಜಗತ್ತಿನಿಂದ ಕಣ್ಮರೆಯಾಗುವುದು. ಆಗ ನಮಗೆ ವಿಜ್ಞಾನ ಮತ್ತು ಧರ್ಮಗಳೆರಡರ ಅಗತ್ಯವಿರುವುದಿಲ್ಲ. ಒಂದಿದ್ದರೆ ಸಾಕಾಗುವುದು.


ಆಗ ಬಾಹ್ಯ ಪ್ರಪಂಚಕ್ಕೆ ವೈಜ್ಞಾನಿಕ ಕ್ರಮ, ಆಂತರಿಕ ಪ್ರಪಂಚಕ್ಕೆ ಧಾರ್ಮಿಕ ಕ್ರಮವನ್ನು ಬಳಸಬಹುದು. ''ಮಿಸ್ಟಿಸಿಸಮ್'' ಎಂಬುದು ಸುಂದರ ಪದ. ವಿಜ್ಞಾನ ಬಾಹ್ಯ ರಹಸ್ಯಕ್ಕಾಗಿ ಹುಡುಕಾಡಿದರೆ, ಧರ್ಮ ಆಂತರಿಕ ರಹಸ್ಯಕ್ಕಾಗಿ ಹುಡುಕಾಡುತ್ತದೆ. ಅವೆರಡೂ ಮಿಸ್ಟಿಸಿಸಮ್‌ನ ಎರಡು ರೆಕ್ಕೆಗಳಿದ್ದ ಹಾಗೆ. ಮಿಸ್ಟಿಸಿಸಮ್ ಇವೆರಡನ್ನೂ ಬೆಸೆಯುತ್ತದೆ, ಸಂಯೋಜಿಸುತ್ತದೆ.

ಈ ಸಂಯೋಜನೆಯಿಂದ ಮತ್ತಷ್ಟು ಸಂಯೋಜನೆಗಳು ಸಂಭವಿಸುತ್ತವೆ, ತಮ್ಮಷ್ಟಕ್ಕೆ ತಾವೆ. ಉದಾಹರಣೆಗೆ ವಿಜ್ಞಾನ ಮತ್ತು ಧರ್ಮ ಮಿಸ್ಟಿಸಿಸಮ್‌ನಲ್ಲಿ ಸಂಧಿಸಿದರೆ ಪೂರ್ವ ಮತ್ತು ಪಶ್ಚಿಮ ಭೇಟಿಯಾಗುತ್ತವೆ, ಗಂಡು ಮತ್ತು ಹೆಣ್ಣು ಭೇಟಿಯಾಗುತ್ತಾರೆ. ಪದ್ಯ ಮತ್ತು ಗದ್ಯ ಭೇಟಿಯಾಗುತ್ತವೆ, ತರ್ಕ ಮತ್ತು ಪ್ರೇಮ ಭೇಟಿಯಾಗುತ್ತವೆ. ನಂತರ ಪದರದ ಮೇಲೆ ಪದರ .... ಭೇಟಿಗಳು ಸಂಭವಿಸುತ್ತಲೇ ಇರುತ್ತವೆ. ಒಮ್ಮೆ ಇದು ಸಂಭವಿಸಿದರೆ, ಹೆಚ್ಚು ಪರಿಪೂರ್ಣ ಮತ್ತು ಸಂತುಲಿತ ವ್ಯಕ್ತಿಗಳನ್ನು ಕಾಣಬಹುದು.[42]

ಜಗತ್ತಿನ ಮಹಾನ್ ಯೋಗಿಗಳೆಲ್ಲರೂ ಮಹಾನ್ ತರ್ಕ ಪ್ರವೀಣರು ಆಗಿದ್ದರು. ಶಂಕರ, ನಾಗಾರ್ಜುನ - ಇವರೆಲ್ಲರೂ ಮಹಾನ್ ತರ್ಕ ಪ್ರವೀಣರು. ಆದರೂ ಅವರು ಅತಾರ್ಕಿಕರಾಗಿದ್ದರು. ಸಾಧ್ಯವಿದ್ದನಕ ಅವರು ತರ್ಕದ ಜೊತೆಗೆ ಸಾಗುತ್ತಿದ್ದರು ಹಾಗೂ ಹಠಾತ್ತನೆ ತಮ್ಮ ನಿಲುವಿನಲ್ಲಿ ಬದಲಾವಣೆ ತಾಳುತ್ತಿದ್ದರು - ಅವರು ಹೇಳುತ್ತಿದ್ದರು, ''ಈ ಹಂತದವರೆಗೂ ತರ್ಕ ಸಹಾಯಕ. ಇದರ ನಂತರ ತರ್ಕ ಕೆಲಸಕ್ಕೆಬಾರದು.''

ಶಂಕರರ ಜೊತೆ ವಾದ ಮಾಡಬಯಸಿದರೆ, ನೀವು ಸೋಲುವುದು ನಿಶ್ಚಿತ. ಶಂಕರ ದೇಶಾದ್ಯಂತ ಸಂಚರಿಸಿದರು ಹಾಗೂ ಸಾವಿರಾರು ವಿದ್ವಾಂಸರನ್ನು ವಾದದಲ್ಲಿ ಸೋಲಿಸಿದವರು. ಊರೂರು ತಿರುಗುವುದು ಮತ್ತು ವಿದ್ವಾಂಸರನ್ನು ಸೋಲಿಸುವುದು ಅವರ ಜೀವನದ ಮುಖ್ಯ ಕೆಲಸ. ಆದರೂ ಅವರು ಅತಾರ್ಕಿಕರಾಗಿದ್ದರು. ಬೆಳಗ್ಗೆ ಶಂಕರರು ಹೇಗೆ ವಾದಿಸುತ್ತಿದ್ದರೆಂದರೆ ಮಹಾ ತರ್ಕಪಂಡಿತರೆಲ್ಲಾ ಬಾಲಿಶರಾಗಿ ಕಾಣುತ್ತಿದ್ದರು. ಸಂಜೆಯಾಗುತ್ತಿದ್ದಂತೆ ಶಂಕರರು ದೇವಾಲಯದಲ್ಲಿ ಪ್ರಾರ್ಥಿಸುತ್ತಾ ಕುಣಿಯುತ್ತಿದ್ದರು, ಮಗುವಿನಂತೆ ಅಳುತ್ತಿದ್ದರು. ನಂಬಲಸಾಧ್ಯ.

ಅವರು ಬಹಳ ಸುಂದರವಾದ ಪ್ರಾರ್ಥನೆಯನ್ನು ರಚಿಸಿದ್ದಾರೆ. ಯಾರೋ ಅವರನ್ನು, ''ಇಷ್ಟೊಂದು ಸುಂದರವಾದ ಪ್ರಾರ್ಥನೆಗಳನ್ನು ಹೇಗೆ ರಚಿಸುತ್ತೀರಿ? ನೀವೋ ಮಹಾ ಮೇಧಾವಿ ತರ್ಕ ಪಂಡಿತರು. ಅದು ಹೇಗೆ ಭಾವನಾತ್ಮಕರಾಗುತ್ತೀರಿ ಮತ್ತು ಒಂದೇ ಸಮನೆ ರೋದಿಸುತ್ತಾ ಕಣ್ಣೀರುಗರೆಯುತ್ತೀರಿ?'' ಎಂದು ಕೇಳಿದರು. ಶಂಕರರು ಹೇಳಿದರು, ''ನನ್ನ ಅಂತರ್‌ದೃಷ್ಟಿಯು ನನ್ನ ತರ್ಕದ ವಿರುದ್ಧವಲ್ಲ. ನನ್ನ ಅಂತರ್‌ದೃಷ್ಟಿ ತರ್ಕವನ್ನು ಮೀರಿದ್ದು. ನನ್ನ ತರ್ಕ ಕೆಲವು ಕಾರ್ಯಗಳನ್ನು ಪೂರೈಸಬೇಕಾಗಿದೆ. ನಾನು ತುಂಬು ಹೃದಯದಿಂದ ಅದರೊಟ್ಟಿಗೆ ಹೋಗುತ್ತೇನೆ. ಅನಂತರ ಒಂದು ಸಂದರ್ಭ ಬರುತ್ತದೆ, ಅದಕ್ಕೂ ಮುಂದಕ್ಕೆ ಹೋಗಲಾಗುವುದಿಲ್ಲ ..... ಇದರಾಚೆಗೆ ನಾನು ಹೋಗಬೇಕಾಗುವುದು.''[43]



ಹವೇಲಿ, ಜೈಸಲ್ಮೇರ್, ರಾಜಾಸ್ಥಾನ್

ರಬೀಂದ್ರನಾಥ ಟಾಗೂರರ ಜೀವನದಲ್ಲಿ ನಡೆದ ಒಂದು ಘಟನೆಯನ್ನು ಹೇಳುತ್ತೇನೆ. ಟಾಗೂರರು ಯಾವಾಗಾದರೊಮ್ಮೆ ದಟ್ಟಾರಣ್ಯ ಆವೃತವಾಗಿರುವ ಸುಂದರ ನದಿಯಲ್ಲಿ ತಿಂಗಳುಗಟ್ಟಲೆ ತಮ್ಮ ಚಿಕ್ಕದೊಂದು ದೋಣಿಮನೆ(ಹೌಸ್‌ಬೋಟ್)ಯಲ್ಲಿ ಏಕಾಂಗಿಯಾಗಿ ಅಪ್ಪಟ ಪ್ರಶಾಂತ ವಾತಾವರಣದಲ್ಲಿ ತಂಗಿರುತ್ತಿದ್ದರು.

ಒಮ್ಮೆ ಹುಣ್ಣಿಮೆಯ ಬೆಳದಿಂಗಳ ರಾತ್ರಿಯಲ್ಲಿ, ಸೌಂದರ್ಯೋಪಾಸನಶಾಸ್ತ್ರಕ್ಕೆ ಕ್ರೋಸ್ ನೀಡಿದ ಅಪೂರ್ವ ಕೊಡುಗೆಯಾದ ಪುಸ್ತಕ ಒಂದನ್ನು ಓದುತ್ತಿದ್ದರು. ಆ ಮಧ್ಯರಾತ್ರಿ, ಕ್ರೋಸ್‌ನ ಗಡುಸಾದ ವಾದವನ್ನು ಓದಿ ಸುಸ್ತಾಗಿ ಪುಸ್ತಕವನ್ನು ಮುಚ್ಚಿ, ಮೋಂಬತ್ತಿಯನ್ನು ನಂದಿಸಿದರು. ಅವರು ನಿದ್ರಿಸಬೇಕೆನ್ನುವಷ್ಟರಲ್ಲಿ ಪವಾಡವೊಂದು ಜರುಗಿತು. ಮೋಂಬತ್ತಿಯ ಸಣ್ಣ ಜ್ವಾಲೆ ನಂದಿಹೋದಬಳಿಕ, ದೋಣಿಮನೆಯೊಳಗೆಲ್ಲಾ ಬೆಳದಿಂಗಳ ಕಾಂತಿ ಹರಡಿಕೊಂಡಿತು. ಒಂದು ಕ್ಷಣ ರವೀಂದ್ರರು ಮೌನಿಯಾದರು. ಅದೊಂದು ಪವಿತ್ರ ಅನುಭವ. ಅವರು ಕೋಣೆಯೊಳಗಿಂದ ಹೊರಬಂದರು. ನಿಧಾನವಾಗಿ ಹರಿವ ನದಿ ಹಾಗೂ ಏಕಾಂತದಲ್ಲಿ ತೊನೆಯುವ ಮರಗಳ ಮಧ್ಯೆ ಬೆಳದಿಂಗಳ ಚಂದ್ರ ಸುಂದರವಾಗಿ ಕಾಣುತ್ತಿದ್ದ. ಎಲ್ಲೆಡೆ ದಿವ್ಯಮೌನ ನೆಲೆಸಿತ್ತು. ಮರುದಿನ ಮುಂಜಾನೆ ಅವರು ತಮ್ಮ ದಿನಚರಿಯಲ್ಲಿ ಬರೆದರು - ''ನನ್ನ ಸುತ್ತಲೂ ಸೌಂದರ್ಯವಿತ್ತು. ಆದರೆ ಸಣ್ಣದೊಂದು ಮೋಂಬತ್ತಿ ಅದಕ್ಕೆ ಅಡ್ಡಬಂದಿತ್ತು. ಮೋಂಬತ್ತಿಯ ಬೆಳಕಿನಿಂದಾಗಿ, ಚಂದ್ರನ ಬೆಳಕು ಮನೆಯೊಳಗೆ ಪ್ರವೇಶಿಸಲಿಲ್ಲ.''

ನಿರ್ವಾಣದ ನಿಜವಾದ ಅರ್ಥವೇ ಇದು. ನಿಮ್ಮ ಅಹಂನ ಸಣ್ಣಜ್ವಾಲೆ, ನಿಮ್ಮ ಮನಸ್ಸಿನ ಸಣ್ಣಜ್ವಾಲೆ ಹಾಗೂ ಅದರ ಪ್ರಜ್ಞೆ, ಇಡೀ ವಿಶ್ವ ನಿಮ್ಮೊಳಗೆ ಬರುವುದನ್ನು ತಡೆಯುತ್ತದೆ. ನಿರ್ವಾಣ ಪದದ ಅರ್ಥವೇ ಇದು - ಮೋಂಬತ್ತಿಯನ್ನು ನಂದಿಸಿ, ಎಲ್ಲೆಡೆಯಿಂದ ಇಡೀ ವಿಶ್ವವೇ ತೂರಿ ಬರಲಿ. ನೀವು ಏನನ್ನೂ ಕಳೆದುಕೊಳ್ಳಲಾರಿರಿ. ನೀವು ಮೊಟ್ಟಮೊದಲಬಾರಿಗೆ ಸೌಂದರ್ಯದ ಅಕ್ಷಯ ಸಂಪತ್ತು, ಸದ್ಗುಣ, ಸತ್ಯವನ್ನು ಕಾಣುತ್ತೀರಿ. - ಆತ್ಮಮೂಲ್ಯವಾದುದೆಲ್ಲವನ್ನೂ. [44]

ಹದಿನಾಲ್ಕುನೂರು ವರ್ಷಗಳ ಹಿಂದೆ ಪೂರ್ವಜರಾಗಿದ್ದ ಆದಿ ಶಂಕರಾಚಾರ್ಯ ತಮ್ಮ ಮೂವತ್ತೂರನೆಯ ವರ್ಷದಲ್ಲಿ ನಿಧನರಾದರು. ಅವರು ಸಂನ್ಯಾಸದ ನೂತನ ಸಂಪ್ರದಾಯವನ್ನು ಆರಂಭಿಸಿದರು. ನಾಲ್ಕು ದಿಕ್ಕುಗಳಲ್ಲಿ ನಾಲ್ಕು ದೇವಾಲಯಗಳನ್ನು ಕಟ್ಟಿ, ಒಂದೊಂದು ದೇವಾಲಯಕ್ಕೆ ಒಬ್ಬಶಂಕರಾಚಾರ್ಯರನ್ನು ನೇಮಿಸಿದರು. ನನಗೆ ನೆನಪಿರುವಂತೆ ಅವರು ದೇಶದೆಲ್ಲೆಡೆ ಸಂಚರಿಸಿ ಪ್ರಸಿದ್ಧ ತತ್ವಜ್ಞಾನಿಗಳನ್ನು ಸೋಲಿಸಿದರು. ಅದು ಸಂಪೂರ್ಣ ಭಿನ್ನವಾದ ವಾತಾವರಣದಲ್ಲಿ.

ಅದೇ ಸಮಯದಲ್ಲಿ ಮಂಡನ ಮಿಶ್ರ ಎಂಬ ಮಹಾ ತತ್ವಜ್ಞಾನಿಯೊಬ್ಬನಿದ್ದರು. ಅವರ ಸ್ಮರಣಾರ್ಥ ಅವರ ಹೆಸರಿನ ಪಟ್ಟಣ ಇಂದಿಗೂ ಇದೆ ......

ಶಂಕರಾಚಾರ್ಯರು ಮಂಡಲವನ್ನು ತಲುಪಿದಾಗ ಅವರಿಗೆ ಮೂವತ್ತು ವರ್ಷಗಳಾಗಿದ್ದಿರಬೇಕು. ಪಟ್ಟಣದ ಹೊರಗಿನ ಬಾವಿಯಿಂದ ಕೆಲವು ಹೆಂಗಸರು ನೀರನ್ನು ಸೇದುತ್ತಿದ್ದವರನ್ನು ಶಂಕರಾಚಾರ್ಯರು ಕೇಳಿದರು, ''ಈ ಊರಿನಲ್ಲಿ ಪ್ರಸಿದ್ಧ ತತ್ವಜ್ಞಾನಿ ಮಂಡನ ಮಿಶ್ರ ಎಲ್ಲಿ ವಾಸಿಸುತ್ತಾರೆ ಎಂಬುದನ್ನು ತಿಳಿಯಬೇಕಿದೆ.''

ಆ ಹೆಂಗಸರು ಕಿಲಕಿಲನೆ ನಗುತ್ತಾ ''ಚಿಂತಿಸಬೇಡಿ. ಸ್ವಲ್ಪ ಮುಂದೆ ಹೋಗಿ, ಕಾಣಿಸುವುದು,'' ಎಂದರು. ಶಂಕರರು ಕೇಳಿದರು, ''ಅದನ್ನು ಗುರುತಿಸುವುದು ಹೇಗೆ?'' ಆ ಹೆಂಗಸರು ನುಡಿದರು, ''ನಿಮಗೆ ಸಿಗುವುದು. ಏಕೆಂದರೆ ಅವರ ಮನೆಯ ಸುತ್ತಲೂ ದೊಡ್ಡ ಉದ್ಯಾನವಿದೆ. ಅಲ್ಲಿ ಬಹಳ ಗಿಳಿಗಳಿವೆ. ಅವೂ ಉಪನಿಷದ್ ವೇದಗಳನ್ನು ಪಠಿಸುತ್ತವೆ. ಗಿಳಿಗಳು ಉಪನಿಷತ್ತಿನಲ್ಲಿರುವ ಕಾವ್ಯವನ್ನು ಪಠಿಸುವುದು ಕೇಳಿಸಿದರೆ, ಅದು ಮಂಡನ ಮಿಶ್ರರ ನಿವಾಸ ಎಂಬ ನಿರ್ಧಾರಕ್ಕೆ ಬರಬಹುದು.''

ಶಂಕರರಿಗೆ ಇವರ ಮಾತು ನಂಬಲಾಗಲಿಲ್ಲ, ಆದರೆ ಹೋಗಿ ನೋಡಿದಾಗ ನಂಬಲೇಬೇಕಾಯಿತು. ಸುಮಾರು ಎಪ್ಪತ್ತು ವರ್ಷ ತುಂಬಿದ ಮಂಡನ ಮಿಶ್ರರನ್ನು ಶಂಕರರು ಕೇಳಿದರು, ''ನಿಮ್ಮೊಂದಿಗೆ ಚರ್ಚಿಸು-ವುದಕ್ಕಾಗಿ ನಾನು ದಕ್ಷಿಣ ಭಾರತದಿಂದ ದೀರ್ಘ ಪ್ರಯಾಣ ಮಾಡಿ ಆಗಮಿಸಿದ್ದೇನೆ. ಆದರೆ ಒಂದು ಷರತ್ತು: ನಾನು ಸೋತರೆ ನಿಮ್ಮ ಶಿಷ್ಯನಾಗುತ್ತೇನೆ. ನೀವು ಸೋತರೆ ನನ್ನ ಶಿಷ್ಯನಾಗಬೇಕು. ಸ್ವಾಭಾವಿಕವಾಗಿ ನಾನು ನಿಮ್ಮ ಶಿಷ್ಯನಾದರೆ ನನ್ನೆಲ್ಲ ಶಿಷ್ಯರೂ ನಿಮ್ಮ ಶಿಷ್ಯರಾಗುತ್ತಾರೆ. ಹಾಗೆಯೇ ನೀವು ನನ್ನ ಶಿಷ್ಯರಾದಲ್ಲಿ ನಿಮ್ಮ ಶಿಷ್ಯರೆಲ್ಲರೂ ನನ್ನ ಶಿಷ್ಯರಾಗುತ್ತಾರೆ.''

ಮಂಡನ ಮಿಶ್ರ ಒಮ್ಮೆ ಶಂಕರರನ್ನು ಮೇಲಿಂದ ಕೆಳವರೆಗೂ ದಿಟ್ಟಿಸಿ ನೋಡಿದರು. ''ನೀನು ಇನ್ನೂ ಯುವಕ. ನೀನು ಹಾಕಿದ ಸವಾಲನ್ನು ಸ್ವೀಕರಿಸಬೇಕೋ, ಬೇಡವೋ ಎಂಬುದನ್ನು ನಿರ್ಧರಿಸಲು ಹಿಂದುಮುಂದು ನೋಡುತ್ತಿರುವೆ. ಆದರೆ ನೀನು ಸ್ವೀಕರಿಸಲೇಬೇಕೆಂದು ಒತ್ತಾಯಿಸಿದರೆ, ಹಠ ಹಿಡಿದರೆ, ಬೇರೆ ಮಾರ್ಗವೇ ಇಲ್ಲ, ನಾನು ಸ್ವೀಕರಿಸುತ್ತೇನೆ. ಆದರೆ ಸಾವಿರಾರು

ಚರ್ಚಾಸಮರಗಳಲ್ಲಿ ಸೆಣಸಿ, ಗೆದ್ದ ಎಪ್ಪತ್ತು ವರ್ಷದವನೊಂದಿಗೆ, ಮೂವತ್ತರ ತರುಣ ಸೆಣಸುವುದು ಸರಿ ಕಾಣುವುದಿಲ್ಲ. ಈ ಏರುಪೇರನ್ನು ಸರಿಪಡಿಸಲು ಒಂದು ಸಲಹೆ ನೀಡುತ್ತೇನೆ. ಅದೇನೆಂದರೆ, ಈ ಚರ್ಚಾಸ್ಪರ್ಧೆಯಲ್ಲಿ ತೀರ್ಪುಗಾರರಾಗಿ ನಿನಗೆ ಬೇಕಾದವರನ್ನು ಆಯ್ದುಕೊಳ್ಳಬಹುದು. ನೀನು ಬಹಳ ಚಿಕ್ಕವನು. ನೀನು ಸೋತರೆ, ಕಡೇಪಕ್ಷ ತೀರ್ಪುಗಾರ ನಿನಗೆ ಮೋಸ ಮಾಡಲಿಲ್ಲವೆಂಬ ಸಮಾಧಾನವಾದರೂ ಸಿಗಬಹುದು,'' ಎಂದರು ಮಂಡನ ಮಿಶ್ರ.

ಈಗ ತೀರ್ಪುಗಾರರನ್ನು ಎಲ್ಲಿ ಹುಡುಕುವುದು? ಮಂಡನ ಮಿಶ್ರನ ಹೆಂಡತಿಯ ಬಗ್ಗೆ ಶಂಕರರು ಸಾಕಷ್ಟು ಕೇಳಿದ್ದರು. ಆಕೆಯ ಹೆಸರು ಭಾರತಿ. ಆಕೆಗೆ ಅರವತ್ತೈದು ವರ್ಷ ವಯಸ್ಸು. ಶಂಕರರು ಹೇಳಿದರು, ''ನಿಮ್ಮ ಪತ್ನಿಯನ್ನು ತೀರ್ಪುಗಾರ್ತಿಯಾಗಿ ಆರಿಸಿದ್ದೇನೆ.''

ತೀರ್ಪುಗಾರರನ್ನು ಆರಿಸುವ ಅವಕಾಶ ಮಂಡನ ಮಿಶ್ರ ಕೊಟ್ಟರು, ಶಂಕರರು ಮಂಡನ ಮಿಶ್ರರ ಪತ್ನಿಯನ್ನು ತೀರ್ಪುಗಾರ್ತಿಯಾಗಿ ಆಯ್ಕೆ ಮಾಡಿದರು! ಭಾರತಿ ಹೇಳಿದರು, ''ಇದು ಸರಿಯಲ್ಲ. ನಾನು ಅವರ ಪತ್ನಿ. ಒಮ್ಮೆ ನೀವು ಸೋತರೆ, ತನ್ನ ಗಂಡನ ಪರವಾಗಿ ಪಕ್ಷಪಾತ ತೋರಿದ್ದೇನೆಂದು ನೀವು ಯೋಚಿಸಬಹುದು.''

ಅದಕ್ಕೆ ಶಂಕರರು ಹೇಳಿದರು, ''ಈ ಅನುಮಾನಕ್ಕೆ ಆಸ್ಪದವೇ ಇಲ್ಲ. ನಾನು ನಿಮ್ಮ ಪ್ರಾಮಾಣಿಕತೆ ಬಗ್ಗೆ ಸಾಕಷ್ಟು ಕೇಳಿದ್ದೇನೆ. ನಾನು ಸೋತೆನೆಂದರೆ ನಾನು ಸೋತೆನೆಂದೇ ಅರ್ಥ. ನನಗೆ ಒಂದು ಅಂಶ ಚೆನ್ನಾಗಿ ಗೊತ್ತಿದೆ. ಅದೇನೆಂದರೆ, ನಿಮ್ಮ ಪತಿ ಸೋತರೆ, ನಿಜಾಂಶವನ್ನು ಮರೆಮಾಚುವ ಕೆಲಸ ಬೇರೆ ಯಾರಾದರೂ ಮಾಡಿಯಾರು, ನೀವು ಮಾತ್ರ ಆ ಕೆಲಸವನ್ನು ಮಾಡುವುದಿಲ್ಲ.''

ಆರು ತಿಂಗಳುಗಳ ಕಾಲ ಚರ್ಚೆ ನಡೆಯಿತು. ಪ್ರತಿಯೊಂದು ವಿಷಯದ ಬಗ್ಗೆಯೂ ಅವರಿಬ್ಬರೂ ವಾದಿಸಿದರು, ವ್ಯಾಖ್ಯಾನಿಸಿದರು, ವಾಗ್ವಾದ ಮಾಡಿದರು, ಅರ್ಥವಿವರಣೆ ನೀಡಿದರು ..... ಆರು ತಿಂಗಳ ಬಳಿಕ, ತೀರ್ಪುಗಾರ್ತಿ ತೀರ್ಪು ನೀಡುತ್ತಾ ಹೇಳಿದರು, ''ಶಂಕರ ಜಯಶಾಲಿಯಾಗಿದ್ದಾರೆ. ಮಂಡನ ಮಿಶ್ರ ಸೋತಿದ್ದಾರೆ.''

ಸಾವಿರಾರು ಮಂದಿ ಇವರಿಬ್ಬರ ವಾದವನ್ನು ಆರು ತಿಂಗಳಿನಿಂದ ತಪ್ಪದೇ ಕೇಳುತ್ತಿದ್ದರು. ಈ ಇಬ್ಬರು ಮೇಧಾವಿ ತತ್ವಶಾಸ್ತ್ರಜ್ಞರ ವಾದಗಳನ್ನು ಕೇಳುವುದೇ ಒಂದು ವಿಶಿಷ್ಟ ಅನುಭವವಾಗಿತ್ತು. ಶಂಕರರು ಗೆದ್ದಿದ್ದಾರೆಂದು ಪ್ರತಿರೋಧಿಯ ಪತ್ನಿ ತೀರ್ಪು ನೀಡಿದ್ದು ಮಹತ್ತರ ಅನುಭವವಾಗಿತ್ತು. ತೀರ್ಪನ್ನು ಘೋಷಿಸಿದ ಕೆಲಹೊತ್ತು ನಿಶ್ಶಬ್ದ. ಎಲ್ಲೆಡೆ ಮೌನದ ವಿಜೃಂಭಣೆ.

ಆ ಮೌನ ಮುರಿದು ಭಾರತಿ ಹೇಳಿದರು, ''ನೀವು ಕೇವಲ ಅರ್ಧ ಜಯಶಾಲಿ ಎಂಬುದು ನೆನಪಿರಲಿ. ಏಕೆಂದರೆ ಧರ್ಮ ಶಾಸ್ತ್ರಗಳ ಪ್ರಕಾರ ಪತಿ ಪತ್ನಿಯರು ಇಬ್ಬರೂ ಒಂದು ಇಡೀ. ನಾನು ಮಂಡನ ಮಿಶ್ರರ ಅರ್ಧ.

ನೀವು ಕೇವಲ ಒಂದರ್ಧವನ್ನು ಮಾತ್ರ ಸೋಲಿಸಿದ್ದೀರಿ. ಈಗ ನೀವು ನನ್ನೊಂದಿಗೆ ವಾದಕ್ಕಿಳಿಯಬೇಕಾಗುವುದು.''

ಶಂಕರರಿಗೆ ಏನು ಮಾಡಬೇಕೆಂಬುದೇ ತೋಚಲಿಲ್ಲ. ಆರು ತಿಂಗಳ ಸತತ ವಾದದಲ್ಲಿ ಅವರು ಬಹಳ ಕಷ್ಟಪಟ್ಟಿದ್ದರು. ಹಲವಾರು ಬಾರಿ ಅರ್ಧಕ್ಕೆ ನಿಲ್ಲಿಸಬಿಡಬೇಕೆಂದು ಯೋಚಿಸಿದ್ದರೂ ಸಹ. ಮಂಡನ ಮಿಶ್ರ ತಮ್ಮ ಇಳಿ ವಯಸ್ಸಿನಲ್ಲೂ ಬಲು ತೀಕ್ಷ್ಣವಾಗಿದ್ದರು. ಶಂಕರರ ವಿರುದ್ಧ ಯಾರೂ ಆರು ತಿಂಗಳ ಕಾಲ ವಾದಿಸಿರಲಿಲ್ಲ. ಈಗ ಈತನ ಪತ್ನಿ ತನ್ನ ಗೆಲವು ಕೇವಲ ಅರ್ಧ ಮಾತ್ರ ಎಂದು ಹೇಳುತ್ತಿದ್ದಾರೆ.

ಭಾರತಿ ಹೇಳಿದರು, ''ನಿಮಗೆ ಬೇಕೆನಿಸಿದ ತೀರ್ಪುಗಾರರ ಆಯ್ಕೆ ಮಾಡುವ ಹಕ್ಕನ್ನು ನೀಡುತ್ತೇನೆ.'' ಅದಕ್ಕೆ ಶಂಕರರು, ''ಮಂಡನ ಮಿಶ್ರರಿಗಿಂತಲೂ ಉತ್ತಮ ತೀರ್ಪುಗಾರರನ್ನು ಹುಡುಕಲು ನಾನೆಲ್ಲಿಗೆ ಹೋಗಲಿ? ಅವರೇ ಸೂಕ್ತ ತೀರ್ಪುಗಾರರು.'' ಭಾರತಿ ಬಲು ಜಾಣೆ. ಶಂಕರರು ಊಹಿಸಿದುದಕ್ಕಿಂತಲೂ ಜಾಣೆ. ಆಕೆ ಲೈಂಗಿಕ ವಿಷಯದ ಬಗ್ಗೆ ಪ್ರಶ್ನೆಗಳನ್ನು ಕೇಳಲಾರಂಭಿಸಿದರು.

ಅದಕ್ಕೆ ಶಂಕರರು ಹೇಳಿದರು, ''ಕ್ಷಮಿಸಿ. ನಾನು ಅಪ್ಪಟ ಬ್ರಹ್ಮಚಾರಿ. ನನಗೆ ಲೈಂಗಿಕತೆಯ ಬಗ್ಗೆ ಏನೂ ತಿಳಿಯದು.'' ಭಾರತಿ ನುಡಿದರು, ''ಹಾಗಾದರೆ ನೀವು ಸೋಲನ್ನು ಒಪ್ಪಿಕೊಳ್ಳಬೇಕು ಅಥವಾ ಈ ವಿಷಯದ ಬಗ್ಗೆ ಅಧ್ಯಯನ ಮತ್ತು ಅನುಭವಕ್ಕೆ ಕಾಲಾವಕಾಶ ಬೇಕಾದರೆ, ಅದನ್ನು ಕೊಡಬಯಸುತ್ತೇನೆ.''

ಶಂಕರರು ಬಹಳ ವಿಚಿತ್ರ ಮತ್ತು ಸಂದಿಗ್ಧ ಪರಿಸ್ಥಿತಿಗೆ ಸಿಲುಕಿಕೊಂಡರು. ಅವರು ಆರು ತಿಂಗಳ ಕಾಲಾವಕಾಶ ಕೇಳಿದರು. ಅದರಂತೆ ಅವರಿಗೆ ಕಾಲಾವಕಾಶ ನೀಡಲಾಯಿತು.

ಶಂಕರರಿಗೆ ಭಾರತಿ ಹೇಳಿದರು, ''ಈಗ ನೀವು ಹೋಗಬಹುದು. ಅಲ್ಲದೆ ನಿಮಗೆ ಎಷ್ಟು ಸಾಧ್ಯವೋ ಅಷ್ಟು ಕಲಿಯಿರಿ. ಏಕೆಂದರೆ ಈ ವಿಷಯದಿಂದಲೇ ಚರ್ಚೆಯನ್ನು ಆರಂಭಿಸುವೆ. ಅನಂತರ ಉಳಿದ ವಿಷಯಗಳು. ಮಂಡನ ಮಿಶ್ರರನ್ನು ಸೋಲಿಸುವುದು ಸುಲಭ! ನಾನು ಗಟ್ಟಿ ಹೆಂಗಸು. ನನ್ನ ಗಂಡನ ಸೋಲನ್ನು ಘೋಷಿಸಬೇಕಾದರೆ ನಾನೆಷ್ಟು ಗಟ್ಟಿ ಹೆಂಗಸೆಂಬುದನ್ನು ನೀವು ಅರಿಯಬಹುದು. ಇದು ಸುಲಭವಂತೂ ಅಲ್ಲ. ನಿಮಗೆ ಭಯವಾದರೆ ವಾಪಸ್ ಬರಬೇಡಿ. ನಾವು ನಿಮಗಾಗಿ ಆರು ತಿಂಗಳು ಕಾಯುತ್ತೇವೆ.''

ಸಾವಿರಾರು ವರ್ಷಗಳವರೆಗೆ ಈ ವಾತಾವರಣ ಮುಂದುವರೆಯಿತು. ಸಿಟ್ಟಾಗುವ ಪ್ರಶ್ನೆಯೇ ಇಲ್ಲ. ದೂಷಿಸುವ ಪ್ರಶ್ನೆಯೇ ಇಲ್ಲ. ನಿಮ್ಮ ದೈಹಿಕ ಶಕ್ತಿ ಅಥವಾ ನಿಮ್ಮ ತೋಳ್ಬಲ ಅಥವಾ ನಿಮ್ಮ ಸೇನಾಪಡೆಯ ಸಹಾಯದಿಂದ ನೀವು ಸರಿ ಎಂದು ಸಾಬೀತು ಮಾಡುವ ಪ್ರಶ್ನೆ ಇಲ್ಲ. ಇಂತಹ ಯೋಚನೆ ಸುಸಂಸ್ಕೃತ ಜನರಿಗೆ ಬರುವುದೇ ಇಲ್ಲ. ಇವು ಅನಾಗರೀಕ, ಕ್ರೂರ ವಿಚಾರಗಳು.[45]

ಭವಿಷ್ಯದಲ್ಲಿ, ಇತಿಹಾಸವನ್ನು ಓದುವ, ಧ್ಯಾನದ ಕೆಲವು ಸಂಗತಿಗಳನ್ನು ತಿಳಿದ ಮನಸ್ಸುಗಳು ಭಾರತದಂತಹ ಮಹಾನ್ ರಾಷ್ಟ್ರ ಅದೆಷ್ಟು ಸುಲಭವಾಗಿ ಗೆಲ್ಲಲ್ಪಟ್ಟಿತೆಂದು ಅಚ್ಚರಿಪಡಬಹುದು.

ನೆನಪಿರಲಿ, ಈ ಕೀರ್ತಿ ಜಯಶಾಲಿಗಳಿಗೆ ಸಲ್ಲುವುದಿಲ್ಲ. ಕೀರ್ತಿ ಹೋಗುವುದು ಸೋತವನಿಗೇ. ಆತನೇ ಜಯಶಾಲಿ. ಏಕೆಂದರೆ ಇವನು ಸಂಪೂರ್ಣ ವಿಭಿನ್ನ ವಾತಾವರಣದಲ್ಲಿ ಬದುಕಿದವನು. ವಿಭಿನ್ನ ಸಾಮಾಜಿಕ ಸನ್ನಿವೇಶದಲ್ಲಿ ಬೆಳೆದವನು. ಭೂಮಿಗಾಗಿ, ಹಣಕ್ಕಾಗಿ ಹೊಡೆದಾಡುವುದು ಮತ್ತು ಕೊಲ್ಲುವುದು ಅವರ ಉದ್ದೇಶವಾಗಿರಲಿಲ್ಲ. ಅವರು ಸೋಲಲು ಕಾರಣ ಅವರು ವೀರರಾಗಿರಲಿಲ್ಲ ಎಂದಲ್ಲ. ಅವರು ಸೋತದ್ದು ಏಕೆಂದರೆ ಅವರು ಕಾದಾಡುವಷ್ಟು ಮೂರ್ಖರಾಗಿರಲಿಲ್ಲ. ಅವರು ದಾರಿ ಮಾಡಿಕೊಟ್ಟರು. ಅವರು ಹೇಳಿದರು, ''ಈ ಜಗತ್ತನ್ನು ಗೆಲ್ಲಬೇಕೆಂಬ ಬಯಕೆ ಕೆಲವು ಮೂರ್ಖ ಶಿಖಾಮಣಿಗಳಲ್ಲಿದೆ. ಅವರೇ ಜಯಶಾಲಿಗಳಾಗಲಿ. ಜಗತ್ತನ್ನು ಗೆಲ್ಲುವ ಮೂಲಕ ಏನನ್ನು ಸಾಧಿಸುತ್ತೀರಿ? ಏನನ್ನು ಗಳಿಸುತ್ತೀರಿ?'' ಜಯಿಸುವ ಮೂಲ ಕಲ್ಪನೆಯೇ ಅವಮಾನವೀಯ, ಕ್ರೂರ ಎಂಬ ವಿಭಿನ್ನ ನಿಲುವು.

ಆದರೆ, ಅಲೆಗ್ಸಾಂಡರನಿಗೆ, ನೆಪೋಲಿಯನ್‌ನಿಗೆ, ಹಿಟ್ಲರ್‌ನಿಗೆ ವಿಜಯ ಸಾಧಿಸುವುದೇ ಜೀವನದ ಪರಮ ಉದ್ದೇಶವಾಗಿತ್ತು. ಅದಕ್ಕಿಂತ ಹೆಚ್ಚಿನ ಉದ್ದೇಶ ಅವರಿಗೆ ಇರಲಿಲ್ಲ. ಭಾರತಕ್ಕೆ ಇದಕ್ಕಿಂತ ಹೆಚ್ಚಿಗೆ ಗೊತ್ತು. ಭಾರತಕ್ಕೆ ಜಯಗಳಿಸುವ ಮಾರ್ಗ ಚೆನ್ನಾಗಿ ಗೊತ್ತು. ಅದು ಬೇರೆಯವರ ಮೇಲೆ ವಿಜಯ ಸಾಧಿಸುವುದಕ್ಕೆ ಸಂಬಂಧಿಸಿದುದಲ್ಲ. ತಮ್ಮನ್ನೇ ತಾವು ಗೆಲ್ಲುವುದು.[46]

ಮಹಾನ್ ರಹಸ್ಯದರ್ಶಿ ನಾಗಾರ್ಜುನರ ಬಗ್ಗೆ ನಿಮಗೆ ಹೇಳಬೇಕು. ಆತ ಪೂರ್ತಿ ಬತ್ತಲೆಯಾಗಿ ಜೀವಿಸುತ್ತಿದ್ದರು. ಆತನ ಬಳಿ ಇದ್ದುದು ಕೇವಲ ಭಿಕ್ಷಾಪಾತ್ರೆಯೊಂದೇ. ಈ ಭೂಮಿಯ ಮೇಲೆ ಬಾಳಿದ ಕೆಲವೇ ಕೆಲವು ಅಪರೂಪ ಮತ್ತು ಬುದ್ಧಿವಂತ ವ್ಯಕ್ತಿಗಳಲ್ಲಿ ಇವರೂ ಒಬ್ಬರು. ಅವರ ಬುದ್ಧಿಮತ್ತೆ ಹರಿತವೂ, ತೀಕ್ಷ್ಣವೂ ಆಗಿತ್ತು. ದೊಡ್ಡ ದೊಡ್ಡ ರಾಜರು, ಮಹಾರಾಜರು, ಮಹಾರಾಣಿಯರು, ಪ್ರಸಿದ್ಧ ತತ್ವಜ್ಞಾನಿಗಳು ಇವರ ವಿದ್ಯಾರ್ಥಿಗಳಾಗಿದ್ದರು.

ಈ ಪೈಕಿ ಒಬ್ಬ ಮಹಾರಾಣಿಗೆ ನಾಗಾರ್ಜುನರರನ್ನು ಕಂಡರೆ ಬಲು ಭಕ್ತಿ. ಒಮ್ಮೆ ಇವರು ಆಕೆಯ ರಾಜಧಾನಿಗೆ ಹೋದಾಗ, ಇವರಿಗೆ ನೀಡಲು ವಜ್ರದ ಹರಳುಗಳನ್ನು ಜೋಡಿಸಿದ ಚಿನ್ನದ ಭಿಕ್ಷಾಪಾತ್ರೆಯನ್ನು ಮಾಡಿಸಿಟ್ಟಿದ್ದಳು. ನಾಗಾರ್ಜುನ ಭಿಕ್ಷೆ ಬೇಡಲು ಅರಮನೆಗೆ ಹೋದಾಗ, ಆಕೆ ಹೇಳಿದಳು, ''ಮೊದಲು ನೀವು ನನಗೊಂದು ಭರವಸೆ ಕೊಡಬೇಕು.'' ಅದಕ್ಕೆ ನಾಗಾರ್ಜುನರು, ''ಈ ಭಿಕ್ಷಾಪಾತ್ರೆ ಹೊರತಾಗಿ ಮತ್ತೇನೂ ಇಲ್ಲದೆ ಈ ಬತ್ತಲೆ ಮನುಷ್ಯನಿಂದ ನೀವೇನು ಭರವಸೆಯನ್ನು ಕೇಳುತ್ತಿರುವಿರಿ?'' ಎಂದು ಕೇಳಿದರು.

ಆಕೆ ನುಡಿದರು, ''ಹೌದು, ನಾನು ನಿಮ್ಮ ಭಿಕ್ಷಾಪಾತ್ರೆಯನ್ನೇ ಕೇಳುತ್ತಿರುವೆ.'' ನಾಗಾರ್ಜುನ ಶಾಂತರಾಗಿ ಹೇಳಿದರು, ''ನೀವು ಅದನ್ನು ತೆಗೆದುಕೊಳ್ಳಬಹುದು.'' ಅದಕ್ಕೆ ಆಕೆ ಹೇಳಿದಳು, ''ಇದು ನನ್ನ ಅರ್ಧ ಕೋರಿಕೆ ಮಾತ್ರ. ನಾನು ಅದನ್ನು ಬದಲಿಸಿಕೊಡುತ್ತೇನೆ. ನಾನು ಕೊಡುವ ಭಿಕ್ಷಾಪಾತ್ರೆಯನ್ನು ನೀವು ಸ್ವೀಕರಿಸಬೇಕು.'' ಅದಕ್ಕೆ ನಾಗಾರ್ಜುನ, ''ಏನೂ ತೊಂದರೆ ಇಲ್ಲ. ಬೇಡಲು ನನಗೆ ಯಾವುದೇ ಭಿಕ್ಷಾಪಾತ್ರೆಯಾದರೂ ಆದೀತು,'' ಎಂದರು.

ಆಕೆ ತನಗೆ ಏನು ಕೊಡುತ್ತಿರುವಳು ಎಂಬುದು ನಾಗಾರ್ಜುನರಿಗೆ ಗೊತ್ತಿರಲಿಲ್ಲ. ಆಕೆ ಅದನ್ನು ಹುದುಗಿಸಿಟ್ಟುಕೊಂಡಿದ್ದಳು. ಅದು ಅಮೂಲ್ಯ ವಜ್ರಖಚಿತ ಚಿನ್ನದ ಭಿಕ್ಷಾಪಾತ್ರೆ.

ನಾಗಾರ್ಜುನ ಅದನ್ನು ಸ್ವೀಕರಿಸಿದರು. ತಾವು ತಂಗಿದ್ದ ಪಾಳು ಕಟ್ಟಡದ ಕಡೆಗೆ ಮರಳಿಹೋಗುತ್ತಿದ್ದಾಗ, ಆ ಭಿಕ್ಷಾಪಾತ್ರೆಯನ್ನು ಕಳ್ಳನೊಬ್ಬ ನೋಡಿದ. ಆತ ತನ್ನ ಕಣ್ಣುಗಳನ್ನು ತಾನೇ ನಂಬದಾದ. ಭಿಕ್ಷಾಪಾತ್ರೆ ನಕ್ಷತ್ರಗಳಂತೆ ಹೊಳೆಯುತ್ತಿತ್ತು. ಅದನ್ನು ಕಂಡು ಕಳ್ಳ ಮನಸ್ಸಿನಲ್ಲೇ ಆಲೋಚಿಸತೊಡಗಿದ, ''ಈ ಬತ್ತಲೆ ಮನುಷ್ಯನೇಕೆ ವಜ್ರಖಚಿತ ಭಿಕ್ಷಾಪಾತ್ರೆಯನ್ನು ಹಿಡಿದಿದ್ದಾನೆ? ಆತ ಇದನ್ನು ಎಷ್ಟು ದಿನ ತನ್ನಲ್ಲಿ ಇಟ್ಟುಕೊಳ್ಳಬಹುದು? ಯಾರಾದರೂ ನೋಡಿದರೆ ಅದನ್ನು ಕಿತ್ತುಕೊಳ್ಳುತ್ತಾರೆ. ಹೀಗಿರುವಾಗ ನಾನೇ ಏಕೆ ಕಿತ್ತುಕೊಳ್ಳಬಾರದು?''

ಆತ ನಾಗಾರ್ಜುನರನ್ನು ಹಿಂಬಾಲಿಸತೊಡಗಿದ. ನಾಗಾರ್ಜುನ ತಾವು ತಂಗಿದ್ದ ಆ ಹಾಳು ಮಠದ ಕೋಣೆಯೊಳಕ್ಕೆ ಹೋದರು. ಕಳ್ಳ ಕೂಡ ಮಠದ

ಹೊರಗೆ ಕಿಟಕಿಯ ಪಕ್ಕದಲ್ಲಿ ಅಡಗಿ ಕುಳಿತು ಯೋಚಿಸತೊಡಗಿದ, ''ಬೌದ್ಧ ಸಂನ್ಯಾಸಿಗಳು ದಿನಕ್ಕೊಂದು ಬಾರಿ ಮಾತ್ರ ಆಹಾರ ಸೇವಿಸುತ್ತಾರೆ. ಈಗ ಆತ ಆಹಾರ ಸೇವಿಸುತ್ತಿರಬಹುದು ...... ಅನಂತರ ಸ್ವಲ್ಪ ಹೊತ್ತು ನಿದ್ರೆ ಮಾಡಬಹುದು .... ಅದೇ ಸರಿಯಾದ ಸಮಯ .... ಇಲ್ಲಿಗೆ ಯಾರೂ ಬರುವುದಿಲ್ಲ.''

ನಾಗಾರ್ಜುನ ಆಹಾರ ಸೇವಿಸಿ ಭಿಕ್ಷಾಪಾತ್ರೆಯನ್ನು ಕಿಟಕಿಯ ಮೂಲಕ ಎಸೆದರು. ಅದು ಕಳ್ಳ ಅಡಗಿದ್ದೆಡೆ ಬಿದ್ದಿತು. ಕಳ್ಳನಿಗೆ ಬಹಳ ಆಶ್ಚರ್ಯವಾಯಿತು. ಏನು ನಡೆಯುತ್ತಿದೆಯೆಂದು ಅರ್ಥವಾಗಲಿಲ್ಲ. ಆತನಿಗೆ ನಿಜಕ್ಕೂ ಆಘಾತವಾಯಿತು. ''ಇವನೆಂತಹ ಮನುಷ್ಯ? ತನ್ನ ಆಹಾರ ಸೇವಿಸಿ, ಈ ಬೆಲೆ ಬಾಳುವ, ಅತ್ಯಮೂಲ್ಯ ಭಿಕ್ಷಾಪಾತ್ರೆಯನ್ನು ಅನುಪಯುಕ್ತ ವಸ್ತುವಿನಂತೆ ಎಸೆದಿದ್ದಾನೆ? ಅದೂ ನಾನಿರುವ ತಾಣಕ್ಕೇ ಎಸೆದಿದ್ದಾನೆ,'' ಎಂದುಕೊಂಡ.

ಕಳ್ಳ ಎದ್ದು ನಿಂತು ನಾಗಾರ್ಜುನರನ್ನು ''ನಾನೊಂದು ಪ್ರಶ್ನೆ ಕೇಳಬೇಕು. ಒಳಗೆ ಬರಬಹುದೇ?'' ಎಂದು ಕೇಳಿದ. ಅದಕ್ಕೆ ನಾಗಾರ್ಜುನರು, ''ನಿನ್ನನ್ನು ಇಲ್ಲಿಗೆ ಬರುವಂತೆ ಮಾಡುವುದಕ್ಕಾಗಿಯೇ ನಾನು ಆ ಭಿಕ್ಷಾಪಾತ್ರೆಯನ್ನು ನಿನ್ನೆಡೆಗೆ ಎಸೆದದ್ದು. ಒಳಗೆ ಬಾ. ಈ ಭಿಕ್ಷಾಪಾತ್ರೆ ನಿನ್ನದೇ. ಹೆದರಬೇಡ. ಅದನ್ನು ನಾನು ನಿನಗೆ ಕೊಟ್ಟಿರುವುದರಿಂದ, ನೀನು ಅದನ್ನು ಕದ್ದಂತಾಗಲಿಲ್ಲ. ನೀನು ಕಳ್ಳನಲ್ಲ. ಇದು ನನ್ನ ಕೊಡುಗೆ. ನಾನು ಬಡವ. ಈ ಭಿಕ್ಷಾಪಾತ್ರೆಯ ಹೊರತಾಗಿ ನನ್ನ ಬಳಿ ಮತ್ತೇನೂ ಇಲ್ಲ. ಇದನ್ನು ಬಹಳ ಹೊತ್ತು ಇಟ್ಟುಕೊಳ್ಳಲಾಗದೆಂಬುದೂ ನನಗೆ ಗೊತ್ತು. ಏಕೆಂದರೆ ನಾನು ಈಗ ನಿದ್ರೆ ಮಾಡಬೇಕು. ಯಾರಾದರೂ ಅದನ್ನು ಅಪಹರಿಸುತ್ತಾರೆ. ನೀನು ಆ ಬಗ್ಗೆ ಬಹಳ ಶ್ರಮಪಟ್ಟಿದ್ದೀಯಾ. ರಾಜಧಾನಿಯಿಂದ ನನ್ನನ್ನು ಹಿಂಬಾಲಿಸಿರುವೆ. ಉರಿಬಿಸಿಲು ಬೇರೆ. ಬೇಡವೆನ್ನಬೇಡ. ತೆಗೆದುಕೋ,'' ಎಂದರು.

ಕಳ್ಳ, ''ನೀನು ಬಹಳ ವಿಚಿತ್ರ ಮನುಷ್ಯ. ಇದು ಎಷ್ಟು ಅಮೂಲ್ಯವಾದುದೆಂದು ನಿನಗೆ ಗೊತ್ತಿಲ್ಲವೇ?'' ಎಂದ. ನಾಗಾರ್ಜುನ, ''ನನ್ನನ್ನು ನಾನು ಅರಿತ ದಿನದಿಂದ ನನಗೆ ಮತ್ಯಾವುದೂ ಅಮೂಲ್ಯ ಅಲ್ಲ,'' ಎಂದರು.

ಕಳ್ಳ ಒಂದು ಸಲ ನಾಗಾರ್ಜುನರನ್ನು ದಿಟ್ಟಿಸಿ ಹೇಳಿದ, ''ಹಾಗಾದರೆ ನನಗೆ ಇನ್ನೊಂದು ಕೊಡುಗೆಯನ್ನೂ ಕೊಡಿ. ಯಾವುದಕ್ಕೆ ಹೋಲಿಸಿದರೆ ಈ ಭಿಕ್ಷಾಪಾತ್ರೆ ನಗಣ್ಯವೆನಿಸುವುದೋ ಅಂತಹ ಸ್ವಯಂಅನ್ನು ನಾನು ಅರಿಯುವುದು ಹೇಗೆ?'' ನಾಗಾರ್ಜುನ ನುಡಿದರು, ''ಅದು ಬಹಳ ಸುಲಭ.'' ಕಳ್ಳ ನುಡಿದ, ''ನೀವು ಮತ್ತೇನಾದರೂ ಹೇಳುವ ಮೊದಲು ನಾನು ನನ್ನನ್ನು ಪರಿಚಯಿಸಿಕೊಳ್ಳಬೇಕು. ನಾನೊಬ್ಬ ಕುಖ್ಯಾತ ಕಳ್ಳ.''

ನಾಗಾರ್ಜುನ ಹೇಳಿದರು, ''ಯಾರು ಕಳ್ಳರಲ್ಲ? ಕ್ಷುಲ್ಲಕ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳಬೇಡ. ಈ ಜಗತ್ತಿನಲ್ಲಿ ಪ್ರತಿಯೊಬ್ಬರೂ ಕಳ್ಳರೇ. ಏಕೆಂದರೆ ಪ್ರತಿಯೊಬ್ಬರೂ ಈ ಜಗತ್ತಿಗೆ ಬಟ್ಟೆ ಇಲ್ಲದೆ ಬತ್ತಲೆಯಾಗಿ ಬರುತ್ತಾರೆ. ಅನಂತರ ಪ್ರತಿಯೊಬ್ಬರೂ

ಏನಾದರೊಂದನ್ನು ಪಡೆಯುತ್ತಾರೆ. ಹೀಗಾಗಿ ಎಲ್ಲರೂ ಕಳ್ಳರೇ. ಆದ್ದರಿಂದ ಚಿಂತಿಸಬೇಡ. ಈ ಕಾರಣಕ್ಕಾಗಿಯೇ ನಾನು ಬತ್ತಲೆಯಾಗಿದ್ದೇನೆ. ನೀನು ಏನನ್ನೇ ಮಾಡು, ಚೆನ್ನಾಗಿ ಮಾಡು. ಕಳ್ಳತನ ಮಾಡುವಾಗ ಅರಿವಿನಿಂದಿರು, ಎಚ್ಚರದಿಂದಿರು, ಸಾಕ್ಷೀಭಾವದಿಂದಿರು. ಅರಿವಿನಿಂದ ಇಲ್ಲದಿರುವಾಗ ಕದಿಯಬೇಡ. ನೀನು ಪಾಲಿಸಬೇಕಾದ ಸರಳ ನಿಯಮವಿದು.''


ನಾಗಾರ್ಜುನರ ಮಾತಿನಿಂದ ಪ್ರಭಾವಿತನಾದ ಕಳ್ಳ, ''ಓಹೋ ಇದು ಬಲು ಸುಲಭ. ನಿಮ್ಮನ್ನು ಮತ್ತೊಮ್ಮೆ ಯಾವಾಗ ಕಾಣಲಿ?'' ಎಂದು ಪ್ರಶ್ನಿಸಿದ. ನಾಗಾರ್ಜುನ ಹೇಳಿದರು, ''ನಾನು ಇನ್ನೂ ಇಲ್ಲಿ ಎರಡು ವಾರಗಳ ಕಾಲ ತಂಗಿರುತ್ತೇನೆ. ನೀನು ಯಾವಾಗ ಬೇಕಾದರೂ ಬಾ. ಆದರೆ ಮೊದಲು ನಾನು ಹೇಳಿದ್ದನ್ನು ಮಾಡು.''

ಕಳ್ಳ ಎರಡು ವಾರ ಪ್ರಯತ್ನಿಸಿ, ಅದು ಬಹಳ ಕಷ್ಟದ ಕೆಲಸವೆಂದು ಅರಿತ. ಆತ ಪ್ರಾಮಾಣಿಕ. ಒಂದು ಸಲ ಆತ ಅರಮನೆಯ ಒಳಗೆ ಪ್ರವೇಶಿಸಿದ. ಕೋಶಾಗಾರದ ಬಾಗಿಲನ್ನೂ ತೆರೆದ ... ಕೈಗೆ ಸಿಕ್ಕಿದ್ದನ್ನು ತೆಗೆದುಕೊಳ್ಳಬೇಕು ಎನ್ನುವಷ್ಟರಲ್ಲಿ ಆತ ತನ್ನ ಅರಿವನ್ನು ಕಳೆದುಕೊಳ್ಳುತ್ತಿದ್ದ. ಎತ್ತಿಕೊಂಡದ್ದನ್ನು ಅಲ್ಲಿಯೇ ಇಡುತ್ತಿದ್ದ. ಎತ್ತಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಆತ ಅರಿವಿನಿಂದ ಇದ್ದಾಗ, ಕೊಳ್ಳೆ ಹೊಡೆಯುವ ಆಸೆ ಇರುತ್ತಿರಲಿಲ್ಲ.

ಕೊನೆಗೆ ಆತ ನಾಗಾರ್ಜುನರ ಬಳಿಗೆ ಬರಿಗೈಯಲ್ಲಿ ಬಂದು ಹೇಳಿದ, ''ನೀವು ನನ್ನ ಜೀವನವನ್ನು ಕದಡಿದ್ದೀರಿ. ಈಗ ನನಗೆ ಕಳವು ಮಾಡಲು ಆಗುತ್ತಿಲ್ಲ.'' ನಾಗಾರ್ಜುನ ನುಡಿದರು, ''ಅದು ನನ್ನ ಸಮಸ್ಯೆ ಅಲ್ಲ. ಈಗ ಅದು ನಿನ್ನ ಸಮಸ್ಯೆ. ಕಳವು ಮಾಡಬೇಕೆಂದರೆ ಅರಿವನ್ನು ಮರೆತುಬಿಡು.'' ಅದಕ್ಕೆ ಕಳ್ಳ ಹೇಳಿದ, ''ಆ ಕೆಲವು ಕ್ಷಣದ ಅರಿವು ಬಹಳ ಅಮೂಲ್ಯ. ಅದರ ಮುಂದೆ ಇಡೀ ರಾಜ್ಯದ ಐಶ್ವರ್ಯ, ಸಂಪತ್ತು, ಕೋಶಾಗಾರ ನಗಣ್ಯ. ಆ ಕ್ಷಣದಲ್ಲಿ ನನಗೆ ಬಹಳ ಶಾಂತಿ, ಸಮಾಧಾನ, ಪರಮಸುಖ ಸಿಗುತ್ತದೆ.

''ಒಮ್ಮೆ ನಾವು ನಮ್ಮನ್ನು ಅರಿತರೆ ಮತ್ತೆ ಯಾವುದೂ ಅಮೂಲ್ಯವೆಂದು ನಮಗೆ ಅನಿಸುವುದಿಲ್ಲವೆಂಬ ಮಾತಿನ ಅರ್ಥ ನನಗೀಗ ಆಗುತ್ತಿದೆ. ಅರಿವಿನಿಂದಿರುವುದನ್ನು ನಾನು ಎಂದಿಗೂ ನಿಲ್ಲಿಸುವುದಿಲ್ಲ. ಪ್ರತಿ ಕ್ಷಣವೂ ನೀವು ಅನುಭವಿಸುವ ಅಮೃತದ ಕೆಲವೇ ಕೆಲವು ಹನಿಗಳ ರುಚಿಯನ್ನು ನಾನು ಸವಿದಿದ್ದೇನೆ. ದಯವಿಟ್ಟು ನನ್ನನ್ನು ನಿಮ್ಮ ಶಿಷ್ಯನನ್ನಾಗಿ ಸ್ವೀಕರಿಸುತ್ತೀರಾ? ನಾನು ನಿಮ್ಮನ್ನು ಅನುಸರಿಸುತ್ತೇನೆ.'' ಕಳ್ಳನ ದನಿಯಲ್ಲಿ ದೈನ್ಯತೆ ಇತ್ತು.

ನಾಗಾರ್ಜುನ ಹೇಳಿದರು, ''ಹೀಗೆ ಆಗುವುದೆಂದು ನನಗೆ ಮೊದಲ ದಿನವೇ ಗೊತ್ತಿತ್ತು. ನೀನು ನಿನ್ನನ್ನು ಹಿಂಬಾಲಿಸಿ ಬಂದ ದಿನವೇ ನಿನಗೆ ದೀಕ್ಷೆ ನೀಡಿದ್ದೇನೆ. ಭಿಕ್ಷಾಪಾತ್ರೆಯನ್ನು ಹೇಗೆ ಕಳವು ಮಾಡಬೇಕೆಂದು ನೀನು ಯೋಚಿಸುತ್ತಿದ್ದೆ. ನಿನ್ನನ್ನು ಹೇಗೆ ಕಳವು ಮಾಡಬೇಕೆಂದು ನಾನು ಯೋಚಿಸುತ್ತಿದ್ದೆ. ನಾವಿಬ್ಬರೂ ಒಂದೆ ವೃತ್ತಿಯಲ್ಲಿ ತೊಡಗಿದ್ದೇವೆ!'' [47]



ಶಿವಲಿಂಗ, ಹಿಂದೂ ದೇವಸ್ಥಾನ, ಪಂಚಗನಿ

ಒಮ್ಮೆ ಶ್ರೀಮಂತನೊಬ್ಬ ಸಂತೋಷ ಹೊಂದಲು ಬಯಸಿದ. ಹಲವಾರು ವಿಧಗಳಲ್ಲಿ ಪ್ರಯತ್ನಿಸಿದರೂ ಯಶಸ್ವಿಯಾಗಲಿಲ್ಲ. ಆತ ಅನೇಕ ಸಾಧು ಸಂತರನ್ನು ಭೇಟಿ ಮಾಡಿದ. ಪ್ರಯೋಜನವಾಗಲಿಲ್ಲ. ಅನಂತರ ಯಾರೋ ಸಲಹೆ ನೀಡಿದರು, ''ನೀನು ಮುಲ್ಲಾ ನಸರುದ್ದೀನನ ಬಳಿ ಹೋಗು. ಆತ ಯಾವುದೋ ಊರಿನಲ್ಲಿ ವಾಸಿಸುತ್ತಿದ್ದಾನೆ. ಆತ ಮಾತ್ರ ನಿನಗೆ ಸಹಾಯ ಮಾಡಬಲ್ಲ.''

ನಸರುದ್ದೀನನನ್ನು ಕಾಣಲು ಶ್ರೀಮಂತ ಒಂದು ಕೈಚೀಲದಲ್ಲಿ ವಜ್ರವನ್ನು ತುಂಬಿಕೊಂಡು ಹೊರಟ. ಪಟ್ಟಣದ ಹೊರವಲಯದಲ್ಲಿರುವ ಮರದ ಕೆಳಗೆ ಮುಲ್ಲಾ ಕುಳಿತಿದ್ದ. ಅವನಿಗೆ ತಾನು ತಂದಿದ್ದ ಬ್ಯಾಗನ್ನು ಶ್ರೀಮಂತ ತೋರಿಸಿ ಹೇಳಿದ, ''ನಾನು ಬಹಳ ಸಂಕಟದಲ್ಲಿದ್ದೇನೆ. ನನಗೆ ನೆಮ್ಮದಿ ಬೇಕು. ಅದಕ್ಕಾಗಿ ನಾನು ಏನು ಕೊಡಲೂ ಸಿದ್ಧ. ನನಗೆ ನೆಮ್ಮದಿ ಅಂದರೆ ಏನೆಂದು ಗೊತ್ತಿಲ್ಲ. ಅದನ್ನು ಅನುಭವಿಸಿಲ್ಲ. ಸಾವು ನಿಧಾನವಾಗಿ ಹತ್ತಿರ ಹತ್ತಿರ ಬರುತ್ತಿದೆ. ದಯವಿಟ್ಟು ಸಹಾಯ ಮಾಡುವಿರಾ? ನಾನು ನೆಮ್ಮದಿಯಿಂದ, ಸಂತಸದಿಂದ ಇರುವುದು ಹೇಗೆ? ಈ ಜಗತ್ತು ಕೊಡಬಹುದಾದ ಎಲ್ಲ ವಸ್ತುಗಳನ್ನೂ ಹೊಂದಿದ್ದೇನೆ. ಅದರೂ ನಾನು ನೆಮ್ಮದಿ ಹೊಂದಿಲ್ಲ, ಏಕೆ?''

ಒಂದು ಸಲ ಮುಲ್ಲಾ ಆತನನ್ನು ದಿಟ್ಟಿಸಿದ. ಶ್ರೀಮಂತನಿಗೆ ಏನು ನಡೆಯುತ್ತಿದೆ ಎಂಬುದೂ ಗೊತ್ತಾಗದಷ್ಟು ವೇಗವಾಗಿ ಘಟನೆ ಜರುಗಿತು. ಶ್ರೀಮಂತನ ಮೇಲೆಬಿದ್ದು ಆತನು ಹಿಡಿದಿದ್ದ ಬ್ಯಾಗನ್ನು ಕಸಿದುಕೊಂಡು ಓಡತೊಡಗಿದ ಮುಲ್ಲಾ. ಶ್ರೀಮಂತ ಆತನ ಹಿಂದೆ ಓಡತೊಡಗಿದ: ''ಹಿಡಿಯಿರಿ, ಹಿಡಿಯಿರಿ! ವಂಚನೆ, ಮೋಸ! ನನ್ನ ಚೀಲವನ್ನು ಕಿತ್ತುಕೊಂಡು ಓಡಿಹೋಗುತ್ತಿದ್ದಾನೆ,'' ಎಂದು ಬೊಬ್ಬಿಡುತ್ತಾ.

ಮುಲ್ಲಾನಿಗೆ ಆ ಪಟ್ಟಣದ ಗಲ್ಲಿ ಗಲ್ಲಿಯೂ ಚಿರಪರಿಚಿತ. ಆತ ಒಂದು ಓಣಿಯಿಂದ ಮತ್ತೊಂದು ಓಣಿಯೊಳಕ್ಕೆ ನುಸುಳುತ್ತಿದ್ದ. ಶ್ರೀಮಂತ ತನ್ನ ಜೀವನದಲ್ಲಿ ಎಂದೂ ಓಡಿದವನಲ್ಲ. ಒಂದೇ ಸಮನೆ ಬಾಯಿ ಬಡಿದುಕೊಳ್ಳುತ್ತಾ, ಕಿರುಚತೊಡಗಿದ. ಕಣ್ಣೀರು ಹರಿಯುತ್ತಿತ್ತು, ''ನನ್ನದೆಲ್ಲವನ್ನೂ ದೋಚಿದ. ಜೀವನದಲ್ಲಿ ಗಳಿಸಿದುದೆಲ್ಲವೂ ಹೋಯಿತು. ಕಾಪಾಡಿ, ನನಗೆ ದಯವಿಟ್ಟು ಸಹಾಯ ಮಾಡಿ!'' ಎಂದು ರೋಧಿಸುತ್ತಾ ಓಡಿದ. ಜನರು ಹಿಂಬಾಲಿಸಿದರು.

ಅವರೆಲ್ಲರೂ ಮುಲ್ಲಾನ ಬಳಿ ಬಂದಾಗ, ಮುಲ್ಲಾ ಶ್ರೀಮಂತ ಮೊದಲ ಬಾರಿಗೆ ಭೇಟಿ ಮಾಡಿದ ಸ್ಥಳಕ್ಕೇ ವಾಪಸ್ ಬಂದಿದ್ದ. ಶ್ರೀಮಂತನ ಕುದುರೆ ಇನ್ನೂ ಅಲ್ಲೇ ನಿಂತಿತ್ತು, ಮುಲ್ಲಾ ಮರದ ಕೆಳಗೆ ಕುಳಿತಿದ್ದ. ಶ್ರೀಮಂತ ಏದುಸಿರು ಬಿಡುತ್ತಾ ನಿಂತಿದ್ದ. ಮುಲ್ಲಾ ಶ್ರೀಮಂತನ ಬ್ಯಾಗನ್ನು ಅವನಿಗೆ ಹಿಂತಿರುಗಿಸಿದ.

ಶ್ರೀಮಂತ ಸಮಾಧಾನದಿಂದ: ''ಓ ದೇವರೇ! ನಿನಗೆ ಧನ್ಯವಾದಗಳು,'' ಎಂದ. ಶ್ರೀಮಂತನ ಕಣ್ಣುಗಳಲ್ಲಿ ಬಾಷ್ಪಾಂಜಲಿ. ಸಂತೋಷದಿಂದ ಕಣ್ಣಾಲಿ

ತೇವಗೊಂಡಿದ್ದುವು. ಮುಖದಲ್ಲಿ ಶಾಂತಿ, ಪ್ರಸನ್ನತೆ ಮಡುವುಗಟ್ಟಿದ್ದವು.

ಮುಲ್ಲಾ ಹೇಳಿದ, ''ನೋಡು ನಾನು ನಿನ್ನನ್ನು ಸಂತೃಪ್ತಗೊಳಿಸಿದ್ದೇನೆ. ನೆಮ್ಮದಿ ಕೊಟ್ಟಿದ್ದೇನೆ. ಸಂತೋಷ, ನೆಮ್ಮದಿ ಏನೆಂದರೆ ಈಗ ಗೊತ್ತಾಗಿರಬಹುದಲ್ಲ? ಈ ಕೈಚೀಲ ಅನೇಕ ವರ್ಷಗಳಿಂದ ನಿನ್ನ ಬಳಿಯೇ ಇತ್ತು. ಆದರೆ ನಿನಗೆ ನೆಮ್ಮದಿ ಇರಲಿಲ್ಲ. ಅದಕ್ಕಾಗಿ ನಾನು ಅದನ್ನು ಕಿತ್ತುಕೊಂಡು ಹೋಗಬೇಕಾಯಿತು.''

ಸಂತೋಷ ಯಾವತ್ತೂ ಅಸಂತೋಷದ ಭಾಗ. ಆದ್ದರಿಂದ ಯಾವತ್ತೂ ಸಂತೋಷ ನಿಮ್ಮ ಜೀವನದ ಗುರಿಯಾಗಿರಕೂಡದು. ಏಕೆಂದರೆ ನೀವು ಸಂತೋಷ ಬಯಸಿದರೆ ಅಸಂತೋಷದಿಂದ ಇರಬೇಕಾಗುವುದು. ನೀವು ಎಷ್ಟು ಹೆಚ್ಚು ಅಸಂತೋಷದಿಂದ ಇರುತ್ತೀರೋ ಆಗ ಅಲ್ಲೊಂದು ಇಲ್ಲೊಂದು ಕೆಲವು ಕ್ಷಣಗಳು ಮಾತ್ರ ಸಂತೋಷದ ಕ್ಷಣಗಳು ಕಾಣಸಿಗುತ್ತವೆ.

ಗುರಿ ಸಂತೋಷ ಅಲ್ಲ...... ಗುರಿ ಪರಮಸುಖ.

ಸಂತೋಷ ಬೆಲೆಯಿಲ್ಲದ್ದು, ಅಸಂತೋಷವನ್ನು ಆಧರಿಸಿದುದು. ಪರಮಸುಖ ಪಾರಮಾರ್ಥಿಕ, ವಿಷಯಾತೀತ. ಸಂತೋಷ ಮತ್ತು ಅಸಂತೋಷಗಳ ಉಭಯತ್ವವನ್ನು ಮೀರಿದ್ದು. ನೀವು ಎರಡನ್ನೂ ನೋಡುವಿರಿ - ಸಂತೋಷ ಬರುತ್ತದೆ, ನೋಡುತ್ತೀರಿ ಆದರೆ ಅದರೊಂದಿಗೆ ತಾದಾತ್ಮ್ಯತೆ ಹೊಂದುವುದಿಲ್ಲ. ''ನಾನು ನೆಮ್ಮದಿಯಿಂದಿದ್ದೇನೆ. ಶಾಂತಿ - ಇದು ಅದ್ಭುತ,'' ಎಂದೆನ್ನುವುದಿಲ್ಲ. ನೀವು ಸುಮ್ಮನೆ ನೋಡುತ್ತಾ ಹೇಳುತ್ತೀರಿ, ''ಹ್ಞಾ! ಬಿಳಿ ಮೋಡಗಳು ಚಲಿಸುತ್ತಿವೆ.''

ಆಗ ಎದುರಾಗುವುದು ಅಸಂತೋಷ. ಹಾಗೆಂದು ನೀವು ಅಸಂತುಷ್ಟನಾಗಿಯೇ ಇರುವುದಿಲ್ಲ. ನೀವು ಹೇಳುವಿರಿ, '' ಈಗ ಕಪ್ಪು ಮೋಡ ಚಲಿಸುತ್ತಿದೆ - ನಾನೇ ಸಾಕ್ಷಿ. ನಾನೇ ವೀಕ್ಷಕ.''

ಧ್ಯಾನವೆಂದರೆ ಇದೇ. ಸುಮ್ಮನೆ ವೀಕ್ಷಕನಾಗುವುದು. ವೈಫಲ್ಯಗಳು ಬರುತ್ತವೆ, ಯಶಸ್ಸು ಬರುತ್ತದೆ, ನಿಮ್ಮನ್ನು ಪ್ರಶಂಸಿಸುತ್ತಾರೆ, ನಿಮ್ಮನ್ನು ಖಂಡಿಸುತ್ತಾರೆ, ನಿಮ್ಮನ್ನು ಗೌರವಿಸುತ್ತಾರೆ, ನಿಮ್ಮನ್ನು ಅವಮಾನಿಸುತ್ತಾರೆ - ಎಲ್ಲ ರೀತಿಯ ಸನ್ನಿವೇಶಗಳೂ ಬರುತ್ತವೆ. ಅವೆಲ್ಲವೂ ಉಭಯತ್ವಗಳು. ನೀವು ಮಾತ್ರ ವೀಕ್ಷಿಸುತ್ತಲೇ ಇರುತ್ತೀರಿ. ಉಭಯತ್ವವನ್ನು ವೀಕ್ಷಿಸುವಾಗ, ನಿಮ್ಮಲ್ಲಿ ಮೂರನೆಯ ಶಕ್ತಿಯೊಂದು ಉದ್ಭವವಾಗುತ್ತದೆ. ಮೂರನೆ ಸ್ವರೂಪದ ಪರಿಮಾಣ ನಿಮ್ಮೊಳಗೆ ಏಳುತ್ತದೆ. ಉಭಯತ್ವ ಎಂದರೆ ಎರಡು ಸ್ವರೂಪಗಳು - ಒಂದು ಸಂತೋಷ ಹಾಗೂ ಎರಡನೆಯದು ಅಸಂತೋಷ. ಎರಡನ್ನೂ ಗಮನಿಸಿದರೆ, ನಿಮ್ಮಲ್ಲಿನ ಗಾಢತೆ, ಆಳ ಹೆಚ್ಚುವುದು. ಮೂರನೆಯ ಸ್ವರೂಪವೇ ಸಾಕ್ಷಿ.

ಈ ಮೂರನೆಯ ಸ್ವರೂಪ ಪರಮಸುಖವನ್ನು ತರುವುದು. ಪರಮಸುಖಕ್ಕೆ ವಿರುದ್ಧವಾದುದು ಯಾವುದೂ ಇಲ್ಲ. ಇದು ಶಾಂತ, ಪ್ರಸನ್ನ ಹಾಗೂ ತಂಪು. ಇದು ಉದ್ರೇಕವಿಲ್ಲದ ಭಾವೋನ್ಮಾದ.[48]

ಬಾಲ್ ಜನರನ್ನು ಬಾಲ್ಸ್ ಎಂದು ಕರೆಯಲು ಕಾರಣವೇನೆಂದರೆ ಅವರು ಹುಚ್ಚರು. ಬಾಲ್ ಪದದ ಮೂಲ ಸಂಸ್ಕೃತದ 'ವಕುಲ್'. ಅದರ ಅರ್ಥ ಹುಚ್ಚು, ಹುಚ್ಚ. ಇವರು ಯಾವುದೇ ಧರ್ಮಕ್ಕೆ ಸೇರಿದವರಲ್ಲ. ಇವರುಗಳು ಹಿಂದೂಗಳಲ್ಲ, ಮುಸ್ಲೀಮರಲ್ಲ ಕ್ರಿಶ್ಚಿಯನ್ನರಲ್ಲ, ಬೌದ್ಧರೂ ಅಲ್ಲ. ಅವರು ಕೇವಲ ಮನುಷ್ಯರು. ಅವರು ಬಂಡಾಯಗಾರರು. ಅವರು ಯಾರಿಗೂ ಸೇರಿದವರಲ್ಲ. ಅವರು ಅವರಿಗೇ ಸೇರಿದವರು. ಅವರು ಯಾರಿಗೂ ಸೇರದ ಜಾಗದಲ್ಲಿ ವಾಸಿಸುತ್ತಾರೆ. ಅವರಿಗೆ ಪ್ರಾಂತ, ದೇಶವೆಂಬುದೇ ಇಲ್ಲ. ಹಾಗೆಯೇ ಧರ್ಮಶಾಸ್ತ್ರವೂ. ಅವರ ಬಂಡಾಯ ಮನೋಧರ್ಮ ಝೆನ್ ಗುರುಗಳಿಗಿಂತ ತೀಕ್ಷ್ಣ ಹಾಗೂ ಆಳವಾದದ್ದು. ಏಕೆಂದರೆ ಝೆನ್ ಗುರುಗಳು ಕನಿಷ್ಠ ಬೌದ್ಧ ಧರ್ಮಕ್ಕೆ ಸೇರಿದವರು. ಬುದ್ಧನನ್ನು ಪೂಜಿಸುವರು. ಅವರಲ್ಲಿ ಧರ್ಮಶಾಸ್ತ್ರಗಳು ಇವೆ - ಇವು ಧರ್ಮಶಾಸ್ತ್ರಗಳನ್ನು ವಿರೋಧಿಸುವ ಶಾಸ್ತ್ರಗಳೇ ಆಗಿದ್ದರೂ ಸಹ, ಸುಡುವುದಕ್ಕೇ ಆದರೂ ಕೆಲವು ಧರ್ಮಶಾಸ್ತ್ರಗಳಿವೆ.

ಬಾಲ್ ಜನರಲ್ಲಿ ಏನೂ ಇಲ್ಲ. ಸುಟ್ಟುಹಾಕಲೂ ಧರ್ಮಶಾಸ್ತ್ರಗಳಿಲ್ಲ. ಚರ್ಚ್‌ಗಳಿಲ್ಲ, ಮಂದಿರಗಳಿಲ್ಲ, ಮಸೀದಿಗಳಿಲ್ಲ, ಏನೂ ಇಲ್ಲ. ಅವರು ತಿರುಕರು. ಸದಾ ಬೀದಿಯಲ್ಲಿ ಇರುವ ಇವರಿಗೆ ಮನೆ, ನಿವಾಸವೇ ಇಲ್ಲ. ಅವರಿಗೆ ದೇವರೇ ನೆಲೆ. ಆಕಾಶವೇ ಭಾವಣಿ. ರಜಾಯಿ ಅಥವಾ ಮೇಲುಹಾಸು, ಕೈಯಲ್ಲಿ ಒಂದು ತಂತಿಯ ಏಕತಾರ ಮತ್ತು ತಾಮ್ರ ಅಥವಾ ಹಿತ್ತಾಳೆಯಿಂದ ಮಾಡಿದ ಬುರುಡೆ-ಮದ್ದಲೆ ಬಿಟ್ಟರೆ ಅವರಲ್ಲಿ ಮತ್ತೇನೂ ಇಲ್ಲ. ಅದೇ ಅವರ ಆಸ್ತಿ. ಅವರು ಒಂದು ಕೈಯಲ್ಲಿ ತಂತಿ ಮೀಟುತ್ತಾ ಇನ್ನೊಂದು ಕೈಯಲ್ಲಿ ಮದ್ದಲೆ ಬಾರಿಸುತ್ತಾರೆ. ಮದ್ದಲೆ ಅವರ ಒಂದು ಕಡೆ ಜೋಲುತ್ತಿರುತ್ತದೆ. ಈ ಸಂಗೀತವಾದ್ಯ ನುಡಿಸುತ್ತಾ ಅವರು ಕುಣಿಯುತ್ತಾರೆ. ಅದೇ ಅವರ ಏಕಮಾತ್ರ ಧರ್ಮ.

ನೃತ್ಯವೇ ಅವರ ಧರ್ಮ; ಹಾಡೇ ಅವರ ಪೂಜೆ. ಅವರು 'ದೇವರು' ಎಂಬ ಪದವನ್ನೂ ಸಹ ಬಳಸುವುದಿಲ್ಲ. ದೇವರಿಗೆ ಅವರು ಬಳಸುವ ಪದವೆಂದರೆ 'ಆಧಾರ ಮನುಷ್ಯ'. ಅವರು ಮನುಷ್ಯರನ್ನೇ ಪೂಜಿಸುತ್ತಾರೆ. ಅವರ ಪ್ರಕಾರ ನಮ್ಮ - ನಿಮ್ಮ ಹಾಗೂ ಎಲ್ಲರ ಅಂತರಂಗದಲ್ಲಿ ಈ ಆಧಾರ ಮನುಷ್ಯನಿದ್ದಾನೆ. ಈ ಆಧಾರ ಮನುಷ್ಯನನ್ನು ಹುಡುಕುವುದೇ ಅವರ ಮುಖ್ಯ ಕೆಲಸ.

ಆದ್ದರಿಂದ ದೇವರು ನಿಮ್ಮ ಹೊರಗಡೆ ಎಲ್ಲೂ ಇಲ್ಲ. ಹೀಗಾಗಿ ದೇವಾಲಯಗಳನ್ನು ನಿರ್ಮಿಸುವ ಅಗತ್ಯವಿಲ್ಲ. ಏಕೆಂದರೆ ನೀವೇ ಆತನ ದೇವಾಲಯವಾಗಿರುವಿರಿ. ಅಂತರಂಗದೊಳಗೇ ಎಲ್ಲ ಶೋಧ. ಸಂಗೀತ ಮತ್ತು ನೃತ್ಯದ ಅಲೆಯ ಮೂಲಕ ಆತ ಅಂತರಂಗದೊಳಗೆ ಚಲಿಸುತ್ತಾನೆ.[49]

ಉಪನಿಷತ್ತುಗಳನ್ನು ಬರೆಯಲಾದ ಸಮಯದಲ್ಲಿ ಅಂದರೆ ಸುಮಾರು ಐದು ಸಾವಿರ ವರ್ಷಗಳ ಹಿಂದೆ, ಗಾರ್ಗಿ ಜೀವಿಸಿದ್ದಳು. ಅದು ಮನುಕುಲದ ಬಾಲ್ಯಾವಸ್ಥೆ. ಆ ದಿನಗಳಲ್ಲಿ ಗಂಡಸರು ಹೆಂಗಸರ ವಿಷಯದಲ್ಲಿ ಅಷ್ಟೊಂದು ಕ್ರೂರಿಗಳಾಗಿರಲಿಲ್ಲ.

ಪ್ರತಿವರ್ಷವೂ ರಾಜ ಬುದ್ಧಿವಂತರಿಗಾಗಿ ಒಂದು ಸ್ಪರ್ಧೆಯನ್ನು ಏರ್ಪಡಿಸುತ್ತಿದ್ದ. ರಾಜ ಕೂಡ ಸ್ವತಃ ತತ್ವಜ್ಞಾನಿಯಾಗಿದ್ದ. ಪರಮಜ್ಞಾನಿಗಳಾರೂ ಆ ಸ್ಪರ್ಧೆಗೆ ಹೋಗುತ್ತಿರಲಿಲ್ಲ. ಅವರಿಗೆ ಇದು ಬಾಲಿಶವಾಗಿದ್ದರೂ, ಸ್ಪರ್ಧೆಯಲ್ಲಿ ಗೆದ್ದವರಿಗೆ ಭಾರಿ ಬಹುಮಾನ ನೀಡುತ್ತಿದ್ದ. ಒಂದು ಬಾರಿ ರಾಜ ಘೋಷಿಸಿದ, ''ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಒಂದು ಸಾವಿರ ಆಕಳುಗಳನ್ನು ಬಹುಮಾನವಾಗಿ ಕೊಡುತ್ತೇನೆ. ಈ ಆಕಳುಗಳ ಕೋಡುಗಳಿಗೆ ವಜ್ರಖಚಿತ ಚಿನ್ನದ ರೇಕುಗಳನ್ನು ತೊಡಿಸಲಾಗಿರುತ್ತದೆ,'' ಎಂದು.

ಆ ಕಾಲದಲ್ಲಿ ಯಾಜ್ಞವಲ್ಕ್ಯ ಮಹಾ ವಿದ್ವಾಂಸನೆಂಬ ಹೆಗ್ಗಳಿಕೆಗೆ ಪಾತ್ರನಾಗಿದ್ದ. ಆತನಿಗೆ ತಾನು ಈ ಸ್ಪರ್ಧೆಯನ್ನು ಗೆಲ್ಲುವೆನೆಂಬ ಆತ್ಮವಿಶ್ವಾಸವಿತ್ತು. ಚರ್ಚಾಸ್ಪರ್ಧೆ ನಡೆಯುವ ಸ್ಥಳದಲ್ಲಿ ಒಂದು ಸಾವಿರ ಆಕಳು ಹಾಗೂ ಅವುಗಳ ಕೋಡುಗಳು ಎಲ್ಲರ ಆಕರ್ಷಣೆಯ ಬಿಂದುಗಳಾಗಿದ್ದುವು. ಯಾಜ್ಞವಲ್ಕ್ಯ ತನ್ನ ಶಿಷ್ಯರಿಗೆ ಹೇಳಿದ, ''ಈ ಆಕಳನ್ನು ನನ್ನ ಮನೆಗೆ ಕರೆದೊಯ್ಯಿರಿ. ಈ ಉರಿಬಿಸಿಲಿನಲ್ಲಿ ಇವುಗಳೇಕೆ ನಿಲ್ಲಬೇಕು?'' ಅದಕ್ಕೆ ಅವನ ಶಿಷ್ಯರೆಂದರು, ''ಆದರೆ ನೀವು ಸ್ಪರ್ಧೆಯಲ್ಲಿ ಮೊದಲು ಜಯಶಾಲಿಯಾಗಬೇಕಲ್ಲ.'' ಯಾಜ್ಞವಲ್ಕ್ಯನೆಂದ, ''ಆ ವಿಚಾರ ನಾನು ನೋಡಿಕೊಳ್ಳುತ್ತೇನೆ.''

ರಾಜನಿಗಾಗಲಿ ಅಥವಾ ಅಲ್ಲಿ ಸೇರಿದ ಸಾವಿರಕ್ಕೂ ಅಧಿಕ ಬುದ್ಧಿವಂತರಿಗೆ ಯಾಜ್ಞವಲ್ಕ್ಯನನ್ನು ತಡೆಯಲು ಆಗಲಿಲ್ಲ. ಚರ್ಚಾಸ್ಪರ್ಧೆಯಲ್ಲಿ ಯಾಜ್ಞವಲ್ಕ್ಯನನ್ನು ಮಣಿಸುವುದು ಅಸಾಧ್ಯವೆಂಬುದು ಅವರೆಲ್ಲರಿಗೂ ಚೆನ್ನಾಗಿ ಗೊತ್ತಿತ್ತು. ಅವನ ಶಿಷ್ಯರು ಆಕಳುಗಳನ್ನು ತಮ್ಮೊಂದಿಗೆ ಕರೆದೊಯ್ದರು.

ಇನ್ನೇನು ಯಾಜ್ಞವಲ್ಕ್ಯ ಜಯಶಾಲಿ ಎಂದು ಘೋಷಿಸಬೇಕೆನ್ನುವಷ್ಟರಲ್ಲಿ ಗಾರ್ಗಿ ಎಂಬ ಮಹಿಳೆ ಎದ್ದು ನಿಂತಳು .... ಆಕೆ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಲು ಹೋದ ತನ್ನ ಗಂಡನಿಗಾಗಿ ಕಾಯುತ್ತಿದ್ದಳು. ಆಗಲೇ ತಡವಾಗಿಬಿಟ್ಟಿತ್ತು. ಗಂಡನನ್ನು ಕರೆಯುವುದಕ್ಕಾಗಿ ತಾನೇ ಸ್ವತಃ ಬಂದಿದ್ದಳು. ಸ್ಪರ್ಧೆ ನಡೆಯುವ ಜಾಗದೊಳಗೆ ಪ್ರವೇಶಿಸಿದಳು. ಫಲಿತಾಂಶ ಪ್ರಕಟಿಸುವ ಮೊದಲೇ ಬಹುಮಾನವಾಗಿ ನೀಡಬೇಕಾದ ಸಾವಿರ ಆಕಳನ್ನು ಕರೆದೊಯ್ಯುವ ದೃಶ್ಯವನ್ನು ನೋಡಿದಳು.

ತಕ್ಷಣ ರಾಜನಿಗೆ ಹೇಳಿದಳು, ''ಆತನ ವಿಜಯವನ್ನು ಘೋಷಿಸಬೇಡಿ. ನನ್ನ ಗಂಡನನ್ನು ಹುಡುಕುವುದಕ್ಕಾಗಿ ಆಕಸ್ಮಿಕವಾಗಿ ಇಲ್ಲಿಗೆ ಬಂದೆ .... ಈ ದೃಶ್ಯವನ್ನು ನೋಡಿದೆ .... ಈತನ ವಿರುದ್ಧ ಮಾತನಾಡುವವರು ಬೇಕಾಗಿದ್ದಾರೆ. ಇವರೊಂದಿಗೆ ವಾದಕ್ಕೆ ನಾನು ಸಿದ್ಧ. ಅವರು

ವಿದ್ವಾಂಸರಿರಬಹುದು. ಆದರೆ ಪಾಂಡಿತ್ಯಕ್ಕೆ ಎಂದೂ ಸತ್ಯ ತಿಳಿದಿರುವುದಿಲ್ಲ.''

ಅವು ಬಲು ಸುಂದರ ದಿನಗಳು. ಹೆಂಗಸೊಬ್ಬಳು ನೆರೆದ ಸಭೆಯಲ್ಲಿ ಒಬ್ಬ ಅಪ್ರತಿಮ ಪಂಡಿತನಿಗೆ ಸವಾಲು ಹಾಕಬಹುದಿತ್ತು. ರಾಜ, ''ಹಾಗಿದ್ದಲ್ಲಿ ನಾನು ಕಾಯಲೇಬೇಕು. ನೀವಿಬ್ಬರೂ ವಾದಿಸಬಹುದು,'' ಎಂದು ಅನುಮತಿ ಸೂಚಿಸಿದ.

ಗಾರ್ಗಿ ಒಂದು ಸರಳ ಪ್ರಶ್ನೆಯನ್ನು ಮುಂದಿಟ್ಟಳು. ''ಈ ಪ್ರಪಂಚವನ್ನು ನಿರ್ಮಿಸಿದವರು ಯಾರು?'' ಯಾಜ್ಞವಲ್ಕ್ಯ ಗೊಳ್ಳೆಂದು ನಕ್ಕುಬಿಟ್ಟ. ಇದೆಂತಹ ಬಾಲಿಶ ಪ್ರಶ್ನೆ ಎಂದು ಅಂದುಕೊಂಡ. ಆದರೆ ಅವನ ಎಣಿಕೆ ಸರಿಯಾಗಿರಲಿಲ್ಲ. ಆತ ಹೇಳಿದ, ''ಈ ಪ್ರಪಂಚವನ್ನು ನಿರ್ಮಿಸಿದ್ದು ದೇವರು - ಏಕೆಂದರೆ ಇರುವುದೆಲ್ಲವನ್ನೂ ಯಾರಾದರೊಬ್ಬರು ನಿರ್ಮಿಸಿರಲೇಬೇಕಲ್ಲ.''

ಈಗ ನಗುವ ಸರದಿ ಗಾರ್ಗಿಯದಾಯಿತು. ಆಕೆ ಹೇಳಿದಳು, ''ನೀನು ಈಗ ಸಿಕ್ಕಿಬಿದ್ದಿದ್ದೀಯೆ. ಈಗ ನೀನು ಸಂಕಷ್ಟದಲ್ಲಿರುವೆ. ದೇವರನ್ನು ನಿರ್ಮಿಸಿದ್ದು ಯಾರು? ಏಕೆಂದರೆ ಇರುವುದರ ಪೈಕಿ ಆತನೂ ಒಬ್ಬ ಆತನೂ ಒಂದು ಅಸ್ತಿತ್ವ. ಎಲ್ಲ ಅಸ್ತಿತ್ವಕ್ಕೂ ನಿರ್ಮಾತೃ ಬೇಕೇ ಬೇಕು.''

ಯಾಜ್ಞವಲ್ಕ್ಯನ ಮುಖ ಬಿಳಿಚಿಕೊಂಡಿತು. ತಾನು ಸಂಕಷ್ಟದಲ್ಲಿ ಇರುವೆನೆಂಬ ಅರಿವಾಯಿತು. ಈ ದೇವರನ್ನೂ ಮೊದಲ ದೇವರು ನಿರ್ಮಿಸಿದ್ದಾನೆಂದರೂ ಪ್ರಶ್ನೆ ಹಾಗೆಯೇ ಉಳಿಯುವುದು - ಮೊದಲ ದೇವರನ್ನು ಹುಟ್ಟಿಸಿದ್ದು ಯಾರು? ಸಾವಿರ ಸಲ ಉತ್ತರಿಸಿದರೂ, ಪ್ರಶ್ನೆ ಮಾತ್ರ ಪ್ರಶ್ನೆಯಾಗಿಯೇ ಉಳಿಯುವುದು. ಮೊದಲ ದೇವರನ್ನೂ ಕೂಡಾ ಯಾರೋ ಹುಟ್ಟಿಸಿರಲೇಬೇಕು. ಹೀಗಾಗಿ ಅವನನ್ನು ಮೊದಲನೆಯವನು ಎಂದು ಕರೆಯುವಂತಿಲ್ಲ.

ಯಾಜ್ಞವಲ್ಕ್ಯನಿಗೆ ಕೋಪ ನೆತ್ತಿಗೇರಿತು. ಅವಮಾನದ ಬೆಂಕಿ ಅವನನ್ನು ಸುಡುತ್ತಿತ್ತು. ಸಿಟ್ಟಿನಿಂದ ತನ್ನ ಖಡ್ಗವನ್ನು ಹೊರಕ್ಕೆಳೆದು ಗದರಿದ, ''ಏ ಹೆಣ್ಣೇ! ನಿಲ್ಲಿಸು. ನಿಲ್ಲಿಸದಿದ್ದರೆ ನಿನ್ನ ತಲೆ ಉರುಳುವುದು!''

ಗಾರ್ಗಿ ಜಗ್ಗಲಿಲ್ಲ. ಆಕೆಯೂ ಹೇಳಿದಳು, ''ಮೊದಲು ಖಡ್ಗವನ್ನು ಒರೆಯೊಳಗಿಡು. ಖಡ್ಗ ನಿನ್ನ ವಾದವಾಗುವುದಿಲ್ಲ.'' ಆಕೆ ರಾಜನೆಡೆಗೆ ನೋಡುತ್ತಾ ಹೇಳಿದಳು, ''ತೆಗೆದುಕೊಂಡುಹೋದ ಒಂದು ಸಾವಿರ ಆಕಳನ್ನು ವಾಪಸ್ ತರುವಂತೆ ಇವನಿಗೆ ಆಜ್ಞಾಪಿಸಿ.''

ಯಾಜ್ಞವಲ್ಕ್ಯ ತನ್ನ ಜೀವಮಾನದಲ್ಲೇ ಇಂತಹ ಅಪಮಾನವನ್ನು ಅನುಭವಿಸಿರಲಿಲ್ಲ. ಆತ ಮುಂದೆಂದೂ ಯಾವುದೇ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಲಿಲ್ಲ. ಯಾಜ್ಞವಲ್ಕ್ಯನಿಂದ ವಾಪಸು ತಂದ ಒಂದು ಸಾವಿರ ಆಕಳನ್ನು ಗಾರ್ಗಿ ಬಹುಮಾನವಾಗಿ ಪಡೆದಳು.

ನಮಗೆ ಗೊತ್ತಿರುವ ಹಾಗೆ, ಗಾರ್ಗಿ ಜ್ಞಾನೋದಯ ಹೊಂದಿದ ಮೊದಲ ಮಹಿಳೆ.[50]

ಭಾರತ ಸ್ತ್ರೀ-ಸ್ವಭಾವದ ರಾಷ್ಟ್ರ. ಅದು ಸ್ತ್ರೀ-ಸ್ವಭಾವ ರಾಷ್ಟ್ರವಾಗಿಯೇ ಉಳಿದಿದೆ. ಭಾರತದ ಇಡೀ ಮನಸ್ಸು ಆತ್ಮ ಸ್ತ್ರೈಣ. ಅಮೆರಿಕ ಅಥವಾ ಜರ್ಮನಿ ಸರಿ ವಿರುದ್ಧ. ಅವು ಪುರುಷ ರಾಷ್ಟ್ರಗಳು. ಭಾರತದ ಆತ್ಮ ಸ್ತ್ರೈಣ. ಇದಕ್ಕಾಗಿಯೇ ಭಾರತಕ್ಕೆ ಎಂದೂ ಆಕ್ರಮಣಕಾರಿ ಮನೋಭಾವ ತಾಳಲು ಸಾಧ್ಯವಾಗಿಲ್ಲ. ಭಾರತದಲ್ಲಿ ಹಿಂಸಾಚಾರಕ್ಕೆ ಎಂದೂ ಆಸ್ಪದವಿಲ್ಲ. ಭಾರತದ ಇಡೀ ಇತಿಹಾಸ ಅಹಿಂಸಾಚಾರದ ಕಥೆ. ಭಾರತದ ಇತಿಹಾಸವನ್ನು ಗಮನಿಸಿದರೆ ಒಂದು ಸೋಜಿಗದ ಸಂಗತಿ ಬೆಳಕಿಗೆ ಬರುತ್ತದೆ. ಜಗತ್ತಿನಲ್ಲಿ ಬೇರಾವ ದೇಶವೂ ಭಾರತದಷ್ಟು ಸ್ತ್ರೀಸ್ವಭಾವವನ್ನು ಹೊಂದಿಲ್ಲ. ಇದು ಭಾರತಕ್ಕೆ ದುರದೃಷ್ಟಕರವಾಗಿ ಪರಿಣಮಿಸಿದೆ ಕೂಡ.

ಇಡೀ ಜಗತ್ತು ಪುರುಷ ಗುಣವನ್ನು ಹೊಂದಿದೆ. ಇಡೀ ಜಗತ್ತು ಆಕ್ರಮಣಕಾರಿ ಮನೋಭಾವ ಹೊಂದಿದೆ. ಇಡೀ ವಿಶ್ವ ಹಿಂಸಾಪ್ರವೃತ್ತಿಯನ್ನು ಹೊಂದಿದೆ. ಭಾರತವೊಂದೇ ಹಿಂಸಾಪ್ರವೃತ್ತಿಯನ್ನು ಹೊಂದಿಲ್ಲ. ಆಕ್ರಮಣಕಾರಿಯಲ್ಲ. ಭಾರತದ ಮೂರು ಸಾವಿರ ವರ್ಷಗಳ ಇತಿಹಾಸವೆಂದರೆ ಸಂಕಷ್ಟ, ಬೇಗುದಿ ಮತ್ತು ಯಾತನೆಯ ಇತಿಹಾಸ. ಆದರೆ ಈ ಒಂದು ಅಂಶವೇ ಮುಂದೊಂದು ದಿನ ಭಾರತಕ್ಕೆ ವರದಾನವಾಗಿ ಪರಿಣಮಿಸಬಹುದು. ಏಕೆಂದರೆ ಪುರುಷ ಗುಣಗಳ ಪ್ರಭಾವದಿಂದ ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ವಿನಾಶಕ್ಕಾಗಿ ಹತ್ತಿರ ಹತ್ತಿರ ಧಾವಿಸುತ್ತಿವೆ.

ಪುರುಷ ಮನಸ್ಸು ಆಕ್ರಮಣಕಾರಿ ಮನೋಭಾವದ್ದು. ಪುರುಷ ಮನಸ್ಸು ಹಿಂಸಾರೂಪದ ಮನಸ್ಸು. ಈ ಮನಸ್ಸಿನ ತಳಹದಿಯಲ್ಲಿ ರೂಪಗೊಂಡು ಅಭಿವೃದ್ಧಿ ಹೊಂದಿದ ಪಾಶ್ಚಿಮಾತ್ಯ ರಾಷ್ಟ್ರಗಳು ಯುದ್ಧದ ನೆರಳಿನಲ್ಲಿ ದಿನಗಳನ್ನು ನೂಕುತ್ತಿವೆ. ದಿನದಿಂದ ದಿನಕ್ಕೆ ಅವು ಕಟ್ಟಕಡೆಯ ಯುದ್ಧಕ್ಕೆ ಹತ್ತಿರವಾಗುತ್ತಿವೆ. ಇನ್ನು ಅವರಿಗೆ ಯುದ್ಧ ವಿನಾಶದ ಹೊರತಾಗಿ ಬೇರೆ ಮಾರ್ಗವೇ ಇಲ್ಲ.

ಉಳಿದಿರುವ ಮತ್ತೊಂದು ಸಾಧ್ಯತೆ ಎಂದರೆ, ಇತಿಹಾಸದ ಚಕ್ರ ತಿರುಗಿ, ಈಗಿನ ಪುರುಷ ನಾಗರೀಕತೆ ಮುಗಿದು, ಹೊಸ ಅಧ್ಯಾಯ ಆರಂಭವಾಗುವುದು. ಈ ಅಧ್ಯಾಯ ಸ್ತ್ರೀಚಿತ್ತದ ನಾಗರಿಕತೆಯದಾಗಿರುತ್ತದೆ.[51]

ಪೂರ್ವದಲ್ಲಿ ಯಾರನ್ನೇ ಆಗಲಿ ಸ್ವಾಗತಿಸುವಾಗ ಎರಡೂ ಕೈಗಳನ್ನು ಜೋಡಿಸಿ ನಮಸ್ಕರಿಸುತ್ತೇವೆ. ಪಾಶ್ಚಿಮಾತ್ಯ ದೇಶಗಳಲ್ಲಿ ಕೈಕುಲುಕುವ ಅಭ್ಯಾಸವಿದೆ. ಈ ಎರಡು ಪದ್ಧತಿಗಳಲ್ಲಿರುವ ವ್ಯತ್ಯಾಸವನ್ನು ಗಮನಿಸಿರುವಿರೇನು? ಎರಡೂ ಕೈಗಳನ್ನು ಜೋಡಿಸುತ್ತಾ ನಮಸ್ಕರಿಸುವಾಗ, ನೀವು ಸೂಚಿಸುವುದೇನೆಂದರೆ, ''ನಿಮ್ಮಲ್ಲಿರುವ ದೈವೀಕತೆಗೆ ನಾನು ತಲೆಬಾಗುತ್ತೇನೆ,'' ಎಂದು. ನೀವು ಕೈಕುಲುಕುವಾಗ ದೈವತ್ವದ ಪ್ರಶ್ನೆಯೇ ಬರುವುದಿಲ್ಲ. ಕೈಕುಲುಕುವುದರಿಂದ ಒಂದು ಸಂಗತಿ



ಕೋಕಲಿವಾ - ತಂತ್ರದ 84 ಸಿದ್ಧಾಗಳಲ್ಲಿ ಒಬ್ಬರು

ಸ್ಪಷ್ಟವಾಗುವುದು - ಅದೇನೆಂದರೆ ಕೈಕುಲುಕುತ್ತಿರುವ ಇಬ್ಬರ ಬಲಗೈಗಳಲ್ಲಿ ಯಾವುದೇ ಆಯುಧವಾಗಲಿ, ಶಸ್ತ್ರಾಸ್ತ್ರವಾಗಲಿ ಇಲ್ಲವೆಂಬುದು. ಆ ಸಮಯದಲ್ಲಿ ಇಬ್ಬರೂ ವೈರಿಗಳಲ್ಲ. ಬಲಗೈಯನ್ನು ಚಾಚಿದಾಗ, ಅದು ಖಾಲಿಯಾಗಿದೆಯೆಂದು ತೋರಿಸಿದಂತೆ - ''ನಾನು ನಿಮ್ಮ ವೈರಿ ಅಲ್ಲ.'' ಹೆಚ್ಚೆಂದರೆ ಅದು ತಿಳಿಸುವುದು ಇಷ್ಟೇ. ಕೈಕುಲುಕುವುದು ಒಂದು ನಯವಾದ ನಡೆವಳಿಕೆ ಅಥವಾ ತಂತ್ರ, ಉಪಾಯ.

ಬಲಗೈ ಅಪಾಯಕಾರಿ. ಶಸ್ತ್ರಾಸ್ತ್ರ ಹಿಡಿಯುವುದು ಆ ಕೈಯಲ್ಲೇ. ಈ ಕೈ ಬಿಚ್ಚಿರುವುದು ಕಾಣದಿದ್ದರೆ, ಸ್ಪರ್ಶಿಸಿ ನೋಡದಿದ್ದರೆ ನಿಮ್ಮಲ್ಲಿ ಸಂದೇಹ ಮೂಡಿರುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಬೆಳೆದು ಬಂದಿರುವ ಕೈಕುಲುಕುವ ಅಥವಾ ಹಸ್ತಲಾಘವ ನೀಡುವ ಶಿಷ್ಟಾಚಾರ ಅಪನಂಬಿಕೆಯನ್ನು ಆಧರಿಸಿದೆ. ಕೈಕುಲುಕುವ ಪದ್ಧತಿಯ ಮೂಲದ ಬಗ್ಗೆ ಪಾಶ್ಚಿಮಾತ್ಯ ಇತಿಹಾಸಕಾರರು ಸಹಮತ ವ್ಯಕ್ತಪಡಿಸಿದ್ದಾರೆ.

ಕೈಗಳನ್ನು ಜೋಡಿಸಿ ತಲೆಬಾಗಿ ನಮಸ್ಕರಿಸುವ ಸ್ವಾಗತ ವಿಧಾನ ನಿಮ್ಮನ್ನು ಸಂಪೂರ್ಣ ಬೇರೆ ಹಂತಕ್ಕೆ ಒಯ್ಯುತ್ತದೆ. ಇದು ವಿಭಿನ್ನ ಸನ್ನಿವೇಶ, ಸಂದರ್ಭವನ್ನು ಒಳಗೊಂಡಿದೆ. ಇದು ನಿಮಗೆ ಗೌರವದ, ಸನ್ಮಾನದ ಅನುಭವ ನೀಡುತ್ತದೆ. ಅದೂ ಸಾಮಾನ್ಯ ರೀತಿಯಲ್ಲಲ್ಲ, ವಿಶಿಷ್ಟ ಹಾಗೂ ವೈಶಿಷ್ಟ್ಯಪೂರ್ಣವಾಗಿ. ಅದು ನಿಮ್ಮಲ್ಲಿರುವ ದಿವ್ಯತೆ, ದೈವತ್ವವನ್ನು ನೆನಪಿಸುತ್ತದೆ. ಹೀಗೆ ಕೈಜೋಡಿಸುವುದು ನಿಮಗಾಗಿ ಅಲ್ಲ ಅಥವಾ ನಿಮ್ಮ 'ಅಹಂ'ಗೂ ಅಲ್ಲ ...... 'ಅಹಂ'ನ್ನು ಮೀರಿದ್ದಕ್ಕೆ ನಿಮ್ಮ ಸಹಜತೆಗೆ, ನಿಮ್ಮ ಆತ್ಮಕ್ಕೆ. ಅಲ್ಲದೆ ಎರಡೂ ಕೈಗಳನ್ನು ಜೋಡಿಸುವುದು ನಾನು ನಿನಗೆ ಅರ್ಧ ಮನಸ್ಕನಾಗಿಲ್ಲ ಎಂಬುದನ್ನು ತೋರಿಸುತ್ತದೆ. ನನ್ನ ಎರಡೂ ಭಾಗಗಳು ಒಂದಾಗಿವೆ, ಪರಿಪೂರ್ಣವಾಗಿವೆ ಎಂಬುದರ ಸೂಚಕವಿದು. ಏನನ್ನೂ ಹಿಡಿದಿಟ್ಟುಕೊಂಡಿಲ್ಲ ಎಂಬುದರ ದ್ಯೋತಕವದು. ಏಕೆಂದರೆ ಕೈಕುಲುಕುವುದು ಯಾವತ್ತೂ ಒಂದೇ ಕೈಯಿಂದ. ಇದು ನಿಮ್ಮ ಒಂದು ಬದಿಯ ಪ್ರತೀಕ. ಅಂದರೆ ಕೇವಲ ನಿಮ್ಮ ಅರ್ಧದ ಪ್ರತೀಕ. ಉಳಿದರ್ಧ ಎಲ್ಲಿ? ಸ್ನೇಹದ ದ್ಯೋತಕವಾಗಿ ನೀವು ಒಂದು ಕೈಯನ್ನು ಚಾಚಿದಾಗ ಮತ್ತೊಂದು ಕೈ ಅದಕ್ಕೆ ಸಹಮತ ವ್ಯಕ್ತಪಡಿಸದಿರಬಹುದು. ಇದು ವಿಭಜಿತ, ಭೇದ, ಅರೆಬರೆ ಸ್ವಾಗತ. ಇದನ್ನು ನೀವು ಅನುಭವಿಸಿರಬಹುದು.

ನೀವು ಬೇರೆಯವರೊಂದಿಗೆ ಕೈಕುಲುಕಿದಾಗ, ಅವರ ಕೈ ತಂಪಾಗಿದೆಯೋ ಅಥವಾ ಬೆಚ್ಚಗಿದೆಯೋ, ಜೀವಂತವಾಗಿದೆಯೋ ಅಥವಾ ಕಟ್ಟಿಗೆಯ ಹಾಗೆ ನಿರ್ಜೀವವಾಗಿದೆಯೋ ಎಂಬುದರ ಅರಿವಾಗುವುದು. ಅರೆಮನಸ್ಸಿನದಾಗಿದ್ದರೆ, ಅದು ಬೆಚ್ಚಗಿರುವುದು ಸಾಧ್ಯವಿಲ್ಲ. ಅದು ಜೀವಂತವಾಗಿರುವುದೂ ಸಾಧ್ಯವಿಲ್ಲ. ಇದು ಕೇವಲ ಔಪಚಾರಿಕ ನಡೆವಳಿಕೆ, ವರ್ತನೆ. ಆಳವಿಲ್ಲದ್ದು. ಎಲ್ಲೋ ಒಂದೆರಡು ಬಾರಿ ಮಾತ್ರ ನೀವು

ಬೆಚ್ಚಗಿನ ಕೈಯನ್ನು ಸ್ಪರ್ಶಿಸಬಹುದು. ಒಂದು ವೇಳೆ ಒಂದು ಹಸ್ತ ಬೆಚ್ಚಗಿದ್ದರೆ, ಆಗ ಮತ್ತೊಂದು ಹಸ್ತವೂ ನಿಮ್ಮ ಹಸ್ತವನ್ನು ಹಿಡಿಯುವುದು. ಆಗ ನಿಮ್ಮೆರಡೂ ಕೈಗಳು ಆ ಒಂದು ಹಸ್ತವನ್ನು ತಬ್ಬುವವು. ಆಗ ಎರಡೂ ಕೈಗಳನ್ನು ಜೋಡಿಸಿ ...... ಇದೇ ರೀತಿಯಲ್ಲಿ ಪೂರ್ವ ಪರಮಾತ್ಮನನ್ನು ಪೂಜಿಸುತ್ತದೆ. ಅದೇ ರೀತಿಯಲ್ಲಿ ಅದು ಮನುಷ್ಯನನ್ನೂ ಸ್ವಾಗತಿಸುತ್ತದೆ.[52]

ಭಾರತ ಎಂದೂ ಪ್ರಕೃತಿಯನ್ನು ಜಯಿಸಲು ಪ್ರಯತ್ನಿಸಲಿಲ್ಲ. ನಿಜವಾಗಿ ಹೇಳುವುದಾದರೆ ಭಾರತ ಯಾರನ್ನೇ ಆಗಲಿ ಗೆಲ್ಲಲು ಪ್ರಯತ್ನಿಸಲಿಲ್ಲ. ಮತ್ತೊಬ್ಬರನ್ನು ಗೆಲ್ಲುವುದು ಅಥವಾ ಅಧೀನದಲ್ಲಿಟ್ಟುಕೊಳ್ಳುವ ಕಲ್ಪನೆ ಭಾರತೀಯ ಮನಸ್ಸಿನೊಳಗೆ ಇಳಿದಿಲ್ಲ. ಯಾರಾದರೂ ಬೇರೊಬ್ಬನನ್ನು ಜಯಿಸುವ ಸಣ್ಣ ಪ್ರಯತ್ನ ಮಾಡಿದರೂ ಭಾರತದ ಮನಸ್ಸು ಆತನನ್ನು ಬೆಂಬಲಿಸುವುದಿಲ್ಲ.[53]

ಶಿಸ್ತಿನ ಪರಿಣಾಮವಾಗಿ ದೊರೆತ ಅಧಿಕಾರ ಯಾವತ್ತೂ ಮಲಿನ ಹಾಗೂ ಅಶುದ್ಧ. ಅದಕ್ಕಾಗಿಯೇ ನಾವು ಈ ಮಲಿನ ಅಧಿಕಾರವನ್ನು ಚಲಾಯಿಸಬೇಕೆಂದು ಬಯಸಿದಾಗ, ಪೊಲೀಸ್, ಕಾನೂನು ಅಥವಾ ಸೇನೆಯ ಬಲದಿಂದ ಶಿಸ್ತನ್ನು ಹೇರುತ್ತೇವೆ. ಒಂದು ಸಣ್ಣ ತೊಂದರೆ ಅಥವಾ ಸಮಸ್ಯೆಯನ್ನು ನಿವಾರಿಸಲು ನಾವು ಅದಕ್ಕೂ ದೊಡ್ಡ ಸಮಸ್ಯೆಯೊಂದನ್ನು ಸೃಷ್ಟಿಸುತ್ತೇವೆ. ಇದೇ ''ಅಶುದ್ಧ ಅಧಿಕಾರ'' ಮತ್ತು ಇದರ ಮೂಲ ಘೋರ ಶಿಸ್ತು.

ಜರ್ಮನಿಯ ಜನರ ಶಿಸ್ತಿಗೆ ಒಳಪಡುವ ಕ್ಷಮತೆಯ ಕಾರಣದಿಂದಾಗಿಯೇ ಈ ಜಗತ್ತಿಗೆ ಹಿಟ್ಲರ್ ಅಷ್ಟೊಂದು ತೊಂದರೆಗಳನ್ನು ಕೊಡಬಲ್ಲವನಾದ. ಭಾರತದಲ್ಲಿ ಯಾವ ಹಿಟ್ಲರ್ ಕೂಡ ಅಧಿಕಾರಕ್ಕೆ ಏರಲಾರ. ಯಾವನೇ ಆಗಲಿ, ಸಾವಿರಾರು ವಿಧದಲ್ಲೇ ಪ್ರಯತ್ನಿಸಲಿ, ಭಾರತದಲ್ಲಿ ಅಂತಹ ತೊಂದರೆಯನ್ನು ಕೊಡಲು ಸಾಧ್ಯವಿಲ್ಲ. ಏಕೆಂದರೆ ಭಾರತೀಯರನ್ನು ಶಿಸ್ತುಗೊಳಿಸುವುದು ಬಲು ಕಷ್ಟ! ಜರ್ಮನ್ ಸಮಾಜದ ಶಕ್ತಿ, ಶಿಸ್ತಿಗೆ ಒಳಪಡುವ ಅದರ ಸಾಮರ್ಥ್ಯದಲ್ಲಿ ಅಡಗಿದೆ. ಈ ಕಾರಣದಿಂದಾಗಿ ಜರ್ಮನಿ ಯಾವತ್ತೂ ಅಪಾಯದ ಮೂಲ. ಅದು ಯಾವತ್ತೂ ಸಮಸ್ಯೆಯನ್ನು ಸೃಷ್ಟಿಸುತ್ತದೆ. ಜರ್ಮನ್‌ರನ್ನು ಮುನ್ನಡೆಸುವ ನಾಯಕನಿದ್ದರೆ, ಅಲ್ಲಿನ ಜನರೆಲ್ಲರೂ ಶಿಸ್ತಿಗೊಳಪಟ್ಟ ಒಂದು ಸಮಾಜದಂತೆ ಆತನೊಂದಿಗೆ ಸ್ಪಂದಿಸುತ್ತಾರೆ. ಜರ್ಮನ್ ಸಮಾಜದ ಎಲುಬು ಮತ್ತು ರಕ್ತದಲ್ಲಿ ಶಿಸ್ತು ಆಳವಾಗಿ ನೆಲೆಯೂರಿದೆ.

ಭಾರತೀಯರ ಎಲುಬು ಮತ್ತು ರಕ್ತದಲ್ಲಿ ಶಿಸ್ತು ಇಲ್ಲ. ಅದಕ್ಕೆ ಕಾರಣವಿದೆ. ಈ ರೀತಿಯ ಶಿಸ್ತು ಇಲ್ಲದಿರುವುದು ಒಳ್ಳೆಯದು. ಏಕೆಂದರೆ, ನಾವು ಎಷ್ಟೇ ತೊಂದರೆಗೆ ಒಳಗಾದರೂ, ಇತರರನ್ನು ತೊಂದರೆಗೆ ಸಿಕ್ಕಿಸುವುದಿಲ್ಲ.

ಬೇರೆಯವರಿಗೆ ತೊಂದರೆ ಕೊಡುವುದಿಲ್ಲ. ನಾವು ದಾಸ್ಯಕ್ಕೆ ಒಳಗಾಗಬಹುದು, ಆದರೆ ಬೇರೆಯವರನ್ನು ದಾಸ್ಯಕ್ಕೆ ಈಡುಮಾಡುವುದಿಲ್ಲ. ಇತರರನ್ನು ದಾಸ್ಯಕ್ಕೀಡು ಮಾಡಲು ಬಹಳ ಶಿಸ್ತು ಬೇಕು. ನಾವು ಅಂತಹ ಗುಣವನ್ನು ಎಂದೂ ಹೊಂದುವುದು ಸಾಧ್ಯವಿಲ್ಲ. ಈ ದೇಶದಲ್ಲಿ ಏಕೆ ಶಿಸ್ತನ್ನು ಆಚರಿಸುವುದಿಲ್ಲ? ಈ ದೇಶದ ಆಧ್ಯಾತ್ಮ ಗುರುಗಳು, ಅಸಾಧಾರಣ ಪ್ರತಿಭಾಶಾಲಿಗಳು ಸದಾಕಾಲ ಈ ಶಿಸ್ತಿನಿಂದ ಮುಕ್ತರಾಗಿದ್ದರು. ಜನ ಹಿಂಬಾಲಿಸುವುದು ಮೇಧಾವಿಗಳನ್ನೇ. ಹಿಟ್ಲರ್ ಆಗಲಿ, ನೆಪೋಲಿಯನ್ ಆಗಲಿ, ಚಂಗೇಸ್‌ಖಾನ್ ಆಗಲಿ, ಭಾರತಕ್ಕೆ ಮಾದರಿ ಅಲ್ಲ. ಭಾರತದ ಇತಿಹಾಸವನ್ನು ಅವಲೋಕಿಸಿದರೆ, ಚಂಗೇಸ್ ಖಾನ್, ಹಿಟ್ಲರ್, ನೆಪೋಲಿಯನ್, ಮುಸಲೋನಿ, ಸ್ಟಾಲಿನ್, ಮಾವೋರಂತಹ ಒಬ್ಬನೇ ಒಬ್ಬ ವ್ಯಕ್ತಿ ಹುಟ್ಟಲಿಲ್ಲವೆಂಬುದು ವೇದ್ಯವಾಗುತ್ತದೆ. ಐದು ಸಾವಿರ ವರ್ಷಗಳ ಇತಿಹಾಸವಿರುವ ಬೃಹತ್ ರಾಷ್ಟ್ರಕ್ಕೆ ಇಂತಹ ಒಬ್ಬ ವ್ಯಕ್ತಿಯನ್ನು ಹುಟ್ಟಿಸಲು ಸಾಧ್ಯವಾಗಲಿಲ್ಲ. ಇದು ನಮ್ಮಿಂದ ಸಾಧ್ಯವಾಗಲಿಲ್ಲ. ಇಂತಹ ಸಾಧನೆಗೆ ಶಿಸ್ತಿನ ಭದ್ರ ಬುನಾದಿ ಅವಶ್ಯಕ.

ಆದರೆ ನಮ್ಮ ದೇಶದಲ್ಲಿ ಬುದ್ಧ, ಮಹಾವೀರ, ಪತಂಜಲಿಯಂತಹವರು ಜನ್ಮ ತಾಳಿದ್ದಾರೆ. ಇವರು ವಿಭಿನ್ನ ರೀತಿಯ ವ್ಯಕ್ತಿಗಳು. ಇವರು ಶಿಸ್ತನ್ನು ಕಲಿಸಲಾರರು. ಇವರೆಲ್ಲರೂ ಶಿಸ್ತಿನಿಂದ ಮುಕ್ತರಾಗಿದ್ದರು ಹಾಗೂ ಅವರು ಏನು ಮಾಡುತ್ತಾರೆ, ಏನು ಹೇಳುತ್ತಾರೆ ಅಥವಾ ಅವರಿಗೆ ಏನು ಆಗುತ್ತಿದೆ ಎಂಬುದನ್ನು ಹೇಳಲು ಯಾರಿಗೂ ಸಾಧ್ಯವಾಗುವುದಿಲ್ಲ. ಈ ಜಗತ್ತಿನಲ್ಲಿ ಭಾರತ ಸಂಪೂರ್ಣ ವಿಭಿನ್ನ ಪ್ರಯೋಗ ಮಾಡಿದೆ. ಮುಂದೆ ಒಂದು ದಿನ ಈ ಪ್ರಯೋಗ ಇಡೀ ವಿಶ್ವಕ್ಕೆ ಸಹಾಯಕವಾಗಬಹುದು.[54]

ಭಾರತವು ಯಾವುದೇ ದೇಶದ ಮೇಲೆ ದಾಳಿ ಮಾಡಿಲ್ಲ. ಎಂದೂ ಆಕ್ರಮಣಕಾರಿ ಅಥವಾ ಹಿಂಸಾತ್ಮಕ ಪ್ರವೃತ್ತಿಯನ್ನು ಪ್ರದರ್ಶಿಸಿಲ್ಲ. ದೊಡ್ಡ ದೇಶವಾಗಬೇಕು, ಬೃಹತ್ ರಾಷ್ಟ್ರವಾಗಬೇಕು ಎಂಬ ಹಂಬಲವನ್ನು ಹೊಂದಿಲ್ಲ. ಭಾರತ ಎಂದೂ ಸಾಮ್ರಾಜ್ಯವಾದಿಯಲ್ಲ. ಈ ದೇಶದ ಮೇಲೆ ಅನೇಕರು ದಾಳಿ ಮಾಡಿದ್ದಾರೆ. ಎರಡು ಸಾವಿರ ವರ್ಷಗಳ ಕಾಲ ಈ ದೇಶ ತುರ್ಕರ, ಮೊಗಲರ, ಬ್ರಿಟೀಷರ, ಪೋರ್ಚುಗೀಸರ, ಫ್ರೆಂಚ್‌ರ ದಾಸ್ಯಕ್ಕೆ ಒಳಗಾಗಿತ್ತು. ಯಾವುದಾದರೊಂದು ಹೆಸರಿನಲ್ಲಿ ಭಾರತ ಇವರ ದಾಳಿಗೆ ತುತ್ತಾಗಿತ್ತು.

ಇಂತಹ ವಿಶಾಲ, ಬೃಹತ್ ದೇಶ ಇಷ್ಟು ಸುಲಭವಾಗಿ ಮಣಿದದ್ದಾದರೂ ಏಕೆ? ಭಾರತೀಯರಿಗೆ ಹೊಡೆದಾಟ, ಯುದ್ಧದಲ್ಲಿ ಆಸಕ್ತಿಯಿರಲಿಲ್ಲ. ಚಿಕ್ಕ ಪುಟ್ಟ ಜನಾಂಗಗಳು .... ಇಂಗ್ಲೆಂಡ್ ಅಂದರೆ ಏನು? ಭಾರತದ ಯಾವುದೇ ಜಿಲ್ಲೆಗಿಂತೇನು ದೊಡ್ಡದಲ್ಲ. ಅದರ ಜನಸಂಖ್ಯೆಯಾದರೂ ಎಷ್ಟು? ಎಲ್ಲ ಭಾರತೀಯರು ಒಂದೇ ಬಾರಿಗೆ ಉಚ್ಚೆ



ಅನುಕಂಪದ ಮುದ್ರೆ

ಹೊಯ್ದರೆ ಇಂಗ್ಲೆಂಡ್ ಕೊಚ್ಚಿಕೊಂಡು ಹೋಗುತ್ತದೆ. ಮುಳುಗಿಹೋಗುತ್ತದೆ. ಅದನ್ನು ಮಣಿಸಲು ಯಾವುದೇ ಅಣುಬಾಂಬ್ ಬೇಕಿಲ್ಲ.....

ಭಾರತ ವಿಶಾಲ ಹಾಗೂ ಬೃಹದ್ಭವ್ಯ ರಾಷ್ಟ್ರ. ತೊಂಬತ್ತೈದು ಕೋಟಿ ಜನರು .... ಊಹಿಸಿ ನೋಡಿ ಎಷ್ಟೊಂದು ಜನರು! ಒಬ್ಬನ ಮೇಲೆ ಒಬ್ಬನು ನಿಂತರೆ ಸುಲಭವಾಗಿ ಚಂದ್ರನನ್ನು ತಲುಪಬಹುದು. ಆದರೆ ತುರ್ಕರ, ಮೊಗಲರ ಸಣ್ಣ ತುಕಡಿಗಳು ಭಾರತವನ್ನು ಸೋಲಿಸಿದವು .....

ನಿಜವಾದ ಅರ್ಥದಲ್ಲಿ ಇದು ಇತಿಹಾಸವಲ್ಲ. ಭಾರತ ಯಾರಿಂದಲೂ ಸೋಲಿಸಲ್ಪಟ್ಟಿಲ್ಲ. ತನ್ನ ಮೇಲೆ ದಾಳಿ ಮಾಡಲು ಭಾರತ ಎಲ್ಲರಿಗೂ ಅವಕಾಶ ನೀಡಿತು ಎಲ್ಲರನ್ನೂ ಸ್ವಾಗತಿಸಿತು. ಭಾರತ ಸುಖೀರಾಜ್ಯವಾಗಿತ್ತು. ಇಲ್ಲಿ ಆಹಾರ ಸಮೃದ್ಧವಾಗಿತ್ತು, ಜಾಗವೂ ವಿಶಾಲವಾಗಿತ್ತು. ಈ ಸಂಪತ್ತನ್ನು ಇನ್ನಷ್ಟು ಜನರು ಅನುಭವಿಸಿದರೆ ತಪ್ಪೇನು, ಎಂದು ಭಾರತ ಭಾವಿಸಿತು. ಇಲ್ಲಿ ಹಂಚಿಕೊಳ್ಳಲು ಸಾಕಷ್ಟಿದೆ. ಹೊಡೆದಾಟ, ಯುದ್ಧದಲ್ಲಿ ಆಸಕ್ತಿಯಿಲ್ಲವೆಂಬ ಒಂದೇ ಒಂದು ಕಾರಣಕ್ಕಾಗಿ ಇಲ್ಲಿನ ಶಾಂತಿಪ್ರಿಯ ಜನರು ಎರಡು ಸಾವಿರ ವರ್ಷಗಳ ಕಾಲ ಗುಲಾಮರಾಗಿದ್ದರು.[55]

ಕ್ರಿಯೆಯೇ ಸರ್ವಸ್ವ, ಸದಾ ಕ್ರಿಯೆಯಲ್ಲೇ ತೊಡಗಿರಬೇಕೆಂಬ ಪಾಶ್ಚಿಮಾತ್ಯ ರಾಷ್ಟ್ರಗಳ ನಿಲುವು ಇಡೀ ವಿಶ್ವವನ್ನು ಒಂದು ಬಿಂದುವಿಗೆ ತಂದು ನಿಲ್ಲಿಸಿದೆ. ಅವು ಯಾವತ್ತೂ ಕ್ರಿಯೆರಹಿತವಾಗಿ ಇರುವುದನ್ನು ಖಂಡಿಸಿವೆ. ಇನ್ನು ಪೂರ್ವದೇಶಗಳು ಮಹತ್ತರ ನೆರವು ನೀಡಬಹುದು. ಕ್ರಿಯೆ ನಿಜಕ್ಕೂ ಒಳ್ಳೆಯದು. ಅಲ್ಲದೆ ಅವಶ್ಯಕ ಕೂಡ. ಆದರೆ ಅದೇ ಸರ್ವಸ್ವ ಅಲ್ಲ.

ಕ್ರಿಯೆ ಬದುಕಿನ ಐಹಿಕ ಸಂಗತಿಗಳನ್ನು ಮಾತ್ರ ನೀಡಬಲ್ಲದು. ಜೀವನದ ಉನ್ನತ ಮೌಲ್ಯಗಳನ್ನು ಬೇಕಾಗಿದ್ದಲ್ಲಿ, ಅವು ನಿಮ್ಮ ಪ್ರಯತ್ನದ ಪರಿಮಿತಿಯಲ್ಲಿ ಇಲ್ಲ. ನೀವು ಮೌನವಾಗಿರಲು, ಮುಕ್ತವಾಗಿರಲು ಕಲಿಯಬೇಕು. ಪ್ರಾರ್ಥನಾಭಾವದಲ್ಲಿ ತೊಡಗಿರಬೇಕು. ನಿಮ್ಮ ಮೌನ ಸಂಪೂರ್ಣವಾದಾಗ, ಮಾಗಿದ ಹಣ್ಣಾದಾಗ, ಅಸ್ತಿತ್ವ ಅದನ್ನು ತನ್ನ ಆಶೀರ್ವಾದದಿಂದ ತುಂಬುವುದು ಎಂಬ ಭರವಸೆಯಿಂದಿರಬೇಕು.

ಆಗ ನಿಮ್ಮ ಮೇಲೆ ಪುಷ್ಪವೃಷ್ಟಿಯಾಗುವುದು.

ನೀವು ಕೇವಲ ಅಕ್ರಿಯರಾಗಿರಬೇಕು, ಏನೂ ಆಗಿರದೆ, ಶೂನ್ಯವಾಗಿರಬೇಕು.

ಬದುಕಿನ ಮಹಾನ್ ಮೌಲ್ಯಗಳಾದ ಪ್ರೀತಿ, ಸತ್ಯ, ದಯೆ, ಅನುಕಂಪ, ಪ್ರಾರ್ಥನೆ, ಕೃತಾರ್ಥತೆ, ಪರಮಾತ್ಮ ಇವೆಲ್ಲವೂ ಶೂನ್ಯದಲ್ಲಿಯೇ ಮೂಡುತ್ತವೆ, ಮೌನ ಸ್ವೀಕರಿಸಲು ಸಿದ್ಧವಿರುವ ಹೃದಯದಲ್ಲಿ ಅವತರಿಸುತ್ತವೆ. ಆದರೆ ಪಾಶ್ಚಿಮಾತ್ಯ ದೇಶಗಳು ಕ್ರಿಯೆಯಲ್ಲಿಯೇ ತಮ್ಮ ಬೇರನ್ನು ಕಂಡುಕೊಂಡಿವೆ. ಪ್ರಾಯಶಃ ಅಕ್ರಿಯೆಯನ್ನು ಕಲಿಯುವಷ್ಟು ಸಮಯ ಅದಕ್ಕೆ ಇಲ್ಲದಿರುವಂತಿದೆ.

ಭಾರತವು ಯಾವುದೇ ದೇಶದ ಮೇಲೆ ದಾಳಿ ನಡೆಸಿಲ್ಲವೆಂದರೆ ನಿಮಗೆ ಆಶ್ಚರ್ಯವಾಗಬಹುದು. ಜಗತ್ತಿನ ಎಲ್ಲ ರಾಷ್ಟ್ರಗಳೂ ಭಾರತದ ಮೇಲೆ ದಾಳಿ ನಡೆಸಿವೆ. ಭಾರತದ ಮೇಲೆ ಆಕ್ರಮಣ ಮಾಡುವುದು ಬಹಳ ಸುಲಭವಾಗಿತ್ತು. ಇದರ ಅರ್ಥ ಭಾರತದಲ್ಲಿ ಪರಾಕ್ರಮಿಗಳು ಇರಲಿಲ್ಲವೆಂದಲ್ಲ. ಶೂರರು ಇಲ್ಲವೆಂದಲ್ಲ. ಆದರೆ ಬೇರೆ ದೇಶದ ಮೇಲೆ ದಾಳಿ ನಡೆಸುವ ಯೋಚನೆಯೇ ಭಾರತೀಯರಿಗೆ ಅಸಹ್ಯ.

ಆಶ್ಚರ್ಯದ ವಿಷಯವೆಂದರೆ ಮಹಮ್ಮದ್ ಗೋರಿ ಭಾರತದ ಮೇಲೆ ಹದಿನೆಂಟು ಬಾರಿ ಆಕ್ರಮಣವೆಸಗಿದ. ಅವನನ್ನು ಮಹಾನ್ ಪರಾಕ್ರಮಿ ಪೃಥ್ವಿರಾಜ್ ಹಿಮ್ಮೆಟ್ಟಿದ. ಆದರೆ ಪೃಥ್ವಿರಾಜ್ ಎಂದೂ ಆತನ ಮೇಲೆ ಆಕ್ರಮಣಕ್ಕೆ ಹೋಗಲಿಲ್ಲ.

ಪೃಥ್ವಿರಾಜನಿಗೆ ಅವನ ಆಪ್ತರು ಎಷ್ಟೋ ಬಾರಿ ಸೂಚಿಸಿದ್ದರು, '' ಮತ್ತೆ ಕೆಲ ವರ್ಷಗಳಲ್ಲಿ ಮಹಮ್ಮದ್ ಗೋರಿ ತನ್ನ ಸೇನೆಯೊಂದಿಗೆ ದಂಡೆತ್ತಿ ಬರುತ್ತಾನೆ, ಆಕ್ರಮಣ ಮಾಡುತ್ತಾನೆ. ಆದ್ದರಿಂದ ಅವನನ್ನು ಈಗಲೇ ಮುಗಿಸುವುದು ಲೇಸು. ನೀವು ಈಗಾಗಲೇ ಆತನನ್ನು ಅನೇಕ ಸಲ ಸೋಲಿಸಿದ್ದೀರ. ಆತನದ್ದು ಭಾರತದ ಪಕ್ಕಕ್ಕಿರುವ ಒಂದು ಸಣ್ಣ ದೇಶ. ಮನಸ್ಸು ಮಾಡಿದರೆ ಆತನನ್ನು ಮುಗಿಸುವುದು ದೊಡ್ಡ ಕೆಲಸವಲ್ಲ!''

ಮಹಮ್ಮದ್ ಗೋರಿ ನಿರಂತರ ತಲೆನೋವಾಗಿದ್ದ. ಆದರೂ ಪೃಥ್ವಿರಾಜ ಹೇಳಿದ, ''ಅದು ನನ್ನ ದೇಶದ ಘನತೆಗೆ ವಿರುದ್ಧ, ನಾವು ಎಂದೂ ಯಾರ ವಿರುದ್ಧವೂ ದಾಳಿ ಮಾಡಿದವರಲ್ಲ. ಅವನನ್ನು ಹಿಮ್ಮೆಟ್ಟಿಸುವುದೇ ಒಳ್ಳೆಯದು. ಆತ ನಾಚಿಕೆಯಿಲ್ಲದವ. ಹತ್ತು ಹನ್ನೆರಡು ಸಲ ಅವನನ್ನು ಸೋಲಿಸಿದರೂ ಆತ ಪುನಃ ಬರುತ್ತಾನೆ.''

ಮಹಮ್ಮದ್ ಗೋರಿ ಹದಿನೆಂಟನೇ ಬಾರಿ ಸೋತಾಗ ಆತನ ಎಲ್ಲ ಸೈನಿಕರೂ ಕೊಲ್ಲಲ್ಪಟ್ಟರು. ಗುಹೆಯೊಂದರಲ್ಲಿ ಗೋರಿ ತಲೆಮರೆಸಿಕೊಂಡು ಅವಿತುಕೊಂಡಿದ್ದ. ಏನು ಮಾಡುವುದೆಂದು ಯೋಚಿಸುತ್ತಾ ಚಿಂತಾಕ್ರಾಂತನಾಗಿ ಕುಳಿತಿದ್ದ. ಹೀಗೆ ಕುಳಿತಿದ್ದಾಗ ಜೇಡ ಬಲೆಯೊಂದನ್ನು ನೇಯುವುದನ್ನು ಕಂಡ. ಆತ ಅದನ್ನೇ ಕುತೂಹಲದಿಂದ ಗಮನಿಸತೊಡಗಿದ. ಜೇಡ ಬಲೆ ನೇಯಲಾಗದೆ ಕೆಳಕ್ಕೆ ಬಿದ್ದು ಪುನಃ ಮೊದಲು ಮಾಡುತ್ತಿತ್ತು. ಹೀಗೆ ಹದಿನೆಂಟು ಸಲ ಜೇಡ ಕೆಳಕ್ಕೆ ಬಿತ್ತು. ಆದರೆ ಹತ್ತೊಂಬತ್ತನೆಯ ಸಲ ಪ್ರಯತ್ನಿಸಿದಾಗ ಬಲೆ ನೇಯುವುದು ಸಾಧ್ಯವಾಯಿತು. ಇದನ್ನು ಗೋರಿ ಕುತೂಹಲದಿಂದ ವೀಕ್ಷಿಸುತ್ತಿದ್ದ. ತಟ್ಟನೆ ಆತನಿಗೆ ಒಂದು ಸಂಗತಿ ಹೊಳೆಯಿತು. ''ನಾನು ಕೂಡಾ ಹದಿನೆಂಟು ಬಾರಿ ಪ್ರಯತ್ನಿಸಿದ್ದೇನೆ. ಯಶಸ್ವಿಯಾಗಲಿಲ್ಲ. ಕನಿಷ್ಠ ಇನ್ನೊಂದು ಸಲ ಪ್ರಯತ್ನಿಸಬೇಕು. ಹದಿನೆಂಟು ಸಲ ಸೋತು ಹತ್ತೊಂಬತ್ತನೆಯ ಸಲ ಗೆಲ್ಲುವುದು ಜೇಡರ ಹುಳುವಿಗೆ ಸಾಧ್ಯವಾಗುವುದಾದರೆ, ನನಗೇಕೆ ಸಾಧ್ಯವಾಗದು?''

ಗೋರಿ ಒಮ್ಮೆಗೆ ಎದ್ದು ನಿಂತ. ತನ್ನ ಸೇನೆಯನ್ನು ಸಜ್ಜುಗೊಳಿಸಿದ. ಕೊನೆಗೆ ಹತ್ತೊಂಬತ್ತನೆ ಸಲ ಪೃಥ್ವಿರಾಜನ ವಿರುದ್ಧ ಜಯಗಳಿಸಿದ.

ಪೃಥ್ವಿರಾಜನಿಗೆ ವಯಸ್ಸಾಗುತ್ತಾ ಬಂದಿತ್ತು. ಮುಪ್ಪು ಮುತ್ತಿಕೊಳ್ಳಲಾರಂಭಿಸಿತ್ತು. ಜೀವನವನ್ನೆಲ್ಲ ರಣರಂಗದಲ್ಲಿ ಕಳೆದಿದ್ದ. ಆತನ ಸೇನಾಪಡೆ ಛಿದ್ರವಾಗಿತ್ತು. ಪೃಥ್ವಿರಾಜನಿಗೆ ಕೈಕೊಳ ತೊಡಿಸಿ, ಖೈದಿಯಂತೆ ಬಂಧಿಸಲಾಯಿತು. ಸಂಕೋಲೆಗಳನ್ನು ತೊಡಿಸಲಾಯಿತು. ಇವೆಲ್ಲಾ ಭಾರತೀಯ ಸಂಪ್ರದಾಯಕ್ಕೆ ವಿರುದ್ಧವಾದುದು.

ಅಲೆಗ್ಸಾಂಡರ್ ಪೋರಸ್‌ನನ್ನು ಯುದ್ಧದಲ್ಲಿ ಸೋಲಿಸಿದಾಗ, ಆತನನ್ನು ಅಲೆಗ್ಸಾಂಡರ್‌ನ ಮುಂದೆ ತಂದು ನಿಲ್ಲಿಸಲಾಯಿತು. ಪೋರಸ್‌ನನ್ನು ದುರುಗುಟ್ಟಿ ನೋಡಿದ ಅಲೆಗ್ಸಾಂಡರ್ ಕೇಳಿದ, ''ನಿನ್ನೊಡನೆ ಯಾವ ರೀತಿ ವ್ಯವಹರಿಸಬೇಕು?'' ಅದಕ್ಕೆ ಪೋರಸ್ ನುಡಿದ, ''ಇದು ಕೇಳುವ ಪ್ರಶ್ನೆಯೇ? ರಾಜನಾದವನೊಡನೆ, ರಾಜನೊಡನೆ ವ್ಯವಹರಿಸುವಂತೆ ವ್ಯವಹರಿಸಬೇಕು.''

ಅಲೆಗ್ಸಾಂಡರ್‌ನ ಆಸ್ಥಾನದಲ್ಲಿ ಕೆಲಹೊತ್ತು ಮೌನ ನೆಲೆಸಿತು. ಪೋರಸ್ ಈ ಪ್ರಶ್ನೆಗೆ ಸಮಂಜಸ ಉತ್ತರ ನೀಡಿದ್ದ. ಏಕೆಂದರೆ ಆತನ ಸೋಲು ನಿಜವಾಗಿಯೂ ಸೋಲಾಗಿರಲಿಲ್ಲ. ಅಲೆಗ್ಸಾಂಡರ್, ಆತನನ್ನು ಮೋಸ, ವಂಚನೆಯಿಂದ ಪರಾಭಾವಗೊಳಿಸಿದ್ದ. ನದಿಯ ಮತ್ತೊಂದು ತೀರದಲ್ಲಿ ನಿಂತಿದ್ದ ಪೋರಸ್‌ನನ್ನು ಭೇಟಿ

ಮಾಡುವಂತೆ ಅಲೆಗ್ಸಾಂಡರ್ ತನ್ನ ಪತ್ನಿಯನ್ನು ಕಳುಹಿಸಿದ. ಆಗ ರಕ್ಷಾಬಂಧನ್ ಹಬ್ಬ 'ರಾಖಿ' ಕಟ್ಟುವ ಸಂಪ್ರದಾಯ.

ಅಲೆಗ್ಸಾಂಡರ್‌ನ ಪತ್ನಿ ಆಗಮಿಸಿದಾಗ ಮಹಾರಾಣಿಗೆ ನೀಡುವ ಸ್ವಾಗತವನ್ನು ಆಕೆಗೆ ನೀಡಲಾಯಿತು. ಆಕೆಯನ್ನು ಸ್ವಾಗತಿಸಲು ಸ್ವತಃ ಪೋರಸ್‌ನೇ ಆಗಮಿಸಿದ. ಆಕೆಯ ಆಗಮನದಿಂದ ಸಂತೋಷಗೊಂಡ ಪೋರಸ್ ನುಡಿದ, ''ನೀವೇಕೆ ಇಲ್ಲಿಗೆ ಬರುವ ಕಷ್ಟವನ್ನು ತೆಗೆದುಕೊಂಡಿರಿ? ತಿಳಿಸಿದ್ದರೆ ನೀವಿರುವಲ್ಲಿಗೆ ನಾನೇ ಬರುತ್ತಿದ್ದೆ.''

ಇದು ಭಾರತೀಯ ಸಂಪ್ರದಾಯ: ಸೂರ್ಯಾಸ್ತವಾದ ಬಳಿಕ, ಎರಡೂ ಕಡೆಯವರೂ, ಪರಸ್ಪರ ಶಿಬಿರಗಳಿಗೆ ಭೇಟಿ ನೀಡಿ, ಆ ದಿನ ಏನಾಯಿತು, ಎಷ್ಟು ಮಂದಿ ಸತ್ತರು, ಪ್ರಮುಖ ಘಟನೆಗಳೇನು ಮುಂತಾದುವುಗಳ ಬಗ್ಗೆ ಚರ್ಚಿಸುವುದು ಸಾಮಾನ್ಯ. ಇದು, ಒಂದು ರೀತಿಯ ಕಾಲ್ಚೆಂಡು ಆಟದಂತೆ, ಯಾರೂ ಅದನ್ನು ಗಂಭೀರವಾಗಿ ಸ್ವೀಕರಿಸುವುದಿಲ್ಲ.

ಅಲೆಗ್ಸಾಂಡರ್‌ನ ಪತ್ನಿ: ''ನನಗೆ ಸಹೋದರರು ಇಲ್ಲ. ಆದುದರಿಂದ ನಾನು ಇಲ್ಲಿಗೆ ಬಂದಿರುವೆ. ಇಲ್ಲಿ ಆಚರಿಸುವ 'ರಕ್ಷಾಬಂಧನ್' ಉತ್ಸವದ ಬಗ್ಗೆ ಕೇಳಿದೆ. ನಿಮ್ಮನ್ನು ಅಣ್ಣನಾಗಿ ಮಾಡಿಕೊಳ್ಳಬೇಕೆಂದಿರುವೆ,'' ಎಂದಳು.

ಆ ಮಾತಿಗೆ ಹರ್ಷಗೊಂಡ ಪೋರಸ್ ಹೇಳಿದ, ''ಇದೆಂತಹ ಕಾಕತಾಳೀಯ. ನನಗೂ ತಂಗಿ ಇಲ್ಲ.''

ಅಲೆಗ್ಸಾಂಡರ್‌ನ ಪತ್ನಿ ಪೋರಸ್‌ನ ಕೈಗೆ ಪವಿತ್ರವಾದ 'ರಾಖಿ'ಯನ್ನು ಕಟ್ಟಿದಳು. ''ಯುದ್ಧದಲ್ಲಿ ಏನೇ ಆಗಲಿ, ಅಲೆಗ್ಸಾಂಡರ್ ನನ್ನ ಪತಿ, ಆತ ನಿನ್ನ ಭಾವ. ನೀನು ಮಾತ್ರ ನನ್ನನ್ನು ವಿಧವೆ ಆಗಿಸಬಾರದು. ಈ ಮಾತು ನೆನಪಿರಲಿ,'' ಎಂಬ ವಚನವನ್ನು ಆಕೆ ಪೋರಸ್‌ನಿಂದ ಪಡೆದಳು. ಈ ವಚನ ಈಡೇರಿಸುವುದಾಗಿ ಪೋರಸ್ ವಾಗ್ದಾನ ನೀಡಿದ.

ಯುದ್ಧರಂಗದಲ್ಲಿ ಒಂದು ಸಂದರ್ಭ ಎದುರಾಯಿತು. ಅಲೆಗ್ಸಾಂಡರ್‌ನ ಕುದುರೆಯನ್ನು ಪೋರಸ್ ತಿವಿದಾಗ, ಅದು ಕೊನೆಯುಸಿರೆಳೆಯಿತು. ಅಲೆಗ್ಸಾಂಡರ್ ನೆಲಕ್ಕೆ ಉರುಳಿಬಿದ್ದ. ತನ್ನ ಕುದುರೆಯಿಂದ ಕೆಳಕ್ಕೆ ಜಿಗಿದ ಪೋರಸ್ ತನ್ನ ಈಟಿಯಿಂದ ಅಲೆಗ್ಸಾಂಡರ್‌ನ ಮೇಲೆ ಎರಗಲು ಮುಂದಾದ. ಇನ್ನೇನು ಈಟಿ ಅಲೆಗ್ಸಾಂಡರ್‌ನ ಎದೆಯನ್ನು ಸೀಳಬೇಕಿತ್ತು. ಆಗ, ಆತನಿಗೆ ತಟಕ್ಕನೆ ತನ್ನ ಕೈಗೆ ಕಟ್ಟಿದ್ದ ರಾಖಿ ಕಣ್ಣಿಗೆ ಬಿತ್ತು. ಅಲೆಗ್ಸಾಂಡರ್‌ನ ಪತ್ನಿ ನೆನಪಾದಳು. ಆಕೆಗೆ ನೀಡಿದ ವಚನ ನೆನಪಿಗೆ ಬಂತು. ಪೋರಸ್ ತಟಸ್ಥನಾಗಿ ನಿಂತು ಬಿಟ್ಟ.

ಅದನ್ನು ಕಂಡು ಅಲೆಗ್ಸಾಂಡರ್ ಕೇಳಿದ, ''ಪೋರಸ್, ಏಕೆ ನಿಂತುಬಿಟ್ಟೆ? ನನ್ನನ್ನು ಕೊಲ್ಲಲು ಇದು ಸದವಕಾಶವಲ್ಲವೇ?'' ಪೋರಸ್ ಹೇಳಿದ, ''ನಾನು ವಾಗ್ದಾನ ಕೊಟ್ಟಿದ್ದೇನೆ. ನನ್ನ ರಾಜ್ಯವನ್ನೇ ಬೇಕಾದರೂ ಕೊಟ್ಟೇನು, ಆದರೆ ಕೊಟ್ಟ ವಚನವನ್ನು ಮಾತ್ರ ಮುರಿಯುವುದಿಲ್ಲ. ನಿನ್ನ ಹೆಂಡತಿ ನನ್ನ ತಂಗಿ. ಆಕೆಯನ್ನು ವಿಧವೆಯಾಗಿಸುವುದಿಲ್ಲ.'' ಪೋರಸ್ ಹಿಂದಕ್ಕೆ ಸರಿದ.

ಅಂತಹ ಪೋರಸ್‌ನೊಡನೆ ಒಬ್ಬ ಕೊಲೆಗಾರನೊಡನೆ ವರ್ತಿಸುವಂತೆ ವರ್ತಿಸಲಾಯಿತು. ಅಲೆಗ್ಸಾಂಡರ್ ಕೇಳಿದ,

''ನಿನ್ನೊಡನೆ ಯಾವ ರೀತಿ ವ್ಯವಹರಿಸಬೇಕು?'' ಎಂದು. ಪೋರಸ್ ಹೇಳಿದ, ''ಒಬ್ಬ ರಾಜ ಮತ್ತೊಬ್ಬ ರಾಜನೊಡನೆ ವ್ಯವಹರಿಸುವಂತೆ. ಸ್ವಲ್ಪಹೊತ್ತಿನ ಮುಂಚೆ ನಡೆದದ್ದನ್ನು ಮರೆತೆಯೇನು? ನೀನು ಉಳಿಯುತ್ತಿರಲಿಲ್ಲ. ನಿನ್ನ ಹೆಂಡತಿಯಿಂದಾಗಿ ನೀನು ಬದುಕುಳಿದೆ. ನಿನ್ನನ್ನು ಬದುಕಿಸಿದ ಹೆಗ್ಗಳಿಕೆ ಆಕೆಗೆ ಸಲ್ಲಬೇಕು.''

ಆದರೆ ಅದೊಂದು ಸಂಚು. ಭಾರತ ಎಂದಿಗೂ ಇಂತಹ ಕಾರಸ್ಥಾನವನ್ನು ಕನಸಿನಲ್ಲೂ ಊಹಿಸಲಾರದು. ಮಹಾನ್ ಯೋಧ ಹಾಗೂ ಚಾಣಾಕ್ಷ ಬಿಲ್ಲುಗಾರ ಪೃಥ್ವಿರಾಜನನ್ನು ಮಹಮ್ಮದ್ ಗೋರಿ ಸೆರೆಯಾಳಾಗಿ ಬಂಧಿಸಿದ. ಆಗ ಮಹಮ್ಮದ್ ಗೋರಿ ಮಾಡಿದ ಮೊದಲ ಕೆಲಸವೆಂದರೆ - ಪೃಥ್ವಿರಾಜನ ಎರಡೂ ಕಣ್ಣುಗಳನ್ನು ಕೀಳಿಸಿದ್ದು. ಪೃಥ್ವಿರಾಜನೊಂದಿಗೆ ಆತನ ಕವಿ ಮಿತ್ರನನ್ನೂ ಸೆರೆಹಿಡಿಯಲಾಗಿತ್ತು. ಪೃಥ್ವಿರಾಜ ತನ್ನ ಮಿತ್ರನಿಗೆ ಹೇಳಿದ, ''ನೀನು ನನ್ನೊಂದಿಗೆ ಬಾ. ನಮ್ಮ ಭಾಷೆ ಇವರಿಗೆ ತಿಳಿಯದು. ಬಾಣದಿಂದ ಗುರಿಯನ್ನು ಭೇದಿಸಲು ನನಗೆ ಕಣ್ಣುಗಳೇನೂ ಬೇಕಾಗಿಲ್ಲ. ಆತ ಎಷ್ಟು ದೂರದಲ್ಲಿದ್ದಾನೆ ಮತ್ತು ಯಾವ ದಿಕ್ಕಿನಲ್ಲಿದ್ದಾನೆ ಎಂದು ತಿಳಿದರೆ ಸಾಕು.''

ಮಹಮ್ಮದ್ ಗೋರಿ ಪೃಥ್ವಿರಾಜನನ್ನು ಕಂಡು ಎಷ್ಟು ಹೆದರಿದ್ದನೆಂದರೆ, ಆತ ಸಿಂಹಾಸನದ ಮೇಲೆ ಕುಳಿತಿರಲಿಲ್ಲ. ಆತ ಉಪ್ಪರಿಗೆಯಲ್ಲಿ ಆಸ್ಥಾನದ ಮಹಡಿಯಲ್ಲಿ ಕುಳಿತಿದ್ದ. ಪೃಥ್ವಿರಾಜನ ಮಿತ್ರ, ಚಂದ್ರಬರದಾಯಿ, ಉಪ್ಪರಿಗೆ ಎಷ್ಟು ಎತ್ತರದಲ್ಲಿದೆ. ಎಷ್ಟು ದೂರದಲ್ಲಿದೆ, ಮಹಮ್ಮದ್ ಗೋರಿ ಎಲ್ಲಿ ಕುಳಿತಿದ್ದಾನೆ ... ಇತ್ಯಾದಿ ವಿವರಗಳನ್ನು ಹಾಡಿನ ರೂಪದಲ್ಲಿ ವರ್ಣಿಸಿದ. ಈ ವಿವರಗಳಿಂದ ಪೃಥ್ವಿರಾಜ ಮಹಮ್ಮದ್ ಗೋರಿಯನ್ನು ಕೊಂದುಹಾಕಿದ. ಕುರುಡ ಪೃಥ್ವಿರಾಜ ಬಿಟ್ಟ ಬಾಣ ಮಹಮ್ಮದ್ ಗೋರಿಯ ಎದೆಯನ್ನು ಸೀಳಿತು.

ಚಂದ್ರಬರದಾಯಿಗೆ ಸೋಜಿಗವಾಯಿತು. ಪೃಥ್ವಿರಾಜನ ಕುರುಡು ಕಣ್ಣುಗಳು ತೇವಗೊಂಡಿದ್ದವು. ಪೃಥ್ವಿರಾಜ್ ತನ್ನ ಮಿತ್ರನಿಗೆ ಹೇಳಿದ, ''ನಾನು ಮಾಡಿದ್ದು ಸರಿಯಲ್ಲ. ನಮ್ಮ ಸಂಪ್ರದಾಯವನ್ನು ಮುರಿಯುವಂತೆ ಮಹಮ್ಮದ್ ಗೋರಿ ನನ್ನನ್ನು ಪ್ರೇರೇಪಿಸಿದ.''

ವಸ್ತುವಿಷಯಗಳ ಬಗ್ಗೆ ಪೂರ್ವದ ನಿಲುವೇ ಬೇರೆ. ಪೂರ್ವದಿಂದ ಪಶ್ಚಿಮ ಏನಾದರೂ ಕಲಿತರೆ ಅದರಲ್ಲಿ ಅತಿ ಮುಖ್ಯವಾದುದು, ಯಾವುದೆಲ್ಲ ಮಹತ್ತರವೋ ಅವೆಲ್ಲವೂ ಅಕ್ರಿಯ ಮತ್ತು ಅನಾಕ್ರಮಣಕಾರಿ ಆಗಿರುವುದರ ಮೂಲಕ ಬರುವುದೆಂಬುದು. ಏಕೆಂದರೆ ಪ್ರತಿ ಕ್ರಿಯೆಯೂ ಮೂಲತಃ ಆಕ್ರಮಣಕಾರಿಯೇ ಆಗಿರುತ್ತದೆ. ಅಕ್ರಿಯಾರಾಗಿದ್ದಾಗ ಮಾತ್ರ ನೀವು ಆಕ್ರಮಣರಹಿತರಾಗಿ ಇರಬಲ್ಲಿರಿ. ನೀವು ಸ್ವೀಕರಿಸಲು ತಯಾರಾಗಿರುತ್ತೀರಿ ಮತ್ತು ಆ ಸ್ವೀಕೃತಿ ಭಾವದಲ್ಲಿ ಇಡೀ ಅಸ್ತಿತ್ವ ತನ್ನ ಸಂಪತ್ತು, ಸಂಪನ್ಮೂಲಗಳನ್ನೆಲ್ಲಾ ನಿಮ್ಮ ಮೇಲೆ ಚೆಲ್ಲುವುದು.[56]

ಅಲೆಗ್ಸಾಂಡರ್ ಭಾರತಕ್ಕೆ ಬಂದಾಗ ದಂಡಿನಿ ಎಂಬ ಸಂನ್ಯಾಸಿಯೊಬ್ಬರಿದ್ದರು. ಅಲೆಗ್ಸಾಂಡರ್‌ನ ಮಿತ್ರರು ಭಾರತ ಬಿಟ್ಟು ಬರುವಾಗ ತನ್ನೊಂದಿಗೆ ಸಂನ್ಯಾಸಿಗಳನ್ನು ಕರೆದುಕೊಂಡು ಬರುವಂತೆ ಕೇಳಿದ್ದರು. ಭಾರತದಲ್ಲಿ ಮಾತ್ರ ಇಂತಹ ಅಪರೂಪದ ಕುಸುಮಗಳಿರುವುದಾಗಿ ಅವರು ಅಲೆಗ್ಸಾಂಡರ್‌ನಿಗೆ ಹೇಳಿದರು. ಸಂನ್ಯಾಸವೆಂದರೆ ಏನು? ಅದರಲ್ಲಿ ಎಂತಹ ಅದ್ಭುತ ಶಕ್ತಿಯಿದೆ ಎಂಬುದನ್ನು ತಿಳಿದುಕೊಳ್ಳುವುದು ಅವರ ಆಶಯವಾಗಿತ್ತು.

ಭಾರತದ ಗಡಿ ದಾಟಿ ಹೋಗಬೇಕೆನ್ನುವಾಗ, ಕೊನೆಯ ಹಳ್ಳಿಯನ್ನು ದಾಟಿ ಹೋಗುವಾಗ, ಈ ಸಂಗತಿ ಅಲೆಗ್ಸಾಂಡರ್‌ಗೆ ನೆನಪಾಯಿತು. ಈ ಹಳ್ಳಿಯಲ್ಲಿ ಯಾರಾದರೂ ಸಂನ್ಯಾಸಿಗಳಿದ್ದರೆ ಅವರನ್ನು ಕರೆತರುವಂತೆ ಅಲೆಗ್ಸಾಂಡರ್ ತನ್ನ ಸೈನಿಕರಿಗೆ ಆದೇಶ ನೀಡಿದ. ಕಾಕತಾಳೀಯವೆಂಬಂತೆ ನದಿ ದಂಡೆಯಲ್ಲಿ ದಂಡಿನಿ ತಂಗಿದ್ದರು. ಜನರು ಅಲೆಗ್ಸಾಂಡರ್‌ನಿಗೆ ಹೇಳಿದರು, ''ನೀನು ಸರಿಯಾದ ಸಮಯಕ್ಕೆ ಬಂದಿದ್ದೀಯ. ನಿಜವಾದ ಸಂನ್ಯಾಸಿಗಳು ಅಪರೂಪ. ನೀವು ನದಿತೀರಕ್ಕೆ ಹೋಗಿ ಅವರ ದರ್ಶನ ಪಡೆಯಬಹುದು.''

ಅದನ್ನು ಕೇಳಿ, ಅಲೆಗ್ಸಾಂಡರ್ ನಕ್ಕು ಹೇಳಿದ, ''ನಾನು ಬಂದಿದ್ದು ಅವರ ದರ್ಶನ ಪಡೆಯಲಿಕ್ಕಲ್ಲ. ನನ್ನ ಸೈನಿಕರು ಆ ಸಂನ್ಯಾಸಿಯನ್ನು ಇಲ್ಲಿಗೆ ಕರೆತರುತ್ತಾರೆ. ಅವನನ್ನು ನನ್ನ ರಾಜಧಾನಿಗೆ ಕರೆದೊಯ್ಯುತ್ತೇನೆ.'' ಹಳ್ಳಿಗರು ಹೇಳಿದರು, ''ಅದಷ್ಟು ಸುಲಭವಲ್ಲ.''

ಅಲೆಗ್ಸಾಂಡರ್‌ನಿಗೆ ಅವರ ಮಾತುಗಳನ್ನು ನಂಬಲಾಗಲಿಲ್ಲ. ಸಂನ್ಯಾಸಿಯನ್ನು ಕರೆದುಕೊಂಡು ಹೋಗುವುದರಲ್ಲಿ ಏನು ಕಷ್ಟವಿದ್ದೀತು ಎಂದುಕೊಂಡ. ರಾಜ, ಮಹಾರಾಜ, ಸಾಮ್ರಾಟರನ್ನು ಜಯಿಸಿರುವಾಗ ಈ ಭಿಕಾರಿ, ಸಂನ್ಯಾಸಿಯನ್ನು ಕರೆದುಕೊಂಡು ಹೋಗುವುದು ಏನು ಮಹಾ ಎಂದುಕೊಂಡ. ಅವನ ಸೈನಿಕರು ದಂಡಿನಿಯನ್ನು ಕರೆದುಕೊಂಡು ಬರಲು ನದೀತೀರಕ್ಕೆ ಹೋದರು. ಅಲ್ಲಿ ಆತ ಬತ್ತಲಾಗಿ ನಿಂತಿದ್ದರು. ಆತನನ್ನು ಉದ್ದೇಶಿಸಿ ಸೈನಿಕರು ಹೇಳಿದರು, ''ತಮ್ಮ ದೇಶಕ್ಕೆ ಬರುವಂತೆ ಮಹಾನ್ ಅಲೆಗ್ಸಾಂಡರ್ ತಮಗೆ ಆಮಂತ್ರಣ ನೀಡಿದ್ದಾರೆ. ನಿಮಗೆ ಎಲ್ಲ ಸೌಕರ್ಯ, ಸೌಲಭ್ಯಗಳನ್ನೂ ಒದಗಿಸಲಾಗುವುದು. ನೀವು ಅವರ ಆದರಾತಿಥ್ಯವನ್ನು ಪಡೆಯುತ್ತೀರಿ.''

ಇದನ್ನು ಕೇಳಿ ಆ ಬತ್ತಲೆ ಫಕೀರರು ನಕ್ಕು ಹೇಳಿದರು, ''ಹೋಗಿ ನಿಮ್ಮ ಆ ಅಲೆಗ್ಸಾಂಡರ್‌ನಿಗೆ ಹೇಳಿ, ಯಾವನು ತನ್ನನ್ನು 'ಮಹಾನ್' ಎಂದು ಕರೆದುಕೊಳ್ಳುತ್ತಾನೋ ಆತ ಮಹಾನ್ ಅಲ್ಲ. ನನ್ನನ್ನು ಯಾರೂ, ಎಲ್ಲಿಗೂ ಕರೆದೊಯ್ಯಲಾರರು. ಸಂನ್ಯಾಸಿ ಮೋಡದಂತೆ. ಆತ ಸಂಪೂರ್ಣ ಸ್ವತಂತ್ರ. ಯಾರ ಗುಲಾಮನೂ ಅಲ್ಲ.''

ಅದಕ್ಕೆ ಸೈನಿಕರು ಹೇಳಿದರು, ''ಅಲೆಗ್ಸಾಂಡರ್ ಬಹಳ ಅಪಾಯಕಾರಿ ಮನುಷ್ಯ. ಆತನು ಹೇಳಿದ್ದಕ್ಕೆ ಇಲ್ಲವೆಂದರೆ ಕೇಳುವವನಲ್ಲ. ಆತ ನಿಮ್ಮ ತಲೆಯನ್ನೇ ತೆಗೆಯಬಲ್ಲ.'' ಶಾಂತ ಚಿತ್ತರಾಗಿ ದಂಡಿನಿ ಹೇಳಿದರು, ''ನೀವು ಹೋಗಿ

ನಿಮ್ಮ ಧಣಿ ಅಲೆಗ್ಸಾಂಡರ್‌ನನ್ನು ಇಲ್ಲಿಗೆ ಕರೆತರುವುದು ಒಳ್ಳೆಯದು. ಆತನಿಗೆ ನಾನು ಹೇಳುವುದು ಪ್ರಾಯಶಃ ಅರ್ಥವಾದೀತು.''

ಸೈನಿಕರು ಅಲೆಗ್ಸಾಂಡರ್‌ನ ಬಳಿಗೆ ಹೋಗಿ, ''ಆ ಸಂನ್ಯಾಸಿ ತೀರ ಅಪರೂಪ, ಕಾಂತಿಯುಕ್ತ ವ್ಯಕ್ತಿ. ಆತನ ಸುತ್ತಲೂ ಒಂದು ರೀತಿಯ ವಿಸ್ಮಯ ಹಾಗೂ ನಿಗೂಢತೆಯಿದೆ. ಆತ ಬತ್ತಲಾಗಿರಬಹುದು, ಆದರೆ ಆತನ ಸಾನ್ನಿಧ್ಯದಲ್ಲಿದ್ದಾಗ ಆತ ಬತ್ತಲಾಗಿರುವುದು ನಮ್ಮ ಅರಿವಿಗೇ ಬರುವುದಿಲ್ಲ. ಅನಂತರವೇ ನಮಗೆ ಅದು ತಿಳಿಯುವುದು. ಆತನಲ್ಲಿ ಎಷ್ಟು ಶಕ್ತಿ ಇದೆ ಎಂದರೆ, ಆತನ ಉಪಸ್ಥಿತಿಯಲ್ಲಿ ಇಡೀ ಜಗವೇ ಮರೆತುಹೋಗುತ್ತದೆ. ಆತನಲ್ಲಿ ವಿಶೇಷ ಚುಂಬಕ ಶಕ್ತಿಯಿದೆ. ಅಲ್ಲದೆ ಆತನ ಸುತ್ತ ದಿವ್ಯಮೌನ ಕವಿದಿದೆ. ಸುತ್ತಲಿನ ಪರಿಸರವೆಲ್ಲವೂ ಆತನ ಇರುವಿಕೆಯಿಂದ ಆನಂದವನ್ನು ಪಡೆಯುತ್ತಿರುವಂತಿದೆ. ಆತನನ್ನು ತಾವು ಒಮ್ಮೆ ನೋಡಬೇಕು. ಯಾರೂ ತನ್ನನ್ನು ಎಲ್ಲಿಗೂ ಕರೆದೊಯ್ಯಲಾರರು ಹಾಗೂ ತಾನು ಯಾರ ಗುಲಾಮನೂ ಅಲ್ಲ ಎಂದು ಆತ ಹೇಳುತ್ತಾನೆ,'' ಎಂದರು.

ತೆರೆದ ಖಡ್ಗವನ್ನು ಹಿಡಿದು ಅಲೆಗ್ಸಾಂಡರ್ ದಂಡಿನಿಯ ಬಳಿಗೆ ಬಂದ. ಅಲೆಗ್ಸಾಂಡರ್‌ನ ದರ್ಪವನ್ನು ನೋಡಿ ದಂಡಿನಿ ನಕ್ಕು, ''ಖಡ್ಗವನ್ನು ಒರೆಯೊಳಗೆ ಸೇರಿಸು. ಇಲ್ಲಿ ಅದು ನಿಷ್ಪ್ರಯೋಜಕ. ನೀನು ನನ್ನ ದೇಹವನ್ನು ಮಾತ್ರ ಕತ್ತರಿಸಬಲ್ಲೆ. ಅದನ್ನು ನಾನು ಎಂದೋ ಬಿಟ್ಟುಬಿಟ್ಟಿದ್ದೇನೆ. ಆದ್ದರಿಂದ ಖಡ್ಗವನ್ನು ಒಳಗಿಡು. ಹುಡುಗಾಟ ಬೇಡ.''

ಅಲೆಗ್ಸಾಂಡರ್ ಜೀವನದಲ್ಲಿ ಪ್ರಪ್ರಥಮಬಾರಿಗೆ ಬೇರೆಯವರ ಆದೇಶವನ್ನು ಅಂದು ಪಾಲಿಸಿದ ಎಂದೆನ್ನಲಾಗಿದೆ; ಆ ವ್ಯಕ್ತಿಯ ಸಮ್ಮುಖದಲ್ಲಿ ತಾನು ಯಾರೆಂಬುದು ಅಲೆಗ್ಸಾಂಡರ್‌ಗೆ ನೆನಪಿಲ್ಲದೆಹೋಯಿತು. ನಿಧಾನವಾಗಿ ಖಡ್ಗವನ್ನು ಒರೆಯೊಳಗಿಡುತ್ತಾ ''ಜೀವನದಲ್ಲಿ ನಾನು ಇಷ್ಟೊಂದು ಸುಂದರನಾದ ವ್ಯಕ್ತಿಯನ್ನೇ ನೋಡಿರಲಿಲ್ಲ,'' ಎಂದ.

ಸ್ವದೇಶಕ್ಕೆ ಮರಳಿದ ಅಲೆಗ್ಸಾಂಡರ್ ನುಡಿದ, ''ಸಾಯಲು ಸಿದ್ಧನಿರುವ ವ್ಯಕ್ತಿಯನ್ನು ಕೊಲ್ಲುವುದು ಬಲು ಕಷ್ಟ. ಅಂತಹವರನ್ನು ಕೊಲ್ಲುವುದರಲ್ಲಿ ಅರ್ಥವೇ ಇಲ್ಲ. ಕಾದಾಡುವವನನ್ನು ಮಾತ್ರ ಕೊಲ್ಲಬಹುದು. ಆಗ ಅದಕ್ಕೊಂದು ಅರ್ಥವಿದೆ. 'ಇದೋ ನನ್ನ ತಲೆ, ನೀನು ಕತ್ತರಿಸಬಹುದು,' ಎಂದು ಹೇಳುವವನನ್ನು ಕೊಲ್ಲಲು ಸಾಧ್ಯವಿಲ್ಲ.''

ಅಲೆಗ್ಸಾಂಡರ್ ತನ್ನಸ್ನೇಹಿತರೊಂದಿಗೆ ಮಾತನಾಡುತ್ತಾ ಒಪ್ಪಿಕೊಂಡ, ''ನಾನು ನಿಜವಾಗಿಯೂ ಬಲು ಅಪರೂಪದ ವ್ಯಕ್ತಿಯನ್ನು ಭೇಟಿ ಮಾಡಿದೆ. ನೀವು ಹೇಳಿದಂತೆ ಆ ಕುಸುಮ ಅಪರೂಪದ್ದೇ. ಯಾರೂ ಆತನನ್ನು ಒತ್ತಾಯಿಸಲಾರರು, ಏಕೆಂದರೆ ಆತನಿಗೆ ಸಾವಿನ ಭಯವಿಲ್ಲ.''

ಯಾವನಿಗೆ ಸಾವಿನ ಭಯವಿಲ್ಲವೋ, ಆತನನ್ನು ಏನನ್ನಾದರೂ ಮಾಡುವಂತೆ ಒತ್ತಾಯಿಸುವುದು ಹೇಗೆ ಸಾಧ್ಯ? ನಿಮ್ಮ ಭಯವೇ ನಿಮ್ಮನ್ನು ಗುಲಾಮನನ್ನಾಗಿ

ಮಾಡುವುದು. ವಾಸ್ತವವಾಗಿ, ನಿಮ್ಮ ಈ ಭಯದ ಕಾರಣದಿಂದಲೇ ನೀವು, ಮತ್ತೊಬ್ಬರು ನಿಮ್ಮನ್ನು ಗುಲಾಮರಾಗಿಸುವ ಮೊದಲು ನೀವೇ ಅವರನ್ನು ಗುಲಾಮರಾಗಿಸುತ್ತೀರಿ. ನಿರ್ಭಯಿ ಯಾರಿಗೂ ಹೆದರುವುದಿಲ್ಲ ಹಾಗೂ ಯಾರನ್ನೂ ಹೆದರಿಸುವುದಿಲ್ಲ. ಭಯ ಸಂಪೂರ್ಣವಾಗಿ ಕಣ್ಮರೆಯಾಗುವುದು.[57]


ಮೌನ ಹಾಡುಗಳು: ಕಲ್ಲಿನಲ್ಲಿ ಸೂತ್ರಗಳು

ಪೂರ್ವದಲ್ಲಿ
ಪ್ರತಿಮೆಗಳನ್ನು ಕೇವಲ
ಕಲಾಕೃತಿಗಳಾಗಿ
ತಯಾರಿಸಿಲ್ಲ. ಅವು
ಮುಂಬರುವ
ಶತಮಾನಗಳಿಗೆ ಸಂಕೇತ
ಭಾಷೆಗಳಾಗಿ
ತಯಾರಿಸಲ್ಪಟ್ಟಿವೆ.

ಸಂತ ಸೃಷ್ಟಿಕರ್ತನೂ ಸಹ. ಮಾತನಾಡುವುದರ ಮೂಲಕ ಬುದ್ಧ ಸೃಷ್ಟಿಸುತ್ತಿದ್ದರು. ಅವರು ಶಬ್ದಗಳನ್ನು ಕೆತ್ತುತ್ತಿದ್ದರು. ರೂಪಕ ಹಾಗೂ ಕಥೆಗಳ ಮೂಲಕ ಸೃಷ್ಟಿಸುತ್ತಿದ್ದರು. ಕತೆಯೊಳಗೆ ಕತೆಯನ್ನು ಹೆಣೆಯುತ್ತಾ ವಿಶ್ವದೊಳಗೆ ಅಂತರ್‌ದೃಷ್ಟಿ ತರುತ್ತಿದ್ದರು. ಆದರೆ ಇದು ಸ್ವಾಧೀನಪಡಿಸಿಕೊಳ್ಳುವ ಪರಿ ಅಲ್ಲ. ಅವರು ಸಂಪೂರ್ಣವಾದ ವಿರಾಮದಲ್ಲಿ ಇದ್ದರು, ಬೇಕೆನಿಸಿದಾಗ ಮೌನವಾಗಿರುತ್ತಿದ್ದರು, ಹುಚ್ಚರಾಗದೇ. ಅವರಿಗೆ ತಾನು ಏನು ಮಾಡುತ್ತಿದ್ದೇನೆ ಎಂಬುದರ ಸಂಪೂರ್ಣ ಅರಿವಿತ್ತು. ಇದರಿಂದ ಜನರಿಗೆ ಏನಾಗುತ್ತದೆಂಬುದು ಅವರಿಗೆ ಗೊತ್ತಿತ್ತು. ಇಂತಹ ವಿಚಾರದ ಬಗ್ಗೆ ಧ್ಯಾನ ಮಾಡಿದರೆ ಇಂತಹುದೇ ಪರಿಣಾಮ ಆಗುವುದೆಂಬುದು ಅವರಿಗೆ ಗೊತ್ತಿತ್ತು. ಇದು ಅಪ್ಪಟ ವೈಜ್ಞಾನಿಕ.

ಬುದ್ಧರ ಪ್ರತಿಮೆಯ ಮೇಲೆ ಧ್ಯಾನಸ್ಥರಾದರೆ, ತಕ್ಷಣ ನಿಮ್ಮಲ್ಲಿ ಧನ್ಯತೆ, ಪ್ರಸನ್ನತೆ ಹಾಗೂ ಶಾಂತ ಭಾವ ನೆಲೆಸುತ್ತದೆ. ಒಂದು ರೀತಿಯ ಸಮತೋಲನ ಪಡೆದ ಅನುಭವವಾಗುತ್ತದೆ. ಸೂಫಿಗಳ ಕಲಾಕೃತಿಯಾದ, ಸೂಫಿಗಳಿಂದ ನಿರ್ಮಿತವಾದ, ಇಡೀ ವಿಶ್ವಕ್ಕೆ ಪ್ರೇಮದ ಸಂದೇಶವಾಗಿ ನಿರ್ಮಿತವಾದ ತಾಜ್‌ಮಹಲನ್ನು ಬೆಳದಿಂಗಳ ರಾತ್ರಿಯಲ್ಲಿ ನೋಡುತ್ತಾ ಧ್ಯಾನಸ್ಥರಾದರೆ, ಅದು ನೀಡುವ ಪ್ರೀತಿಯ ಸಂದೇಶ ಮನಸ್ಸಿಗೆ ತಟ್ಟುತ್ತದೆ. ಬೆಳದಿಂಗಳ ರಾತ್ರಿಯಲ್ಲಿ ತಾಜ್‌ಮಹಲ್‌ನ ಮುಂದೆ ಸುಮ್ಮನೆ ಕುಳಿತು, 'ಅದ್ಭುತ! ಇದೆಷ್ಟು ಸುಂದರವಾಗಿದೆ,' ಎಂದೆಲ್ಲಾ ಹೇಳದೆ, ಕೇವಲ ಅಲ್ಲಿನ ಪರಿಸರವನ್ನು ಅನುಭವಿಸುತ್ತಿದ್ದರೆ ನಿಮ್ಮೊಳಗೆ ಹಿತವಾದ, ಅದ್ಭುತವಾದ ಅಂತರ್‌ದೃಷ್ಟಿ ಉದ್ಭವಿಸುತ್ತಿರುವುದು ಗೊತ್ತಾಗುತ್ತದೆ. ಬೆಳದಿಂಗಳು ದಟ್ಟವಾಗುತ್ತಿದ್ದಂತೆ, ನಿಮ್ಮೊಳಗೂ ಕೂಡ ಇದು ದಟ್ಟವಾಗಿ ಕವಿಯಲಾರಂಭಿಸುತ್ತದೆ. ಪಟ್ಟಣದ ಗದ್ದಲ ಮರೆಯಾದಂತೆ, ನಿಮ್ಮ ಗದ್ದಲ ತುಂಬಿದ ಮನಸ್ಸು ಕೂಡ ಮರೆಯಾಗುತ್ತದೆ. ತಾಜ್‌ಮಹಲ್ ಮೂಲಕ ನೀವು ಅದ್ಭುತವಾದ ಧ್ಯಾನ ಸುಖವನ್ನು ಅನುಭವಿಸಬಹುದು.

ತಾಜ್‌ಮಹಲ್ ಮತ್ತು ಅಜಂತಾದಲ್ಲಿ ಧ್ಯಾನ ಮಾಡುವುದರಲ್ಲಿ ಸಾಕಷ್ಟು ವ್ಯತ್ಯಾಸವಿದೆ. ತಾಜ್‌ಮಹಲ್‌ನಲ್ಲಿ ಒಮ್ಮೆ ಧ್ಯಾನಾವಸ್ಥೆಯಲ್ಲಿ ಮುಳುಗಿದರೆ, ನಿಮ್ಮಲ್ಲಿ ಪ್ರೀತಿ ಉಮ್ಮಳಿಸಿ ಬರುವುದು. ಅಜಂತಾದಲ್ಲಿ ಪ್ರೀತಿ ಉಮ್ಮಳಿಸುವುದಿಲ್ಲ. ಕೇವಲ ಧ್ಯಾನ ಮಾತ್ರ ಸಂಭವಿಸುತ್ತದೆ. ಜಾಗೃತಿಯೇ ಸತ್ಯವೆಂದು ಪ್ರತಿಪಾದಿಸುವ ಬೌದ್ಧ ಯೋಗಿಗಳು ಇದನ್ನು ಅನುಭವಿಸಬಲ್ಲರು. ತಾಜ್‌ಮಹಲ್‌ನಲ್ಲಿರುವುದು ಸೂಫಿ ಕಲೆ. ಸೂಫಿಗಳ ಮಾರ್ಗ ಪ್ರೇಮ. ಅವರಿಗೆ ಧ್ಯಾನ ಅದರ ಒಂದು ಭಾಗ ಅಷ್ಟೆ.



ತಾಜ್‌ಮಹಲ್, ಆಗ್ರಾ

ಬಾಹ್ಯಗೋಚರ ಕಲೆ ಎಂದರೆ, ತಾನೇನು ಮಾಡುತ್ತಿದ್ದೇನೆಂದು ಸ್ಪಷ್ಟ ಕಲ್ಪನೆ ಇರುವವನು ಉದ್ದೇಶಪೂರ್ವಕವಾಗಿ ರಚಿಸಿದ ಕೃತಿ. ಆತ ಯಾವುದೋ ಒಂದು ಆಕೃತಿಯ ಮೂಲಕವಾಗಿ ಬೇರೊಂದು ಪರಿಮಾಣದಿಂದ ಏನೋ ಒಂದನ್ನು ಈ ವಿಶ್ವದೊಳಕ್ಕೆ ತರುತ್ತಾನೆ. ಆ ಆಕೃತಿಯನ್ನು ಸುಮ್ಮನೆ ನೋಡುವುದರಿಂದ, ಒಂದು ಹಾಡು, ಆಕೃತಿ ನಿಮ್ಮಲ್ಲಿ ಹುಟ್ಟಿಕೊಳ್ಳುವುದು. ಆ ಹಾಡನ್ನು ಸುಮ್ಮನೆ ಹಾಡುವುದರಿಂದ ನೀವು ಬೇರೇನೋ ಆಗುವಿರಿ, ನೀವೇ ಮಂತ್ರವಾಗುವಿರಿ.[58]

ಸಂಗೀತ ಪ್ರಾಚೀನ ಪರಂಪರೆಯ ಧ್ಯಾನದಿಂದ ಹುಟ್ಟಿದ್ದು. ಧ್ಯಾನಿಗಳಿಗೆ ತಮ್ಮ ಅನುಭವಗಳನ್ನು ವ್ಯಕ್ತಪಡಿಸುವುದಕ್ಕೆ ಅನ್ಯ ಮಾರ್ಗಗಳಿರಲಿಲ್ಲ. ಅವರೂ ಹಲವಾರು ಸಲಕರಣೆಗಳನ್ನು ಕಂಡುಹಿಡಿದರು. ಆ ಮೂಲಕ ನಿಮ್ಮಲ್ಲಿ ಯಾವುದೇ ಅರ್ಥವನ್ನು ಸೃಷ್ಟಿಸದೇ ಏನನ್ನೋ ತಿಳಿಸುವುದು ಅವರ ಉದ್ದೇಶವಾಗಿತ್ತು. ಸಂತಸ, ಉತ್ಸಾಹವನ್ನು ಪ್ರೇರೇಪಿಸುವುದು ಕೂಡ.

ಆರಂಭದಲ್ಲಿ ಭಾಷೆಯಲ್ಲದ ಭಾಷೆಯನ್ನು ಕಂಡುಹಿಡಿದದ್ದು ನಿಜಕ್ಕೂ ಮಹತ್ತರ ಸಂಗತಿಯೇ ಸರಿ. ಕೇವಲ ಧ್ವನಿಗೆ ಯಾವ ಅರ್ಥವೂ ಇಲ್ಲ. ಧ್ವನಿಗಳಿಗೆ ಅರ್ಥವನ್ನು ನೀಡಿರುವವನು ಮಾನವ. ಧ್ವನಿ ಯಾವತ್ತೂ ಪ್ರಾಕೃತಿಕ. ಪೈನ್ ಮರಗಳ ಮಧ್ಯೆ ಗಾಳಿ ಬೀಸಿದಾಗಲೂ ಒಂದು ವಿಶಿಷ್ಟ ಧ್ವನಿ ಹೊರಹೊಮ್ಮುತ್ತದೆ. ಹಾಗೂ ತನ್ನದೇ ಆದ ಸಂಗೀತವನ್ನು ಹೊಂದಿರುತ್ತದೆ. ಪರ್ವತ ಶಿಖರಗಳಿಂದ ಕಲ್ಲುಬಂಡೆಯ ಮೇಲೆ ಧುಮ್ಮಿಕ್ಕಿ ಹರಿಯುವ ನದಿಗೂ ತನ್ನದೇ ಆದ ಧ್ವನಿ ಮತ್ತು ಸಂಗೀತವಿದೆ.

ಅಂತರಂಗದ ಮೌನವನ್ನು ಆಲಿಸಿದ ಧ್ಯಾನಿಗಳು ಅದನ್ನು ಇತರರೊಂದಿಗೆ ಹಂಚಿಕೊಳ್ಳುವ ಬಗೆ ಕಂಡುಹಿಡಿಯಲು ಶ್ರಮಿಸುತ್ತಿದ್ದರೆಂದು ನನ್ನ ಭಾವನೆ. ಈ ಪ್ರಾರಂಭಿಕ ದಿನಗಳಲ್ಲಿ ಸಂಗೀತವನ್ನು ಕಂಡುಹಿಡಿದಿರಬೇಕು. ಇದು ಬಹಳ ಸರಳ ಶೋಧ: ಧ್ವನಿಯಲ್ಲಿರುವ ಅರ್ಥವನ್ನು ತೆಗೆದು, ಅರ್ಥದ ಬದಲಿಗೆ ನೇರವಾಗಿ ಹೃದಯವನ್ನು ಮುಟ್ಟಬಲ್ಲ ಮಧುರನಾದ ಹಾಗೂ ಸ್ವರತರಂಗ ಅಥವಾ ತಾಳಬದ್ಧ ರಚನೆ ನೀಡುವುದು. ಇದು ಏನನ್ನೂ ಹೇಳುವುದಿಲ್ಲ. ಆದರೆ ಇದು ಹೇಳಲಾಗದ್ದನ್ನು ಹೇಳುತ್ತದೆ.

ಸಂಗೀತವು ಧ್ವನಿಯನ್ನು ಒಳಗೊಂಡಿರುತ್ತದೆ ಎಂಬುದು ಸಾಮಾನ್ಯ ಕಲ್ಪನೆ. ಆದರೆ ಇದು ಕೇವಲ ಅರ್ಧ ಸತ್ಯ ಮಾತ್ರ. ಸಂಗೀತ ಹೆಚ್ಚು ಹೆಚ್ಚು ಆಳವಾದಂತೆ, ಅದು ಎರಡು ಧ್ವನಿಗಳ ನಡುವಣ ಮೌನವಾಗುತ್ತದೆ.

ಚೀನಾದಲ್ಲಿ ಒಂದು ಗಾದೆಯಿದೆ – ''ಸಂಗೀತಗಾರ ಪರಿಪೂರ್ಣನಾದ ಬಳಿಕ ವಾದ್ಯ ಅಥವಾ ಉಪಕರಣವನ್ನು ಬಿಸಾಕುತ್ತಾನೆ.'' ಏಕೆಂದರೆ ಈ ಉಪಕರಣಗಳು ಧ್ವನಿಯನ್ನು ಮಾತ್ರ ಹುಟ್ಟಿಸಬಲ್ಲವು. ಮೌನವನ್ನು ನಿರ್ಮಿಸುವವನು ಸಂಗೀತಗಾರ. ಆದರೆ ಪರಿಪೂರ್ಣತೆಯಲ್ಲಿ, ಮೌನದ ಸಣ್ಣ ತುಣುಕುಗಳನ್ನು ನಿರ್ಮಿಸುತ್ತಿದ್ದ ಅದೇ ಧ್ವನಿಗಳು, ಅಡಚಣೆಯಾಗುತ್ತವೆ. ವಿಚಿತ್ರ ಕಲ್ಪನೆಯಾದರೂ ಎಷ್ಟೊಂದು ಅರ್ಥಗರ್ಭಿತ. ಇದು ಎಲ್ಲ ಕಲೆಗೂ ಅನ್ವಯಿಸುತ್ತದೆ. ಒಮ್ಮೆ ಬಿಲ್ಲುಗಾರ ಬಿಲ್ಲುವಿದ್ಯೆಯಲ್ಲಿ ಪರಿಣತಿ ಸಾಧಿಸಿದನೆಂದರೆ ಆತ ತನ್ನ ಬಿಲ್ಲು ಬಾಣಗಳನ್ನು ಎಸೆಯುತ್ತಾನೆ. ಹಾರುವ ಹಕ್ಕಿಯನ್ನು ಆತ ದಿಟ್ಟಿಸಿ ನೋಡಿದರೆ ಸಾಕು ಅವು ನೆಲಕ್ಕೆ ಬೀಳುತ್ತವೆ. ಬಿಲ್ಲು ಹಾಗೂ ಬಾಣ ಕೇವಲ ಸಿದ್ಧತೆಗಳು ಮಾತ್ರ.

ಇದು ಸಂಗೀತ, ಚಿತ್ರಕಲೆ ಹಾಗೂ ಮಾನವ ಕಂಡುಹಿಡಿದ ಎಲ್ಲ ಕಲೆಗಳಿಗೆ ಅನ್ವಯಿಸುತ್ತದೆ. ಒಮ್ಮೆ ತುತ್ತ

ತುದಿ ತಲುಪಿದ ನಂತರ ಮೆಟ್ಟಲುಗಳ, ಮೇಲೆರಲು ನೆರವಾದ ಏಣಿಯ ಅಗತ್ಯವಿಲ್ಲ ಅದು ಇನ್ನು ಅಪ್ರಸ್ತುತ. ಶಾಸ್ತ್ರೀಯ ಸಂಗೀತ ಮೌನ ಹಾಗೂ ಧ್ಯಾನದ ಸಮರ್ಪಣೆ.

ಲಖನೌ ನವಾಬನ ಬಗ್ಗೆ ಸುಂದರವಾದ ಕಥೆಯಿದೆ. ಶತಮಾನಗಳಿಂದ ಲಖನೌ ಈ ರಾಷ್ಟ್ರದ ಸಾಂಸ್ಕೃತಿಯ ಕೇಂದ್ರವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದು ಕಲೆಯನ್ನು ಗೌರವಿಸುವ ನಗರ.

ಲಖನೌ ನವಾಬ ಬಹಳ ಧೈರ್ಯವಂತ ಮತ್ತು ಶೂರ. ಅಲ್ಲದೆ ಆತ ಅಂತರ್‌ದೃಷ್ಟಿಯುಳ್ಳವ. ಆದರೆ ಸಾಮಾನ್ಯ ಜನರು ತಪ್ಪಾಗಿ ತಿಳಿಯುವುದು ಇಂತಹವರನ್ನೇ. ಸಂಗೀತಗಾರನ ಕಥೆಯನ್ನು ಹೇಳುವ ಮೊದಲು, ಆತನನ್ನು ತನ್ನ ಆಸ್ಥಾನಕ್ಕೆ ಆಹ್ವಾನಿಸಿದ ರಾಜನ ಬಗ್ಗೆ ಹೇಳುವುದು ಉತ್ತಮ.

ಈತ ಲಖನೌದ ಕೊನೆಯ ರಾಜ. ಬ್ರಿಟಿಷರ ಸೈನ್ಯ ಲಖನೌ ಮೇಲೆ ದಾಳಿ ಮಾಡಿದಾಗ ಈತ ಸಂಗೀತ ಕೇಳುವುದರಲ್ಲಿ ನಿರತನಾಗಿದ್ದ. ಬ್ರಿಟಿಷರ ಸೈನ್ಯ ಬಹಳ ಸನಿಹಕ್ಕೆ ಆಗಮಿಸಿರುವ ಸುದ್ದಿ ಆತನಿಗೆ ತಿಳಿಯಿತು. ರಾಜ ಹೇಳಿದ, ''ಅವರನ್ನು ಸ್ವಾಗತಿಸಿ. ಅವರು ನಮ್ಮ ಅತಿಥಿಗಳು.'' ಬಹುಶಃ ಯಾವುದೇ ಇತಿಹಾಸದಲ್ಲಿ ರಾಜನೊಬ್ಬ ತನ್ನ ವೈರಿಗಳನ್ನು ಅತಿಥಿಗಳಾಗಿ ಸ್ವೀಕರಿಸಿದ ನಿದರ್ಶನ ನಿಮಗೆ ಸಿಗಲಾರದು. ರಾಜ ತನ್ನ ಸಹಾಯಕರಿಗೆ ಹೇಳಿದ, ''ಅವರ ಸುಖ-ಸೌಕರ್ಯಕ್ಕಾಗಿ ಎಲ್ಲ ಏರ್ಪಾಡುಗಳನ್ನು ಮಾಡಿ. ನಾನು ನಾಳೆ ಸ್ವತಃ ಅಸ್ಥಾನಕ್ಕೆ ಸ್ವಾಗತಿಸುತ್ತೇನೆ. ಅವರು ಇಲ್ಲಿಯೇ ಉಳಿಯುವುದಾದರೆ, ಇಲ್ಲಿಯೇ ಉಳಿಯಲಿ. ಅವರಿಗೆ ಅಧಿಕಾರ ಬೇಕಾದರೆ, ತೆಗೆದುಕೊಳ್ಳಲಿ. ಆದರೆ ಸಂಘರ್ಷ ಅನಗತ್ಯ. ಹಿಂಸಾಚಾರ ಮಾತ್ರ ಬೇಡ. ಈ ವಿಷಯವನ್ನು ಸುಸಂಸ್ಕೃತರಂತೆ ಕುಳಿತು ಇತ್ಯರ್ಥ ಮಾಡಬಹುದು. ಕೆಲವು ಮೂರ್ಖರು ಲಖನೌ ಮೇಲೆ ದಾಳಿ ಮಾಡುತ್ತಿದ್ದಾರೆಂಬ ಕ್ಷುಲ್ಲಕ ಕಾರಣಕ್ಕಾಗಿ ನಾನು ಈ ಸಂಗೀತಗಾರರಿಗೆ ತೊಂದರೆ ಕೊಡುವುದಿಲ್ಲ.''

ಎಲ್ಲ ಸಂಗೀತಗಾರರು ತನ್ನ ಆಸ್ಥಾನದಲ್ಲಿ ತಮ್ಮ ಕಲಾ ಪ್ರದರ್ಶನ ಮಾಡಿದ್ದರೂ, ಕೇವಲ ಒಬ್ಬ ಮಹಾನ್ ಸಂಗೀತಗಾರ ಮಾತ್ರ ಭಾಗವಹಿಸದೇ ಇದ್ದುದು ರಾಜನಲ್ಲಿ ಕಳವಳ ಹುಟ್ಟಿಸಿತ್ತು. ರಾಜ ವಿಚಾರಿಸಿದ, ''ಈತ ಮಾತ್ರ ಭಾಗವಹಿಸದಿರಲು ಕಾರಣವೇನು?'' ಅದಕ್ಕೆ ಸಹಾಯಕರು ಹೇಳಿದರು, ''ಆತನೊಬ್ಬ ಹುಚ್ಚ. ತಾನು ಸಂಗೀತ ನುಡಿಸುತ್ತಿರುವಾಗ ಯಾರೂ ಕದಲಬಾರದು, ಅಲ್ಲಾಡಬಾರದೆಂದು ಆತ ಹೇಳುತ್ತಾನೆ. ಸಂಗೀತಕ್ಕೆ ಯಾರಾದರೂ ತಲೆ ಆಡಿಸಿದರೆ, ಅವರ ತಲೆಯನ್ನು ತೆಗೆದುಹಾಕಬೇಕೆಂದು ಹೇಳುತ್ತಾನೆ. ಈ ಷರತ್ತಿಗೆ ಒಪ್ಪಿದರೆ ಮಾತ್ರ ಬರುವುದಾಗಿ ಆತ ಹೇಳುತ್ತಾನೆ.''

ನವಾಬ ಹೇಳಿದ, ''ಈ ಮೊದಲೇ ಈ ವಿಷಯವನ್ನು ನನಗೆ ತಿಳಿಸಬೇಕಿತ್ತು! ಆತನನ್ನು ಆಹ್ವಾನಿಸಿ. ನಾವು ಆತನ ಷರತ್ತನ್ನು ಒಪ್ಪಿರುವುದಾಗಿ ಹೇಳಿ. ಆತನ ಸಂಗೀತ ಕೇಳಬೇಕೆನ್ನುವವರಿಗೆ ಆತ ವಿಧಿಸುವ ಷರತ್ತಿನ ಬಗ್ಗೆ ಹೇಳಿ.

ಷರತ್ತನ್ನು ಒಪ್ಪಿಕೊಳ್ಳದವರು ಸಂಗೀತ ಗೋಷ್ಠಿಗೆ ಬರುವುದು ಬೇಡ.'' ಈ ಸಂಗತಿಯನ್ನು ಲಖನೌದಲ್ಲಿ ಎಲ್ಲೆಡೆ ಡಂಗುರ ಸಾರಲಾಯಿತು.

ಸುಮಾರು ಹತ್ತುಸಾವಿರ ಮಂದಿ ಆತನ ಸಂಗೀತವನ್ನು ಕೇಳಲು ಆಗಮಿಸಿದರು. ನವಾಬ ತನ್ನ ಮಾತನ್ನು ತಪ್ಪಿಸುವವನಲ್ಲ. ಸಂಗೀತ ಕೇಳಲು ಬಂದವರ ಸುತ್ತ ಒಂದು ಸಾವಿರ ಮಂದಿ ಖಡ್ಗಧಾರಿ ಸೈನಿಕರನ್ನು ನಿಲ್ಲಿಸಿದ. ತಲೆ ಅಲ್ಲಾಡಿಸಿದವರ ತಲೆಯನ್ನು ಮಧ್ಯದಲ್ಲಿಯೇ ಕತ್ತರಿಸಿದರೆ ಕಾರ್ಯಕ್ರಮಕ್ಕೆ ಅಡಚಣೆಯಾಗಬಹುದೆಂದು ಭಾವಿಸಿ, ತಲೆ ಅಲ್ಲಾಡಿಸಿದವರ ಹೆಸರನ್ನು ಬರೆದುಕೊಳ್ಳಲು ಸೈನಿಕರಿಗೆ ಸೂಚಿಸಲಾಯಿತು.

ಸಂಗೀತ ಗೋಷ್ಠಿಯ ಕೊನೆಯಲ್ಲಿ ಕೇವಲ ಹನ್ನೆರಡು ಮಂದಿ ತಲೆಗಳನ್ನು ಅಲ್ಲಾಡಿಸಿರುವರೆಂದು ಹೆಸರುಗಳನ್ನು ಬರೆದುಕೊಳ್ಳಲಾಗಿತ್ತು. ಆ ದಿನ ಮಧ್ಯರಾತ್ರಿ, ಸಂಗೀತಗಾರ ಕೇಳಿದ, ''ನಾನು ವಿಧಿಸಿದ ಷರತ್ತನ್ನು ಈಡೇರಿಸಲಾಗಿದೆಯೇ?'' ರಾಜ ಉತ್ತರಿಸಿದ, ''ಹೌದು, ಈ ಹನ್ನೆರಡು ಮಂದಿ ದೇಹವನ್ನು ಅಲ್ಲಾಡಿಸಿದ್ದಾರೆ ಹಾಗೂ ಷರತ್ತನ್ನು ಆಚರಿಸಲು ಮರೆತಿದ್ದಾರೆ. ಇನ್ನು ನಿಮಗೆ ಬಿಟ್ಟಿದ್ದು. ನೀವೇನು ಮಾಡಬಯಸುತ್ತೀರಿ? ನಾವು ಇವರ ತಲೆಗಳನ್ನು ಕತ್ತರಿಸಿ ಹಾಕಲೇ?''

ಆ ಸಂಗೀತಗಾರನ ಮಾತು ಕೇಳಿ ರಾಜನ ಸಹಿತ ಎಲ್ಲರೂ ಆಶ್ಚರ್ಯಚಕಿತರಾದರು. ಆತ ಹೇಳಿದ, ''ನನ್ನ ಸಂಗೀತ ಕೇಳಲು ಇವರು ಮಾತ್ರ ಯೋಗ್ಯರು. ಉಳಿದವರೆಲ್ಲರೂ ಹೋಗಬಹುದು. ಅವರು ನನ್ನ ಸಂಗೀತವನ್ನು ಕೇಳುತ್ತಿರಲಿಲ್ಲ, ತಮ್ಮನ್ನು ರಕ್ಷಿಸಿಕೊಳ್ಳಲು ಯತ್ನಿಸುತ್ತಿದ್ದರು. ಕೇವಲ ಒಂದು ಆಕಸ್ಮಿಕ ಚಲನೆಯೂ ಸಾವನ್ನು ತರಬಲ್ಲದು. ಕುಳಿತ ಭಂಗಿಯನ್ನು ಬದಲಾಯಿಸಿದರೂ ಮುಗಿಯಿತು. ಇವರೆಲ್ಲ ತಮ್ಮ ಜೀವ ಕಾಪಾಡಿಕೊಳ್ಳುವುದರಲ್ಲಿ ಮಗ್ನರಾಗಿದ್ದರು. ಸಂಗೀತ ಅಂತಹವರಿಗಲ್ಲ. ಆದ್ದರಿಂದ ಇವರುಗಳು ಹೋಗಬಹುದು. ಈಗ ನಾನು ಈ ಹನ್ನೆರಡು ಮಂದಿಗಾಗಿ ರಾತ್ರಿಯಿಡೀ ನಿಜವಾದ ಸಂಗೀತ ಕಾರ್ಯಕ್ರಮ ನಡೆಸುತ್ತೇನೆ. ಇವರಿಗಾಗಿ ಹಾಡುತ್ತೇನೆ.'' ಇಲ್ಲಿ ಒಂದು ವಿಚಿತ್ರ ತಿರುವು ......

ನವಾಬ್ ಹೇಳಿದ, ''ಸರಿಯಾದ ಜನರನ್ನು ಹುಡುಕಲು ಇದು ಬಹಳ ವಿಚಿತ್ರವಾದ ಮಾರ್ಗ.''

ಅದಕ್ಕೆ ಆ ಸಂಗೀತಗಾರ ನುಡಿದ, ''ಸರಿಯಾದ ಜನರನ್ನು ಹುಡುಕಲು ಇರುವುದು ಇದೊಂದೇ ಮಾರ್ಗ. ಈ ಹನ್ನೆರಡು ಮಂದಿಗೆ ಸಂಗೀತ ಜೀವಕ್ಕಿಂತ ಹೆಚ್ಚು ಮೌಲ್ಯವಾದುದು.''

ಇವರುಗಳು ವಿಧಿಸಲಾಗಿದ್ದ ಷರತ್ತನ್ನು ಮರೆತಿದ್ದರು. ಸಂಗೀತ ಇವರ ಹೃದಯವನ್ನು ತಟ್ಟಿತು. ತಕ್ಷಣ ಇವರು ಓಲಾಡಲಾರಂಭಿಸಿದರು. ಇವರೊಳಗೆ ಒಂದು ರೀತಿಯ ನರ್ತನ ಸಂಚರಿಸಲಾರಂಭಿಸಿತು. ಈ ಹನ್ನೆರಡು ಮಂದಿಗಾಗಿ ಆ ಸಂಗೀತಗಾರ ರಾತ್ರಿಯಿಡೀ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟ. ತನಗೆ ಯಾವುದೇ ಪ್ರಶಸ್ತಿ,

ಪುರಸ್ಕಾರ ಬೇಡವೆಂದು ಸಂಗೀತಗಾರ ನವಾಬನಿಗೆ ಹೇಳಿದ. ನನ್ನ ಸಂಗೀತವನ್ನು ಕೇಳುವ ಸೂಕ್ತ ಜನರನ್ನು ಹುಡುಕಿಕೊಟ್ಟದ್ದೇ ದೊಡ್ಡ ಬಹುಮಾನವೆಂದು ಭಾವಿಸುವುದಾಗಿ ಆತ ಹೇಳಿದ. ''ಈ ಹನ್ನೆರಡು ಮಂದಿಗೆ ಬಹುಮಾನ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಏಕೆಂದರೆ ಇವರಿಗೆ ಸಂಗೀತವೇ ಸರ್ವಸ್ವ. ಇವರಿಗೆ ಅದೊಂದು ಧ್ಯಾನ.''

ಈ ಕತೆಯನ್ನು ಗಮನಿಸಿದಾಗ ಎರಡು ಸಾಧ್ಯತೆಗಳನ್ನು ಕಾಣಬಹುದು: ಒಂದು, ಧ್ಯಾನಿಗಳು ಸಂಗೀತವನ್ನು ಕಂಡುಹಿಡಿದಿರಬೇಕು ಇಲ್ಲವೇ ಸಂಗೀತಗಾರರು ಧ್ಯಾನವನ್ನು ಶೋಧಿಸಿರಬೇಕು. ಇವೆರಡೂ ಒಂದಕ್ಕೊಂದು ಆಳವಾಗಿ ಸಂಬಂಧಿಸಿವೆ. ಧ್ಯಾನ, ಉನ್ನತ ಹಾಗೂ ಆಳವಾದ ಅನುಭವವಾಗಿರುವುದರಿಂದ, ತಮ್ಮ ಆಂತರಿಕ ಮೌನ, ಆಂತರಿಕ ನಾಟ್ಯವನ್ನು ತಮ್ಮ ಪ್ರೇಮಿಗಳಿಗೆ ತಿಳಿಸುವ ಮಾಧ್ಯಮವಾಗಿ ಸಂಗೀತವನ್ನು ಧ್ಯಾನಿಗಳೇ ಕಂಡುಹಿಡಿದಿರಬೇಕೆಂಬುದು ನನ್ನ ಸ್ವಂತ ಅನುಭವ.

ಪೂರ್ವದ ಪ್ರಾಚೀನ ಸಂಗೀತ ಕಲೆಗೆ ಸಂಗೀತಗಾರರನ್ನು ತರಬೇತಿಗೊಳಿಸುವಷ್ಟೇ ಶ್ರೋತೃಗಳನ್ನು ತರಬೇತಿಗೊಳಿಸುವ ಅಗತ್ಯವೂ ಇದೆ. ಪ್ರಾಚೀನ ಶಾಸ್ತ್ರೀಯ ಸಂಗೀತವನ್ನು ಎಲ್ಲರೂ ಅರ್ಥೈಸಿಕೊಳ್ಳಲಾರರು. ಅದರ ಮಾಧುರ್ಯದೊಂದಿಗೆ ಸ್ಪಂದಿಸುವ ಕ್ಷಮತೆ ನಿಮ್ಮಲ್ಲಿರಬೇಕು. ಒಂದು ಹಂತದಲ್ಲಿ ನೀವು ಮಾಯವಾಗಿ ಸಂಗೀತ ಮಾತ್ರ ಉಳಿಯಬೇಕು.

ಇದು ಎಲ್ಲ ಮಹಾನ್ ಸಂಗೀತಗಾರರ, ನೃತ್ಯಪಟುಗಳ, ಕಲಾವಿದರ, ಶಿಲ್ಪಿಗಳ ಅನುಭವವೂ ಹೌದು. ತಮ್ಮ ಸೃಜನಶೀಲತೆಯಲ್ಲಿ ತಲ್ಲೀನರಾದಾಗ ಅವರು ಅವರಾಗಿರುವುದಿಲ್ಲ. ಈ ಬ್ರಹ್ಮಾಂಡದಲ್ಲಿ ಕರಗಿಹೋಗುವ ಸ್ವಾದದ ಅನುಭವವನ್ನು ಅವರ ಸೃಜನಶೀಲತೆ ಕೊಡುತ್ತದೆ. ಇದು ಧ್ಯಾನದೊಂದಿಗಿನ ಅವರ ಪ್ರಥಮ ಸಮಾಗಮ. ಆದ್ದರಿಂದ ಈ ಎರಡೂ ಸಾಧ್ಯತೆಗಳು ನಿಜವಿರಬಹುದು. ಸಂಗೀತ ಜನರನ್ನು ಧ್ಯಾನದ ಹತ್ತಿರಕ್ಕೆ ಕರೆದೊಯ್ಯಬಹುದು ಅಥವಾ ಅಭಿವ್ಯಕ್ತಗೊಳಿಸಲಾರದ್ದನ್ನು ಅಭಿವ್ಯಕ್ತಗೊಳಿಸಲು ಧ್ಯಾನ ಪ್ರಯತ್ನಿಸಿರಬಹುದು. ಇದೇನೇ ಇರಲಿ, ಸಂಗೀತವು ಮನುಷ್ಯನಿಗೆ ಸಾಧ್ಯವಾಗುವ ಅತ್ಯುನ್ನತ ಸೃಷ್ಟಿ.[59]

ಸಂತ ನಾನಕ್‌ರೊಂದಿಗೆ ಸದಾ ಅವರ ಶಿಷ್ಯ, ಸಂಗೀತಗಾರನಾದ ಮರ್ದನ ಇರುತ್ತಿದ್ದ. ನಾನಕ್ ತಾವು ಮಾತನಾಡುವ ಮೊದಲು, ವೀಣೆಯನ್ನು ನುಡಿಸಿ, ಮಾತಿಗೆ ಅನುಕೂಲಕರ ವಾತಾವರಣ ಸೃಷ್ಟಿಸುವಂತೆ ಮರ್ದನನಿಗೆ ಹೇಳುತ್ತಿದ್ದರು. ಮಾತಿನ ಮಧ್ಯೆ ತಟ್ಟನೆ ನಿಲ್ಲಿಸಿ ಮರ್ದನನಿಗೆ ವೀಣೆಯನ್ನು ಮಧುರವಾಗಿ ನುಡಿಸಲು ಹೇಳುತ್ತಿದ್ದರು. ''ಇದರಿಂದ ನನ್ನ ವಚನ ಕೇಳಲು ಬಂದವರಿಗೆ ಪದಗಳ ದುರ್ಬಲತೆ, ನಿರ್ಬಲತೆ ಅರಿವಾಗಲಿ. ಆರಂಭವೂ ಸಂಗೀತ, ಅಂತ್ಯವೂ ಸಂಗೀತ. ಮಾತಿಗಿಂತ ಮಿಗಿಲಾದ ಸಂವಹನವಿರುವುದು ನಿಮಗೆ ಗೊತ್ತಿಲ್ಲದೆ ಇರುವುದರಿಂದ ನಾನು ಪದಗಳನ್ನು ಉಪಯೋಗಿಸ ಬೇಕಾಗಿದೆ,'' ಎಂದೆನ್ನುತ್ತಿದ್ದರು ನಾನಕ್.

ಮರ್ದನ ನಾನಕರನ್ನೇ ಹಿಂಬಾಲಿಸುತ್ತಿದ್ದ .....

ನಾನಕ್ ಸಂತರಲ್ಲಿ ವಿಶಿಷ್ಟರಾಗಲು ಕಾರಣವೆಂದರೆ ಅವರು ಸಂಚರಿಸಿದಷ್ಟು ಮತ್ಯಾರೂ ಸಂಚರಿಸಿಲ್ಲ. ಅವರು ಭಾರತವನ್ನಲ್ಲದೇ ಶ್ರೀಲಂಕಾವನ್ನೂ ಸುತ್ತಿದ್ದರು. ಅನಂತರ ಅವರು ಅಫ್‌ಘಾನಿಸ್ಥಾನ್, ಸೌದಿ ಅರೇಬಿಯಾದಲ್ಲಿ ಸಂಚರಿಸಿ, ಮಹಮದೀಯರ ಪವಿತ್ರ ಸ್ಥಳವಾದ ಕಾಬಾವನ್ನು ತಲುಪಿದರು.

ಅವರು ಅಲ್ಲಿ ತಲುಪಿದಾಗ ಸಂಜೆಯಾಗಿತ್ತು. ಅವರ ಹೆಸರು ಮತ್ತು ಖ್ಯಾತಿ ಅವರಿಗಿಂತ ಮುಂಚೆಯೇ ಅಲ್ಲಿಗೆ ತಲುಪಿತ್ತು. ನಾನಕ್‌ರಂತಹ ಸಂತರು ಆ ರೀತಿ ನಡೆದುಕೊಳ್ಳಬಹುದೆಂದು ಅಲ್ಲಿನ ಜನ ಹಾಗೂ ಧರ್ಮಪ್ರಚಾರಕರು ಊಹಿಸಿರಲಿಲ್ಲ. ಅವರೆಲ್ಲರೂ ನಾನಕ್‌ರ ಬಗ್ಗೆ ಸಾಕಷ್ಟು ಕೇಳಿದ್ದರು. ರಾತ್ರಿಯಾಗುತ್ತಿದ್ದಂತೆ ನಾನಕ್ ತಮ್ಮ ಹಾಸಿಗೆ ಸಿದ್ಧಪಡಿಸಿಕೊಂಡು ಮರ್ದನನಿಗೆ ಮಲಗಲು ತಯಾರಿ ಮಾಡಿಕೊಳ್ಳುವಂತೆ ಹೇಳಿದರು. ಅವರಿಬ್ಬರೂ ಕಾಬಾದ ಕಡೆಗೆ ಕಾಲುಚಾಚಿ ಮಲಗಿದರು! ಹೀಗೆ ಮಾಡುವುದು ಮಹಮದೀಯ ಧರ್ಮ ಸಂಪ್ರದಾಯದ ಪ್ರಕಾರ ತೀವ್ರ ಅವಮಾನ ಮಾಡಿದಂತೆ .....


ಧರ್ಮೋಪದೇಶಕರಿಗೆ ಮತ್ತು ಜನರಿಗೆ ಕೋಪ ನೆತ್ತಿಗೇರಿತ್ತು. ಅವರು ನಾನಕ್‌ರಿಗೆ ಹೇಳಿದರು, ''ನೀವು ಯೋಗಿಗಳಲ್ಲ. ಸಭ್ಯ ರೀತಿಯಲ್ಲಿ ವರ್ತಿಸಬೇಕು ಎಂಬುದೂ ನಿಮಗೆ ಗೊತ್ತಿಲ್ಲ. ನೀವು ನಮ್ಮನ್ನೆಲ್ಲಾ ಅವಮಾನಗೊಳಿಸಿದ್ದೀರಿ.''

ನಾನಕ್ ಹೇಳಿದರು, ''ನನ್ನ ಮೇಲೆ ಸಿಟ್ಟಾಗದಿರಿ. ನನಗೆ ನನ್ನದೇ ಆದ ತೊಂದರೆಗಳಿವೆ. ಅದೇನೆಂದರೆ, ನಾನು ಯಾವ ದಿಕ್ಕಿಗೇ ನನ್ನ ಪಾದಗಳನ್ನು ಚಾಚಲಿ, ಅದು ದೈವತ್ವದ ಕಡೆಗೇ ನೆಟ್ಟಿರುತ್ತದೆ. ಏಕೆಂದರೆ ಪವಿತ್ರ ಅಥವಾ ದಿವ್ಯತೆ ಹೊರತಾಗಿ ಮತ್ತೇನೂ ಇಲ್ಲವೇ ಇಲ್ಲ. ಉದ್ದೇಶಪೂರ್ವಕವಾಗಿ ನಾನು ಕಾಬಾದ ಕಡೆ ಕಾಲು ಚಾಚಿಲ್ಲ. ಇದರಿಂದ ನಿಮಗೆ ಅವಮಾನವಾಗಿದ್ದರೆ, ನಿಮಗೆ ಬೇಕಿದ್ದ ಕಡೆಗೆ ನನ್ನ ಕಾಲನ್ನು ತಿರುಗಿಸಬಹುದು.''

ಈ ಕಥೆ ಎಷ್ಟು ಸುಂದರವಾಗಿದೆ ಎಂದರೆ ..... ಧರ್ಮಪ್ರಚಾರಕರು ನಾನಕ್‌ರ ಕಾಲುಗಳನ್ನು ಎಲ್ಲ

ದಿಕ್ಕುಗಳಿಗೆ ತಿರುಗಿಸಿ ನೋಡಿದರು, ಅವರಿಗೆ ಏನು ಮಾಡಬೇಕೆಂದು ತಿಳಿಯದಾಯಿತು. ಕಾರಣ: ನಾನಕ್‌ರ ಪಾದವನ್ನು ತಿರುಗಿಸಿದ ಕಡೆಗೇ ಕಾಬಾ ತಿರುಗುತ್ತಿತ್ತು! ಇದು ಕಥೆ ಇರಬಹುದು. ಕಾಬಾ ಅಂದರೆ ಒಂದು ಕಲ್ಲು. ಕಲ್ಲು ಎಂದಿಗೂ ಸಂವೇದನೆಯನ್ನು ಹೊಂದಿರಲಾರದು. ಆದರೆ ಒಂದು ಸಂಗತಿಯನ್ನು ಇದು ಸ್ಪಷ್ಟ ಪಡಿಸುತ್ತದೆ - ಇಡೀ ಅಸ್ತಿತ್ವ ಸಂಪೂರ್ಣ. ಅದು ಒಂದೇ ಸಂಗೀತ, ಒಂದೇ ನೃತ್ಯ ಹಾಗೂ ಒಂದೇ ದೈವತ್ವದಿಂದ ತುಂಬಿ ತುಳುಕುತ್ತದೆ.[60]

ಜೀವನದಲ್ಲಿ ಯತಾರ್ಥ ಮೌಲ್ಯಗಳೆಲ್ಲವೂ ಧ್ಯಾನದಿಂದಲೇ ಮೂಡಿದ್ದು ಮತ್ತು ಅವತರಿಸಿದ್ದು. ಅನ್ಯಥಾ ಮಾರ್ಗವಿಲ್ಲ. ಕಲೆ, ಸಂಗೀತ, ಕಾವ್ಯ, ನೃತ್ಯ ಹಾಗೂ ಶಿಲ್ಪ ಇವೆಲ್ಲದರ ಮೂಲ ಧ್ಯಾನ. ಧ್ಯಾನವೇ ಇವೆಲ್ಲವುಗಳ ತಾಯಿ. ಯಾವುದೆಲ್ಲವೂ ಸೃಜನಾತ್ಮಕವೋ, ಯಾವುದೆಲ್ಲ ಜೀವ ಪೂರಕವೋ, ಅವೆಲ್ಲವೂ ಧ್ಯಾನದಿಂದಲೇ ಉದ್ಭವಿಸಿದ್ದು.[61]



ಲಕ್ಷ್ಮಣ ದೇವಸ್ಥಾನ, ಖಜುರಾಹೋ

ತಾನ್‌ಸೇನ್ ಬಗ್ಗೆ ಪ್ರಖ್ಯಾತವಾದ ಕಥೆಯಿದೆ. ತಾನ್‌ಸೇನ್ ಅಕ್ಬರನ ಆಸ್ಥಾನ ಸಂಗೀತಗಾರನಾಗಿದ್ದ. ತನ್ನ ಆಸ್ಥಾನದಲ್ಲಿ ಅತ್ಯುತ್ತಮ ಸಂಗೀತಗಾರರು, ಕವಿಗಳು, ತತ್ವಜ್ಞಾನಿಗಳಿರಬೇಕೆಂಬುದು ಅಕ್ಬರನ ಅಪೇಕ್ಷೆ. ಎಲ್ಲವೂ ಅತ್ಯುತ್ಕೃಷ್ಟವಾಗಿರಬೇಕೆಂಬುದು ಅವನ ಹಂಬಲವಾಗಿತ್ತು. ಈ ವಿಶ್ವದಲ್ಲಿ ಜನ್ಮತಳೆದ ಪ್ರಖ್ಯಾತ ಸಂಗೀತಗಾರರಲ್ಲಿ ತಾನ್‌ಸೇನನೂ ಒಬ್ಬ.

ತಾನ್‌ಸೇನ್ ವಾಸಿಸುತ್ತಿದ್ದ ಪ್ರದೇಶದಲ್ಲಿ ಅವನ ಮನೆ ಸುತ್ತಮುತ್ತಲಿನಲ್ಲಿ ಯಾರೂ ಸಂಗೀತಾಭ್ಯಾಸ ಮಾಡಬಾರದೆಂಬ ಆದೇಶವನ್ನು ಅಕ್ಬರ್ ನೀಡಿದ್ದ. ತಾನ್‌ಸೇನನಿಗೆ ತೊಂದರೆ ಆಗಬಹುದೆಂಬ ಕಾರಣಕ್ಕಾಗಿ ಈ ಆದೇಶವನ್ನು ಅಕ್ಬರ್ ಹೊರಡಿಸಿದ್ದ. ಅಲ್ಲಿ ಯಾರಾದರೂ ಹಾಡಿದರೆ ಅವರನ್ನು ಜೈಲಿಗೆ ಹಾಕಲಾಗುತ್ತಿತ್ತು. ಇಲ್ಲದಿದ್ದರೆ ಅವರು ಸವಾಲನ್ನು ಸ್ವೀಕರಿಸಿ ಆಸ್ಥಾನಕ್ಕೆ ಬಂದು ಸಂಗೀತದಲ್ಲಿ ತಾನ್‌ಸೇನನನ್ನು ಎದುರಿಸಬೇಕಿತ್ತು.

ಈ ರೀತಿಯಲ್ಲಿ ಸಾಕಷ್ಟು ಜನ ಆಸ್ಥಾನದಲ್ಲಿ ತಾನ್‌ಸೇನನಿಂದ ಸೋಲನ್ನು ಅನುಭವಿಸಿದ್ದರು. ಆತನನ್ನು ಪರಾಭವಗೊಳಿಸುವವರೇ ಇರಲಿಲ್ಲ. ಆದರೆ ಬೈಜು ಬಾವರ ಎಂಬುವವ ತಾನ್‌ಸೇನನನ್ನು ಸೋಲಿಸುವುದಾಗಿ ಸವಾಲು ಹಾಕಿದ. ಅವನ ನಿಜವಾದ ಹೆಸರು ಬೈಜು. ಆತ ಹುಚ್ಚನೆಂದು ಜನ ಭಾವಿಸಿದ್ದರಾದ್ದರಿಂದ ಆತನನ್ನು ಬೈಜು ಬಾವರ ಎಂದು ಕರೆಯುತ್ತಿದ್ದರು. ಬಾವರ ಎಂದರೆ ಹುಚ್ಚ ಎಂದರ್ಥ. ತಾನ್‌ಸೇನನನ್ನು ಸೋಲಿಸಬೇಕೆಂಬುದು ಆತನ ಜೀವನದ ಮುಖ್ಯ ಉದ್ದೇಶವಾಗಿತ್ತು.

ಈ ದಿಸೆಯಲ್ಲಿ ಆತ ದಿನಕ್ಕೆ ಇಪ್ಪತ್ನಾಲ್ಕು ಗಂಟೆಗಳ ಕಾಲ ಪರಿಶ್ರಮ ಪಡುತ್ತಿದ್ದ. ತನ್ನ ಗುರಿ ಸಾಧಿಸಲು ಹೆಣಗುತ್ತಿದ್ದ. ಕೊನೆಗೆ ಆತ ತಾನ್‌ಸೇನನ ಗುರು ಹರಿದಾಸರಲ್ಲಿಗೆ ಹೋದ. ಬೈಜು ಬಾವರನನ್ನು ಕಂಡು ಹರಿದಾಸರಿಗೆ ಸಂತಸವಾಯಿತು. "ತಾನ್‌ಸೇನನಂತಹ ಮತ್ತೊಬ್ಬ ಶಿಷ್ಯನನ್ನು ತಾನು ಪಡೆಯುತ್ತೇನೆಂದು ಎಂದೂ ಊಹಿಸಿರಲಿಲ್ಲ. ಭೇಷ್! ನಿನ್ನಲ್ಲಿ ಉತ್ತಮ ಸಂಗೀತಗಾರನಾಗುವ ಗುಣವಿದೆ. ಆದರೆ ನಿನ್ನಲ್ಲಿ ಒಂದು ದೊಡ್ಡ ಕೊರತೆಯಿದೆ. ನೀನು ಯಾರನ್ನೋ ಸೋಲಿಸಬೇಕೆಂದಿರುವೆ. ಅದು ಸಂಗೀತವಲ್ಲ. ಅದು ನಿನ್ನ ಅಸ್ತಿತ್ವವನ್ನು ಸಂಗೀತರಹಿತವಾಗಿಸಿದೆ. ನಿನ್ನಲ್ಲಿ ಸುಂದರ ಕಲೆಯಿದೆ. ಸುಂದರವಾದ ಉಪಕರಣವಿದೆ. ಆದರೆ ಸಂಗೀತದೊಳಗೆ ನಿನ್ನ ಹೃದಯವಿಲ್ಲ. ಅದು ಯಾರನ್ನೋ ಸೋಲಿಸಲು ತುಡಿಯುತ್ತಿದೆ. ಈ ವಿಚಾರವನ್ನು ನಿನ್ನ ಮನಸ್ಸಿನಿಂದ ತೆಗೆದುಹಾಕುವ ತನಕ ನೀನು ತಾನ್‌ಸೇನನಿಗೆ ಸರಿಸಮನಾಗಲಾರೆ. ತಾನ್‌ಸೇನನಿಗೆ ಯಾರನ್ನೂ ಸೋಲಿಸುವ ಮನಸ್ಸಿಲ್ಲ. ಹೀಗಾಗಿ ಆತ ಗೆಲ್ಲುತ್ತಿದ್ದಾನೆ," ಎಂದರು ಹರಿದಾಸರು.

ಈ ಹಂಬಲವನ್ನು ಬಿಡುವುದು ಕಷ್ಟವೆಂದು ಬೈಜು ಬಾವರನಿಗೆ ಅನಿಸಿತು. ಏಕೆಂದರೆ ಈ ಒಂದು ಹಂಬಲವನ್ನು ಈಡೇರಿಸಲು ಆತ ತನ್ನ ಇಡೀ ಜೀವನವನ್ನು ಸಂಗೀತಕ್ಕಾಗಿ

ಮುಡಿಪಾಗಿಟ್ಟಿದ್ದ. ಆದರೆ ಗುರುಗಳೇ ಹೇಳಿದ ಮೇಲೆ ಏನೂ ಮಾಡುವಂತಿರಲಿಲ್ಲ. ಕ್ರಮೇಣ ತಾನ್‌ಸೇನನನ್ನು ಮರೆತ.

ಒಮ್ಮೆ ವೃದ್ಧ ಹರಿದಾಸರು ಖಾಯಿಲೆ ಬಿದ್ದರು. ಅವರ ಕಾಲು ಪಾರ್ಶ್ವವಾಯುವಿಗೆ ತುತ್ತಾಯಿತು. ಹೀಗಾಗಿ ಅವರಿಗೆ ತಮ್ಮ ಕುಟೀರದಿಂದ ಹತ್ತಿರದ ಕೃಷ್ಣ ದೇವಾಲಯಕ್ಕೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಅವರು ಕೃಷ್ಣನ ದರ್ಶನ ಮಾಡದೇ ಏನನ್ನೂ ಸೇವಿಸುತ್ತಿರಲಿಲ್ಲ. ಅನೇಕ ವೈದ್ಯರು ಚಿಕಿತ್ಸೆ ನೀಡಿದರೂ ಏನೂ ಪ್ರಯೋಜನವಾಗಲಿಲ್ಲ.

ಬೈಜು ಬಾವರನಿಗೆ ಇದು ಗೊತ್ತಾಯಿತು. ಆತ ತನ್ನ ಹಳ್ಳಿಯಿಂದ ಓಡುತ್ತಾ ಬಂದು ಹರಿದಾಸರು ಏಳುವ ಸಮಯದಲ್ಲಿ ಹಾಡನ್ನು ಸುಮಧುರವಾಗಿ ಹಾಡತೊಡಗಿದ. ಆ ಸಂಗೀತ ಮತ್ತು ಹಾಡಿನ ಅರ್ಥ, ''ನಿನ್ನನ್ನು ನೋಡಲು ನನ್ನ ಕಣ್ಣುಗಳು ತಹತಹಿಸುತ್ತಿವೆ. ನನ್ನ ಕಾಲುಗಳಿಗೆ ಶಕ್ತಿ ನೀಡು. ಇಲ್ಲದಿದ್ದರೆ ನಾನು ನಿನ್ನನ್ನು ಕಾಣದಿರುವುದಕ್ಕೆ ನೀನೇ ಹೊಣೆಗಾರನಾಗುತ್ತೀಯೇ. ನನ್ನನ್ನು ಬಿಡಬೇಡ.'' ಆ ಸ್ವರದಲ್ಲಿ ಎಂತಹ ಮಾಧುರ್ಯ ಮತ್ತು ಶಕ್ತಿ ಇತ್ತೆಂದರೆ ಹರಿದಾಸರು ಎದ್ದು ನಿಂತರು, ನಿಧಾನವಾಗಿ. ಕೃಷ್ಣನ ದೇಗುಲಕ್ಕೆ ಹೋಗಿ ಕೃಷ್ಣನನ್ನು ಪೂಜಿಸಿದರು. ವಾಪಸು ಬರುವಾಗ ಬೈಜು ಬಾವರನಿಗೆ ಹೇಳಿದರು, ''ಈಗ ನೀನು ತಾನ್‌ಸೇನನೊಂದಿಗೆ ಸ್ಪರ್ಧಿಸಬಹುದು. ಈಗ ನಿನಗೆ ಯಾವುದೇ ಸ್ಪರ್ಧೆ ಅಥವಾ ಗೆಲುವಿನ ಬಗ್ಗೆ ಆಕಾಂಕ್ಷೆ ಇಲ್ಲವಾಗಿದೆ. ನಿನ್ನ ಸಂಗೀತ ನನ್ನ ಕಾಲನ್ನು ಗುಣಪಡಿಸಿತೆಂದರೆ ನಿನ್ನ ಸಾಧನೆ ಅಸಾಮಾನ್ಯವಾದುದು. ನೀನು ಮಹತ್ತರವಾದುದನ್ನು ಸಾಧಿಸಿದ್ದೀಯೆ.''

ಆದಕ್ಕೆ ಬೈಜು ಉತ್ತರಿಸಿದ, ''ಏನು ಪ್ರಯೋಜನ? ನಾನು ಸಂಗೀತವನ್ನು ಅತಿಯಾಗಿ ಪ್ರೀತಿಸುತ್ತೇನೆ. ನಾನು ಈಗ ತಾನ್‌ಸೇನನನ್ನು ಸಂಪೂರ್ಣ ಮರೆತಿದ್ದೇನೆ. ಅದು ಬಹಳ ಬಾಲಿಶವಾದ ಆಸೆಯಾಗಿತ್ತು. ನೀವು ಹೇಳಿದ್ದು ನಿಜ - ನಾನು ತಾನ್‌ಸೇನನಿಗೆ ಸೋತುಬಿಡುತ್ತಿದ್ದೆ. ನೀವು ಹೇಳಿದ ಇನ್ನೊಂದು ಸಂಗತಿ ಕೂಡ ನಿಜ. ಅದೇನೆಂದರೆ ಇಂದು ನಾನು ವಿಜಯಿಯಾಗಬಹುದು. ಆದರೆ ನನಗೆ ಇಂದು ಅದರಲ್ಲಿ ಆಸಕ್ತಿಯಿಲ್ಲ ....''

ಹರಿದಾಸರು ಹೇಳಿದರು, ''ಬೈಜು ನೀನು ನಿಜಕ್ಕೂ ಬಾವರಾನೇ! ನೀನು ಖಂಡಿತವಾಗಿಯೂ ಹುಚ್ಚ. ಈಗ ನಿನಗೆ ಗೆಲ್ಲುವ ಅವಕಾಶವಿದೆ.''

ಆದರೆ ಬೈಜು ಹೋಗಲಿಲ್ಲ. ಸ್ಪರ್ಧೆಗೆ ಇಳಿಯಲಿಲ್ಲ. ಹರಿದಾಸರು ಹೇಳಿದುದರಲ್ಲಿ ಅತಿಶಯೋಕ್ತಿಯಿರಲಿಲ್ಲ. ಆತ ತಾನ್‌ಸೇನನಿಗಿಂತ ಮೇಲೇರುವ ಸಾಧ್ಯತೆಗಳಿದ್ದವು. ಸ್ಪರ್ಧೆಯಲ್ಲಿ ಭಾಗವಹಿಸಲು ನಿರಾಕರಿಸುವ ಮೂಲಕ ತನ್ನ ಸಂಗೀತ ಮಾರುಕಟ್ಟೆಯ ಭಾಗವಲ್ಲ ಹಾಗೂ ಅದು ಬಹಳ ಪವಿತ್ರವಾದುದು ಎಂದು ಬೈಜು ತೋರಿಸಿಕೊಟ್ಟ.


ಸಂಗೀತ ಬೈಜು ಬಾವರನ ಧ್ಯಾನವಾಯಿತು.[62]

ಪೂರ್ವದಲ್ಲಿ ದೇವರ ಬಗ್ಗೆ ಬಹಳ ಆಳವಾದ ತಿಳಿವಳಿಕೆ ಮತ್ತು ನಂಬಿಕೆಯಿದೆ. ಸೃಷ್ಟಿ ದೇವರಿಂದ ಪ್ರತ್ಯೇಕ ಅಲ್ಲ. ಅದು ಅವನ ಲೀಲೆ. ಸೃಷ್ಟಿಯಲ್ಲಿ ದೇವರು ಹಲವು ರೂಪಗಳಲ್ಲಿ ಅಡಗಿರುತ್ತಾನೆ. ಇಲ್ಲಿ ಆತ ಕಲ್ಲಾಗಿದ್ದರೆ, ಅಲ್ಲಿ ಆತ ಹೂವು. ಇಲ್ಲಿ ಆತ ಪಾಪಿಯಾಗಿರಬಹುದು, ಅಲ್ಲಿ ಆತ ಸಂತ. ಎಲ್ಲವೂ ಅವನ ಆಟವೇ. ಆತನೊಬ್ಬನೇ ನಟ ಹಾಗೂ ಪ್ರತಿ ಬಾರಿ ಆತ ತನ್ನ ಪಾತ್ರವನ್ನು ಬದಲಿಸುತ್ತಿರುತ್ತಾನೆ. ದೇವರು ಏಸುವಿನೊಳಗೂ ಇದ್ದಾನೆ. ಜುದಾಸ್‌ನ ಒಳಗೂ ಇದ್ದಾನೆ.

ಪೂರ್ವದಲ್ಲಿ ದೇವರು ವ್ಯಕ್ತಿಯಲ್ಲ - ಈ ವಿಶ್ವದ ತಿರುಳು, ಸಾರ, ಸತ್ವವೇ ದೇವರು. ದೇವರು ಸೃಷ್ಟಿಕರ್ತನಲ್ಲ - ದೇವರು ಒಂದು ಸೃಜನಶೀಲತೆ. ಸೃಷ್ಟಿಕರ್ತ ಮತ್ತು ಸೃಷ್ಟಿ - ಇವೆರಡು ಸೃಜನಶೀಲ ಶಕ್ತಿಯ ಆಕಾರಗಳು.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿನ ಕಲ್ಪನೆ ಕಲೆಗಾರನೊಬ್ಬ ಚಿತ್ರ ಬಿಡಿಸಿದಂತೆ. ಚಿತ್ರವೊಂದು ಪೂರ್ತಿಯಾಗುವ ಹೊತ್ತಿಗೆ ಅದು ಕಲಾವಿದನಿಂದ ಬೇರೆಯಾಗಿರುತ್ತದೆ. ಅನಂತರ ಚಿತ್ರಕಾರ ಸತ್ತರೂ ವರ್ಣಚಿತ್ರ ಹಾಗೇ ಉಳಿಯುತ್ತದೆ. ಪೂರ್ವದಲ್ಲಿ ದೇವರು ಮತ್ತು ಪ್ರಪಂಚವನ್ನು ಚಿತ್ರಕಾರ ಹಾಗೂ ವರ್ಣಚಿತ್ರ ಎಂದು ಪರಿಗಣಿಸುವುದಿಲ್ಲ - ನಾವು ದೇವರನ್ನು ನೃತ್ಯಗಾರ ಅಥವಾ ನಟರಾಜ ಎಂದು ಪರಿಗಣಿಸುತ್ತೇವೆ. ನೃತ್ಯಗಾರನಿಂದ ನೃತ್ಯವನ್ನು ಪ್ರತ್ಯೇಕಿಸುವುದು ಸಾಧ್ಯವಿಲ್ಲ. ನೃತ್ಯಪಟು ಹೋದನೆಂದರೆ, ನೃತ್ಯವೂ ಹೋದಂತೆಯೇ. ನೃತ್ಯ ಸ್ಥಗಿತಗೊಂಡರೆ, ಆತ ನೃತ್ಯಗಾರನಾಗಿರಲಾರ. ನೃತ್ಯ ಮತ್ತು ನರ್ತಕ ಎರಡೂ ಒಂದೇ ಅಸ್ತಿತ್ವ. ಪ್ರತ್ಯೇಕವಾಗಿರುವುದು ಅಸಾಧ್ಯ. ನೀವು ಅದನ್ನು ಪ್ರತ್ಯೇಕಿಸಲಾರಿರಿ.

ದೇವರು ನರ್ತಕನಂತೆಯೇ. ನಾನು ಅವನ ಚಲನೆಗಳಲ್ಲೊಂದು. ನೀವು ಕೂಡ ಆತನ ಚಲನೆಗಳಲ್ಲೊಂದು. ನೀವು ಇದನ್ನು ಗುರುತಿಸಬಹುದು ಅಥವಾ ಗುರುತಿಸದಿರಬಹುದು. ಈ ಪ್ರಪಂಚದಲ್ಲಿರುವ ಒಂದೇ ಒಂದು ವ್ಯತ್ಯಾಸವೆಂದರೆ ಕೆಲವರು ತಮ್ಮನ್ನು ದೇವರೆಂದು ಗುರುತಿಸಿಕೊಳ್ಳುತ್ತಾರೆ. ಇನ್ನು ಕೆಲವರು ತಮ್ಮನ್ನು ದೇವರೆಂದು ಗುರುತಿಸಿಕೊಳ್ಳುವುದಿಲ್ಲ. ವ್ಯತ್ಯಾಸ ಗುರುತಿಸುವುದರಲ್ಲಿದೆಯೇ ಹೊರತು ನಿಮ್ಮ ಅಸ್ತಿತ್ವದಲ್ಲಿ ಅಲ್ಲ.[63]



ಭರತ ನಾಟ್ಯ ನೃತ್ಯಾಂಗನೆಯ ಹಸ್ತಮುದ್ರಿಕೆ

ಪ್ರಾಚೀನ ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ ಪ್ರಮಾಣಿತಗೊಂಡಿರುವ ಸಂಗತಿ ಇದು: ಖಾಲಿ ಕೋಣೆಯ ಮೂಲೆ ಒಂದರಲ್ಲಿ ಸಿತಾರ್ ಒಂದನ್ನಿಡಿ. ಮತ್ತೊಂದು ಮೂಲೆಯಲ್ಲಿ ಸಿತಾರ್ ಇಟ್ಟಿರುವ ಮೂಲೆಯ ಎದುರಿಗೆ, ಪರಿಣತ ಸಿತಾರ್‌ವಾದಕ ಮತ್ತೊಂದು ಸಿತಾರನ್ನು ನುಡಿಸುತ್ತಿರಲಿ. ಖಂಡಿವಾಗಿಯೂ ನಿಮಗೆ ಆಶ್ಚರ್ಯವಾಗುವುದು; ಸಿತಾರ್ ವಾದಕ ಪರಿಣತನಾಗಿದ್ದರೆ, ಮೂಲೆಯಲ್ಲಿರುವ ಮತ್ತೊಂದು ಸಿತಾರ್ ಅದೇ ಸ್ವರದಲ್ಲಿ ಕಂಪಿಸಲಾರಂಭಿಸುತ್ತದೆ. ಅದೇ ಸ್ವರಗಳು ಅದರಿಂದ ಹೊರಹೊಮ್ಮುವವು. ಇದು ಸಮನ್ವಯ ಅಥವಾ ಮೇಳೈಸುವಿಕೆ.

ಸಂಗೀತದ ಅದೃಶ್ಯ ತರಂಗಗಳು ನಿಧಾನವಾಗಿ ಕೋಣೆಯಲ್ಲಿ ಸಂಚರಿಸತೊಡಗುತ್ತವೆ, ಶಾಂತ ಸರೋವರದಲ್ಲಿ ಕಲ್ಲನ್ನು ಎಸೆದಾಗ ಅಲೆಗಳು ದೂರದೂರಕ್ಕೆ ಚಲಿಸುವಂತೆ. ಇದೇ ರೀತಿಯಲ್ಲಿ ಸಿತಾರ್‌ವಾದಕ ನುಡಿಸುವ ಸ್ವರಗಳು ಆತನ ಸುತ್ತಲೂ ಸ್ವರ ತರಂಗಗಳನ್ನು ನಿರ್ಮಿಸುತ್ತವೆ ಹಾಗೂ ಇವು ಅಲೆ ಅಲೆಯಾಗಿ ದೂರ ದೂರ ಚಲಿಸುತ್ತವೆ. ಈ ಪರಿಣತ ವಾದಕ ಆ ಸಿತಾರ್‌ನ ತಂತಿಗಳನ್ನು ಬಲು ಸೂಕ್ಷ್ಮವಾಗಿ ಸ್ಪರ್ಶಿಸಿದರೆ, ಅದು ಕೂಡ ಸ್ವರ ಹೊಮ್ಮಿಸುತ್ತದೆ. ಮಹಾನ್ ಸಿತಾರ್‌ವಾದಕರು ಹೀಗೆ ನುಡಿಸಿದ್ದಾರೆ. ಇದನ್ನು ಪ್ರದರ್ಶಿಸಿದ್ದಾರೆ.

ಈ ಸಂಗತಿ ಅಕ್ಬರ್‌ನಿಗೆ ಯಾರೋ ಹೇಳಿದಾಗ ಅವನಿಗೆ ಆಶ್ಚರ್ಯವಾಯಿತು. ಈ ವಿಷಯದ ಬಗ್ಗೆ ತನ್ನ ಆಸ್ಥಾನ ಸಂಗೀತಗಾರ ತಾನ್‌ಸೇನನನ್ನು ಕೇಳಿದಾಗ, ''ನಾನು ದೊಡ್ಡ ಸಂಗೀತಗಾರ. ಆದರೆ ಇದು ನನಗೂ ನಿಲುಕದ್ದು. ನನ್ನ ಗುರುಗಳು ಮಾಡಬಹುದು,'' ಎಂದ.

ಆಗ ಅಕ್ಬರ್ ಕೇಳಿದ, ''ನಿನಗಿಂಗ ಉತ್ತಮವಾದ ಸಂಗೀತಗಾರರು ಯಾರಾದರೂ ಇದ್ದಾರಾ?'' ಏಕೆಂದರೆ ಅಷ್ಟೊಂದು ಸಂಗೀತಗಾರರು ತಾನ್‌ಸೇನನನ್ನು ಸೋಲಿಸಲು ಬಂದಿದ್ದರು. ಅಕ್ಬರ್ ಬೇರೆ ಬೇರೆ ಕ್ಷೇತ್ರಗಳಲ್ಲಿ ಅಪ್ರತಿಮ ಸಾಧನೆಗೈದ ಒಂಬತ್ತು ಮಂದಿಯನ್ನು ಆಯ್ಕೆಮಾಡಿ, ''ನವರತ್ನಗಳು'' ಎಂಬ ತಂಡವನ್ನು ರಚಿಸಿದ್ದ. ತಾನ್‌ಸೇನ್ ಕೂಡ ಈ ನವರತ್ನಗಳಲ್ಲಿ ಒಬ್ಬ.

ಅಕ್ಬರ್‌ನ ಪ್ರಶ್ನೆಗೆ ತಾನ್‌ಸೇನ್ ಉತ್ತರಿಸಿದ, ''ಹೌದು, ನನಗಿಂತ ಉತ್ತಮ ಸಂಗೀತಗಾರ ಒಬ್ಬರಿದ್ದಾರೆ. ಅವರು ನನ್ನ ಗುರುಗಳು.''

''ಹಾಗಾದರೆ ಅವರನ್ನು ನಾನು ಆಮಂತ್ರಿಸ ಬಯಸುತ್ತೇನೆ. ಯಾರಿಗೂ ನೀಡದ ಅದ್ಭುತ ಸ್ವಾಗತವನ್ನು ಅವರಿಗೆ ನೀಡೋಣ. ನಾನು ಅವರ ಸಂಗೀತವನ್ನು ಕೇಳಬಯಸುತ್ತೇನೆ,'' ಎಂದ ಅಕ್ಬರ್.

ತಾನ್‌ಸೇನ್ ಹೇಳಿದ, ''ಅದಕ್ಕಾಗಿಯೇ ನಾನು ಎಂದೂ ಅವರ ಹೆಸರನ್ನು ನಿಮಗೆ ತಿಳಿಸಲಿಲ್ಲ. ನಾನು ಹಾಡುತ್ತೇನೆ, ವಾದ್ಯಗಳನ್ನು ನುಡಿಸುತ್ತೇನೆ. ಏಕೆಂದರೆ

ನನ್ನಲ್ಲಿ ಅಗಾಧ ಆಕಾಂಕ್ಷೆಗಳಿವೆ, ನಿರೀಕ್ಷೆಗಳಿವೆ. ನೀವು ನನಗೆ ಏನೆಲ್ಲಾ ಕೊಟ್ಟಿದ್ದೀರಿ. ಆದರೆ, ಆಸೆ, ಆಕಾಂಕ್ಷೆಗಳಿಗೆ ಕೊನೆಯೆಂಬುದಿಲ್ಲ. ನಾನು ಇನ್ನೂ ಹಾಡುತ್ತಲೇ ಇರಬಲ್ಲೆ ಏಕೆಂದರೆ ನನಗೆ ಇನ್ನೂ ಪಡೆಯಬೇಕೆಂಬ ಆಸೆ. ಆದರೆ ನನ್ನ ಗುರುಗಳು ಪಡೆದಿದ್ದಾರೆ. ಅವರು ಪಡೆದಿರುವುದರಿಂದ ಹಾಡುತ್ತಾರೆ. ಪಡೆದಿರುವುದನ್ನು ಹರಡಲು ಹಾಡುತ್ತಾರೆ. ನಾನು ಹಾಡುವುದೇಕೆಂದರೆ ನಾನು ಏನಾದರೊಂದನ್ನು ಪಡೆಯಬಯಸುತ್ತೇನೆ. ನಾನೊಬ್ಬ ಭಿಕ್ಷುಕ, ಅವರು ನನ್ನ ಗುರುಗಳು. ಅವರು ಆಸ್ಥಾನಕ್ಕೆ ಬರುವುದಿಲ್ಲ. ನನ್ನಂತಹ ಭಿಕ್ಷುಕರು ಮಾತ್ರ ಆಸ್ಥಾನಕ್ಕೆ ಬರುತ್ತಾರೆ. ಅವರು ಇಲ್ಲಿಗೇಕೆ ಬರುತ್ತಾರೆ? ನೀವೇ ಅವರ ಬಳಿಗೆ ಹೋಗಬೇಕಾಗುವುದು. ಯಾವತ್ತೂ ಬಾಯಾರಿದವನು ಬಾವಿಯನ್ನು ಹುಡುಕುತ್ತಾ ಹೋಗಬೇಕು. ಅದಕ್ಕಾಗಿ ನಾನು ಅವರ ಹೆಸರನ್ನು ಎಂದೂ ನಿಮ್ಮೊಂದಿಗೆ ಪ್ರಸ್ತಾಪಿಸಿಲ್ಲ. ಪ್ರಸ್ತಾಪಿಸಿದರೆ ಅವರನ್ನು ಕರೆಯುವಂತೆ ಹೇಳುವಿರಿ. ಅವರು ಬರದಿದ್ದರೆ ನಿಮಗೆ ಬೇಸರವಾಗುತ್ತದೆ. ನಾನು ಅಸಹಾಯಕ.

''ಜಗತ್ತಿನ ಕಣ್ಣಿಗೆ ಅವರು ವೃದ್ಧ ಭಿಕ್ಷು. ಅವರು ಇಲ್ಲೇ ಪಕ್ಕದಲ್ಲಿ, ಯಮುನಾ ನದಿ ತೀರದಲ್ಲಿ ಅವರ ಸಣ್ಣ ಕುಟೀರವಿದೆ. ಅಲ್ಲಿಗೆ ನೀವು ಹೋಗಬೇಕಾಗುವುದು. ಅಲ್ಲಿ ಹೋಗಿ ನೀವು ''ನುಡಿಸಿ!'' ಎಂದು ಹೇಳುವಂತಿಲ್ಲ. ಅವರು ನುಡಿಸುವಾಗ ನೀವು ಮರೆಯಲ್ಲಿ ನಿಂತು ಕೇಳಬೇಕು. ಏಕೆಂದರೆ ಅವರು ಹಾಡುವಾಗ ನಮ್ಮನ್ನು ನೋಡಿದರೆ ಸ್ವಾಗತಿಸುವುದಕ್ಕಾಗಿ ಹಾಡನ್ನು ನಿಲ್ಲಿಸಬಹುದು. ಪ್ರತಿದಿನ ಬೆಳಗಿನ ಜಾವ ಮೂರು ಗಂಟೆಗೆ ಅವರು ಸಂಗೀತ ಅಭ್ಯಾಸದಲ್ಲಿ ತೊಡಗುತ್ತಾರೆ. ಆ ವೇಳೆಗೆ ನಾವು ಹೋಗಿ ಕುಟೀರದ ಹೊರಗೆ ನಿಂತು ಆಲಿಸೋಣ. ನೀವು ನನ್ನ ಸಿತಾರನ್ನು ತೆಗೆದುಕೊಂಡು ಹೋಗಿ, ಕುಟೀರದ ಹೊರಗೆ ನಿಂತು ಗಮನಿಸಿ.''

ಅಕ್ಬರ್ ಮತ್ತು ತಾನ್‌ಸೇನ್ ಕುಟೀರದೆಡೆಗೆ ತಮ್ಮ ಸಿತಾರ್‌ನೊಂದಿಗೆ ಹೋಗಿ ಆ ಸಮಯಕ್ಕಾಗಿ ಕಾದು ಕುಳಿತರು. ಸರಿಯಾಗಿ ಮೂರು ಗಂಟೆಗೆ ತಾನ್‌ಸೇನನ ಗುರುಗಳು ಸಿತಾರ್ ನುಡಿಸಲು ಆರಂಭಿಸಿದರು. ಅವರು ಹೆಸರು ಹರಿದಾಸ. ಇಂತಹ ಅಪ್ರತಿಮ ಸಂಗೀತಗಾರ ಭಾರತದಲ್ಲಿ ಹಿಂದೆಂದೂ ಹುಟ್ಟಿಲ್ಲ. ಹರಿದಾಸರು ಸಿತಾರ್ ನುಡಿಸತೊಡಗಿದಂತೆ, ಹೊರಗಿದ್ದ ಸಿತಾರ್‌ನಿಂದ ಅದೇ ಸ್ವರಗಳು ಮೂಡಿಬರಲಾರಂಭಿಸಿದವು ....

ಮುಂಜಾನೆಯ ಮೂರು ಗಂಟೆಯಲ್ಲಿ ಎರಡೂ ಸಿತಾರ್‌ಗಳಲ್ಲಿ ಒಂದೇ ನಾದ ಹೊರಹೊಮ್ಮುವುದನ್ನು, ಅದು ಪ್ರತ್ಯುತ್ತರ ನೀಡುವುದನ್ನು ಅಕ್ಬರ್ ಸ್ವತಃ ಕೇಳಿದ, ನೋಡಿದ. ಹರಿದಾಸರು ಏಕಕಾಲಕ್ಕೆ ಎರಡೂ ಸಿತಾರ್‌ಗಳನ್ನು ನುಡಿಸುತ್ತಿರುವಂತೆ, ಹೊರಗಡೆಯಿದ್ದ ಸಿತಾರ್‌ಅನ್ನು ಅದೃಶ್ಯ ಬೆರಳುಗಳು ಮೀಟಿದಂತೆ. ಮೊಟ್ಟಮೊದಲಬಾರಿಗೆ ಅಕ್ಬರ್ ಅತ್ತ. ಅಪರಿಮಿತ ಸಂತಸದಿಂದ ಕಣ್ಣಾಲಿಗಳು ತೇವಗೊಂಡವು. ಅಕ್ಬರ್ ಒಂದು ಅದ್ಭುತದಿಂದಾಗಿ ಬೆರಗಾಗಿದ್ದ.

ಅವರಿಬ್ಬರೂ ನಿಧಾನವಾಗಿ ಮನೆ ಕಡೆಗೆ ಹೆಜ್ಜೆಯಿಡತೊಡಗಿದರು. ದಾರಿಯಲ್ಲಿ ಅವರಿಬ್ಬರ ನಡುವೆ ಪೂರ್ತಿ ಮೌನ ನೆಲೆಸಿತ್ತು. ಅಕ್ಬರ್ ಅರಮನೆ ಪ್ರವೇಶಿಸಿದ. ತಾನ್‌ಸೇನ್ ತನ್ನ ಮನೆಯತ್ತ ಹೆಜ್ಜೆಯಿಡುತ್ತಿರುವಾಗ, ಅಕ್ಬರ್ ಹೇಳಿದ, ''ತಾನ್‌ಸೇನ್ ನಿನಗಿಂತ ಉತ್ತಮ ಸಂಗೀತಗಾರರು ಯಾರೂ ಇಲ್ಲವೆಂದು ನಾನು ತಿಳಿದಿದ್ದೆ. ಆದರೆ ನಿನ್ನ ಗುರುಗಳ ಮುಂದೆ ನೀನು ಏನೂ ಅಲ್ಲವೆಂದು ಹೇಳಿದರೆ ತಪ್ಪು ಭಾವಿಸಬೇಡ. ನನ್ನ ಆಸ್ಥಾನದಲ್ಲೇಕೆ ನಿನ್ನ ಸಮಯ ವ್ಯರ್ಥ ಮಾಡುತ್ತಿದ್ದೀಯಾ? ನಿನ್ನ ಗುರುಗಳೊಂದಿಗೆ ಇದ್ದುಬಿಡು. ಅವರ ಸಂಗೀತಕ್ಕೆ, ಅವರ ಸ್ಪರ್ಶಕ್ಕೆ ಈ ಸತ್ತ ಸಂಗೀತವಾದ್ಯ ಕೂಡಾ ಸ್ಪಂದಿಸುವುದಾದರೆ, ನಿನ್ನ ಮತ್ತು ಅವರ ಮಧ್ಯೆ ಸಾಧ್ಯವಿಲ್ಲದಿರುವುದೇನು? ಪವಾಡಗಳು ಯಾವತ್ತೂ ಸಾಧ್ಯ. ಈ ಆಸ್ಥಾನವನ್ನು ಮರೆತುಬಿಡು. ಹಾಗೆಯೇ ನನ್ನನ್ನೂ ಸಹ. ಅದಲ್ಲದೆ ನಿನ್ನ ಗುರುಗಳು ವೃದ್ಧರು. ನೀನು ಅವರೊಂದಿಗಿರುವುದು ವಾಸಿ. ಅವರ ಬಳಿ ಕುಳಿತುಕೋ. ಅವರ ಶಕ್ತಿ ನಿನ್ನೊಳಗೆ ಪ್ರವಹಿಸಲಿ. ಅವರ ಸಂಗೀತ ನಿನ್ನೊಳಗೆ ಹರಿಯಲಿ.''

ಇದು ಮೇಳೈಸುವಿಕೆ ಅಥವಾ ಸಮನ್ವಯ ನಿಯಮ.[64]

ಧ್ಯಾನದ ಬಗ್ಗೆ ಪಾಶ್ಚಿಮಾತ್ಯ ಸಮಾಜಗಳು ಮೌಢ್ಯದಲ್ಲಿ ಮೆರೆಯುತ್ತಾ ಸಂಕಟದ ಬಾಳ್ವೆಯನ್ನು ಬದುಕುತ್ತಿವೆ. ಅವರು ಏನೇ ಮಾಡಲಿ, ಅದು ಮನಸ್ಸಿನಿಂದಲೇ ಬರುತ್ತದೆ. ಆದರೆ ಮನಸ್ಸು ಸಂತೋಷದ ಮೂಲ ಅಲ್ಲ. ಅದು ವ್ಯಥೆ, ಯಾತನೆಯನ್ನು ಸೃಷ್ಟಿಸಬಲ್ಲುದೇ ಹೊರತು ಹರ್ಷೋನ್ಮಾದವನ್ನಲ್ಲ. ಮನಸ್ಸು ನಿಮ್ಮ ನರಕ.

ಆದ್ದರಿಂದ ಹೆಚ್ಚು ಧ್ಯಾನಾಸಕ್ತರಾಗಲು ಕಲಿಯಿರಿ. ಧ್ಯಾನದ ಹಿಂದೆ ಸೃಜನಶೀಲತೆ ಇರಲಿ. ಆಗ ನೀವು ಸಂಪೂರ್ಣ ವಿಭಿನ್ನವಾದ ಹಂತ ತಲುಪುತ್ತೀರಿ. ಅದು ಹರ್ಷೋನ್ಮಾದದ ಸ್ಥಿತಿ; ಈ ಹರ್ಷೋನ್ಮಾದದ ಸ್ಥಿತಿಯಲ್ಲಿ ನೀವೇನನ್ನೇ ಸೃಷ್ಟಿಸಿದರೂ ಅದಕ್ಕೆ ತನ್ನದೇ ಆದ ವಿಶಿಷ್ಟ ಸ್ವಾದ ಇರುತ್ತದೆ.

ಪಾಶ್ಚಿಮಾತ್ಯರಲ್ಲಿ ಬಹುಶಃ ಗುರ್ಜೈಫ್ ಮಾತ್ರ ಕಲೆಯನ್ನು ಬಾಹ್ಯಸಂಬಂಧಿ ಹಾಗೂ ವಿಷಯಸಂಬಂಧಿ ಎಂದು ಎರಡು ಭಾಗಗಳಾಗಿ ವಿಭಜಿಸಿದ ಏಕಮಾತ್ರ ವ್ಯಕ್ತಿ. ವಿಷಯಸಂಬಂಧಿ ಕಲೆ ಮನಸ್ಸಿನಿಂದ ಅವತರಿಸಿದ್ದು. ಅದು ನಮ್ಮ ಮಾನಸಿಕ ಸಂಕಟದಿಂದ ಹೊರಬಂದದ್ದು. ಬಾಹ್ಯ ಸಂಬಂಧಿ ಕಲೆ ಹೊರಪ್ರಪಂಚದ ಅರಿವಿನಿಂದ ಮೂಡಿದ್ದು. ಉದಾಹರಣೆಗೆ ತಾಜ್‌ಮಹಲ್, ಎಲ್ಲೋರ ಹಾಗೂ ಅಜಂತಾ ಗುಹೆಗಳು, ಖಜುರಾಹೋ ದೇವಾಲಯಗಳು ಇವು ಧ್ಯಾನಿಗಳಿಂದ ನಿರ್ಮಿತವಾದದ್ದು. ಅವರು ತಮ್ಮ ಮೌನ ಹಾಗೂ ಪ್ರೀತಿಯನ್ನು ಬೇರೆಯವರೊಂದಿಗೆ ಹಂಚಿಕೊಳ್ಳಲು ಬಯಸಿದರು. ಇವು ವಿಶ್ವಕ್ಕೆ ಅವರ ಕೊಡುಗೆಗಳು. ಪಾಶ್ಚಿಮಾತ್ಯ ಕಲೆಗಾರರು ಮಹತ್ತರ ಮಾನಸಿಕ ಹೊರೆಯನ್ನು ಹೊತ್ತಿರುವರು. ಮನಸ್ಸಿಗಿಂತ ಮಿಗಿಲಾದದ್ದು ಈ ಪ್ರಪಂಚದಲ್ಲಿ ಬೇಕಾದಷ್ಟಿವೆ ಎಂಬ ಅರಿವು ಅವರಿಗೆ ಮೂಡಬೇಕು. ಮೊದಲು ಈ ಮಿಗಿಲನ್ನು ಮುಟ್ಟಬೇಕು. ಅನಂತರ ನೀವು ನಕ್ಷತ್ರಗಳನ್ನು ಸಹ ಸೃಷ್ಟಿಸಬಹುದು. ಅವು ಕೇವಲ ನಿಮಗಷ್ಟೇ ಅಲ್ಲ, ಅವುಗಳನ್ನು ವೀಕ್ಷಿಸುವವರಿಗೂ ಮಹತ್ತರ ಸಂತೋಷವನ್ನು ನೀಡಬಲ್ಲವು.[65]

ವಾಸ್ತವ ಕಲೆಯ ಸಾಕಾರವಾದ ತಾಜ್‌ಮಹಲನ್ನು ನಿರ್ಮಿಸಿದ ಸೂಫಿ ಸಂತರಿಗೆ ಧ್ಯಾನವೆಂದರೆ ಏನೆಂದು ಗೊತ್ತಿತ್ತು. ಅವರು ತಾಜ್‌ಮಹಲನ್ನು ಹೇಗೆ ನಿರ್ಮಿಸಿದರೆಂದರೆ ಬೆಳದಿಂಗಳ ರಾತ್ರಿ ಸರಿಯಾಗಿ ಒಂಬತ್ತು ಗಂಟೆಗೆ ಜಗತ್ತಿನಲ್ಲಿಯೇ ಅತಿ ಸುಂದರವಾದ ಈ ವಾಸ್ತುಶಿಲ್ಪವನ್ನು ಗಮನಿಸುತ್ತಿದ್ದರೆ ತಕ್ಷಣ ನೀವು ಮೌನಿಯಾಗುತ್ತೀರಿ. ನಿಮ್ಮಲ್ಲಿ ಶಾಂತತೆ ನೆಲೆಸುತ್ತದೆ. ಪ್ರಸನ್ನತೆ ಇಣುಕುತ್ತದೆ. ನಿಮ್ಮ ಮತ್ತು ತಾಜ್‌ಮಹಲ್‌ನ ನಡುವೆ ಏನೋ ಪ್ರವಹಿಸುತ್ತಿರುತ್ತದೆ.

ತಾಜ್‌ಮಹಲ್ ಬಾಹ್ಯ ಸಂಬಂಧಿ ಕಲೆಯೆಂದು ಗುರ್ಜೈಫ್ ಹೇಳುತ್ತಾರೆ. ಇದರ ಅರ್ಥ ಇಷ್ಟೆ: ಪೂರ್ತಿ ಬಲ್ಲವರೇ ಇದನ್ನು ನಿರ್ಮಿಸಿದವರು. ಮನುಷ್ಯನ ಪ್ರಗತಿಗೆ ಸಹಾಯಕವಾಗಲೆಂದು ನಿರ್ಮಿಸಿದ್ದಾರೆ ....

ತಾಜ್‌ಮಹಲನ್ನು ಕಟ್ಟಿದವರು ತಮ್ಮ ಮಾನಸಿಕ ಸಮಸ್ಯೆಗಳಿಂದ ಮುಕ್ತರಾಗಲು ಕಟ್ಟಲಿಲ್ಲ. ಅದು ಅವರ ಅನುಭಾವ. ನಿಮಗೂ ಸಹ ಆ ಒಂದು ಅಮೋಘ ಅನುಭವ ಸಿಗಲೆಂದು, ಕನಿಷ್ಠ ಅದರ ತುಣುಕಾದರೂ ಕಾಣಲೆಂದು ಅವರು ಪ್ರಯತ್ನಿಸಿದರು. ಭಾರತದಲ್ಲಿ ಬಾಹ್ಯ ಸಂಬಂಧಿ ಕಲೆಗೆ ಸಂಬಂಧಿಸಿದ ಅನೇಕ ಸ್ಥಳಗಳಿವೆ. ಅವು ಭಾರತದಲ್ಲಿಯೇ ಇರುವುದು ಕೂಡ ಸಹಜವೇ. ಏಕೆಂದರೆ ಈ ರಾಷ್ಟ್ರ ಹತ್ತು ಸಾವಿರ ವರ್ಷಗಳಿಂದ ಧ್ಯಾನಕ್ಕೆ ಸಂಬಂಧಿಸಿದ ತಾಂತ್ರಿಕತೆ ಹಾಗೂ ನೈಪುಣ್ಯತೆಯಲ್ಲಿ ನಿರತವಾಗಿದೆ.

ಅಜಂತ ಹಾಗೂ ಎಲ್ಲೋರ ಗುಹೆಗಳು .... ಅಲ್ಲಿ ಅನೇಕ ಗುಹೆಗಳಿವೆ. ಇಡೀ ಪರ್ವತವನ್ನೇ ಕೊರೆದು, ಕೆತ್ತಲಾಗಿದೆ. ಪರ್ವತದೊಳಗೆ ಸುಂದರ ಗುಹೆಗಳು! ಮೂವತ್ತು ಅಥವಾ ಮೂವತ್ತೈದು ಗುಹೆಗಳ ಸಾಲು. ಪ್ರತಿ ಗುಹೆಗೂ ಅದರದ್ದೇ ಆದ ಸೌಂದರ್ಯ. ಕೇವಲ ಸೌಂದರ್ಯವಷ್ಟೇ ಅಲ್ಲ, ವಿಭಿನ್ನ ದೃಷ್ಟಿಕೋನದ ಧ್ಯಾನದ ಸುವಾಸನೆಯನ್ನು ಇವು ಪಡೆದಿವೆ.[66]

ಅಜಂತ ಗುಹೆಗಳಿಲ್ಲಿ ಬೌದ್ಧ ಪ್ರಾರ್ಥನಾ ಮಂದಿರ ಒಂದಿದೆ. ಅಲ್ಲಿನ ಕಲ್ಲುಗಳನ್ನು ತಟ್ಟಿದಾಗ ತಬಲಾದ ಧ್ವನಿಯನ್ನು ಹೊರಡಿಸುತ್ತವೆ. ತಬಲಾ ನುಡಿಸುವಂತೆ ಈ ಕಲ್ಲುಗಳನ್ನು ಬಡಿದರೆ, ತಬಲಾದ ನಾದ ಕೇಳಿಬರುತ್ತದೆ. ಗೋಪುರದ ನಿರ್ಮಾಣಕ್ಕೆ ಬಳಸುವ ಸಾಮಾನ್ಯ ಕಲ್ಲುಗಳಲ್ಲಿ ಸೂಕ್ಷ್ಮ ಧ್ವನಿಗಳನ್ನು ಪ್ರತಿಧ್ವನಿಸುವ ಕ್ಷಮತೆ ಇರುವುದಿಲ್ಲ. ಅದಕ್ಕಾಗಿಯೇ ಈ ವಿಶೇಷ ಕಲ್ಲುಗಳನ್ನು ಬಳಸಲಾಗಿದೆ. ಹಾಗಾದರೆ ಇದರ ಉದ್ದೇಶವೇನು? ಇದರ ಉದ್ದೇಶ, ಯಾರಾದರೂ ''ಓಂ''ಕಾರದ ತೀವ್ರ ಜಪ ಮಾಡಿದರೆ, ದೇವಾಲಯದ ಗೋಪುರ ಈ ಶಬ್ದವನ್ನು ಪ್ರತಿಧ್ವನಿಸುತ್ತದೆ. ಆಗ ಅಲ್ಲೊಂದು ಓಂಕಾರದ ಸ್ವರ ವರ್ತುಲ ಏರ್ಪಡುತ್ತದೆ. ದೇವಾಲಯದ ಗೋಪುರದ ಸಹಜ ವಿನ್ಯಾಸದಿಂದ ಉಂಟಾದ ಪ್ರತಿಧ್ವನಿಯು ಈ ಸ್ವರ ವರ್ತುಲ ರಚನೆಗೆ ಸಹಾಯಕವಾಗುತ್ತದೆ. ಇಂತಹ ಸ್ವರ ವರ್ತುಲದಲ್ಲಿ ಅನುಭವಿಸಬಹುದಾದ ಸಂತಸ ಅಮೋಘವಾದುದು. ವಿಶಾಲ ಬಯಲಲ್ಲಿ ಕುಳಿತು ''ಓಂ'' ನಾಮ ಪಠಿಸಿದರೆ ಯಾವುದೇ ಸ್ವರ ವರ್ತುಲಗಳು ರಚನೆಯಾಗುವುದಿಲ್ಲ. ಹೀಗಾಗಿ ಆ ಸಂತಸದ ಅನುಭವವನ್ನು ಹೊಂದುವುದು ಸಾಧ್ಯವಿಲ್ಲ.[67]

ಹುಣ್ಣಿಮೆಯ ರಾತ್ರಿಯಲ್ಲಿ ಚಂದ್ರನು ಆಕಾಶದಲ್ಲಿ ಸರಿ ಮಧ್ಯಕ್ಕೆ ಬಂದಾಗ ತಾಜ್‌ಮಹಲ್, ಮಾನವ ನಿರ್ಮಿಸಿದ ಧ್ಯಾನದ ವಸ್ತುಗಳಲ್ಲಿ ಅತ್ಯುನ್ನತ ವಸ್ತುವಾಗಿ



ಜೈನ ದೇವಾಲಯ, ಜೈಸಲ್ಮೇರ್, ರಾಜಾಸ್ಥಾನ್

ಕಂಗೊಳಿಸುತ್ತದೆ. ಶಾಂತವಾಗಿ ಕುಳಿತುಕೊಂಡು ತಾಜ್‌ಮಹಲನ್ನೇ ದಿಟ್ಟಿಸಿ ನೋಡು ನೋಡುತ್ತಿದ್ದಂತೆಯೇ ವಿಚಾರಗಳು ನಿಧಾನವಾಗಿ ಅಡಗತೊಡಗುತ್ತವೆ. ಅದರ ಸೌಂದರ್ಯ ಎಷ್ಟೊಂದು ಅಗಾಧ ಹಾಗೂ ಅಪರಿಮಿತವೆಂದರೆ, ನಿಮ್ಮ ಮನಸ್ಸು ಅದನ್ನು ಗ್ರಹಿಸಲು ಅಶಕ್ತವಾಗುತ್ತದೆ. ಇದರಿಂದಾಗಿ ಮನಸ್ಸು ಮೌನವಾಗುತ್ತದೆ.[68]

ಭಾರತದಲ್ಲಿ ಶಿಲ್ಪಕಲೆ ಮಿಕ್ಕೆಲ್ಲ ಸ್ಥಳಗಳಿಗಿಂತ ಸಾವಿರ ಪಾಲು ಹೆಚ್ಚಿದೆ. ಲಕ್ಷಾಂತರ ದೇವಾಲಯಗಳಲ್ಲಿ ಸುಂದರ ಗಂಡಸು ಮತ್ತು ಹೆಂಗಸರ ಪ್ರತಿಮೆಗಳನ್ನು ಕಾಣಬಹುದು. ಇವೆಲ್ಲವೂ ಮೂಲತಃ ಧ್ಯಾನಕ್ಕೆಂದು ನಿರ್ಮಿತವಾದದ್ದು. ಸುಮ್ಮನೆ ಬುದ್ಧನ ವಿಗ್ರಹವನ್ನು ನೋಡಿದರೆ ಸಾಕು, ಬುದ್ಧನ ಅಂಗಸೌಷ್ಠವ, ದೇಹದ ಭಂಗಿ, ಶಾಂತ ಮುಖಮುದ್ರೆ, ಕುಳಿತ ಭಂಗಿ, ಅರ್ಧ ಮುಚ್ಚಿದ ಕಣ್ಣು ..... ಇವನ್ನೆಲ್ಲಾ ನೋಡುತ್ತಿದ್ದಂತೆಯೇ ನಿಮ್ಮೊಳಗೆ ಪ್ರಶಾಂತತೆ ಇಳಿಯುವುದು. ನಿಶ್ಶಬ್ದವಾಗಿ ಕುಳಿತು ವಿಗ್ರಹವನ್ನು ನೋಡತೊಡಗಿದರೆ ನೀವು ಮೌನದ ಪರಿಧಿಯೊಳಗೆ ಸಿಲುಕುತ್ತೀರಿ........

ಪೂರ್ವದಲ್ಲಿ ವಿಗ್ರಹ ಅಥವ ಪ್ರತಿಮೆಗಳನ್ನು ಕೇವಲ ಚಂದಕ್ಕಾಗಿ ನಿರ್ಮಿಸಿಲ್ಲ, ಮುಂಬರುವ ಶತಮಾನಗಳಿಗೆ ಸಂಕೇತ ಭಾಷೆಯಾಗಿ ಇವುಗಳನ್ನು ಬಳಸುತ್ತಾರೆ. ಧರ್ಮಶಾಸ್ತ್ರಗಳು ನಶಿಸಬಹುದು, ಭಾಷೆಗಳು ಬದಲಾಗಬಹುದು, ಪದಗಳಿಗೆ ಹೊಸ ಅರ್ಥ ಕಲ್ಪಿಸಬಹುದು, ಸಿದ್ಧಾಂತಗಳನ್ನು ತಪ್ಪಾಗಿ ಅರ್ಥೈಸಬಹುದು, ವಿಶ್ಲೇಷಣೆಗೊಳಗಾಗಬಹುದು. ಸೂತ್ರಗಳ ಬಗ್ಗೆ ವಾದವಿವಾದಗಳಾಗಬಹುದು. ಆದ್ದರಿಂದ ಭಾಷೆಗಿಂತ ಭಿನ್ನವಾದದ್ದು ಮತ್ತೊಂದು ಇರಬೇಕೆಂಬುದೇ ಈ ಪ್ರಯತ್ನ.[69]

ಒಂದು ಸಾವಿರ ದೇವಾಲಯಗಳು, ದೇವಾಲಯಗಳ ನಗರವನ್ನು ನಿರ್ಮಿಸಲು ಎಷ್ಟು ಮಂದಿ ಕಲೆಗಾರರು, ಕೆಲಸಗಾರರು, ಶಿಲ್ಪಿಗಳು ಮತ್ತು ಕುಶಲಕರ್ಮಿಗಳನ್ನು ಬಳಸಿಕೊಂಡಿರಬಹುದು? ಇದಕ್ಕೆ ಎಷ್ಟು ವರ್ಷಗಳು ತಗುಲಿರಬಹುದು? ಇದು ಕೇವಲ ಒಂದು ಸ್ಥಳದಲ್ಲಿ ಮಾತ್ರವಲ್ಲ. ಅಜಂತಾದಲ್ಲಿ ಅದೆಷ್ಟು ದೇಗುಲಗಳು? ಬೌದ್ಧರು ಅವುಗಳನ್ನು ನಿರ್ಮಿಸಿದರು. ಇಡೀ ಪರ್ವತದಲ್ಲಿ ಅವರು ಗುಹೆಗಳನ್ನು ಕೊರೆದರು. ಗುಹೆಗಳೊಳಗೆ ನೀವು ಅದ್ಭುತವಾದ ಕಲಾವೈಭವವನ್ನು ಕಾಣುತ್ತೀರಿ. ಇಲ್ಲಿ ಎಲ್ಲವೂ ನಯನ ಮನೋಹರ. ಕಲ್ಲಿನಲ್ಲಿ ಬುದ್ಧನ ಇಡೀ ಜೀವನವನ್ನು ಕೆತ್ತಲಾಗಿದೆ.

ಮೊದಲ ಗುಹೆಯನ್ನು ಪ್ರವೇಶಿಸಿದರೆ ಬುದ್ಧನ ಹುಟ್ಟನ್ನು ನೀವು ಕಾಣುತ್ತೀರಿ. ಇವೇನು ಚಿಕ್ಕಪುಟ್ಟ

ಗುಹೆಗಳಲ್ಲ....... ಕಠಿಣ ಶಿಲೆಯಲ್ಲಿ ಇದನ್ನು ಕೆತ್ತಲಾಗಿದೆ. ಅನಂತರ ಒಂದೊಂದು ಗುಹೆಯಲ್ಲೂ ಬುದ್ಧನ ಜೀವನ ತೆರೆದುಕೊಳ್ಳಲು ಆರಂಭಿಸುವುದು ಹಾಗೂ ಕೊನೆಯ ಗುಹೆಯೊಳಗೆ ಬುದ್ಧ ಮಲಗಿರುವ ಚಿತ್ರವಿದೆ .....

ಇದು ಅವರ ಜೀವನದ ಅಂತಿಮ ಕ್ಷಣ. ಆಗ ಆತ ತನ್ನ ಶಿಷ್ಯರನ್ನು ಕೇಳುತ್ತಾರೆ, ''ಮತ್ತೇನಾದರೂ ಪ್ರಶ್ನೆ ಕೇಳುವುದಿದ್ದರೆ ಕೇಳಬಹುದು. ಇಲ್ಲದಿದ್ದರೆ ನಾನು ಚಿರನಿದ್ರೆಗೆ ಜಾರುತ್ತೇನೆ.'' ಆ ಪ್ರತಿಮೆಯಲ್ಲಿ ಬುದ್ಧನಿಗೆ ತಲೆ ದಿಂಬು ಇಲ್ಲ. ಕೈಯನ್ನೇ ತಲೆದಿಂಬಾಗಿ ಬಳಸಲಾಗಿದೆ. ಇದು ಬೃಹತ್ ಪ್ರತಿಮೆ. ಬಹಳ ಸುಂದರವಾಗಿದೆ.

ಎಲ್ಲೋರಾ ಗುಹೆಗಳನ್ನೂ ಸಹ ಪರ್ವತವನ್ನು ಕೊರೆದು ನಿರ್ಮಿಸಲಾಗಿದೆ. ಜಗನ್ನಾಥ ಪುರಿ, ಕೋನಾರ್ಕ್‌ನಲ್ಲಿ ಹಿಂದು ದೇವಾಲಯಗಳಿವೆ. ಈ ದೇವಾಲಯಗಳಲ್ಲಿ ಶತಮಾನಗಳಿಂದಿರುವ ಕಲೆ ಏನೆಲ್ಲಾ ಮಾಡಿದೆ ಎಂಬುದನ್ನು ಊಹಿಸಲೂ ಅಸಾಧ್ಯ.[70]

ಭಾರತೀಯ ದೇವಾಲಯಗಳಲ್ಲಿ ನೀವು ಬುದ್ಧನ ವಿಗ್ರಹಗಳನ್ನು ಕಾಣುತ್ತೀರಿ. ಜೈನ ದೇವಾಲಯಗಳಲ್ಲಿ ಮಹಾವೀರ ಹಾಗೂ ಇಪ್ಪತ್ಮೂರು ಜೈನ ತೀರ್ಥಂಕರರ ವಿಗ್ರಹಗಳನ್ನು ಕಾಣುತ್ತೀರಿ. ಈ ಇಪ್ಪತ್ನಾಲ್ಕು ತೀರ್ಥಂಕರರ ಮತ್ತು ಗೌತಮ ಬುದ್ಧನ ವಿಗ್ರಹಗಳಲ್ಲಿ ನೀವು ಯಾವುದೇ ವ್ಯತ್ಯಾಸ ಗುರುತಿಸಲಾರಿರಿ. ಕೇವಲ ಒಂದು ವ್ಯತ್ಯಾಸವನ್ನು ಬಿಟ್ಟು. ಬುದ್ಧನ ವಿಗ್ರಹದಲ್ಲಿ ಕೇಶರಾಶಿ ಕಿರೀಟದಂತೆ ಅಲಂಕೃತಗೊಂಡಿದೆ. ಆದರೆ ಜೈನ ತೀರ್ಥಂಕರರ ವಿಗ್ರಹಗಳಲ್ಲಿ ಕೂದಲನ್ನು ಕೆತ್ತಲಾಗಿಲ್ಲ. ಇದನ್ನು ಬಿಟ್ಟರೆ ಬೇರೆ ವ್ಯತ್ಯಾಸವಿಲ್ಲ. ಅವರ ಭಂಗಿ ಕೂಡಾ ಒಂದೇ .....

ಜೈನರ ಇಪ್ಪತ್ನಾಲ್ಕು ತೀರ್ಥಂಕರರ ಪ್ರತಿಮೆಗಳಲ್ಲಿಯ ವ್ಯತ್ಯಾಸವನ್ನು ಸ್ವತಃ ಜೈನರಿಗೇ ಗುರುತಿಸಲಾಗುವುದಿಲ್ಲ. ಅದಕ್ಕಾಗಿಯೇ ಅವರು ಒಬ್ಬೊಬ್ಬರಿಗೆ ಒಂದು ಸಂಕೇತವನ್ನು ನೀಡಿದ್ದಾರೆ. ಮಹಾವೀರರ ಪ್ರತಿಮೆಯ ಕೆಳಗೆ ಸಂಕೇತ ಒಂದಿದೆ. ಹಾಗೆಯೇ ಉಳಿದ ಪ್ರತಿಮೆಗಳಿಗೂ ಈ ಪ್ರತಿಮೆ ಯಾರದ್ದೆಂದು ಕೇಳಿದರೆ ಜೈನರು ಪ್ರತಿಮೆ ಕೆಳಗಿರುವ ಸಂಕೇತವನ್ನು ನೋಡಿ ಯಾರ ವಿಗ್ರಹ ಎಂದು ಹೇಳುತ್ತಾರೆ. ಇಲ್ಲದಿದ್ದರೆ ಯಾವುದೇ ವ್ಯತ್ಯಾವಿಲ್ಲ.

ನಾನು ಒಮ್ಮೆ ಪ್ರಸಿದ್ಧ ಜೈನ ದೇವಾಲಯಕ್ಕೆ ಹೋಗಿದ್ದೆ. ಅಲ್ಲಿನ ಅರ್ಚಕರು ವಿದ್ವಾಂಸರು. ನಾನು ಅವರನ್ನು ಕೇಳಿದೆ, ''ಬೇರೆ ಬೇರೆ ಸಮಯಗಳಲ್ಲಿ ಜನಿಸಿದ ಇಪ್ಪತ್ನಾಲ್ಕು ವ್ಯಕಿಗಳು ಒಂದೇ ರೀತಿಯಾಗಿರುವುದು ಸಾಧ್ಯವೇ ಎಂದು ನೀವು ಎಂದಾದರೂ ಯೋಚಿಸಿದ್ದೀರಾ?'' ಅದಕ್ಕೆ ಅವರು ನುಡಿದರು, ''ಈ ಪ್ರಶ್ನೆಯನ್ನು ನಾನು ಎಂದೂ ಕೇಳಿಕೊಂಡಿಲ್ಲ. ಅಲ್ಲದೆ

ಯಾರೂ ನನ್ನನ್ನು ಈ ಬಗ್ಗೆ ಕೇಳಿಯೂ ಇಲ್ಲ. ಇಪ್ಪತ್ನಾಲ್ಕು ಮಂದಿ ಒಂದೇ ರೀತಿ ಇರುವುದು ಅಸಾಧ್ಯ. ಅವರ ಕಣ್ಣು, ಮೂಗು, ಮುಖ ಒಂದೇ ರೀತಿ ಇರಲು ಸಾಧ್ಯವಿಲ್ಲ.'' ನಾನು, ''ನೀವು ಆದನ್ನು ಕಂಡುಹಿಡಿಯಬೇಕು,'' ಎಂದೆ. ಮರುದಿನ ನಾನು ಅಲ್ಲಿಂದ ಹೊರಡುವಾಗ ಅವರು ಹೇಳಿದರು, ''ನಿನ್ನೆ ರಾತ್ರಿಯಿಡೀ ನಿದ್ದೆ ಮಾಡಲಿಲ್ಲ. ಇದನ್ನು ಪತ್ತೆ ಮಾಡುವ ದಾರಿ ಗೊತ್ತಾಗಲಿಲ್ಲ. ಧರ್ಮಶಾಸ್ತ್ರಗಳಲ್ಲೂ ಈ ಬಗ್ಗೆ ಪ್ರಸ್ತಾಪವಿಲ್ಲ. ನಿಮ್ಮ ಪ್ರಶ್ನೆ ಬಹಳ ಪ್ರಸ್ತುತವಾದದ್ದು. ಅದನ್ನು ನಿರಾಕರಿಸುವುದು ಅಸಾಧ್ಯ.'' ಅವರಿಗೆ ನಾನು ಹೇಳಿದೆ, ''ನೀವು ಈ ಪ್ರಶ್ನೆಯ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ. ಉತ್ತರ ಗೊತ್ತಿದೆ ನನಗೆ. ಈ ವಿಗ್ರಹಗಳು ವ್ಯಕ್ತಿಗಳನ್ನು ಪ್ರತಿನಿಧಿಸುವುದಿಲ್ಲ. ಆದರೆ ಇವು ಧ್ಯಾನ, ಮೌನ, ಸೌಂದರ್ಯ, ಕೇಂದ್ರೀಕೃತಗೊಂಡಿರುವ ಗುಣಗಳನ್ನು ಪ್ರತಿನಿಧಿಸುತ್ತವೆ. ದೈಹಿಕ ಭಿನ್ನತೆಗಾಗಿ ಶಿಲ್ಪಿ ತಲೆಕೆಡಿಸಿಕೊಂಡಿಲ್ಲ. ಅದು ಒಳ್ಳೆಯದು. ಈ ವಿಗ್ರಹಗಳಲ್ಲಿ ಆಧ್ಯಾತ್ಮಿಕ ಸಾಮ್ಯತೆ ಇದೆ. ಈ ಪ್ರತಿಮೆಗಳು ಶಾರೀರಿಕವಲ್ಲ. ಭೌತಿಕ ದೇಹಗಳು ಇಪ್ಪತ್ನಾಲ್ಕು ಮಂದಿಗೆ ಒಂದೇ ಆಗಿರುವುದು ಸಾಧ್ಯವಿಲ್ಲ. ಅವುಗಳಲ್ಲಿ ಆಧ್ಯಾತ್ಮಿಕ ವೈಶಿಷ್ಟ್ಯಗುಣಗಳಿವೆ.'' ಜೈನ ದೇವಾಲಯದಲ್ಲಿ ಮೌನದಿ ಕುಳಿತು ಮಹಾವೀರರ ಅಥವಾ ಉಳಿದ ತೀರ್ಥಂಕರರ ಪ್ರತಿಮೆಗಳನ್ನು ನೋಡುವುದೇ ಒಂದು ದಿವ್ಯ ಅನುಭವ. ಈ ವಿಗ್ರಹಗಳನ್ನು ನೋಡು ನೋಡುತ್ತಿರುವಂತೆಯೇ ನಮ್ಮಲ್ಲಿ ಮೌನ ಕವಿಯಲಾರಂಭಿಸುತ್ತದೆ. ಲಾವಣ್ಯ, ರಮ್ಯತೆ ನೆಲೆಸಲಾರಂಭಿಸುತ್ತದೆ. ಕೇಂದ್ರೀಕೃತ ಗುಣವುಳ್ಳ ಪ್ರತಿಮೆ ಸಮನ್ವಯತೆಯನ್ನು ಮೂಡಿಸುತ್ತದೆ. ನೀವು ಅನುಪಮ ಪ್ರಶಾಂತತೆಯನ್ನು ಅನುಭವಿಸುತ್ತೀರಿ.[71]

ನನ್ನ ಅಜ್ಜಿಯ ಒತ್ತಾಯಕ್ಕೆ ಮಣಿದು ನಾನು ಮೊದಲ ಬಾರಿಗೆ ಖಜುರಾಹೋಕ್ಕೆ ಹೋದೆ. ಅದಾದ ಬಳಿಕ ನಾನು ಅಲ್ಲಿಗೆ ನೂರಾರು ಸಲ ಹೋಗಿರುವೆ. ಜಗತ್ತಿನ ಯಾವುದೇ ಸ್ಥಳಕ್ಕೂ ನಾನು ಅಷ್ಟು ಸಲ ಹೋಗಿಲ್ಲ. ಕಾರಣವಿಷ್ಟೆ - ಅಲ್ಲಿನ ಅನುಭವ ತೀರಲಾರದ್ದು. ಹೆಚ್ಚು ತಿಳಿದಂತೆಲ್ಲಾ ಇನ್ನೂ ಹೆಚ್ಚು ತಿಳಿಯಬೇಕೆಂಬ ತವಕ. ಖಜುರಾಹೋ ದೇವಾಲಯದ ಒಂದೊಂದು ತುಣಕಿನಲ್ಲೂ ವಿಸ್ಮಯವಿದೆ. ಪ್ರತಿಯೊಂದು ದೇವಾಲಯದ ನಿರ್ಮಾಣಕ್ಕೂ ಸಾವಿರಾರು ಕುಶಲಕರ್ಮಿಗಳು, ನೂರಾರು ವರ್ಷಗಳ ಸಮಯ ಬೇಕಾಗಿದ್ದಿರಬಹುದು. ಖಜುರಾಹೋ ದೇವಾಲಯದಷ್ಟು ಪರಿಪೂರ್ಣವಾಗಿರುವ ಇನ್ನೊಂದನ್ನು ನಾನು ನೋಡಿಲ್ಲ.[72]

ಭಾರತದಲ್ಲೊಂದು ಮೂಢ ನಂಬಿಕೆ ವ್ಯಾಪಕ ಪ್ರಚಾರದಲ್ಲಿದೆ. ವಿಗ್ರಹ ಊನವಾದರೆ, ಮೂಗು ಅಥವಾ ಕಿವಿ ಜಖಂ ಗೊಂಡಿದ್ದರೆ, ಅದನ್ನು ಪೂಜಿಸಬಾರದು ಹಾಗೂ ಅದನ್ನು ತೆಗೆದುಹಾಕಬೇಕು ಎಂಬುದೇ ಆ ಮೂಢ ನಂಬಿಕೆ. ಕೆಲವು ವಿಗ್ರಹಗಳ

ಮೂಗು ಮುರಿದಿದೆ, ಕೈ ಅಥವಾ ಕಿವಿ ಜಖಂಗೊಂಡಿದೆ ಎಂಬ ಕಾರಣಕ್ಕಾಗಿ ಅವುಗಳನ್ನು ಬಿಸಾಕಲಾಗಿದೆ. ಇಂತಹ ಲಕ್ಷಾಂತರ ವಿಗ್ರಹಗಳಿವೆ. ಅವು ನಿಜಕ್ಕೂ ಸುಂದರವಾಗಿವೆ.

ಮಧ್ಯಪ್ರದೇಶ ಕಟ್ನಿ ಸಮೀಪದಲ್ಲಿರುವ ಪಟ್ಟಣಕ್ಕೆ ನಾನೊಮ್ಮೆ ಹೋಗಿದ್ದೆ. ಆ ಊರಿನಲ್ಲಿ ಬರೀ ವಿಗ್ರಹಗಳೇ! ಸಾವಿರಾರು ವಿಗ್ರಹಗಳು! ಸಾವಿರಾರು ಮಂದಿ ಶಿಲ್ಪಿಗಳು ಈ ವಿಗ್ರಹಗಳನ್ನು ನಿರ್ಮಿಸಲು ಸಾವಿರಾರು ವರ್ಷಗಳನ್ನೇ ವ್ಯಯಿಸಿರಬಹುದು. ಆದರೆ, ಇಂದು ಅವರಾರೂ ಬದುಕಿಲ್ಲ. ಈ ವಿಷಯದ ಬಗ್ಗೆ ವಿವರಗಳನ್ನು ಕೆದಕಲು ಪ್ರಯತ್ನಿಸಿದೆ. ಸರ್ಕಾರಿ ಗೆಜೆಟ್ ಪುಸ್ತಕದಲ್ಲಿ ವಿವರ ಸಿಕ್ಕೀತೆಂದು ತಡಕಾಡಿದೆ. ಯಾವುದೋ ಹಳೇ ಕಡಿತದಲ್ಲಿ ಈ ಬಗ್ಗೆ ಸ್ವಲ್ಪ ವಿವರ ಸಿಕ್ಕಿತು. ಈ ಊರು ಶಿಲ್ಪಿಗಳ ಊರು. ತಾವು ನಿರ್ಮಿಸಿದ ವಿಗ್ರಹಗಳನ್ನು ನಾಶಪಡಿಸಬಹುದೆಂಬ ಹೆದರಿಕೆಯಿಂದ ಅವುಗಳನ್ನು ಮಣ್ಣಿನಲ್ಲಿ ಹುಗಿದು ಪರಾರಿಯಾದರು. ಊರು ಬಿಟ್ಟು ಹೋಗುವಾಗ ತಮ್ಮ ಮನೆಗಳಿಗೆ ಬೆಂಕಿ ಹಚ್ಚಿ ಈ ಸ್ಥಳದಲ್ಲಿ ಯಾವ ಊರು ಇತ್ತೆಂಬ ಬಗ್ಗೆ ಸುಳಿವು ಇರದಂತೆ ಮಾಡಿ ಅವರು ಜಾಗ ಕಿತ್ತಿದರು.

ಈಗ ಈ ಊರಿದ್ದಲ್ಲಿ ದಟ್ಟ ಅರಣ್ಯ ಬೆಳೆದಿದೆ. ಮರಗಳು ಹುಲುಸಾಗಿ ಬೆಳೆದಿವೆ. ಇದೊಂದು ಸುಂದರ ತಾಣವಾಗಿತ್ತು ಒಂದುಕಾಲದಲ್ಲಿ. ಇಲ್ಲಿ ಸಾವಿರಾರು ಅಪ್ರತಿಮ ಶಿಲ್ಪಿಗಳು ನೆಲೆಸಿದ್ದರೆಂದು ಈ ವಿಗ್ರಹಗಳೇ ಹೇಳುತ್ತವೆ. ಈಗ ಇದು ಪಾಳುಬಿದ್ದಿದೆ. ವಿಗ್ರಹಗಳ ಹೊರತಾಗಿ ಏನೂ ಇಲ್ಲದ ಊರು ...... ಬ್ರಿಟಿಷರ ಕಾಲದಲ್ಲಿ ಈ ಊರನ್ನು ಶೋಧಿಸಲಾಯಿತು. ಇದು ಒಂದು ಅಪೂರ್ವ ಶೋಧಗಳಲ್ಲೊಂದು.

ದೇವಾಲಯ ನಗರಗಳಲ್ಲಿ ಪ್ರಮುಖವಾದ ಖಜುರಾಹೋದಲ್ಲಿ ಒಂದು ನೂರು ದೇವಾಲಯಗಳಿವೆ. ಅಬ್ಬಬ್ಬಾ! ಒಂದು ದೇವಾಲಯ ನೋಡಿದರೆ ಸುಸ್ತು. ಅಷ್ಟೊಂದು ಅದ್ಭುತ! ಅದನ್ನು ನೋಡಲು ಹೆಚ್ಚು ಕಮ್ಮಿ ಒಂದು ದಿನವೇ ಬೇಕು. ಅಲ್ಲಿ ಎಷ್ಟೊಂದು ವಿಗ್ರಹಗಳು! ಆ ದೇವಾಲಯದ ಒಂದು ಅಂಗುಲವನ್ನೂ ಕೆತ್ತನೆ ಇಲ್ಲದೆ ಬಿಟ್ಟಿಲ್ಲ. ಅವು ಕೂಡ ಒಂದು ಕಾಲಕ್ಕೆ ಮಣ್ಣಿನಲ್ಲಿ ಮುಚ್ಚಿದ್ದವು. ಕೇವಲ ಮೂವತ್ತು ದೇವಾಲಯಗಳನ್ನು ರಕ್ಷಿಸುವುದು ಸಾಧ್ಯವಾಗಿದೆ. ಮಹಮದೀಯರು ಎಪ್ಪತ್ತು ದೇವಾಲಯಗಳನ್ನು ಧ್ವಂಸ ಮಾಡಿದರು. ಈ ಜಗತ್ತಿನಲ್ಲಿ ಇದ್ದ ಹಾಗೂ ಇರುವ ಶಿಲ್ಪಗಳನ್ನು ನಾನು ನೋಡಿದ್ದೇನೆ. ಆದರೆ, ಖಜುರಾಹೋ ಶಿಲ್ಪಗಳಿಗಿರುವ ಸೌಂದರ್ಯ ಅತಿಮಾನುಷವಾದ್ದು. ಒಂದು ಶಿಲ್ಪದಲ್ಲಿ ಅಂತಹ ಸೌಂದರ್ಯ ಮತ್ತು ಪರಿಪೂರ್ಣತೆ ತುಂಬಲು ಸಾಧ್ಯವೇ ಎಂದು ಅಚ್ಚರಿಯಾಗುತ್ತದೆ. ಅವು ಅಷ್ಟೊಂದು ಪರಿಪೂರ್ಣ.[73]



ಪಾರ್ಶ್ವನಾಥ ದೇವಾಲಯ (ಪೂರ್ವ), ಖಜುರಾಹೋ

ಇಲ್ಲಿ ಒಂದು ಸಂಗತಿಯನ್ನು ಸ್ಪಷ್ಟಪಡಿಸಬೇಕು. ಅಜಂತ, ಎಲ್ಲೋರ, ಪುರಿ, ಕೋನಾರ್ಕ್, ಖಜುರಾಹೋದಲ್ಲಿರುವ ಭಾರತದ ಕಲೆಗೂ ಪಾಶ್ಚಿಮಾತ್ಯ ದೇಶಗಳ ಕಾಮಪ್ರಚೋದಕ (ಪೋರ್ನೋಗ್ರಾಫಿಕ್) ಛಾಯಾಚಿತ್ರ, ವರ್ಣಚಿತ್ರ, ಸಂಗೀತಕ್ಕೂ ಅಜಗಜಾಂತರ ವ್ಯತ್ಯಾಸಗಳಿವೆ. ಮುಖ್ಯ ವ್ಯತ್ಯಾಸವೆಂದರೆ, ಭಾರತದಲ್ಲಿ ಈ ಎಲ್ಲ ಚಿತ್ರಗಳೂ ದೇವಾಲಯಗಳಲ್ಲಿವೆ. ಅತಿ ಸುಂದರವಾದ ದೇಹಗಳನ್ನು ಕಲ್ಲಿನಲ್ಲಿ ಕೆತ್ತಲಾಗಿದೆ. ಖಜುರಾಹೋದಲ್ಲಿ ಕಲ್ಲು ಮಾತನಾಡುತ್ತದೆ, ಹಾಡುತ್ತದೆ, ನರ್ತಿಸುತ್ತದೆ. ಅದು ಸತ್ತಿಲ್ಲ. ಮೃತ ಕಲ್ಲನ್ನು ಜೀವಂತ ಸ್ವರೂಪವಾಗಿ ಪರಿವರ್ತಿಸಿದ ನಮ್ಮ ಶಿಲ್ಪಿಗಳ ಚಮತ್ಕಾರವನ್ನು ನೀವು ನೋಡಬಹುದು. ಅವು ಎಷ್ಟೊಂದು ಜೀವಂತವಾಗಿದೆ ಎಂದರೆ, ಆ ವಿಗ್ರಹಗಳು ಯಾವುದೇ ಕ್ಷಣದಲ್ಲಿ ನಿಮ್ಮೆಡೆಗೆ ಧಾವಿಸಿ, ''ಹಲೋ,'' ಎಂದು ಕರೆಯಬಹುದೆಂದು ಭಾಸವಾಗುತ್ತದೆ. ಅಂತಹ ನೂರಾರು ವಿಗ್ರಹಗಳು .....

ಈ ವಿಗ್ರಹಗಳು ನಿಮ್ಮ ಅದುಮಿಟ್ಟ ಲೈಂಗಿಕ ಕಾಮನೆಗಳನ್ನು ಸಂತೃಪ್ತಗೊಳಿಸುವುದಿಲ್ಲ. ಅದರ ಬದಲಾಗಿ ಈ ಬತ್ತಲೆ ವಿಗ್ರಹಗಳ ಮೇಲೆ ಧ್ಯಾನಿಸಿದಿರಾದರೆ ತಂತ್ರ ವಿಧಾನದ ಮೂಲಕ ಲೈಂಗಿಕ ಕಾಮನೆಗಳು ಬಿಡುಗಡೆ ಆಗುತ್ತವೆ. ಅಲ್ಲಿ ಸುಮ್ಮನೆ ಮೌನವಾಗಿ ಕುಳಿತುಕೊಂಡರೆ ಸಾಕು. ಕೇವಲ ಮಂದ ಬೆಳಕು ಅಲ್ಲಿ ಆವರಿಸಿರುವುದು. ಸಾವಿರಾರು ವಿಗ್ರಹಗಳು ನಿಮ್ಮನ್ನು ಸುತ್ತುವರೆದಿರುವುವು.

ಅವುಗಳನ್ನು ನೋಡುತ್ತಿದ್ದರೆ, ಅಂತಹ ಕನಸುಗಳನ್ನು ನೀವು ಕಂಡಿದ್ದಾಗಿ ಆಶ್ಚರ್ಯವಾಗಬಹುದು. ಇವುಗಳಲ್ಲಿ ಹೆಚ್ಚಿನವನ್ನು ಪ್ರತಿ ಸಮಾಜವೂ ಖಂಡಿಸಿದೆ. ಅವು ಲೈಂಗಿಕ ಉನ್ಮಾದಗಳಾಗಿರಬಹುದು. ಅವುಗಳನ್ನು ನೀವು ಕನಸಿನಲ್ಲಿ ಕಂಡಿದ್ದೀರಿ. ಅವು ನಿಮ್ಮ ಅಪ್ರಜ್ಞೆಯ ಭಾಗ. ಖಜುರಾಹೋದಂತಹ ಸ್ಥಳಗಳು ಒಂದು ರೀತಿಯಲ್ಲಿ ವಿಶ್ವವಿದ್ಯಾಲಯಗಳಿದ್ದಂತೆ. ಅಲ್ಲಿಗೆ ಜನರು ಬಂದು ತಮ್ಮ ಅದುಮಿಟ್ಟ ಲೈಂಗಿಕ ಕಾಮನೆಗಳನ್ನು ಮಾನಸಿಕವಾಗಿ ಬಿಡುಗಡೆಗೊಳಿಸಿಕೊಂಡು ಭಾವಶುದ್ಧಿ ಪಡೆಯುತ್ತಾರೆ.

ಮುಖ್ಯಾಂಶವೆಂದರೆ ಈ ವಿಗ್ರಹಗಳೆಲ್ಲಾ ದೇವಾಲಯದ ಹೊರಗಿನ ಪ್ರಾಕಾರದಲ್ಲಿ ಇವೆ. ದೇವಾಲಯದೊಳಗೆ ಯಾವುದೇ ಕಾಮೋದ್ರೇಕ ವಿಗ್ರಹಗಳಿಲ್ಲ. ನಿಜ ಹೇಳಬೇಕೆಂದರೆ, ದೇವಾಲಯದೊಳಗೆ ಮೌನ, ಶಾಂತತೆ, ತಂಪು, ದಿವ್ಯತೆಯ ಹೊರತಾಗಿ ಮತ್ತೇನೂ ಇಲ್ಲ. ಸಾವಿರಾರು ವರ್ಷಗಳಿಂದ ಇಲ್ಲಿ ಜನರು ಧ್ಯಾನ ಮಾಡಿದ್ದಾರೆ. ಇಲ್ಲಿನ ನಿಯಮ ಏನಿತ್ತೆಂದರೆ, ದೇವಾಲಯದ ಹೊರಗಿರುವ ನಗ್ನ ವಿಗ್ರಹಗಳು ನಿಮ್ಮ ಮೇಲೆ ಪರಿಣಾಮ ಬೀರುತ್ತಿಲ್ಲ, ನಿಮ್ಮಲ್ಲಿ ಲೈಂಗಿಕ ಭಾವನೆಯನ್ನು ಕೆರಳಿಸುತ್ತಿಲ್ಲ, ನಿಮ್ಮ

ಅದುಮಿಟ್ಟ ಲೈಂಗಿಕ ಕಾಮನೆಗಳು ಮುಕ್ತಗೊಂಡು ಭಾವಶುದ್ಧಿಯಾಗಿದೆ, ಎಂದು ನಿಮಗೆ ಅಥವಾ ಸದ್ಗುರುವಿಗೆ ಅನಿಸಿದಾಗ ....

ಇದು ಪೂರ್ವಿಕರು ಕಂಡುಹಿಡಿದ ಮಹತ್ತರ ಮನಃಶಾಸ್ತ್ರೀಯ ವಿಧಾನ. ಏನು ನಡೆಯುತ್ತಿದೆ ಎಂದು ಯಾರಿಗೂ ತಿಳಿಸುವುದಿಲ್ಲ, ಅದರ ಅಗತ್ಯವೂ ಇಲ್ಲ. ಒಮ್ಮೆ ಗುರುಗಳಿಗೆ ಅಥವಾ ನಿಮಗೆ, ನೀವು ಅಲ್ಲಿ ಕುಳಿತುಕೊಂಡು ನೋಡಿದರೆ ಏನೂ ಆಗುವುದಿಲ್ಲ, ಇಡೀ ಗೋಡೆ ಖಾಲಿ ಇದ್ದಂತೆ ಅವು ನಿಮ್ಮ ಮೇಲೆ ಏನೂ ಪರಿಣಾಮ ಬೀರುವುದಿಲ್ಲ ಎಂಬುದು ಮನವರಿಕೆಯಾದರೆ, ಅದೇ ಸೂಚನೆ: ''ಈಗ ಒಳಗೆ ಹೋಗಲು ಸರಿಯಾದ ಸಮಯ. ಒಳಗಿನ, ಆಂತರ್ಯದ ಬಾಗಿಲು ತೆರೆದಿದೆ.'' ಏನೆಲ್ಲ ಕಚಡ, ಕಲ್ಮಶಗಳಿದ್ದವೋ ಅವೆಲ್ಲ ಬಿದ್ದುಹೋಗಿವೆ. ಅಲ್ಲಿ ಪರಿಶುದ್ಧತೆ, ಹಗುರತೆ ಮತ್ತು ಸಂಗೀತ ಮತ್ತು ಸೌಂದರ್ಯಭರಿತ ಮೌನ .... ಖಜುರಾಹೋ ಅಥವಾ ಕೋನಾರ್ಕ್ - ಇವು ಅಶ್ಲೀಲ ಕಾಮೋದ್ರೇಕದ ತಾಣವಲ್ಲ. ಇವು ಧ್ಯಾನ ಸಾಧನಗಳು.[74]

ನೀವು ಎಂದಾದರೂ ಖಜುರಾಹೋ ಅಥವಾ ಕೋನಾರ್ಕ್‌ಗೆ ಹೋಗಿದ್ದೀರಾ? ನಾನು ಹೇಳುವುದನ್ನು ನೀವು ಅಲ್ಲಿ ಕಾಣುತ್ತೀರಿ. ಇವು ಭೂಮಿಯ ಮೇಲಿರುವ ದೇವಾಲಯಗಳಲ್ಲಿ ಅತಿ ಪವಿತ್ರವಾದ ತಂತ್ರ ದೇವಾಲಯಗಳು. ಉಳಿದೆಲ್ಲ ದೇವಾಲಯಗಳೂ, ಸಾಮಾನ್ಯ, ಸಾಧಾರಣ ದೇಗುಲಗಳು. ಖಜುರಾಹೋ ಮತ್ತು ಕೋನಾರ್ಕ್ ದೇವಾಲಯಗಳು ನೀಡುವ ಸಂದೇಶ ಭಿನ್ನ; ಅವು ಅಸಾಮಾನ್ಯ ಹಾಗೂ ಅದ್ವಿತೀಯ. ಅದು ಸತ್ಯ, ಆದ್ದರಿಂದ ಅಸಾಮಾನ್ಯ ಮತ್ತು ಅದ್ವಿತೀಯ.

ಆ ಸಂದೇಶವಾದರೂ ಏನು?

ನೀವು ಈ ದೇವಾಲಯಗಳಿಗೆ ಹೋಗಿದ್ದರೆ ಅಲ್ಲಿನ ವಿಗ್ರಹಗಳನ್ನು ನೋಡಿ ಆಶ್ಚರ್ಯ ಪಡುತ್ತಿದ್ದಿರಿ. ದೇಗುಲದ ಹೊರಗಿನ ಗೋಡೆಯ ಮೇಲೆ ಎಲ್ಲ ರೀತಿಯ ಲೈಂಗಿಕ ಭಂಗಿಗಳಿವೆ: ಗಂಡಸು-ಹೆಂಗಸಿನ ಪ್ರಣಯ, ಕಾಮಕೇಳಿ, ವಿವಿಧ ರೀತಿಯ - ಊಹಿಸಬಲ್ಲ, ಊಹಿಸಲಾರದಂತಹ, ಸಾಧ್ಯ, ಅಸಾಧ್ಯ ಲೈಂಗಿಕ ಆಸನಗಳು. ಇಡೀ ಗೋಡೆಯು ಸಂಪೂರ್ಣ ಲೈಂಗಿಕತೆಯಿಂದ ತುಂಬಿಹೋಗಿದೆ. ಯಾರಿಗೇ ಆಗಲಿ ಆಘಾತವಾಗದಿರದು! ''ಎಂತಹ ಅಶ್ಲೀಲತೆ,'' ಎನಿಸುವುದು. ಖಂಡಿಸಲು, ಕಣ್ಣು ತಗ್ಗಿಸಲು, ಅಲ್ಲಿಂದ ಹೊರಟುಹೋಗುವಾ ಎಂದೆನಿಸುವುದು. ಆದರೆ ಅದು ದೇವಾಲಯದ ದೋಷವಲ್ಲ; ಪಂಡಿತ, ಪುರೋಹಿತರು ನಿಮ್ಮೊಳಗೆ ತುಂಬಿರುವ ವಿಷವೇ ಕಾರಣ.


ದೇವಾಲಯದೊಳಗೆ ಹೋಗಿ. ಮಂದಿರದೊಳಗೆ ಹೋಗುತ್ತಿರುವಂತೆ ವಿಗ್ರಹಗಳು ಕಡಿಮೆಯಾಗುತ್ತಾ

ಹೋಗುತ್ತವೆ, ಪ್ರೇಮವೂ ಬದಲಾಗುತ್ತಾ ಹೋಗುತ್ತದೆ. ಹೊರಗಡೆ ಗೋಡೆಯ ಮೇಲೆ ಶುದ್ಧ ಲೈಂಗಿಕತೆ. ಒಮ್ಮೆ ಒಳಗಡೆ ಹೋದರೆ ಲೈಂಗಿಕತೆ ಮಾಯ! ದಂಪತಿಗಳು ಅಲ್ಲೇ ಇದ್ದಾರೆ, ಗಾಢ ಪ್ರೀತಿಯಲ್ಲಿ, ಒಬ್ಬರೊಬ್ಬರ ಕಣ್ಣುಗಳಲ್ಲಿ ದೃಷ್ಟಿನೆಟ್ಟಿದ್ದಾರೆ, ಕೈ ಹಿಡಿದುಕೊಂಡಿದ್ದಾರೆ, ಬಿಸಿ ಅಪ್ಪುಗೆ ಹಿತವಾಗಿದೆ. ಆದರೆ ಅಲ್ಲಿ ಲೈಂಗಿಕತೆ ಇಲ್ಲ. ಮತ್ತೂ ಒಳಕ್ಕೆ ಹೋಗಿ - ವಿಗ್ರಹಗಳು ಮತ್ತೂ ಕಡಿಮೆ. ಅಲ್ಲೂ ದಂಪತಿಗಳಿದ್ದಾರೆ. ಅವರು ಕೈಗಳನ್ನೂ ಹಿಡಿದಿಲ್ಲ, ಒಬ್ಬರನ್ನೊಬ್ಬರು ಮುಟ್ಟುತ್ತಲೂ ಇಲ್ಲ. ಮತ್ತಷ್ಟು ಒಳಕ್ಕೆ ಹೋಗಿ ..... ದಂಪತಿಗಳೇ ಇಲ್ಲ ..... ಅವರು ಮಾಯ .... ಇನ್ನಷ್ಟು ಒಳಕ್ಕೆ ಹೋಗಿ .....

ದೇವಾಲಯದ ಕೇಂದ್ರದಲ್ಲಿ, ಭಾರತೀಯರು "ಗರ್ಭಗೃಹ" ಎಂದು ಕರೆಯುವಲ್ಲಿ ಯಾವುದೇ ವಿಗ್ರಹವೂ ಇಲ್ಲ. ಜನಸಂದಣಿ ಕರಗಿಹೋಗಿದೆ, ಅನೇಕ ಇಲ್ಲಿಲ್ಲ. ಹೊರಗಿನೆಡೆಗೆ ನೋಡಲು ಯಾವುದೇ ಕಿಟಕಿ ಇಲ್ಲ. ಹೊರಗಡೆಯಿಂದ ಬೆಳಕು ಬರುವುದೂ ಇಲ್ಲ. ಅಲ್ಲಿ ಬರೀ ಕತ್ತಲು, ಮೌನ, ಶಾಂತತೆ, ದಿವ್ಯತೆ. ಅಲ್ಲಿ ದೇವರ ವಿಗ್ರಹವೂ ಇಲ್ಲ. ಬರೀ ಶೂನ್ಯತೆ. ದೇವಾಲಯದ ಒಳಗಿನ ಕೇಂದ್ರ ಶೂನ್ಯ, ಆದರೆ ಹೊರಗೆ ಮೇಳ, ಜಾತ್ರೆ. ಒಳಗಿನ ಕೇಂದ್ರ ಧ್ಯಾನಮಯ, ಸಮಾಧಿ ಸದೃಶ. ಹೊರಗಡೆ ಲೈಂಗಿಕತೆ. ಇದು ಸಂಪೂರ್ಣ ಮನುಷ್ಯ ಜೀವನದ ಚಿತ್ರಣ.

ಆದರೆ ಒಂದು ಅಂಶ ನೆನಪಿರಲಿ. ಹೊರಗಿನ ಗೋಡೆಯನ್ನು ಧ್ವಂಸ ಮಾಡಿದರೆ, ಒಳಗಿನ ಗುಡಿಯನ್ನೂ ಧ್ವಂಸಗೊಳಿಸಿದಂತೆಯೇ. ಏಕೆಂದರೆ ಒಳಗಿನ ಮೌನ, ಕತ್ತಲು ಹೊರಗಿನ ಗೋಡೆಗಳ ವಿನಃ ಇರಲಾರದು. ಚಂಡಮಾರುತವಿಲ್ಲದೆ ಚಂಡಮಾರುತದ ಮಧ್ಯಬಿಂದು ಇಲ್ಲ. ಪರಿಧಿಯಿಲ್ಲದೇ ಕೇಂದ್ರ ಬಿಂದು ಇರುವುದಿಲ್ಲ. ಎರಡೂ ಇದ್ದರೆ ಮಾತ್ರ ಅವುಗಳ ಅಸ್ತಿತ್ವ. ನಿಮ್ಮ ಬದುಕಿನ ಹೊರವಲಯ ಲೈಂಗಿಕತೆ - ಇದು ನಿಜಕ್ಕೂ ಒಳ್ಳೆಯದು ಹಾಗೂ ಖಂಡಿತವಾಗಿಯೂ ರಮ್ಯವಾದುದು! ಖಜುರಾಹೋ ನಿಮ್ಮನ್ನೇ ಚಿತ್ರಿಸುತ್ತದೆ. ಅದು ಕಲ್ಲಿನಲ್ಲಿ ಕೊರೆದ ಮಾನವ ಕಥೆ. ಅದು ಕಲ್ಲಿನಲ್ಲಿನ ಮಾನವ ನರ್ತನ - ಕೆಳಸ್ತರದಿಂದ ಶಿಖರಕ್ಕೆ. ಅನೇಕದಿಂದ ಏಕತೆಗೆ, ಪ್ರೀತಿಯಿಂದ ಧ್ಯಾನಕ್ಕೆ, ಶೂನ್ಯದೆಡೆಗೆ, ಏಕಾಂತಕ್ಕೆ ಕೊಂಡೊಯ್ಯುವ ಸಂಕೇತವಾಗಿ ಆ ದೇವಾಲಯ ಕಂಗೊಳಿಸುತ್ತದೆ. ಈ ದೇವಾಲಯವನ್ನು ನಿರ್ಮಿಸಿದವರು ನಿಜಕ್ಕೂ ಮಹಾ ಧೈರ್ಯಶಾಲಿಗಳು![75]

ಭಾರತದಲ್ಲಿ ಹಲವಾರು ನಿರಂತರ ತೀರ್ಥಕ್ಷೇತ್ರಗಳಿವೆ. ಅವುಗಳ ಪೈಕಿ ಕಾಶಿಯೂ ಒಂದು. ಈ ಭುವಿಯಲ್ಲಿ ಕಾಶಿ, ವಾರಣಾಸಿ, ತೀರ್ಥಕ್ಷೇತ್ರವಾಗಿರದ ಸಮಯ ಇರಲೇಇಲ್ಲ. ಇದು ಮನುಷ್ಯನ ಪುರಾತನ ಪುಣ್ಯಕ್ಷೇತ್ರಗಳಲ್ಲೊಂದು. ಈ ಕ್ಷೇತ್ರಕ್ಕೆ ಭಾರಿ ಮಹತ್ವ. ಇದು ಮಾನವ ಪ್ರಜ್ಞೆಯ ನಿರಂತರ ಝರಿ. ಇಲ್ಲಿ



ಶಿವ ಮಂದಿರ, ಚಿತ್ತೋಡ್‌ಗಢ್ ಕೋಟೆ, ರಾಜಾಸ್ಥಾನ್

ಅದೆಷ್ಟೋ ಮಂದಿ ವಿಮೋಚನೆ ಪಡೆದಿದ್ದಾರೆ. ಶಾಂತಿಯ ಅನುಭವವನ್ನು ಹೊಂದಿದ್ದಾರೆ, ಪಾವಿತ್ರ್ಯದ ಭಾವ ತಳೆದಿದ್ದಾರೆ. ಅಸಂಖ್ಯ ಮಂದಿ ಪಾಪವನ್ನು ತೊಳೆದುಕೊಂಡಿದ್ದಾರೆ. ಇದು ಶತಶತಮಾನಗಳಿಂದ ನಡೆದು ಬರುತ್ತಿದ್ದು, ಕಾಶಿಯಲ್ಲಿ ಪಾಪ ವಿಮೋಚನೆ ಆಗುತ್ತದೆಂಬ ವಿಷಯ ಮನುಷ್ಯನ ಆಳ, ಆಳಕ್ಕೆ ತಲುಪಿದೆ. ಸರಳ ಚಿತ್ತಕ್ಕೆ ಇದೊಂದು ವಿಶ್ವಾಸವಾಗಿಬಿಟ್ಟಿದೆ. ಅಷ್ಟೊಂದು ವಿಶ್ವಾಸವಿರುವಾಗ, ಈ ಪವಿತ್ರ ಸ್ಥಳ ಪ್ರಭಾವಶಾಲಿಯಾಗಿ ಪರಿಣಮಿಸುತ್ತದೆ, ಇಲ್ಲದಿದ್ದಲ್ಲಿ ಏನೂ ಇಲ್ಲ.

ನಿಮ್ಮ ಸಹಕಾರವಿಲ್ಲದಿದ್ದರೆ ಯಾವುದೇ ತೀರ್ಥಕ್ಷೇತ್ರ ಏನೂ ಮಾಡಲಾಗದು. ನಿಮ್ಮ ಸಹಕಾರ ದೊರಕಲು ಆ ಪುಣ್ಯ ಕ್ಷೇತ್ರಕ್ಕೆ ಈ ರೀತಿಯ ಒಂದು ಇತಿಹಾಸವಿರಬೇಕು.

ಶಿವನ ತಾಣವಾಗಿರುವ ಕಾಶಿ ಈ ಭೂಮಿಯ ಭಾಗವಲ್ಲ ಎಂದು ಹಿಂದೂಗಳು ಹೇಳುತ್ತಾರೆ. ಇದೇ ಒಂದು ಪ್ರತ್ಯೇಕ ಭಾಗ. ನಾಶ ಮಾಡಲು ಸಾಧ್ಯವಾಗದ ಭಾಗ. ಎಷ್ಟೋ ನಗರಗಳು ಕಟ್ಟಲ್ಪಟ್ಟು, ನಾಶವಾಗಿವೆ. ಆದರೆ ಕಾಶಿ ಮಾತ್ರ ಯಾವತ್ತೂ ಹಾಗೆಯೇ ಇರುತ್ತದೆ. ಇದು ನಿಜಕ್ಕೂ ಆಶ್ಚರ್ಯಕರ. ಅದೆಷ್ಟು ಮಂದಿ ಕಾಶಿಗೆ ಬಂದು ಹೋಗಿದ್ದಾರೆ! ಬುದ್ಧ, ಶಂಕರಾಚಾರ್ಯ ಕಾಶಿಗೆ ಹೋದರು. ಜೈನ ತೀರ್ಥಂಕರರು ಹುಟ್ಟಿದ್ದು ಕಾಶಿಯಲ್ಲಿ. ಕಬೀರರು ಜೀವಿಸಿದ್ದು ಕಾಶಿಯಲ್ಲಿ. ಕಾಶಿಯು ತೀರ್ಥಂಕರರನ್ನು, ಸಾಧುಸಂತರನ್ನು, ಯೋಗಿಗಳನ್ನು, ಅವತಾರಗಳನ್ನು ಕಂಡಿದೆ. ಆದರೆ ಅವರ‍್ಯಾರೂ ಇಲ್ಲ, ಕಾಶಿಯ ಹೊರತಾಗಿ ಅವರ‍್ಯಾರೂ ಉಳಿದಿಲ್ಲ. ಕಾಶಿ ಮಾತ್ರ ಉಳಿದುಕೊಂಡಿದೆ.


ಈ ಮಹಾತ್ಮರ ಸಂತತ್ವ, ಅವರ ಆಧ್ಯಾತ್ಮಿಕ ಶ್ರೇಷ್ಠತೆ, ಅವರ ಕಂಪನ, ಅವರ ಸಾಮೂಹಿಕ ಪರಿಮಳಗಳನ್ನು ಹೀರಿಕೊಂಡು ಕಾಶಿ ಬೆಳೆದಿದೆ. ಅವು ಇನ್ನೂ ಉಳಿದಿದೆ. ಈ ಒಂದು ಗುಣ ಭೂಮಿಯಿಂದ ಕಾಶಿಯನ್ನು ಪ್ರತ್ಯೇಕಿಸಿದೆ, ಕನಿಷ್ಠ ಕಾವ್ಯಾತ್ಮಕವಾಗಿ. ಕಾಶಿ ಬೇರೆಲ್ಲ ಪ್ರದೇಶಗಳಿಗಿಂತ ಭಿನ್ನವಾಗಿ ಎದ್ದು ನಿಲ್ಲುತ್ತದೆ. ಅದು ತನ್ನದೇ ಆದ ವ್ಯಕ್ತಿತ್ವವನ್ನು ಪಡೆದುಕೊಂಡಿದೆ.

ಕಾಶಿಯ ರಸ್ತೆಗಳಲ್ಲಿ ಬುದ್ಧ ನಡೆದಾಡಿದ್ದಾರೆ. ಇಲ್ಲಿನ ಓಣಿಗಳಲ್ಲಿ ಕಬೀರ್ ಉಪನ್ಯಾಸ ನೀಡಿದ್ದಾರೆ. ಇಂದು ಇದು ಕತೆ, ಕನಸು. ಆದರೆ ಕಾಶಿ ಈ ಎಲ್ಲ ಅನುಭವಗಳನ್ನು ಹೀರಿಕೊಂಡಿದೆ. ಹೀಗೆ ಹೀರುತ್ತಲೇ ಜೀವಿಸುತ್ತದೆ. ನಿಷ್ಕಲ್ಮಶ ಹಾಗೂ ಪರಿಶುದ್ಧ ವಿಶ್ವಾಸ ಮತ್ತು ನಂಬಿಕೆಯಿರುವವರು ಕಾಶಿಯೊಳಗೆ ಪ್ರವೇಶಿಸಿದರೆ, ಅವರು ಪುನಃ ಬುದ್ಧ ನಡೆದಾಡುವುದನ್ನು ನೋಡಬಲ್ಲರು. ಪಾರ್ಶ್ವನಾಥ, ಕಬೀರರನ್ನು ನೋಡುತ್ತಾರೆ ...... ತುಳಸೀದಾಸರನ್ನು ಕಾಣುತ್ತಾರೆ. ಕಾಶಿ, ಮುಂಬಯಿ

ಅಥವಾ ಲಂಡನ್ ನಗರಗಳಂತಿರುವ ಮತ್ತೊಂದು ಪಟ್ಟಣವಲ್ಲ, ಅದಕ್ಕೆ ಅದರದ್ದೇ ಆದ ವಿಶಿಷ್ಟ ಆಧ್ಯಾತ್ಮಿಕ ಸ್ವರೂಪವಿದೆ. ಅದರ ಪ್ರಜ್ಞೆ ಪ್ರಾಚೀನವಾದುದು, ಶಾಶ್ವತವಾದುದು ಹಾಗೂ ಅನಂತವಾದುದು. ಇತಿಹಾಸವೇ ನಾಶವಾಗಬಹುದು, ನಾಗರಿಕತೆಯೇ ಹುಟ್ಟಿ ಅಳಿದುಹೋಗಬಹುದು, ಆದರೆ ಕಾಶಿಯ ಆಂತರಿಕ ಜೀವನರುಚಿ ಮಾತ್ರ ಹೀಗೆಯೇ ನಿರಂತರವಾಗಿ ಹರಿಯುತ್ತಲೇ ಇರುತ್ತದೆ.

ಕಾಶಿಯ ರಸ್ತೆಯ ಮೇಲೆ ನಡೆದಾಡುವ ಮೂಲಕ, ಗಂಗೆಯಲ್ಲಿ ಸ್ನಾನ ಮಾಡುವ ಮೂಲಕ, ಕಾಶಿಯಲ್ಲಿ ಧ್ಯಾನ ಮಾಡುವ ಮೂಲಕ ನೀವೂ ಈ ಆಂತರಿಕ ವಾಹಿನಿಯ ಭಾಗ ಆಗುವಿರಿ.[76]

ಹೌದು, ನಾನು ಭಾರತವನ್ನು ಒಂದು ದೇಶವೆಂದು ಕರೆಯುವುದಿಲ್ಲ, ಬದಲಾಗಿ ಒಂದು ಆಂತರಿಕ ನಿವೇಶ, (ಇನ್ನರ್ ಸ್ಪೇಸ್) ಎನ್ನುತ್ತೇನೆ. ನಾನು ಭಾರತವನ್ನು ಭೌಗೋಳಿಕವಾಗಿ ನಕ್ಷೆಯ ಮೇಲೆ ಅಸ್ತಿತ್ವದಲ್ಲಿರುವ ಪ್ರದೇಶವೆಂದು ಕರೆಯುವುದಿಲ್ಲ. ನಿಮ್ಮೊಳಗೆ ಅಡಗಿರುವ ಅಸ್ತಿತ್ವವನ್ನು, ನೀವಿನ್ನೂ ಶೋಧಿಸದ ಅಸ್ತಿತ್ವವನ್ನು ಭಾರತ ಎಂದು ಕರೆಯುತ್ತೇನೆ. ಭಾರತವೆಂಬುದು ನಿಮ್ಮ ಆಂತರಿಕ ನಿವೇಶ. ಭಾರತ ಒಂದು ರಾಷ್ಟ್ರವಲ್ಲ. ಅದು ಮನಸ್ಸಿನ ಸ್ಥಿತಿ.[77]



ಸಂಗೀತ ವಾದ್ಯ - ದಿಲ್‌ರುಬ

ಕಬೀರ್ ಜೀವನವಿಡೀ ನೇಕಾರರಾಗಿಯೇ ಬಾಳಿದರು. ದೊಡ್ಡ ದೊಡ್ಡ ರಾಜ ಮಹಾರಾಜರು ಕೂಡ ಅವರ ಶಿಷ್ಯರಾಗಿದ್ದರು. ಅವರು ಕಬೀರರಿಗೆ ಹೇಳುತ್ತಿದ್ದರು, ''ನೀವು ವೃದ್ಧಾಪ್ಯದಲ್ಲೂ ನೇಯ್ಗೆ ಮಾಡುವುದನ್ನು ನೋಡಿದರೆ ನಮಗೆ ನಾಚಿಕೆಯಾಗುತ್ತದೆ, ವ್ಯಥೆಯಾಗುತ್ತದೆ. ಅನಂತರ ನೀವು ನೇಯ್ದ ಬಟ್ಟೆಗಳನ್ನು ಮಾರುಕಟ್ಟೆಗೆ ಹೊತ್ತು ಮಾರಾಟ ಮಾಡುತ್ತೀರಿ. ನಿಮಗೆ ಬೇಕಾದ್ದೆಲ್ಲವನ್ನೂ ಕೊಡುತ್ತೇವೆ. ನೀವು ಇನ್ನು ನೇಯಬೇಕಿಲ್ಲ.''

ಅದಕ್ಕೆ ಕಬೀರ್ ನುಡಿದರು, ''ಅದು ಪ್ರಶ್ನೆಯಲ್ಲ. ನೇಕಾರನಿಗೂ ಕೂಡ ಜ್ಞಾನೋದಯ ಆಗಬಹುದು ಹಾಗೂ ಜ್ಞಾನೋದಯ ಆದ ಬಳಿಕವೂ ನೇಯುವುದನ್ನು ಮುಂದುವರೆಸಬಹುದು ಎಂಬುದನ್ನು ಮುಂದಿನ ಜನಾಂಗ ನೆನಪಿಸಿಕೊಳ್ಳಲಿ ಎಂದು ನೇಯುತ್ತಿದ್ದೇನೆ. ನೇಯ್ಗೆಯ ವೃತ್ತಿ ಜ್ಞಾನೋದಯದಿಂದ ದಾರಿ ತಪ್ಪಿಸುವುದಿಲ್ಲ, ಬದಲಾಗಿ ನೇಯ್ಗೆಯೇ ಅವನ ಪ್ರಾರ್ಥನೆಯಾಗುತ್ತದೆ.

''ಆತ ಏನನ್ನೇ ಮಾಡಲಿ, ಅದು ಈ ಅಸ್ತಿತ್ವಕ್ಕೆ ಆತ ಸಲ್ಲಿಸುವ ಕೃತಜ್ಞತೆ. ಆತ ಭೂಮಿಗೆ ಭಾರವಲ್ಲ. ಆತನಿಂದ ಏನೆಲ್ಲ ಸಾಧ್ಯವೋ ಅದನ್ನು ಆತ ಮಾಡುತ್ತಿದ್ದಾನೆ. ನಾನು ಶಿಲ್ಪಿಯಾಗಲಾರೆ. ನಾನು ಚಿತ್ರ ಕಲಾವಿದನಾಗಲಾರೆ. ಆದರೆ ನನ್ನ ಹಾಗೆ ಯಾರೂ ನೇಯಲಾರರು ಎಂದು ಅಧಿಕಾರಯುಕ್ತವಾಗಿ ಹೇಳಬಲ್ಲೆ. ಪ್ರಾರ್ಥನೆ ಮತ್ತು ಕೃತಜ್ಞತೆಯ ಉಸಿರಿನೊಂದಿಗೆ ನೇಯುತ್ತೇನೆ. ನಾನು ತಯಾರಿಸುವ ಬಟ್ಟೆಯನ್ನು ಮಾರುವುದಿಲ್ಲ. ದೇವರಿಗೆ ಸೇವೆ ಸಲ್ಲಿಸುವುದಕ್ಕಾಗಿ ನೇಯುತ್ತೇನೆ. ಆ ಮೂಲಕ ನನಗೆ ತಿಳಿದಿರುವ ವೃತ್ತಿಯ ಮೂಲಕ ಎಷ್ಟು ಉತ್ತಮವಾಗಿ ಸೇವೆ ಮಾಡಬಹುದೋ ಅಷ್ಟು ಉತ್ತಮವಾಗಿ ಮಾಡಿ ಋಣವನ್ನು ತೀರಿಸುತ್ತೇನೆ.''

ದೇವರಿಗೆ ಹಿಂದೂಗಳು ಹೇಳುವ ಪದವೆಂದರೆ ರಾಮ. ಯಾರೇ ಬಂದರೂ, ಕಬೀರ್ ಬಂದವರನ್ನು 'ರಾಮ' ಎಂದೇ ಕರೆಯುತ್ತಿದ್ದರು. ಅವರು ಹೇಳುತ್ತಿದ್ದರು, ''ರಾಮ, ನಿನಗಾಗಿ ನೇಯುತ್ತಿದ್ದೇನೆ. ಇದು ಸಾಮಾನ್ಯ ಬಟ್ಟೆಯಲ್ಲ. ಇದರ ಪ್ರತಿಯೊಂದು ಎಳೆಯು ನನ್ನ ಪ್ರೀತಿ, ಪ್ರಾರ್ಥನೆ, ಕೃತಜ್ಞತೆಗಳನ್ನು ತಿಳಿಸುತ್ತವೆ. ಅದಕ್ಕೆ ಗೌರವ ಕೊಡಿ.''[78]

ಕಬೀರ್‌ರ ಬಗ್ಗೆ ಒಂದು ಸಂಗತಿ ನೆನಪಿರಲಿ: ಆತ ಮುಸಲ್ಮಾನನಾಗಿ ಹುಟ್ಟಿ, ಹಿಂದುವಾಗಿ ಬೆಳೆದರು. ಆತ ಯಾರಿಗೆ ಸೇರಿದವರು ಎಂಬುದು ಮಾತ್ರ ಎಂದೂ ನಿರ್ಧಾರವಾಗಲಿಲ್ಲ. ಆತ ಸಾಯುವ ಸಮಯದಲ್ಲಿ ಅದು ಆತನ ಶಿಷ್ಯರಲ್ಲಿ ಜಗಳಕ್ಕೆ ಕಾರಣವಾಗಿತ್ತು. ಪಾರ್ಥಿವ ಶರೀರವನ್ನು ತಮಗೆ ಸಲ್ಲಿಸಬೇಕೆಂದು ಹಿಂದೂಗಳು ಮತ್ತು ಮುಸಲ್ಮಾನರು ಕಿತ್ತಾಡುತ್ತಿದ್ದರು. ಈ ಬಗ್ಗೆ ಒಂದು ಸುಂದರ ಕಥೆ ಇದೆ.

ತಮ್ಮ ಸಾವಿನ ಬಗ್ಗೆ ಕಬೀರ್ ಒಂದು ಸಂದೇಶವನ್ನಿಟ್ಟಿದ್ದರು. ತಮ್ಮ ಸಾವಿನ ನಂತರ ಈ ಮೂರ್ಖರು ಈ ರೀತಿ ಕಿತ್ತಾಡುವರೆಂದು ಕಬೀರರಿಗೆ ತಿಳಿದಿತ್ತು. ಅದಕ್ಕಾಗಿ ಒಂದು ಸಂದೇಶವನ್ನಿಟ್ಟಿದ್ದರು: ''ಮೃತ ದೇಹಕ್ಕಾಗಿ ಕಿತ್ತಾಟ ನಡೆದರೆ ನನ್ನ ದೇಹವನ್ನು ಹೊದಿಕೆಯಿಂದ ಮುಚ್ಚಿ, ಸ್ವಲ್ಪ ಹೊತ್ತು ಕಾಯಿರಿ. ಅನಂತರ ನಿರ್ಧಾರ ತಿಳಿಯುವುದು.''

ಕಬೀರ್ ಹೇಳಿದಂತೆ ದೇಹವನ್ನು ಮುಚ್ಚಲಾಯಿತು. ಹಿಂದೂಗಳು ಮತ್ತು ಮುಸ್ಲಿಮರು ಪಾರ್ಥಿವ ಶರೀರದ ಮುಂದೆ ಪ್ರಾರ್ಥನೆ ಸಲ್ಲಿಸಿದರು. ಅನಂತರ ಹೊದಿಕೆಯನ್ನು ತೆಗೆದರೆ ಕಬೀರ್‌ರ ದೇಹ ಮಾಯವಾಗಿತ್ತು. ಅಲ್ಲಿ ಕೇವಲ ಕೆಲವು ಹೂಗಳಿದ್ದವು. ಆ ಹೂವುಗಳ ಪಕಳೆಗಳು ಎಲ್ಲೆಡೆ ಬಿದ್ದಿದ್ದವು. ಹಿಂದೂಗಳು ಮತ್ತು ಮುಸಲ್ಮಾನರು ಈ ಹೂಗಳನ್ನು ಹಂಚಿಕೊಂಡರು.

ಇದು ಬಹಳ ಸುಂದರವಾದ ಕಥೆ. ಇದು ನಿಜವಾಗಿಯೂ ನಡೆದಿರಬಹುದು ಎಂದು ನಾನು ಹೇಳುವುದಿಲ್ಲ. ಆದರೆ ಈ ಕಥೆಯಲ್ಲಿ ಕೆಲವು ಸಂದೇಶಗಳಿವೆ. ಕಬೀರ್ ಮಾಯವಾಗಿದ್ದರು. ಆತ ತನ್ನ ದೇಹದಲ್ಲಿರಲಿಲ್ಲ. ಆತ ತಮ್ಮ ಆಂತರಿಕ ಹೂಗಳಲ್ಲಿ ಲೀನವಾಗಿದ್ದರು. ಅವರ ಸಹಸ್ರಾರ್, ಸಾವಿರದೊಂದು ಪಕಳೆಗಳುಳ್ಳ ಕಮಲ ಅರಳಿತ್ತು.

ನೀವು ಕೇವಲ ಕೆಲ ಸಮಯದ ತನಕ ಮಾತ್ರ ನಿಮ್ಮ ದೇಹದಲ್ಲಿ ಇರಬಲ್ಲಿರಿ. ಈ ದೇಹವು ಕೆಲವು ಕೆಲಸ-ಕಾರ್ಯಗಳನ್ನು ಪೂರೈಸಲೇಬೇಕು. ಆ ಕೆಲಸವೇನೆಂದರೆ ಪ್ರಜ್ಞೆಯ ಅರಳುವಿಕೆ. ಒಮ್ಮೆ ಪ್ರಜ್ಞೆ ಅರಳಿತೆಂದರೆ, ಶರೀರ ಅಸ್ತಿತ್ವರಹಿತ. ಆಗ ಅದು ಇದೆಯೋ ಅಥವಾ ಇಲ್ಲವೋ ಎಂಬುದು ಗೌಣ. ಅದು ಅಪ್ರಸ್ತುತ.

ಈ ಉಪಕಥೆ ಬಲು ಸುಂದರವಾದದ್ದು. ಹೊದಿಕೆಯನ್ನು ಸರಿಸಿದಾಗ ಅಲ್ಲಿ ಕೇವಲ ಕೆಲವು ಹೂಗಳಿದ್ದವು. ಕಬೀರ್ ಅಲ್ಲಿ ಅರಳಿದ್ದರು. ಮೂರ್ಖ ಶಿಷ್ಯರಿಗೆ ಈ ಸಂಕೇತ ಅರ್ಥವಾಗಲಿಲ್ಲ. ಅವರು ಹೂಗಳನ್ನು ವಿಭಜಿಸಿದರು, ಅರ್ಧಭಾಗ ಮಾಡಿದರು.

ಒಂದು ಸಂಗತಿ ನೆನಪಿರಲಿ. ಎಲ್ಲ ಆದರ್ಶ, ಸಿದ್ಧಾಂತಗಳೂ ಅಪಾಯಕಾರಿ. ಅವು ಮನುಷ್ಯರನ್ನು ವಿಭಜಿಸುತ್ತವೆ. ನೀವು ಹಿಂದೂ, ಮುಸ್ಲಿಮ್, ಜೈನ, ಕ್ರಿಶ್ಚಿಯನ್ ಆದಾಗ ವಿಭಜಿತರಾಗುತ್ತೀರಿ. ಮನುಷ್ಯರಲ್ಲಿ

ಎಷ್ಟೊಂದು ಒಡಕುಗಳು! ಎಲ್ಲ ಸಿದ್ಧಾಂತ, ಆದರ್ಶಗಳು ಸಂಘರ್ಷಕ್ಕೆ ಕಾರಣವಾಗುತ್ತವೆ. ಹಿಂಸಾಚಾರವನ್ನು ಪ್ರೇರೇಪಿಸುತ್ತವೆ. ಆಳವಾದ ಅರಿವು ಮತ್ತು ತಿಳಿವಳಿಕೆ ಇರುವವನಿಗೆ ಆದರ್ಶ, ಸಿದ್ಧಾಂತಗಳು ಇರುವುದಿಲ್ಲ. ಆಗ ಆತ ಅವಿಭಜಿತ. ಆಗ ಆತ ಈ ಮನುಕುಲದೊಡನೆ ಒಂದಾಗುತ್ತಾನೆ. ಈ ಅಸ್ತಿತ್ವದೊಡನೆಯೂ ಆತ ಒಂದಾಗಿರುತ್ತಾನೆ.

ಕಬೀರರ ಹಾಡುಗಳು ಬಹಳ ಸುಂದರವಾಗಿವೆ. ಆತ ಕವಿ, ತತ್ವಜ್ಞಾನಿಯಲ್ಲ. ಆತ ವ್ಯವಸ್ಥೆಯನ್ನು ಸೃಷ್ಟಿಸಲಿಲ್ಲ. ಆತ ಮೀಮಾಂಸಕನಲ್ಲ, ದೇವತಾ ಶಾಸ್ತ್ರಜ್ಞನಲ್ಲ. ಆತನಿಗೆ ಸಿದ್ಧಾಂತ ಹಾಗೂ ಧರ್ಮ ಶಾಸ್ತ್ರಗಳಲ್ಲಿ ನಂಬಿಕೆ ಇರಲಿಲ್ಲ. ಆತನ ಸಂಪೂರ್ಣ ಆಸಕ್ತಿ ಹೇಗೆ ಅರಳಬೇಕು ಹಾಗೂ ದೇವರಾಗಬೇಕು ಎಂಬುದರಲ್ಲಿತ್ತು. ಇತರರನ್ನು ಹೇಗೆ ಜಾಗೃತರನ್ನಾಗಿ ಮಾಡಬೇಕು ಮತ್ತು ಪ್ರೀತಿ ಪಾತ್ರರನ್ನಾಗಿ ಮಾಡಬೇಕೆಂಬುದೇ ಅವರ ಪ್ರಯತ್ನವಾಗಿತ್ತು.

ಇದು ಮತ್ತಷ್ಟು ಕಲಿಯುವ ಪ್ರಶ್ನೆಯಲ್ಲ. ಬದಲಾಗಿ ಹೆಚ್ಚು ಕಲಿಕೆರಹಿತನಾಗುವ ವಿಷಯಕ್ಕೆ ಸಂಬಂಧಿಸಿದ್ದು. ಈ ಹಿನ್ನೆಲೆಯಲ್ಲಿ ಯೋಚಿಸುವುದಾದರೆ ಕಬೀರರಂತಹವರು ಅಪರೂಪ. ಬುದ್ಧ, ಮಹಾವೀರ, ಕೃಷ್ಣ ರಾಮ ಇವರೆಲ್ಲರೂ ನಿಜಕ್ಕೂ ವಿಶೇಷ ವ್ಯಕ್ತಿಗಳು. ಇವರೆಲ್ಲರೂ ಸುಶಿಕ್ಷಿತರು ಹಾಗೂ ಸುಸಂಸ್ಕೃತರು. ರಾಜರಾಗಿದ್ದವರು. ಆದರೆ ಕಬೀರ್ ಹಾಗಲ್ಲ. ಆತ ಜನಸಮುದಾಯಕ್ಕೆ ಸೇರಿದ ಸಾಮಾನ್ಯ. ಬಡ ವ್ಯಕ್ತಿ. ಅವರು ಸುಶಿಕ್ಷಿತರೂ ಅಲ್ಲ, ಸುಸಂಸ್ಕೃತರೂ ಅಲ್ಲ. ಇದುವೇ ಅವರ ಅಸಾಮಾನ್ಯತೆ. ನಾನೇಕೆ ಅದನ್ನು ಅಸಾಮಾನ್ಯ ಎಂದು ಕರೆದೆ ಗೊತ್ತೆ? ಈ ಜಗತ್ತಿನಲ್ಲಿ ಸಾಮಾನ್ಯನಾಗಿರುವುದು ನಿಜಕ್ಕೂ ಅಸಾಮಾನ್ಯ ಸಂಗತಿ. ಆತ ಮೂಲತಃ ಸಾಮಾನ್ಯ. ಕೊನೆಯ ತನಕವೂ ಹಾಗೆಯೇ ಉಳಿದರು.[79]

ಭಾರತದಲ್ಲಿಲ ಒಬ್ಬ ಮಹಾನ್ ಯೋಗಿ ಇದ್ದರು. ಅವರ ಹೆಸರು ಫರೀದ್. ಯಾರೋ ಅವರಿಗೆ ವಜ್ರಖಚಿತವಾದ ಬಂಗಾರದ ಕತ್ತರಿಯನ್ನು ತಂದುಕೊಟ್ಟರು. ಆ ಕತ್ತರಿಯ ಮೇಲಿನ ಕೆತ್ತನೆ ಅಪೂರ್ವವಾಗಿತ್ತು. ಆ ಕತ್ತರಿಯನ್ನು ತಂದ ವ್ಯಕ್ತಿಯನ್ನು ಫರೀದ್ ಕೇಳಿದರು, ''ಇದನ್ನು ತೆಗೆದುಕೊಂಡು ನಾನೇನು ಮಾಡಲಿ? ನನಗೆ ಏನಾದರೂ ಕೊಡಬೇಕೆಂಬ ಮನಸ್ಸಿದ್ದರೆ ಸೂಜಿ ಮತ್ತು ದಾರವನ್ನು ಕೊಡಿ. ಏಕೆಂದರೆ ನನಗೆ ವಸ್ತುಗಳನ್ನು ಕೂಡಿಸುವುದು ಬಹಳ ಇಷ್ಟ.''[80]

ಫರೀದ್, ಕಬೀರ್ ಮತ್ತು ನಾನಕ್‌ರ ಸಮಕಾಲೀನರು. ನಾನು ನಿಜಕ್ಕೂ ಫರೀದರನ್ನು ಇಷ್ಟಪಡುತ್ತೇನೆ. ಆತ ತನ್ನ ಹಾಡುಗಳಲ್ಲಿ ತನ್ನನ್ನು 'ಫರೀದಾ' ಎಂದು ಕರೆದುಕೊಂಡಿದ್ದಾರೆ. ಆತ ಯಾವತ್ತೂ ತನ್ನನ್ನೇ ಸಂಬೋಧಿಸಿಕೊಂಡರೆ ಹೊರತು ಇತರರನ್ನಲ್ಲ. ಆತ ಹೀಗೆ ಆರಂಭಿಸುತ್ತಾರೆ, ''ಫರೀದಾ, ನೀನು ಕೇಳಿರುವೆಯಾ? ಫರೀದಾ ಜಾಗೃತನಾಗಿರು! ಫರೀದಾ ಹೀಗೆ ಮಾಡು, ಅದನ್ನು ಮಾಡು!'' ಹಿಂದಿಯಲ್ಲಿ ಫರೀದ್ ಎಂಬುದು ಗೌರವಯುತ ಸಂಬೋಧನೆ. ಫರೀದಾ ಎಂದರೆ ಗೌರವಯುತ ಅಲ್ಲ. ಕೇವಲ ಸೇವಕರನ್ನು ಆಳುಗಳನ್ನು ಹಾಗೆ ಕರೆಯುತ್ತಾರೆ. ಫರೀದ್ ತಮ್ಮನ್ನು ಫರೀದಾ ಎಂದೇ ಕರೆದುಕೊಳ್ಳುತ್ತಿದ್ದರು, ಏಕೆಂದರೆ, ಆತ ಯಜಮಾನ, ಆತನ ಶರೀರ ಸೇವಕ.

ಫರೀದ್ ಎಂದೂ ಪುಸ್ತಕ ಬರೆಯಲಿಲ್ಲ. ಆದರೆ ಅವರ ಗೆಳೆಯರು ಅವರ ಹೇಳುತ್ತಿದ್ದ ಹಾಡುಗಳನ್ನು ಬರೆದಿಡುತ್ತಿದ್ದರು. ಇವರ ಹಾಡುಗಳನ್ನು ಪಂಜಾಬಿಗಳು ಹಾಡಿದರೆ ಕೇಳಲು ಮಧುರವಾಗಿರುತ್ತದೆ ಮತ್ತು ಆಪ್ಯಾಯವಾಗಿರುತ್ತವೆ. ಅವರು ವಾಸಿಸಿದ್ದು ಪಂಜಾಬಿನಲ್ಲಿ. ಅವರ ಹಾಡುಗಳು ಪಂಜಾಬಿ ಭಾಷೆಯಲ್ಲಿವೆ. ಅವರ ಹಾಡುಗಳು ಎಷ್ಟೊಂದು ತೀಕ್ಷ್ಣವಾಗಿವೆಯೆಂದರೆ ಅವುಗಳನ್ನು ಕೇಳುತ್ತಾ ನೀವು ಭಾವಪರವಶರಾಗುತ್ತೀರಿ.[81]

ನಾನಕ್ ಭಾರತ ಮತ್ತು ವಿದೇಶಗಳಲ್ಲೂ ಸಂಚರಿಸಿದ ಏಕೈಕ ಸಂತ. ಆತ ಸಂಚರಿಸುವಾಗಲೆಲ್ಲಾ ಅವರೊಂದಿಗೆ ಒಬ್ಬನೇ ಒಬ್ಬ ಶಿಷ್ಯ, ಮರ್ದನ, ಇರುತ್ತಿದ್ದ. ನಾನಕ್, ಶ್ರೀಲಂಕಾ, ಮೆಕ್ಕಾ, ಮದೀನ ಸೇರಿದಂತೆ ಅನೇಕ ದೇಶಗಳಲ್ಲಿ ತಿರುಗಾಡಿದರು. ಅವರು ಎಲ್ಲಿಗೇ ಹೋದರೂ ಯಾವುದಾದರೂ ಒಂದು ಮರದ ಅಡಿಯಲ್ಲಿ ಕುಳಿತಿರುತ್ತಿದ್ದರು ಹಾಗೂ ಮರ್ದನ ವಾದ್ಯವನ್ನು ನುಡಿಸುತ್ತಿದ್ದ. ನಾನಕ್ ಹಾಡುತ್ತಿದ್ದರು. ಇವರಿಬ್ಬರ ವಾದ್ಯ ಮತ್ತು ಸಂಗೀತದ ಮಾಧುರ್ಯಕ್ಕೆ ಮರುಳಾಗಿ, ಭಾಷೆ ಅರಿಯದಿದ್ದರೂ ಅದನ್ನು ಕೇಳಲು ಜನರು ಮರದಡಿಯಲ್ಲಿ ಭಾರಿ ಸಂಖ್ಯೆಯಲ್ಲಿ ಸೇರುತ್ತಿದ್ದರು.

ಸಂಗೀತ ಮುಗಿದ ಬಳಿಕ ನಾನಕ್ ಮೌನವಾಗಿ ಕುಳಿತಿರುತ್ತಿದ್ದರು. ಕೊನೆಗೆ, ಕೆಲವರು ಜಾಗ ಖಾಲಿ ಮಾಡುತ್ತಿದ್ದರು. ಇನ್ನು ಕೆಲವರು ಆ ಮೌನವನ್ನು ಆಲಿಸುವುದಕ್ಕಾಗಿಯೇ ಕುಳಿತಿರುತ್ತಿದ್ದರು. ಅವರ ಮೌನಕ್ಕೂ ಚುಂಬಕ ಶಕ್ತಿಯಿತ್ತು.

ನಾನಕ್ ಕಲಿತವರಲ್ಲ. ಆತ ಗ್ರಾಮ್ಯ ಪಂಜಾಬಿ ಭಾಷೆ ಮಾತಾಡುತ್ತಿದ್ದರು. ಏಷ್ಯಾದ ಅರ್ಧ ಭಾಗದಷ್ಟು ಮಂದಿ ಆತನ ಹಾಡಿಗೆ ಮಾರು ಹೋಗಿದ್ದರು. ಯಾವುದೇ ಭಾಷೆಯಿಲ್ಲದೆ ಶಿಷ್ಯರನ್ನು ಸಂಪಾದಿಸಲು ಅವರಿಗೆ ಸಾಧ್ಯವಾಗುತ್ತಿತ್ತು. ನಾನು ನಿಮಗೆ ಒಂದು ಸಣ್ಣ ಆದರೆ, ಬಲು ಮುಖ್ಯವಾದ ಘಟನೆಯನ್ನು ಹೇಳುತ್ತೇನೆ.

ಸುಮಾರು ಐದು ನೂರು ವರ್ಷಗಳ ಹಿಂದೆ ಲಾಹೋರ್ ಬಳಿ ಸೂಫಿಗಳ ಒಂದು ಶಿಬಿರವಿತ್ತು. ಅಲ್ಲಿ ಮಹಾನ್ ಸೂಫಿ ಸಂತರು ಬರುತ್ತಿದ್ದರೆಂದು ಆ ಶಿಬಿರ ಹೆಸರುವಾಸಿಯಾಗಿತ್ತು. ಈ ಸಂತರನ್ನು ಕಾಣಲೆಂದೇ ದೂರ ದೂರದಿಂದ ಅಸಂಖ್ಯ ಜನರು ಅಲ್ಲಿಗೆ ಆಗಮಿಸುತ್ತಿದ್ದರು.

ಆ ಶಿಬಿರಕ್ಕೆ ನಾನಕ್ ಕೂಡ ಹೋದರು. ನಾನಕ್ ಬಂದ ವಿಷಯ ಸೂಫಿಗಳ ಮುಖ್ಯ ಸಂತರಿಗೆ ಗೊತ್ತಾಯಿತು. ನಾನಕ್‌ರಿಗೆ ಸೂಫಿಗಳ ಭಾಷೆ ಗೊತ್ತಿಲ್ಲ. ಸೂಫಿಗಳಿಗೆ ನಾನಕ್‌ರ ಭಾಷೆ ಗೊತ್ತಿಲ್ಲ. ಹೇಗಾದರೂ ಮಾಡಿ ನಾನಕ್‌ರಿಗೆ ಒಂದು ಸಂದೇಶ ಕಳಿಸಬೇಕಿತ್ತು.

ಸೂಫಿಗಳ ಮುಖ್ಯಸ್ಥ ತನ್ನ ಶಿಷ್ಯನ ಮೂಲಕ ನಾನಕ್‌ರಿಗೆ ಒಂದು ತಂಬಿಗೆ ಹಾಲನ್ನು ಕಳಿಸಿದರು. ಇನ್ನೊಂದು ಹನಿ ಹಾಲೂ ಸಹ ಆ ತಂಬಿಗೆಯಲ್ಲಿ ಹಿಡಿಯುತ್ತಿರಲಿಲ್ಲ. ಅಷ್ಟೊಂದು ತುಂಬಿತ್ತು. ಅದನ್ನು ಶಿಷ್ಯ ನಾನಕ್‌ರಿಗೆ ನೀಡಿದ.

ಮರ್ದನನಿಗೆ ಅರ್ಥವಾಗಲಿಲ್ಲ. ಆತ ''ಇದೇನು? ಹಾಲನ್ನು ಏಕೆ ಕಳಿಸಿದ್ದೀರಾ? ನಾವೇನು ಮಾಡಬೇಕು ಇದರಿಂದ? ಇದು ಕಾಣಿಕೆಯೋ ಅಥವಾ ಸಾಂಪ್ರಾದಾಯಿಕ ಸ್ವಾಗತವೋ?'' ಎಂದು ಕೇಳಿದ.

ಸೂಫಿಗಳು ಹಾಲು ಕಳಿಸಿದ್ದಕ್ಕೆ ಹಾಗೂ ಮರ್ದನನ ಪ್ರಶ್ನೆಗೆ ನಾನಕ್ ನಕ್ಕರು. ಒಂದು ಕ್ಷಣ ಸುಮ್ಮನಾದರು. ಸುತ್ತಲೂ ಯಾವುದಕ್ಕೋ ಹುಡುಕಾಡಿದರು. ಒಂದು ಕಾಡು ಹೂವು ಕಾಣಿಸಿತು. ಅದನ್ನು ಹಾಲು ತುಂಬಿದ

ತಂಬಿಗೆಯಲ್ಲಿ ತೇಲಿಬಿಟ್ಟರು. ತಂಬಿಗೆಯಿಂದ ಒಂದು ಹನಿ ಹಾಲೂ ತುಳುಕಲಿಲ್ಲ, ಚೆಲ್ಲಲಿಲ್ಲ. ತಂಬಿಗೆಯನ್ನು ವಾಪಸ್ ಸೂಫಿಗಳ ಮುಖ್ಯಸ್ಥನಿಗೆ ಕೊಡುವಂತೆ ಸೂಚಿಸಿದರು.

ಸೂಫಿ ಮುಖ್ಯಸ್ಥನ ಶಿಷ್ಯನಿಗೂ ಅರ್ಥವಾಗಲಿಲ್ಲ. ಆತ ಹೇಳಿದ, ''ಇದು ಬಹಳ ವಿಚಿತ್ರವಾಗಿದೆಯಲ್ಲ. ಈ ಹಾಲನ್ನು ಏಕೆ ಕಳಿಸಿದ್ದಾರೆಂಬುದೇ ಸೋಜಿಗ. ಅದನ್ನು ನೀವು ವಾಪಸ್ ಮಾಡುತ್ತಿರುವ ರೀತಿ ಮತ್ತೂ ಸೋಜಿಗ. ಅದರಲ್ಲಿ ಹೂವನ್ನಿಟ್ಟಿರುವುದು ರಹಸ್ಯಮಯ.''

ನಾನಕ್ ಏನೂ ಮಾತನಾಡಲಿಲ್ಲ. ಆ ತಂಬಿಗೆಯನ್ನು ಶಿಷ್ಯ ಕೊಂಡೊಯ್ದು ಮುಖ್ಯಸ್ಥನಿಗೆ ಕೊಟ್ಟು ಹೇಳಿದ, ''ಸ್ವಾಮಿ, ನನಗೆ ಅರ್ಥವಾಗುತ್ತಿಲ್ಲ. ನನ್ನನ್ನು ಮೌಢ್ಯದಲ್ಲಿ ಇಡಬೇಡಿ. ಇವುಗಳ ರಹಸ್ಯ ಏನೆಂಬುದನ್ನು ತಿಳಿಸಿ.''

ಸೂಫಿ ಮುಖ್ಯಸ್ಥ ನುಡಿದ, ''ನಾನು ನಾನಕ್‌ರಿಗೆ ಹಾಲು ತುಂಬಿದ ತಂಬಿಗೆಯನ್ನು ಕಳಿಸಿದ್ದರ ಮರ್ಮ ಇಷ್ಟೇ - ಈ ಜಾಗ ಸಂತರಿಂದ ತುಂಬಿಹೋಗಿದೆ. ಮತ್ತೊಬ್ಬ ಸಂತ ಅನವಶ್ಯಕ. ನೀವು ಬೇರೆ ಕಡೆಗೆ ಹೋಗಬಹುದು. ಈ ತಂಬಿಗೆಯಲ್ಲಿ ಹಾಲು ತುಂಬಿರುವ ಹಾಗೆ ಈ ಜಾಗವೂ ತುಂಬಿದೆ. ನಾವು ನಿನ್ನನ್ನು ಸ್ವಾಗತಿಸುವುದಿಲ್ಲ. ಅನಗತ್ಯವಾಗಿ ಈ ಜಾಗವನ್ನು ಮತ್ತಷ್ಟು ಇಕ್ಕಟ್ಟಾಗಿಸುತ್ತಿರುವೆ. ಜಾಗ ಖಾಲಿ ಮಾಡಿ ಹೊರಡು.''

''ನಾನಕ್‌ನನ್ನು ಹೊರಗೆ ಕಳಿಸುವುದು ನನ್ನ ಉದ್ದೇಶವಾಗಿತ್ತು. ಆದರೆ ಇಲ್ಲಿ ನೋಡು. ನಾನಕ್‌ರು ಇದರೊಳಗೆ ಹೂವನ್ನು ಇಟ್ಟಿದ್ದಾರೆ. ಆದರೂ ಒಂದು ಹನಿ ಹಾಲು ಚೆಲ್ಲಲಿಲ್ಲ. ನಿಮ್ಮ ಮಧ್ಯೆ ನಾನು ಈ ಹೂವಿನಂತೆ ಎಂದು ನಾನಕ್‌ರು ಹೇಳಿದ್ದಾರೆ. ಇಲ್ಲಿರಲು ನನಗೆ ಹೆಚ್ಚು ಜಾಗ ಬೇಡ. ನಿಮ್ಮನ್ನು ಅಡ್ಡಿಪಡಿಸುತ್ತಿಲ್ಲ ಎಂದು ಸೂಚ್ಯವಾಗಿ ಅವರು ತಿಳಿಸಿದ್ದಾರೆ. ನಮ್ಮ ಗುಂಪಿನೊಳಗೆ ತಾನು ಹೂವಿನಂತೆ ಎಂಬುದು ಅವರ ಅಭಿಪ್ರಾಯ'' ಎಂದು ಸೂಫಿ ಮುಖ್ಯಸ್ಥ ಹೇಳಿದ. ಅಲ್ಲಿದ್ದವರೆಲ್ಲ ಬೆರಗಾದರು.

ಸೂಫಿ ಮುಖ್ಯಸ್ಥ ನಾನಕ್‌ರ ಬಳಿಗೆ ಧಾವಿಸಿ ಅವರ ಪಾದಕ್ಕೆರಗಿದರು. ತಮ್ಮ ಶಿಬಿರಕ್ಕೆ ಬರುವಂತೆ ಅವರನ್ನು ವಿನಂತಿಸಿಕೊಂಡರು.


ನಾನಕ್ ಅವರ ಅತಿಥಿಯಾಗಿ ಕೆಲವು ದಿನಗಳನ್ನು ಕಳೆದರು. ನಾನಕ್‌ರ ಹಾಡಿಗೆ ಸೂಫಿಗಳು ನರ್ತಿಸುತ್ತಿದ್ದರು. ಇದು ಪ್ರತಿದಿನದ ದಿನಚರಿಯಾಗಿತ್ತು. ತಾವು ಇಲ್ಲಿಂದ ಹೋಗುವುದಾಗಿ ನಾನಕ್‌ರು ಹೇಳಿದಾಗ ಸೂಫಿಗಳು ರೋಧಿಸಲಾರಂಭಿಸಿದರು. ಸೂಫಿಗಳ ಮುಖ್ಯಸ್ಥ ಸಹ ಅಳಲಾರಂಭಿಸಿದರು. ನಾನಕ್‌ರನ್ನು ಬೀಳ್ಕೊಡಲು ಅವರೆಲ್ಲ ಸೇರಿದ್ದರು. ಅಲ್ಲಿ ಭಾಷೆಗೆ ಕೆಲಸವೇ ಇರಲಿಲ್ಲ. ಯಾರೂ ಒಂದೇ ಒಂದು ಮಾತನ್ನು ಆಡಲಿಲ್ಲ. ಏಕೆಂದರೆ ಅವರಿಗೆ ತಮ್ಮ ಭಾಷೆ ಹೊರತಾಗಿ ಬೇರೆ ಭಾಷೆ ಗೊತ್ತಿರಲಿಲ್ಲ. ಅವರಲ್ಲಿ ಸಂವಹನದ ಸಾಧ್ಯತೆ ಇರಲಿಲ್ಲ. ಆದರೂ ಅವರಲ್ಲಿ ಅದ್ಭುತ ಸಂವಹನ ಏರ್ಪಟ್ಟಿತ್ತು.[82]

ಪೂರ್ವವು ಮಿಥ್ಯೆಯಲ್ಲಿ ಬದುಕುತ್ತಿದೆ. ಮಿಥ್ಯೆ ಎಂದರೆ ಪುನರಾವರ್ತಿತ ವಿಷಯ. ಅವಶ್ಯಕವಾದುದು ಅಲ್ಲಿಯೇ ಇದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮಿಥ್ಯೆಗೆ ಅರ್ಥವೇ ಇಲ್ಲ. ನೀವು ಯಾವುದನ್ನಾದರೂ ಮಿಥ್ಯೆಯೆಂದು ಸಾಬೀತು ಪಡಿಸಿದರೆ, ಅದು ಅರ್ಥರಹಿತ. ನೀವು ಅದನ್ನು ಇತಿಹಾಸ, ಹಿಂದೆಂದೋ ನಡೆದಿದೆ ಎಂದು ರುಜುವಾತು ಪಡಿಸಬೇಕು. ಆ ಬಗ್ಗೆ ಖಚಿತತೆ ಇರಬೇಕು.

ಜೀವನ ಪುನರಾವರ್ತನೆ ಅಲ್ಲ. ಕೇವಲ ಒಂದೇ ಸ್ತರದಲ್ಲಿ ಸಾಗುತ್ತದೆ ಎಂಬ ಭಾವನೆ ಆತಂಕವನ್ನು ಹುಟ್ಟಿಸುತ್ತದೆ. ಇದರಿಂದಾಗಿ ನೀವು ಮೌನ, ಏಕಾಂತದಲ್ಲಿದ್ದಾಗ ನಿಮಗೆ ಚಿಂತೆ ಹತ್ತುತ್ತದೆ. ಇವುಗಳಲ್ಲಿ ಒಂದು, ಸಮಯ ವ್ಯರ್ಥವಾಗುತ್ತಿದೆ ಎಂಬುದು. ಏಕೆ ನಿಮ್ಮ ಜೀವನವನ್ನು ವ್ಯರ್ಥ ಮಾಡುತ್ತಿದ್ದೀಯ? ಕಳೆದ ಸಮಯ ಪುನಃ ಬರಲಾರದು. ''ಸಮಯ ಅತ್ಯಮೂಲ್ಯ, ಟೈಮ್ ಈಸ್ ಮನಿ,'' ಎಂದೆಲ್ಲ ನಿಮಗೆ ಕಲಿಸಲಾಗಿದೆ. ಆದರೆ ಈ ವಾದದಲ್ಲಿ ಹುರುಳಿಲ್ಲ. ಏಕೆಂದರೆ ಸಂಪತ್ತು ಕೊರತೆ ಅಥವಾ ಅಭಾವದಿಂದಲೇ ಸೃಷ್ಟಿಯಾಗುತ್ತದೆ. ಸಮಯದ ಕೊರತೆ ಅಥವಾ ಅಭಾವ ಎಂದಿಗೂ ಇಲ್ಲ; ಯಾವುದೇ ವಸ್ತುವಿನ ಕೊರತೆ ಉಂಟಾದರೆ ಅದು ಅಮೂಲ್ಯವಾಗುತ್ತದೆ. ಸಮಯದ ಅಭಾವವಿಲ್ಲ. ಅದು ನಿರಂತರ. ನೀವು ಅದನ್ನು ಮುಗಿಸಲಾರಿರಿ, ಅದು ಎಂದಿಗೂ ಇರುವುದು. ಆದ್ದರಿಂದ ಸಮಯ ಸಂಪತ್ತಲ್ಲ.

ಆದರೆ ನಾವು ಕಲಿಸುತ್ತಲೇ ಹೋಗುತ್ತೇವೆ. ''ಸಮಯ ಅಮೂಲ್ಯ. ಅದನ್ನು ಹಾಳು ಮಾಡಬೇಡಿ. ಒಮ್ಮೆ ಹಾಳುಮಾಡಿದರೆ ಅದು ಪುನಃ ವಾಪಸು ಬರುವುದಿಲ್ಲ.'' ನೀವು ಏಕಾಂತದಲ್ಲಿ ಕುಳಿತಿದ್ದೀರೆನ್ನಿ. ನೀವು ಹಾಗೇ ಅಲ್ಲಿ ಮೂರು ವರ್ಷ ಕುಳಿತಿರುವುದು ಬಿಡಿ, ಮೂರು ದಿನ ಕುಳಿತಿರುವುದೂ ಆಗದು - ನೀವು ಮೂರು ದಿನ ವ್ಯರ್ಥ ಮಾಡಿದಂತೆ! ಎರಡನೆಯ ಸಮಸ್ಯೆ ಉದ್ಭವಿಸಲು ಕಾರಣ, ಪಾಶ್ಚಿಮಾತ್ಯರಿಗೆ ಅಸ್ತಿತ್ವ ಅಮೂಲ್ಯವಲ್ಲ. ಕ್ರಿಯೆ ಅಥವಾ ಕಾರ್ಯ ಅಮೂಲ್ಯವಾದದು. ಅವರು ಕೇಳುತ್ತಾರೆ, ''ನೀವು ಏನನ್ನು ಮಾಡಿದ್ದೀರಿ?''- ಏಕೆಂದರೆ ಏನಾದರೂ ಮಾಡುವುದರಲ್ಲಿ ಸಮಯ ವಿನಿಯೋಗವಾಗಬೇಕು. ಖಾಲಿ ಮನಸ್ಸು ಭೂತಗಳ ಕಾರ್ಯಾಗಾರ ಎಂದು ಅವರು ಹೇಳುತ್ತಾರೆ. ಆಗ ನೀವು ಸುಮ್ಮನೆ ಕುಳಿತುಕೊಂಡರೂ ಅನಗತ್ಯವಾಗಿ ಅಂಜುತ್ತೀರಿ, ಹೆದರುತ್ತೀರಿ. ''ನಾನೇನು ಮಾಡುತ್ತಿದ್ದೇನೆ? ಸುಮ್ಮನೆ ಕುಳಿತು ಕಾಲಹರಣ ಮಾಡುತ್ತಿದ್ದೇನೆ!'' ಎಂದೆಲ್ಲ ನೀವು ನಿಮ್ಮನ್ನೇ ಪ್ರಶ್ನಿಸತೊಡಗುತ್ತೀರಿ, ಅಸ್ತಿತ್ವವೇ ವ್ಯರ್ಥ ಎಂಬಂತೆ. ಸಮಯದ ಸದ್ವಿನಿಯೋಗ ಮಾಡುತ್ತಿದ್ದೀರಿ ಎಂದು ತೋರಿಸಿಕೊಳ್ಳಲು ಏನಾದರೊಂದು ಮಾಡಲೇ ಬೇಕಾಗುವುದು. ವ್ಯತ್ಯಾಸ ಇದುವೇ.

ಪುರಾತನ ಕಾಲದಲ್ಲಿ, ವಿಶೇಷವಾಗಿ ಪೂರ್ವದಲ್ಲಿ ನೀವು ಇದ್ದರೆ ಸಾಕಿತ್ತು; ಯಾವುದನ್ನೂ ಸಾಬೀತು ಪಡಿಸುವ



ಜೈಸಲ್ಮೇರ್‌ನ ಸಂಗೀತ ಕಲಾವಿದ

ಆಗತ್ಯವಿರಲಿಲ್ಲ. ''ನೀವು ಏನನ್ನು ಮಾಡಿದಿರಿ '' ಎಂದು ಯಾರೂ ಕೇಳುತ್ತಿರಲಿಲ್ಲ. ಕೇವಲ ನಿಮ್ಮ ಇರುವು ಸಾಕಿತ್ತು, ಸ್ವೀಕೃತಿಯಾಗಲು. ನೀವು ಮೌನವಾಗಿರಿ, ಶಾಂತವಾಗಿರಿ, ಏಕಾಂತದಲ್ಲಿ ಧ್ಯಾನಮಗ್ನರಾಗಿರಿ, ಎಲ್ಲವೂ ಸ್ವೀಕೃತ. ಅದಕ್ಕಾಗಿಯೇ ಪೂರ್ವ ಎಂದೂ ಸನ್ಯಾಸಿಗಳು ಕೆಲಸ ಮಾಡ ಬೇಕೆಂದು ಬಯಸಲಿಲ್ಲ, ತಮ್ಮ ಎಲ್ಲ ಕೆಲಸಗಳನ್ನು ಬಿಟ್ಟ ಸನ್ಯಾಸಿಗಳು, ಕೆಲಸದಲ್ಲಿ ನಿರತರಾಗಿರುವವರಿಗಿಂತ ಉತ್ತಮರೆಂಬುದು ನಮ್ಮ ಉದಾತ್ತ ವಿಚಾರ. ಪೂರ್ವದ ವಿಚಾರಧಾರೆ ಉಳಿದವರಿಗಿಂತ ಭಿನ್ನ. ಇಲ್ಲಿಯ ವಾತಾವರಣವೇ ಬೇರೆ. ಅಸ್ತಿತ್ವವನ್ನು ಗೌರವದಿಂದ ಕಾಣಲಾಗುತ್ತಿತ್ತು. ''ನೀನೇನು ಮಾಡಿರುವೆ,'' ಎಂದು ಯಾರೂ ಕೇಳುವುದಿಲ್ಲ. ''ನೀವೇನಾಗಿರುವಿರಿ?'' ಎಂಬುದು ನಮ್ಮ ಪ್ರಶ್ನೆ. ನೀವು ಮೌನ, ಶಾಂತಿ, ಪ್ರೇಮ, ಅನುಕಂಪಗಳನ್ನು ಹೊಂದಿದ್ದು, ಅರಳಿದ್ದರೆ ಅದಕ್ಕಿಂತ ಇನ್ನೇನು ಬೇಕು? ನೀವು ಕಾರ್ಯಮಗ್ನರಾಗಿರಬೇಕು, ಏನನ್ನಾದರೂ ಸೃಷ್ಟಿಸಬೇಕು, ಸೃಜನಶೀಲರಾಗಿರಬೇಕು ಎಂದೆಲ್ಲ ಯಾರೂ ಹೇಳುತ್ತಿರಲಿಲಲ್ಲ. ನಾವು ನಾವಾಗಿರುವುದೇ ಅತ್ಯುತ್ಕೃಷ್ಟ ಸೃಜನಶೀಲತೆ ಎಂದು ಪೂರ್ವ ಭಾವಿಸಿದೆ. ಅಂತಹ ವ್ಯಕ್ತಿಗಳ ಉಪಸ್ಥಿತಿ ಅಮೂಲ್ಯವೆಂದು ಭಾರತ ಪರಿಗಣಿಸಿದೆ. [83]

ದೇವರಿಗೆ ವಿರುದ್ಧವಾದ ಅಸ್ತಿತ್ವವನ್ನು ಸೃಷ್ಟಿಸದಿರುವ ಏಕೈಕ ರಾಷ್ಟ್ರವೆಂದರೆ ಭಾರತ. ಕ್ರೈಸ್ತರು, ಮುಸ್ಲಿಮರು, ಯಹೂದಿಗಳು, ಜೊರಾಸ್ಟ್ರಿಯನ್‌ಗಳು ಭೂತಗಳನ್ನು ನಿರ್ಮಿಸಿದ್ದಾರೆ. ಭಾರತದಲ್ಲಿ ಮಾತ್ರ ಭೂತವಿಲ್ಲದೇ ದೇವರ ಅಸ್ತಿತ್ವವನ್ನು ಕೆಲವರು ಒಪ್ಪಿಕೊಂಡಿದ್ದಾರೆ. ದೆವ್ವದ ಅಸ್ತಿತ್ವದ ಸೃಷ್ಟಿಯಿಂದ ದೇವರನ್ನೇನು ಹೆಚ್ಚು ಒಪ್ಪಿಕೊಂಡಂತೆ ಆಗುವುದಿಲ್ಲ, ಏಕೆಂದರೆ ಆಗ ಘರ್ಷಣೆ ಸತತ. ಅನುದಿನ, ನಿರಂತರ.

ನಾನು ಒಂದು ಕಥೆಯನ್ನು ಕೇಳಿದ್ದೇನೆ. ಅದು ಹೀಗಿದೆ:

ಮುಲ್ಲಾ ನಸರುದ್ದೀನ್ ಮರಣಶಯ್ಯೆಯಲ್ಲಿದ್ದ. ಪಾಪ ನಿವೇದನೆ ಮತ್ತು ಅಂತಿಮ ಪಶ್ಚಾತ್ತಾಪ ಸಲ್ಲಿಕೆಯನ್ನು ಕೇಳುವುದಕ್ಕಾಗಿ ಮೌಲ್ವಿ ಆಗಮಿಸಿದ. ಮುಲ್ಲಾನಿಗೆ ಮೌಲ್ವಿ ಹೇಳಿದ, ''ನಿನ್ನ ಸಾವು ಸಮೀಪಿಸುತ್ತಿದೆ. ಪಾಪ ನಿವೇದನೆ ಸಲ್ಲಿಸಿ ಪಶ್ಚಾತ್ತಾಪವನ್ನು ತೋರಿಸಿಕೋ. ದೇವರಲ್ಲಿ ಕ್ಷಮೆ ಬೇಡು. ಸೈತಾನನಿಂದ ದೂರವಿರು. ಅವನನ್ನು ನಿರಾಕರಿಸು.''

ಮುಲ್ಲಾ ಸುಮ್ಮನಿದ್ದ. ಅದನ್ನು ಕಂಡು ಮೌಲ್ವಿ ಹೇಳಿದ, ''ನಾನು ಹೇಳಿದ್ದು ಕೇಳಿಸಿತೆ? ಈ ಕೊನೆಯ ಕ್ಷಣದಲ್ಲಿ ನೀನು ಹಿಂಜರಿಯಕೂಡದು. ಸಾವು ಸಮೀಪಿಸುತ್ತಿದೆ. ಕೆಲವೇ ಕೆಲವು ಕ್ಷಣಗಳು ಮಾತ್ರ ಉಳಿದಿವೆ.''

ಮುಲ್ಲಾ ಹೇಳಿದ, ''ಈ ಕೊನೆಯ ಕ್ಷಣದಲ್ಲಿ ಯಾರನ್ನೂ ನೋಯಿಸಲು ಬಯಸುವುದಿಲ್ಲ. ನಾನೆಲ್ಲಿಗೆ ಹೋಗುವೆನೆಂಬುದು ಗೊತ್ತಿಲ್ಲ. ಆದ್ದರಿಂದ ಮೌನವಾಗಿ

ಸಾಯಲು ಬಯಸುತ್ತೇನೆ. ಮರಣದ ನಂತರ ಯಾರ ಸಂಗ ದೊರೆಯುತ್ತದೋ ತಿಳಿಯದು. ಯಾರೇ ಇರಲಿ ಅವರನ್ನು ಒಪ್ಪಿಕೊಳ್ಳುವುದು ಒಳ್ಳೆಯದು. ಈ ನಿರ್ಣಾಯಕ ಘಳಿಗೆಯಲ್ಲಿ ಆಯ್ಕೆ ಮಾಡದಿರುವುದೇ ಒಳ್ಳೆಯದು. ನಾನು ಯಾರ ಬಳಿಗೆ ಹೋಗುತ್ತೇನೋ, ದೇವರ ಬಳಿಯೋ ಇಲ್ಲ ದೆವ್ವದ ಬಳಿಯೋ ಗೊತ್ತಿಲ್ಲ. ಆದ್ದರಿಂದ ಇಬ್ಬರ ಪಾಲಿಗೂ ಒಳ್ಳೆಯವನಾಗಿರುವುದು ಒಳ್ಳೆಯದು. ಜೀವನದ ಮಾತು ಬೇರೆ. ಸಾವಿನ ಈ ಘಳಿಗೆಯಲ್ಲಿ ಮೌನದಿಂದ ಸಾಯುವುದೇ ಲೇಸು''

ಒಂದು ವೇಳೆ ದೇವರು ಮತ್ತು ಸೈತಾನ ಒಟ್ಟಿಗಿದ್ದರೆ, ಈ ಅಸ್ತಿತ್ವ ದ್ವಂದ್ವತೆಯನ್ನು ಹೊಂದಿದೆಯೆನ್ನಬಹುದು. ಈ ದ್ವಂದ್ವವನ್ನು ಮೀರುವುದು ಅಸಾಧ್ಯ. ಆದ್ದರಿಂದ ಅಸ್ತಿತ್ವ ದ್ವಂದ್ವ ಎಂಬಂತೆ ಕಂಡರೂ ಅಸ್ತಿತ್ವ ದ್ವಂದ್ವ ಅಲ್ಲದ್ದೆಂದು ಸಾಧುಗಳು ಹೇಳುತ್ತಾರೆ. ಆದರೆ ಈ ಉಭಯ ರೂಪತ್ವವನ್ನು ಅಭಿವ್ಯಕ್ತಪಡಿಸುವುದು ಹೇಗೆ? ಇದು ಸಕಾರಾತ್ಮಕ ಅಥವಾ ನಕಾರಾತ್ಮಕ ಎಂದು ಹೇಳಿದರೆ, ದ್ವಂದ್ವದ ತೊಂದರೆಗಳು ಸೃಷ್ಟಿಯಾಗುತ್ತವೆ.

ಈ ಉಭಯತ್ವವನ್ನು ಕೇವಲ ಎರಡು ವಿಧಗಳಲ್ಲಿ ವ್ಯಕ್ತಪಡಿಸಬಹುದು: ಅದು ಗುಣಾತ್ಮಕ ಮತ್ತು ಋಣಾತ್ಮಕ ಎರಡೂ ಎಂದೋ ಅಥವಾ ಅದು ಗುಣಾತ್ಮಕವೂ ಅಲ್ಲ, ಋಣಾತ್ಮಕವೂ ಅಲ್ಲ ಎಂದು. ಇದರ ಅರ್ಥ ಶೂನ್ಯ ಇಲ್ಲವೆ ಪೂರ್ಣ. ಇದರರ್ಥ ಎಲ್ಲವೂ ದಿವ್ಯ.....

ಇದು ಪಾಶ್ಚಿಮಾತ್ಯರಲ್ಲಿ, ಅದರಲ್ಲೂ ವಿಶೇಷವಾಗಿ ಕ್ರಿಶ್ಚಿಯನ್ ಚಿಂತಕರಲ್ಲಿ ಬಹಳ ಮುಜುಗರವನ್ನು ಉಂಟುಮಾಡಿದೆ. ಅವರು ಎಲ್ಲವೂ ದೇವರೇ ಎಂದು ವಾದಿಸುತ್ತಾರೆ. ಹಾಗಿದ್ದಲ್ಲಿ ರೋಗ, ಸಾವು, ಸಂಕೋಲೆ, ಪಾಪ ಇವೆಲ್ಲ ಏನು? ಇವೆಲ್ಲವುಗಳಿಗೆ ಏನಾಗುವುದು? ಇವೂ ಕೂಡ ದೇವರ ಭಾಗವೇ? ಆದರೆ ದೇವರು ಸರ್ವಾಂತರ್ಯಾಮಿ ಎಂದು ಭಾವಿಸುವವರು ದಷ್ಕೃತ್ಯ ಅಥವಾ ಪಾಪ ಕೂಡ ದೇವರು ಎಂಬುದನ್ನು ಒಪ್ಪಿಕೊಳ್ಳಬೇಕು. ಕಳ್ಳನೂ ಕೂಡ ದೇವರು - ಅವನು ಕಳ್ಳ ದೇವನಾಗಿರಬಹುದು - ಆದರೆ ಆತ ಕೂಡ ದೇವರೇ. ಕ್ರಿಶ್ಚಿಯನ್ನರು ಇದನ್ನು ಒಪ್ಪುವುದಿಲ್ಲ. ಕಳ್ಳನೂ ದೇವರೆಂದರೆ, ಭೂತವೂ ದೇವರೆಂದರೆ, ಮನುಷ್ಯ ಯಾವುದನ್ನು ಆಯ್ಕೆಮಾಡಿಕೊಳ್ಳಬೇಕು? ಹಾಗಾದರೆ ಪಾಪ ಎಂದರೇನು? ಪೂರ್ಣತೆ ತುಂಬಿದ ಜಗದಲ್ಲಿ ಯಾವುದೂ ಪಾಪವಲ್ಲ. ಎಲ್ಲವೂ ದೇವರಾದರೆ, ಪಾಪವೆಂಬುದೇ ಇಲ್ಲ. ಕ್ಷಾಮಗಳು ತಲೆದೋರುತ್ತವೆ, ಪ್ರವಾಹಗಳು ಸಂಭವಿಸುತ್ತವೆ, ಯುದ್ಧಗಳು ಘಟಿಸಿ ಅನೇಕ ಮಂದಿ ಸಾಯುತ್ತಾರೆ. ಇವೂ ಸಹ ದೇವರು ಎಂದು ಹೇಳುವ ಧೈರ್ಯ ಕೇವಲ ಹಿಂದೂಗಳು ತೋರಿದ್ದಾರೆ. ಈ ಧೈರ್ಯ ಎಷ್ಟು ವಿಶಾಲವಾಗಿದೆಯೆಂದರೆ ಇದು ನಮ್ಮ

ತಿಳಿವಳಿಕೆಯನ್ನು ಮೀರಿದುದು. ನಿಮ್ಮ ಮನಸ್ಸು ಹೇಳುತ್ತದೆ, ''ಇದನ್ನು ನಿರಾಕರಿಸಿ! ದಿವ್ಯತೆಗೆ ಒಳ್ಳೆಯದನ್ನು ಜೋಡಿಸಿ, ಇದರಲ್ಲಿರುವ ಪಾಪವನ್ನು ತೆಗೆದುಹಾಕಿ.'' ಆದರೆ ಈ ಸಾಧು ಸಂತರು ಹೇಳುತ್ತಾರೆ, ''ಹಾಗಾದರೆ ಈ ಪಾಪವನ್ನು ಎಲ್ಲಿಡುತ್ತೀರಿ? ಅನಂತರ ನೀವು ಪ್ರತ್ಯೇಕ ಭೂತವನ್ನು ನಿರ್ಮಿಸಬೇಕು.''


ಪಾಪವು ದಿವ್ಯತೆಯ ಭಾಗವೇ ಆಗಿದ್ದರೆ, ಕೊನೆಗೆ, ಪಾಪವೆಂಬುದು ಪಾಪವಲ್ಲ. ಅದು ನಿಮ್ಮ ಗ್ರಹಿಕೆಯಲ್ಲಿನ ದೋಷ. ಏಕೆಂದರೆ ನಿಮಗೆ ಇಡೀ ಚಿತ್ರವನ್ನು ಕಾಣಲು ಸಾಧ್ಯವಾಗಿಲ್ಲ.[84]

ಧ್ಯಾನ ಎಲ್ಲ ಸಮಸ್ಯೆಗಳ ಬೇರುಗಳನ್ನು ಕತ್ತರಿಸುತ್ತದೆ. ನಾನು ಇನ್ನೊಮ್ಮೆ ಹೇಳುತ್ತೇನೆ: ಮನಸ್ಸೇ ಸಮಸ್ಯೆ. ಮನಸ್ಸನ್ನು ಮೀರಿ ನಡೆಯದಿದ್ದರೆ, ನೀವು ಸಮಸ್ಯೆಯನ್ನು ಮೀರಿ ಹೋಗಲಾರಿರಿ.

ಪೂರ್ವದಲ್ಲಿ ಅದೆಷ್ಟು ಪ್ರಜ್ಞಾವಂತರು ಹಾಗೂ ಜ್ಞಾನೋದಯ ಹೊಂದಿದ ವ್ಯಕ್ತಿಗಳಿದ್ದರೂ ಅವರೆಂದೂ ಮನಸ್ಸಿನ ವಿಶ್ಲೇಷಣೆಗೆ ಹೆಚ್ಚಿನ ಒತ್ತು ಕೊಟ್ಟಿಲ್ಲ. ಏಕೆ ಎಂಬುದರ ಬಗ್ಗೆ ಪಾಶ್ಚಿಮಾತ್ಯ ಮನಶ್ಶಾಸ್ತ್ರಜ್ಞರು ಗಮನಿಸಿಯೇ ಇಲ್ಲ ಎಂಬುದು ಬಲು ವಿಚಿತ್ರ.

ಪಶ್ಚಿಮ ಮನಸ್ಸನ್ನೇ ಪ್ರಧಾನವಾಗಿಟ್ಟುಕೊಂಡು ಜೀವಿಸಿದೆ. ಪೂರ್ವ ಮನಸ್ಸನ್ನು ಮೀರಿ ಜೀವಿಸಿದೆ. ಆದ್ದರಿಂದ ಇವರಿಬ್ಬರ ಸಮಸ್ಯೆಗಳು ಒಂದೇ ಅಲ್ಲ. ಪೂರ್ವದ ಏಕಮಾತ್ರ ಹುಡುಕಾಟ, ಅದರ ಮೇಧಾವಿಗಳೆಲ್ಲರ ಶೋಧ ಕೇವಲ ಒಂದೇ: ಮನಸ್ಸನ್ನು ಮೀರಿ ಹೋಗುವುದು ಹೇಗೆ.[85]

ಪೂರ್ವದಲ್ಲಿ ನೀವು ತೇಲುತ್ತಾ ಧ್ಯಾನಸ್ಥರಾಗಬಹುದು. ನಿಮ್ಮ ಸುತ್ತಲಿರುವ ಸಂಪೂರ್ಣ ಶಕ್ತಿ ನದಿಯಿದ್ದಂತೆ. ಅದು ಈಗಾಗಲೇ ಸಮುದ್ರದತ್ತ ಹೊರಟಿದೆ. ನೀವು ಈಜಬೇಕಿಲ್ಲ, ತೇಲಿದರೆ ಸಾಕು. ಪಾಶ್ಚಿಮಾತ್ಯ ದೇಶಗಳಲ್ಲಿ ಹಾಗಲ್ಲ. ನೀವು ಪ್ರವಾಹದ ವಿರುದ್ಧ ಈಜಬೇಕು. ಏಕೆಂದರೆ ಶತಮಾನಗಳಿಂದಲೂ ಬಹಿರ್ಮುಖಿ ಅಥವಾ ಬಾಹ್ಯ ಪ್ರವೃತ್ತವಾದ ಅಲ್ಲಿನ ಮನಸ್ಸು ಬೇರೆ ರೀತಿಯ ಶಕ್ತಿಯನ್ನು ಸೃಷ್ಟಿಸಿದೆ. ಕೇವಲ ಬೇರೆ ರೀತಿಯದ್ದಲ್ಲ, ಪೂರ್ವಕ್ಕೆ ವಿರುದ್ಧವಾದುದು - ಬಹಿರ್ಮುಖಿ, ಬಾಹ್ಯ ಪ್ರವೃತ್ತ.[86]



ಸಾರಂಗಿ ವಾದ್ಯದ ತಂತಿಗಳು

ಕಾರ್ಗತ್ತಲಿನಲ್ಲಿ ಕೋಲ್ಮಿಂಚು

ಭಾರತದಲ್ಲಿ ನಾವು
ಅನುಭವ, ಅಂತರ್ ದೃಷ್ಟಿ
ಎನ್ನುವುದು ಎಲ್ಲವನ್ನೂ
ಒಮ್ಮೆಗೇ ತೋರಿಸುತ್ತದೆ,
ಕೋಲ್ಮಿಂಚಿನ ಬೆಳಕಿನಂತೆ.
ಇದರಿಂದಾಗಿ ಸತ್ಯದ
ಯಥಾರ್ಥ, ಪರಿಪೂರ್ಣ
ದರ್ಶನವಾಗುತ್ತದೆ.

ಗುಲಾಲ ಬುಲ್ಲೇಶಹರ ಶಿಷ್ಯನಾಗಿದ್ದ. ಅದರಲ್ಲೇನೂ ವಿಶೇಷವಿಲ್ಲ. ಏಕೆಂದರೆ ಬುಲ್ಲೇಶಹರಿಗೆ ಅನೇಕ ಮಂದಿ ಶಿಷ್ಯರಿದ್ದರು. ಅಸಂಖ್ಯಾತ ಗುರುಗಳಿದ್ದಾರೆ ಹಾಗೂ ಅವರಿಗೆ ಲೆಕ್ಕವಿಲ್ಲದಷ್ಟು ಜನ ಶಿಷ್ಯರಿದ್ದಾರೆ., ಇದರಲ್ಲೇನೂ ವಿಶೇಷವಿಲ್ಲ. ವಿಶೇಷವೇನೆಂದರೆ.....

ಗುಲಾಲ ಒಬ್ಬ ಚಿಕ್ಕ ಜಮೀನ್ದಾರ. ಅವನೊಂದಿಗೆ ಬುಳಕಿ ರಾಮನೆಂಬ ಕುರುಬನಿದ್ದ. ಈ ಬುಳಕಿ ರಾಮ ತೀರ ವಿಚಿತ್ರ ವ್ಯಕ್ತಿ. ಎಕ್ಸೆಂಟ್ರಿಕ್. ಆತನ ನಡಿಗೆ ಭಿನ್ನವಾಗಿತ್ತು. ಆತನ ಕಣ್ಣುಗಳು ಮತ್ತೇರಿದವನ ಕಣ್ಣುಗಳಂತಿದ್ದವು. ಆತನಲ್ಲಿ ಹರ್ಷೋನ್ಮಾದ ಕಾಣುತ್ತಿತ್ತು. ಆತ ಸದಾ ಆನಂದದಿಂದಲೇ ಇರುತ್ತಿದ್ದ, ಹಾಗಿರಲು ಅಂತಹ ಕಾರಣಗಳೇನೂ ಇರದಿದ್ದರೂ ಸಹ.

ಕುರುಬ ಬುಳಕಿ ರಾಮನಿಗೆ ದಿನಕ್ಕೆರಡು ಊಟ ಸಿಕ್ಕರೆ ಸಾಕು, ಆತ ಸಂಪೂರ್ಣ ಸಂತೃಪ್ತ. ನಸುಕಿನಲ್ಲಿ ಎದ್ದು ಕೆಲಸಕ್ಕೆ ಹೊರಡುತ್ತಿದ್ದ, ಸಂಜೆಯವರೆಗೂ ದುಡಿದು, ದಣಿದು ಬರುತ್ತಿದ್ದ. ಆಗ ಕೂಡ ಅವನ ಸಂತೋಷ ಎಳ್ಳಷ್ಟೂ ಕಡಿಮೆಯಾಗುತ್ತಿರಲಿಲ್ಲ. ಅವನ ಸುತ್ತ ಎಂಥದೋ ವಿಶಿಷ್ಟವಾದ ಸಂತಸ ಆವರಿಸಿಕೊಂಡಿತ್ತು.

ಈತನ ಬಗ್ಗೆ ಇಂಥ ಮಾಹಿತಿಗಳು ಯಜಮಾನ ಗುಲಾಲನಿಗೆ ಬರತೊಡಗಿತು. ಯಾರೋ ಹೇಳಿದರು, '' ಈ ಕುರುಬ ಏನೂ ಕೆಲಸ ಮಾಡುವುದಿಲ್ಲ. ಈತ ಹೊಲದಲ್ಲಿ ನರ್ತಿಸುವುದನ್ನು ನೋಡಿದ್ದೇವೆ. ಈತ ಬಹಳ ಇಂಪಾಗಿ ಕೊಳಲು ನುಡಿಸುವುದು ನಿಜ. ಆದರೆ ಕುರಿ ಮೇಯಿಸುವುದಕ್ಕೂ ಕೊಳಲು ನುಡಿಸುವುದಕ್ಕೂ ಏನು ಸಂಬಂಧ? ಆತ ಹೊಲದಲ್ಲಿ ಕೆಲಸ ಮಾಡುವುದನ್ನು ನಾವು ನೋಡಿಲ್ಲ. ಆತ ಕಣ್ಣು ಮುಚ್ಚಿಕೊಂಡು ಮರದಡಿ ಕುಳಿತಿರುತ್ತಾನೆ. ಆತನ ಹತ್ತಿರ ಸುಳಿದರೆ ಒಂದು ರೀತಿಯ ಸಂತೋಷದ ಸ್ಪರ್ಶವನ್ನು ಅನುಭವಿಸಬಹುದು. ಆದರೆ ಅದಕ್ಕೂ, ಅವನ ಕೆಲಸಕ್ಕೂ ಸಂಬಂಧ ಇಲ್ಲ.''

ಬುಳಕಿ ರಾಮನ ಬಗ್ಗೆ ಹೀಗೆ ಅನೇಕ ದೂರುಗಳು ಬರಲಾರಂಭಿಸಿದವು. ಗುಲಾಲನಿಗೆ ತಾನು ಮಾಲಿಕನೆಂಬ ಅಹಂ ಇದ್ದುದರಿಂದ ಬುಳಕಿ ರಾಮನ ಬಗ್ಗೆ ಅಷ್ಟೊಂದು ಆಸಕ್ತನಾಗಿರಲಿಲ್ಲ. ಆತ ಹೆಚ್ಚಾಗಿ ಅವನನ್ನು ಗಮನಿಸಿಯೂ ಇರಲಿಲ್ಲ.

ಒಂದು ದಿನ ಬೆಳಿಗ್ಗೆ ಬುಳಕಿ ರಾಮನ ಬಗ್ಗೆ ಗುಲಾಲನಿಗೆ ಯಾರೋ ಹೇಳಿದರು, ''ಹೊಲದಲ್ಲಿ ಬೀಜ ಬಿತ್ತು ಎಂದು ಅವನನ್ನು ಕಳಿಸಿದರೆ, ಆತ ಮರದ ಕೆಳಗೆ ಕಣ್ಣುಮುಚ್ಚಿಕೊಂಡು ತೂರಾಡುತ್ತಿದ್ದಾನೆ. ಹೊಲದಲ್ಲಿ ಅವನಿಗಾಗಿ ಎತ್ತುಗಳು ಕಾದು ನಿಂತು ಬಹಳ ಸಮಯವಾಯಿತು.''

ಗುಲಾಲ ಕೆಂಪಾದ. ಬಾಯಿಗೆ ಬಂದ ಹಾಗೆ ಬುಳಕಿ ರಾಮನನ್ನು ದುಷ್ಟ, ಸೋಮಾರಿ ಎಂದು ಬಯ್ಯಲಾರಂಭಿಸಿದ. ಆತನ ಬಗ್ಗೆ ಜನರು ಹೇಳುವುದು ನಿಜ ಎಂದು ಕೊಂಡ.

ಸಿಟ್ಟಿನಿಂದ ಕುದಿಯುತ್ತಿದ್ದ ಗುಲಾಲ ನೇರವಾಗಿ ಹೋಗಿ ಬುಳಕಿ ರಾಮನನ್ನು ಹಿಂದಿನಿಂದ ಬಲವಾಗಿ ಒದ್ದ.

ಬುಳಕ ದೊಪ್ಪನೆ ಬಿದ್ದ. ಎದ್ದು ನಿಂತವನಲ್ಲಿ ಪರಮಸುಖ ಹಾಗೂ ಮಮತೆಯ ಕಣ್ಣೀರು. ಆನಂದತುಂದಿಲನಾದ ಬುಳಕಿ ರಾಮ ಗುಲಾಲನಿಗೆ ಹೇಳಿದ, '' ನನ್ನ ಧಣಿ, ಹೇಗೆ ನಾನು ನಿಮ್ಮನ್ನು ಅಭಿನಂದಿಸಲಿ? ನನ್ನ ಕೃತಜ್ಞತೆಯನ್ನು ಹೇಗೆ ವ್ಯಕ್ತಪಡಿಸಲಿ? ನೀವು ಒದೆಯುವುದಕ್ಕಿಂತ ಮೊದಲು ನನ್ನ ಧ್ಯಾನದಲ್ಲಿ ಒಂದು ಚಿಕ್ಕ ಅಡಚಣೆಯಿತ್ತು. ಇದನ್ನು ನಿವಾರಿಸಲು ಬಹಳ ಪ್ರಯತ್ನಿಸಿದರೂ ಆಗಲಿಲ್ಲ. ನೀವು ಕೊಟ್ಟ ಒದೆತದಿಂದ ಅದು ನಿವಾರಣೆಯಾಗಿದೆ. ಧಣಿ, ನೀವು ನಿಜಕ್ಕೂ ಪವಾಡವನ್ನೇ ಮಾಡಿದಿರಿ!

'' ನನ್ನ ಸಮಸ್ಯೆಯೇನೆಂದರೆ, ನಾನು ಧ್ಯಾನದಲ್ಲಿ ತಲ್ಲೀನನಾದಾಗ..... ಸಾಧುಸಂತರನ್ನು, ಮುನಿಗಳನ್ನು ಭೋಜನಕ್ಕೆ ಆಮಂತ್ರಿಸಬೇಕೆಂದು ಬಯಸುತ್ತೇನೆ. ಆದರೆ ನಾನು ಬಡವ. ಅವರಿಗೆ ಹೇಗೆ ಭೋಜನ ನೀಡಲಿ? ನಾನು ಧ್ಯಾನದಲ್ಲಿ ಮುಳುಗಿದ್ದಾಗಲೆಲ್ಲಾ ಅವರಿಗೆ ಭೋಜನ ನೀಡಿದಂತೆ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತ್ತೇನೆ. ನನ್ನ ಕಲ್ಪನೆಯಲ್ಲಿ ಎಲ್ಲ ಸಾಧು, ಸಂತರನ್ನು ಆಮಂತ್ರಿಸುತ್ತೇನೆ. ಅವರೆಲ್ಲರೂ ದೂರದೂರದಿಂದ ಬರುತ್ತಾರೆ. ಅವರೆಲ್ಲರಿಗೂ ಭೂರಿ ಭೋಜನ ನೀಡುತ್ತೇನೆ. ಅವರಿಗೆ ಊಟ ನೀಡಿ, ನಾನು ಸಂತೃಪ್ತನಾಗುತ್ತೇನೆ. ಅವರಿಗೂ ಖುಷಿಯಾಗುತ್ತದೆ. ಹೀಗೆ ಕಲ್ಪಿಸಿಕೊಳ್ಳುತ್ತಿರುವಾಗಲೇ ನೀವು ನನಗೆ ಒದ್ದಿರಿ. ಆಗ ನಾನು ಅವರಿಗೆ ಮೊಸರನ್ನು ಬಡಿಸುತ್ತಿದ್ದೆ. ಅಷ್ಟೊತ್ತಿಗೆ ನೀವು ಒದ್ದಿರಿ. ಗಡಿಗೆ ಒಡೆದು ಚೂರಾಗಿ ಮೊಸರು ಎಲ್ಲೆಡೆ ಹರಡಿಕೊಂಡಿತು.

'' ಧಣಿ ನೀವು ನಿಜಕ್ಕೂ ಪವಾಡ ಮಾಡಿದಿರಿ! ಗಡಿಗೆ ಒಡೆಯಿತು. ನನ್ನ ಕಲ್ಪನಾ ಭೋಜನ ಮಾಯವಾಯಿತು. ಸಾಧುಸಂತರು, ಮುನಿಗಳು ಮಾಯವಾದರು. ಅವೆಲ್ಲವೂ ಬರೀ ಕಲ್ಪನೆ. ಕಲ್ಪನೆಯ ಬಲೆ. ನಾನು ಎಚ್ಚೆತ್ತುಕೊಂಡೆ. ಕೇವಲ ಸಾಕ್ಷಿಯಾಗಿ ನಿಂತಿದ್ದೇನೆ.''

ಬುಳಕಿರಾಮನ ಕಣ್ಣುಗಳಿಂದ ಮಮತೆಯ ಭಾಷ್ಪ ಸುರಿಯುತ್ತಿತ್ತು. ಆತನ ಶರೀರ ಆನಂದದಿಂದ ಕಂಪಿಸುತ್ತಿತ್ತು. ಬುಳಕಿರಾಮನ ಇಂಥ ಸ್ಥಿತಿಯನ್ನು ಗುಲಾಲ ಮೊದಲ ಬಾರಿಗೆ ನೋಡಿದ್ದ. ಬುಳಕಿ ರಾಮ ತಾವು ಸಾಕ್ಷಿಯಾದದ್ದು ಮಾತ್ರವಲ್ಲದೇ ಗುಲಾಲನನ್ನೂ ತಮ್ಮೊಂದಿಗೆ ಈ ಬಿರುಗಾಳಿಯ ಮೂಲಕ ಕರೆದೊಯ್ದಿದ್ದರು. ಗುಲಾಲನ ಕಣ್ಣಿಗೆ ಕವಿದಿದ್ದ ಪರದೆ ಬಿದ್ದುಹೋಯಿತು. ಗುಲಾಲ ಸಂತೋಷದಿಂದ ಹೇಳಿದರು, '' ನಾನು ಗುರುವಿಗಾಗಿ ಊರೂರು ಅಲೆದೆ. ಆದರೆ ಗುರು ನನ್ನ ಮನೆಯಲ್ಲೇ ಇದ್ದಾರೆ! ನನ್ನ ದನಗಳನ್ನು ಮೇಯಿಸುತ್ತಾ, ಹೊಲಗಳನ್ನು ಉಳುತ್ತಾ!''

ಬುಳಕಿರಾಮನ ಪಾದಕ್ಕೆ ಗುಲಾಲ ಎರಗಿದ. ಬುಳಕಿರಾಮ ಬುಲ್ಲೇಶಹರಾದರು.[87]

ಮನಸ್ಸು ಇಲ್ಲವಾಗಿಸುವ ಕ್ರಮ ಧ್ಯಾನ. ಮನಸ್ಸು ಇಲ್ಲವಾದಾಗ, ನಿಮ್ಮಲ್ಲಿ ಉಳಿಯುವುದು ಕೇವಲ ಸುಂದರ ದೇಹ, ಯಾವುದೇ ಗದ್ದಲವಿಲ್ಲದ ಪ್ರಶಾಂತ, ನಿರ್ಮಲ ಮಿದುಳು. ಮಿದುಳು ಮನಸ್ಸಿನಿಂದ ಮುಕ್ತವಾದ ಬಳಿಕ, ಮಿದುಳಿನ ಮುಗ್ಧತೆಗೆ ಹೊಸ ನಿವೇಶನದ ಅರಿವಾಗುತ್ತದೆ. ಅದನ್ನು ನಾವು ಆತ್ಮ ಎನ್ನುತ್ತೇವೆ.

ನೀವು ಆತ್ಮವನ್ನು ಕಂಡುಕೊಂಡರೆ, ಮನೆಯನ್ನು ಕಂಡುಕೊಂಡ ಹಾಗೆ. ನೀವು ನಿಮ್ಮ ಪ್ರೀತಿಯನ್ನು, ಕರಗದ ಭಾವೋತ್ಸಾಹವನ್ನು ಕಂಡುಕೊಂಡಂತೆ. ಆಗ ನೀವು ಇಡೀ ಅಸ್ತಿತ್ವ ನಿಮ್ಮೊಂದಿಗೆ ನರ್ತಿಸಲು, ಹಾಡಲು, ಸಂತೋಷಿಸಲು ತವಕಿಸುತ್ತಿರುವುದನ್ನು ಅನುಭವಿಸುತ್ತೀರಿ, ಗಾಢವಾಗಿ ಬದುಕಲು, ಸಂತೋಷದಿಂದ ಸಾಯಲು. ಇವೆಲ್ಲವೂ ತಮ್ಮಷ್ಟಕ್ಕೆ ತಾವೇ ಸಂಭವಿಸುವಂಥದು. [88]

ಕೈಯಲ್ಲಿ ದೀಪವನ್ನು ಹಿಡಿದು ಶೋಧಿಸುವುದು ಭಾರತದ ಪದ್ಧತಿಯಲ್ಲ. ಕಗ್ಗತ್ತಲ ರಾತ್ರಿಯಲ್ಲಿ ಸೀಳುವ ಮಿಂಚಿನಲ್ಲಿ ಶೋಧಿಸುವುದು ನಮ್ಮ ಪದ್ಧತಿ. ಒಮ್ಮೆ ಮಿಂಚಿದರೆ, ಹಠಾತ್ತನೆ ಎಲ್ಲವೂ ಗೋಚರಿಸುತ್ತವೆ. ಮೊದಲು ಸ್ವಲ್ಪ ಅನಂತರ ಸ್ವಲ್ಪ ಕೊನೆಗೆ ಇನ್ನೂ ಸ್ವಲ್ಪ ಕಾಣುವುದಲ್ಲ. ಎಲ್ಲವೂ ತಟ್ಟನೆ ಗೋಚರಿಸುತ್ತವೆ. ಕಣ್ಣಿವೆ ಕಾಣುವವರೆಗೂ, ದಿಗಂತದವರೆಗಿನ ಎಲ್ಲವನ್ನೂ ಏಕಕಾಲಕ್ಕೆ ಮಿಂಚು ಸಾಕ್ಷಾತ್ಕಾರ ಮಾಡಿಸುತ್ತದೆ. ಕಲ್ಪನೆಯ ಬದಲಾವಣೆಗೆ ಮಾರ್ಗವಿಲ್ಲ ಏಕೆಂದರೆ ಸತ್ಯ ಮೊದಲೇ ಕಂಡಿರುತ್ತದೆ.

ವಿಚಾರದ, ಚಿಂತನೆಯ ಮೂಲಕ ಸತ್ಯವನ್ನು ಅರಸುವುದಕ್ಕೆ ಗ್ರೀಸ್‌ನಲ್ಲಿ ತರ್ಕ, ವಿವೇಚನೆ ಎಂದು ಕರೆಯುತ್ತಾರೆ. ಭಾರತದಲ್ಲಿ ನಾವು ಅನುಭವ ಅಂತರದೃಷ್ಟಿ ಎಂದೆನ್ನುವುದು ಮಿಂಚಿನ ಸೆಲೆಯಂತೆ ಎಲ್ಲವನ್ನೂ ಒಂದೇ ಬಾರಿಗೆ ದೃಗ್ಗೋಚರ ಮಾಡಿಸುತ್ತವೆ. ಆದ್ದರಿಂದ ಸತ್ಯದ ಯಥಾರ್ಥವನ್ನು, ಪರಿಪೂರ್ಣತೆಯಲ್ಲಿ ಇದ್ದ ಹಾಗೆ ಕಾಣಬಹುದು. [89]

ಲಾಲ್, ಐಲುಗಳಲ್ಲೇ ಐಲು. ಆತನ ಜೀವನ ಯಾತ್ರೆ, ಜ್ಞಾನೋದಯದ ಗಂಗೆಯ ಹರಿವಿನ ಪ್ರಾರಂಭ ಬಲು ವಿಶಿಷ್ಟ. ಅವರು ಎಲ್ಲಿ ಹುಟ್ಟಿದರು, ಯಾವ ಹಳ್ಳಿಯಲ್ಲಿ ಜನಿಸಿದರು, ಆತನ ತಂದೆ-ತಾಯಿ ಯಾರು ಮುಂತಾದ ಮಾಹಿತಿಗಳು ಇಲ್ಲ. ಅದರ ಅಗತ್ಯವೂ ಇಲ್ಲ. ಅವರ ಯೋಗ ಶಕ್ತಿ ಹೇಗೆ ಹುಟ್ಟಿಕೊಂಡಿತು, ಅವರಿಗೆ ಜ್ಞಾನೋದಯವಾಗಿದ್ದು ಹೇಗೆ, ರಾಜಸ್ತಾನದ ಈ ಬಡವನ ಕೈಯಲ್ಲಿದ್ದ ಮೊಂಬತ್ತಿ ಝಗ್ಗೆಂದು ಹೊತ್ತಿಕೊಂಡು ಉರಿದದ್ದು ಹೇಗೆ, ಅಮಾವಾಸ್ಯೆ ಹುಣ್ಣಿಮೆಯಾದದ್ದು ಹೇಗೆ ಎಂಬುದು ಮುಖ್ಯ. ಲಾಲ್‌ರ ಜೀವನದೊಳಗೆ ದೇವರು ಈ ರೀತಿಯಲ್ಲಿ ಪ್ರವೇಶಿಸಬಹುದೆಂದು ಯಾರೂ ಯೋಚಿಸಿರಲಿಲ್ಲ.

ಲಾಲ್ ತಮ್ಮ ಮದುವೆಯ ದಿಬ್ಬಣದೊಂದಿಗೆ ಮನೆಗೆ ತಮ್ಮ ಸ್ನೇಹಿತರೊಂದಿಗೆ ಹಿಂತಿರುಗುತ್ತಿದ್ದಾಗ ಲಿಖ್ಮದೇಸರ ಎಂಬ ಹಳ್ಳಿಯ ಮೂಲಕ ಹಾದುಹೋಗುತ್ತಿದ್ದರು. ಅಲ್ಲಿ ಅಸಾಧಾರಣ ಸಂತ ಕುಂಭನಾಥ ವಾಸಿಸುತ್ತಿದ್ದರು. ಆತ ಜ್ಞಾನಿ. ಆತ ಧರ್ಮ, ಜಾತಿ, ಸಂಪ್ರದಾಯಗಳಿಗೆ ಸೊಪ್ಪು ಹಾಕಿದವರಲ್ಲ. ಆತ ಧಾರ್ಮಿಕರಾಗಿದ್ದರೂ, ಯಾವುದೇ ಧರ್ಮದ ಬಂಧನಕ್ಕೆ ಸಿಲುಕಿದವರಲ್ಲ. ದೇವರು ಏನನ್ನೇ ಕೊಡಲಿ, ಆತ ಎರಡೂ ಕೈಗಳಿಂದ ಹಂಚುತ್ತಿದ್ದರು. ಯಾರು ಹಂಚುತ್ತಾರೋ, ಅವರಿಗೆ ದೇವರು ಮತ್ತಷ್ಟು ಕೊಡುತ್ತಾನೆಂಬುದು ಅವನ ನಂಬಿಕೆಯಾಗಿತ್ತು.

ಮದುವೆ ಮುಗಿಸಿ ಮನೆಗೆ ಹೋಗುವಾಗ, ಹೆಂಡತಿಯೊಂದಿಗೆ ತೆರಳುತ್ತಿದ್ದ ಲಾಲರಿಗೆ ಕುಂಬನಾಥರನ್ನು ನೋಡುವ ಆಸೆಯಾಯಿತು. ಅವರ ಕೀರ್ತಿ ಎಲ್ಲೆಡೆ ಪಸರಿಸಿರುವಾಗ ಆ ಹಳ್ಳಿಯ ಮೂಲಕವೇ ಹೋಗುತ್ತಿರುವ ತಾನು ಅವರನ್ನು ನೋಡಬೇಕು ಎಂದುಕೊಂಡರು. ಕುಂಬನಾಥರ ಪರಿಮಳದಲ್ಲಿ ಜ್ವಾಲೆಯೂ ಅಡಗಿತ್ತು. ಅದು ಹೂವಿನ ಸುವಾಸನೆ ಆಗಿರಲಿಲ್ಲ, ಬೆಂಕಿಯ ಜ್ವಾಲೆಯ ಸುಗಂಧವಾಗಿತ್ತು. ಈ ಸುವಾಸನೆಯನ್ನು ಗುರುತಿಸಿದವರು ಅದನ್ನು ಪಡೆಯುತ್ತಿದ್ದರು. ಗುರುತಿಸದವರು ಹಳೇ ಕಂದಾಚಾರಕ್ಕೆ ಅಂಟಿಕೊಂಡವರಿಗೆ ತೊಳಲಾಟವಾಗುತ್ತಿತ್ತು.

"ಅವರನ್ನು ಕಾಣಬೇಕು. ಅವರಂತಹ ಸಂತರಿಂದ ಆಶೀರ್ವಾದ ಪಡೆಯಬೇಕು," ಎಂದು ಲಾಲ ನಿರ್ಧರಿಸಿದರು. ಆತ ಆಗ ತಾನೆ ಮದುವೆಯಾಗಿ ಹೊಸ ಪ್ರಪ್ರಂಚವನ್ನು ಪ್ರವೇಶಿಸಿದ್ದರು. ಸಂತರ ಆಶೀರ್ವಾದ ಪಡೆಯುವುದನ್ನು ಯಾರು ತಪ್ಪಿಸಿಕೊಳ್ಳುತ್ತಾರೆ! ಆದರೆ ತನಗೆ ಎಂತಹ ಆಶೀರ್ವಾದ ದೊರೆಯುತ್ತದೆ ಎಂಬುದು ಅವರಿಗೆ ತಿಳಿದಿರಲಿಲ್ಲ.

ಆತ ಕುಂಬನಾಥರ ಬಳಿಗೆ ಹೋದಾಗ ಆತ ಕಂಡದ್ದೇ ಬೇರೆ. ಅವರು ಸಜೀವ ಸಮಾಧಿಗೆ ಸಿದ್ಧತೆ ಮಾಡುತ್ತಿದ್ದರು. ಹೊಂಡವನ್ನು ತೋಡಿ ಆಗಿತ್ತು. ಅದರೊಳಗೆ ಇಳಿಯಲು ತಯಾರಿ ನಡೆಸುತ್ತಿದ್ದರು. ಅದು ಅವರ ಅಂತಿಮ ಕ್ಷಣಗಳು... ಅವರು ತಮ್ಮ ಆಶೀರ್ವಾದದ ಪ್ರತೀಕವಾಗಿ

ಪ್ರಸಾದ, ಸಿಹಿಯನ್ನು ಹಂಚುತ್ತಿದ್ದರು. ಲಾಲ ಕೂಡ ಪ್ರಸಾದವನ್ನು ಪಡೆದರು. ಸಮಾಧಿಯೊಳಗೆ ಇಳಿಯುವುದಕ್ಕಿಂತ ಮೊದಲು ಕುಂಭನಾಥ ಸುತ್ತಲೂ ನೋಡಿ, ''ಇನ್ನೂ ಸ್ವೀಕರಿಸದವರು ಯಾರಾದರೂ ಇದ್ದಾರೆಯೇ?'' ಎಂದು ಕೂಗಿದರು.

ಸ್ವತಃ ಅವರೇ ಪ್ರಸಾದವನ್ನು ನೀಡಿದ್ದರು. ಎಲ್ಲರೂ ಪಡೆದಿದ್ದರು. ಆದರೆ ಈಗ ಅವರು ಮತ್ತೊಂದು ಪ್ರಸಾದದ ಬಗ್ಗೆ ಮಾತಾಡುತ್ತಿದ್ದಾರೆ. ಕಾಣದಂತಹ, ವಿನಿಮಯ ಮಾಡಿಕೊಳ್ಳಲಾಗದಂತಹ, ವರ್ಗಾಯಿಸಲು ಆಗದಂತಹ ಆದರೂ ಒಂದು ಹೃದಯದಿಂದ ಮತ್ತೊಂದು ಹೃದಯಕ್ಕೆ ಜಿಗಿಯಬಲ್ಲ, ಒಂದು ಕೈಯಿಂದ ಮತ್ತೊಂದು ಕೈಗೆ ಅಲ್ಲದ, ಒಂದು ಆತ್ಮದಿಂದ ಮತ್ತೊಂದಕ್ಕೆ ಸಾಗುವ ಪ್ರಸಾದವದು.

ಜನರು ಸುತ್ತಲೂ ನೋಡಲಾರಂಭಿಸಿದರು. ಪ್ರಸಾದವನ್ನು ಎಲ್ಲರೂ ಪಡೆದಿದ್ದರು. ಯಾವ ಪ್ರಸಾದದ ಬಗ್ಗೆ ಇವರು ಹೇಳುತ್ತಿದ್ದಾರೆ?

ಆಗ ಲಾಲ ಅವರ ಬಳಿ ಹೋಗಿ, ಅವರ ಮುಂದೆ ಕುಳಿತು, ಭಿಕ್ಷುಕನಂತೆ ಎರಡೂ ಕೈಗಳನ್ನು ಚಾಚಿದರು. ಅವರ ಕಣ್ಣುಗಳಲ್ಲಿ ನೀರು ತುಂಬಿತ್ತು. ಆಗ ಅಲ್ಲಿ ಏನೋ ಘಟಿಸಿತು. ಗೌತಮ ಬುದ್ಧ ಹೂವಿನೊಂದಿಗೆ ಹೋದಾಗ ಅವರು ಮತ್ತು ಮಹಾಕಶ್ಯಪರ ನಡುವೆ ನಡೆದದ್ದು ಲಾಲ ಮತ್ತು ಕುಂಭನಾಥನರ ನಡುವೆ ನಡೆದಿತ್ತು. ಬುದ್ಧ ಕೊನೆಪಕ್ಷ ಹೂವನ್ನಾದರೂ ಕೊಟ್ಟಿದ್ದರು. ಆದರೆ ಕುಂಭನಾಥ ಮತ್ತು ಲಾಲನ ಮಧ್ಯೆ ಹೂವಿನ ವಿನಿಮಯವೂ ಆಗಲಿಲ್ಲ.

ಲಾಲ್ ರೂಪಾಂತರಗೊಂಡಿದ್ದರು - ಈ ಶರಣಾಗತಿ ಅವರಲ್ಲಿ ರೂಪಾಂತರಣೆ ತಂದಿತ್ತು. ಮೊದಲ ಬಾರಿಗೆ ಅವರಿಗೆ ಒಳಗಿನ ಅಂತರಂಗದ ಲಾಲನನ್ನು ನೋಡಲು ಸಾಧ್ಯವಾಗಿತ್ತು. ಸುತ್ತಲೂ ಕವಿದ ಕತ್ತಲು ಸರಿಯಿತು. ಮೊದಲ ಬಾರಿಗೆ ಆತ ತನ್ನಲ್ಲಿ ಅಡಗಿರುವ ಸಂಪತ್ತನ್ನು ಕಂಡುಕೊಂಡರು. ಸತ್ವವನ್ನರಿತ ಈ ಮಹಾ ಜ್ಞಾನಿಯ ಬೆಳಕಿನಿಂದಾಗಿ ಕವಿದಿದ್ದ ಕತ್ತಲು ಕರಗಿತು, ಲಾಲ ತನ್ನನ್ನೇ ಹುಡುಕಿಕೊಂಡರು. ಲಾಲ ಕುಂಭನಾಥರ ಪಾದಗಳಿಗೆ ಶರಣಾದರು.

ಕೊನೆ ಕ್ಷಣದಲ್ಲಿ ಕೂಡ ಕುಂಭನಾಥ ದೀಪವನ್ನು ಬೆಳಗಿದರು. ಕೊನೆಯಲ್ಲಿ ಹೋಗುವಾಗಲೂ ಆತ, ''ಪ್ರಸಾದ ಸ್ವೀಕರಿಸುವವರು ಯಾರಾದರೂ ಇದ್ದಾರಾ?'' ಎಂದು ಕೇಳಿದರು. ಪ್ರಸಾದ ಸ್ವೀಕರಿಸ ಬಯಸುವ ಒಬ್ಬನನ್ನು ಕಂಡರು. ಸೇರಿದ ನೂರಾರು ಜನರಲ್ಲಿ ಒಬ್ಬರಿಗೆ ಮಾತ್ರ ಕುಂಭನಾಥನ ಕೂಗು ಕೇಳಿಸಿತ್ತು. ಆತ ಶರಣಾಗಲು ಮುಂದೆ ಬಂದರು. ಶರಣಾಗತನಾಗುವವ ತೃಪ್ತನಾಗುತ್ತಾನೆ. ಕರಗಲು ಒಬ್ಬ ತಯಾರಾಗಿದ್ದ, ಯಾರು ಕರಗುತ್ತಾನೋ ಆತ ಜನ್ಮ ತಾಳುತ್ತಾನೆ.[90]

ಈ ಸಂಗತಿಯನ್ನು ಅರಿಯಬೇಕು. ಜಗತ್ತಿನ ಸಂತರು ಕತೆ, ರೂಪಕಗಳನ್ನು ಹೇಳಿದ್ದಾರೆ, ಏಕೆ? ಸತ್ಯವನ್ನು ಸರಳವಾಗಿ ಹೇಳಬಹುದು. ಅಷ್ಟೊಂದು ಕತೆಗಳನ್ನು ಹೇಳಬೇಕಾದ ಅಗತ್ಯವಿಲ್ಲ. ಆದರೆ ರಾತ್ರಿ ದೀರ್ಘವಾಗಿದೆ. ನಿಮ್ಮನ್ನು ಎಚ್ಚರದ ಸ್ಥಿತಿಯಲ್ಲಿ ಇಡಬೇಕು. ಕತೆಯಿಲ್ಲದಿದ್ದರೆ ನೀವು ನಿದ್ದೆ ಹೋಗುವಿರಿ.

ಬೆಳಿಗ್ಗೆ ಆಗುವ ತನಕ ನಿಮ್ಮನ್ನು ಯಾವುದಾದರೂ ಒಂದರಲ್ಲಿ ತೊಡಗಿಸಿರಬೇಕಾದುದು ಅತ್ಯವಶ್ಯಕ. ಈ ಸಂದರ್ಭದಲ್ಲಿ ಜ್ಞಾನಿಗಳು ಹೇಳಿದ ಕತೆಗಳು ಬಲು ಆಸಕ್ತಿದಾಯಕ.

ಸತ್ಯವನ್ನು ಹೇಳಲು ಆಗುವುದಿಲ್ಲ. ಆದರೆ ಅದು ನಿಮಗೆ ಕಾಣುವ ಹಂತದವರೆಗೆ ನಿಮ್ಮನ್ನು ಕರೆದೊಯ್ಯಬಹುದು. ಪ್ರಶ್ನೆಯಿರುವುದು, ನಿಮ್ಮನ್ನು ಈ ಹಂತದವರೆಗೆ ಕರೆದುಕೊಂಡು ಹೋಗುವ ಬಗೆ ಹೇಗೆ ಎಂಬುದು.

ಸರ್ಮದರ ಜೀವನದಲ್ಲಿ ಒಂದು ಕತೆಯಿದೆ. ಆತ ತನ್ನ ಶಿಷ್ಯರಿಗೆ ಕಲಿಸುತ್ತಿದ್ದಾಗ ಇದ್ದಕ್ಕಿದ್ದಂತೆ ನುಡಿದರು, ''ಈ ಕೋಣೆಯಿಂದ ಹೊರನಡೆಯಿರಿ. ಏನೋ ಸಂಭವಿಸುತ್ತಿದೆ.'' ಅವರೆಲ್ಲರೂ ಹೊರಬಂದರು.

ಗೂಳಿ ಒಂದನ್ನು ಒಬ್ಬಾತ ಹಿಡಿದು ಎಳೆದಾಡುತ್ತಿದ್ದ. ಆದರೆ ಆ ಗೂಳಿ ಕೂಡ ಬಲಿಷ್ಠವಾಗಿತ್ತು. ಈತ ಕೂಡ ಬಲಿಷ್ಠನಾಗಿದ್ದ. ಅದು ಎಷ್ಟೆಂದರೂ ಗೂಳಿ ತಾನೆ. ಆತ ಅದನ್ನು ಎಳೆಯಲು ಪ್ರಯತ್ನಿಸುತ್ತಿದ್ದರೂ, ಗೂಳಿ ಆತನನ್ನು ಎಳೆದುಕೊಂಡು ಹೋಗುತ್ತಿತ್ತು.

ಈ ದೃಶ್ಯವನ್ನು ಸರ್ಮದ ತಮ್ಮ ಶಿಷ್ಯರಿಗೆ ತೋರಿಸಿದರು. ''ಇದೇ ನಿಮ್ಮ ಸ್ಥಿತಿ,'' ಎಂದರು. ಹಾಗೆಂದರೇನು? ಎಂದು ಶಿಷ್ಯರು ಕೇಳಿದ್ದಕ್ಕೆ, ''ಇದು ನನ್ನ ಮತ್ತು ನಿಮ್ಮ ನಡುವಿನ ಪರಿಸ್ಥಿತಿಯಂತಿದೆ. ಆದರೆ ಆತನಷ್ಟು ನಾನು ಮೂರ್ಖನಲ್ಲ,'' ಎಂದರು ಸರ್ಮದ್.

ಗೂಳಿಯನ್ನು ಎಳೆಯುತ್ತಿರುವ ವ್ಯಕ್ತಿಯ ಸಮೀಪ ಹೋಗಿ ಸರ್ಮದ್ ಕೇಳಿದರು, ''ಮೊದಲ ಬಾರಿಗೆ ಗೂಳಿಯನ್ನು ಕರೆದೊಯ್ಯುತ್ತಿರುವಂತಿದೆ, ಅಲ್ಲವೇ? '' ಅದಕ್ಕೆ ಆತ ನುಡಿದ, '' ನಾನು ಪಟ್ಟಣದಿಂದ ಬಂದ ಹೊಸ ಆಳು. ನನಗೆ ಏನು ಮಾಡಬೇಕೋ ತಿಳಿಯದಾಗಿದೆ. ನಾನು ಒಂದು ಅಡಿ ಎಳೆದರೆ, ಎತ್ತು ನಾಲ್ಕು ಅಡಿ ಎಳೆಯುತ್ತದೆ! ಒಂದು ತಾಸಿನಿಂದ ಇದೇ ನಡೆಯುತ್ತಿದೆ. ಇದು ಮುಗಿಯುವ ಸೂಚನೆಯೇ ಕಾಣುತ್ತಿಲ್ಲ.''

ಸರ್ಮದ್ ಹೇಳಿದರು, '' ಅದನ್ನು ಬಿಟ್ಟುಬಿಡು. ನಿನಗೆ ಹಳ್ಳಿ ಬಗ್ಗೆ ಗೊತ್ತಿಲ್ಲ. ಅದರಲ್ಲೂ ವಿಶೇಷವಾಗಿ ಗೂಳಿಯ ಭಾಷೆ ಗೊತ್ತಿಲ್ಲ.''

ಸರ್ಮದ್ ಕೈಯಲ್ಲಿ ಹಸುರು ಹುಲ್ಲನ್ನು ಹಿಡಿದು ಎತ್ತಿನ ಮುಂದೆ ಸಾಗುತ್ತಿದ್ದಂತೆ ಅದು ಅವರ ಹಿಂದೆ ತಾನಾಗಿಯೇ ಹೆಜ್ಜೆ ಹಾಕತೊಡಗಿತು. ಆತ ಹಗ್ಗವನ್ನು ಮುಟ್ಟಲೇ ಇಲ್ಲ. ಆತ ವೇಗವಾಗಿ ನಡೆದಂತೆ ಎತ್ತು ಕೂಡ ವೇಗವಾಗಿ ಅವರನ್ನು ಹಿಂಬಾಲಿಸತೊಡಗಿತು.

ಇದನ್ನು ಕಂಡು ಆ ವ್ಯಕ್ತಿ ಸಂತೋಷದಿಂದ, '' ಇದು ನಿಜಕ್ಕೂ ಆಶ್ಚರ್ಯಕರ. ಎಳೆದರೂ ಬರೆದ ಎತ್ತು ಮುಟ್ಟದಿದ್ದರೂ ವೇಗವಾಗಿ ಹೋಗುತ್ತಿದೆ. ಎಂಥ ಸೋಜಿಗ!'' ಎಂದ.

ಸರ್ಮದ್ ಹೇಳಿದರು, ''ಸ್ವಲ್ಪ ಹುಲ್ಲನ್ನು ತೆಗೆದುಕೋ. ಆದರೆ ಎತ್ತಿಗೆ ತಿನ್ನಲು ಅವಕಾಶ ಕೊಡಬೇಡ. ಕೊಟ್ಟರೆ ನಿನಗೆ ತೊಂದರೆ. ಎತ್ತು ಏನಾದರೂ ತೊಂದರೆ ಕೊಟ್ಟರೆ ಓಡಲಾರಂಭಿಸು. ಅದೂ ಕೂಡ ನಿನ್ನ ಹಿಂದೆಯೇ ಓಡಲಾರಂಭಿಸುತ್ತದೆ. ಆದರೆ ನೀನು ಮನೆ ಸೇರಿಕೊಳ್ಳುತ್ತೀಯಾ.''

ಸರ್ಮದ್ ತನ್ನ ಶಿಷ್ಯರಿಗೆ ಹೇಳಿದ, ''ನಿಮ್ಮೊಂದಿಗೆ ನಾನು ಮಾಡುತ್ತಿರುವುದು ಕೂಡ ಇದನ್ನೇ. ಎಲ್ಲ ಕತೆ, ರೂಪಕಗಳೆಲ್ಲ ಮತ್ತೇನೂ ಅಲ್ಲ ಹಸಿರು ಹುಲ್ಲು.''[91]

ಅಷ್ಟಾವಕ್ರ ಸತ್ಯ ನುಡಿಯುವವರು. ಆತ ಸತ್ಯಕ್ಕೆ ಮತ್ತೇನನ್ನೂ ಸೇರಿಸದೇ ಇದ್ದದ್ದನ್ನು ಇದ್ದ ಹಾಗೆ ಹೇಳುತ್ತಿದ್ದರು. ಅವರಿಗೆ ಪ್ರೇಕ್ಷಕರು ಮುಖ್ಯವಾಗಿರಲಿಲ್ಲ. ಶ್ರೋತೃಗಳು ಅರ್ಥ ಮಾಡಿಕೊಳ್ಳುತ್ತಾರೋ ಇಲ್ಲವೋ ಎಂಬುದೂ ಅವರಿಗೆ ಮುಖ್ಯವಾಗಿರಲಿಲ್ಲ.

ಅಷ್ಟಾವಕ್ರರ ಬಗ್ಗೆ ಹೆಚ್ಚು ವಿಷಯಗಳು ಗೊತ್ತಿಲ್ಲ. ಆತ ಸಾಮಾಜಿಕ, ರಾಜಕೀಯ ವ್ಯಕ್ತಿ ಅಲ್ಲ. ಹೀಗಾಗಿ ಅವರ ಬಗ್ಗೆ ಹೆಚ್ಚಿನ ಐತಿಹಾಸಿಕ ವಿವರಗಳು ಗೊತ್ತಾಗಿಲ್ಲ. ಕೆಲವು ಸಂಗತಿಗಳು ಮಾತ್ರ ಗೊತ್ತಾಗಿವೆ. ಅವು ನಂಬಲಾಗದಷ್ಟು ವಿಚಿತ್ರ, ಸೋಜಿಗ. ಆದರೆ ನೀವು ಅರ್ಥ ಮಾಡಿಕೊಂಡರೆ ಅದರ ಆಳವಾದ ಅರ್ಥ ತೆರೆದುಕೊಳ್ಳುತ್ತದೆ.

ಮೊದಲ ಘಟನೆ ಅವರು ಹುಟ್ಟುವುದಕ್ಕಿಂತ ಮೊದಲಿನದು. ತಾಯಿ ಗರ್ಭದಲ್ಲಿದ್ದಾಗ ಸಂಭವಿಸಿದ್ದು. ಆತನ ತಂದೆ ಮಹಾನ್ ವಿದ್ವಾಂಸ. ಅಷ್ಟಾವಕ್ರ ತಾಯಿಯ ಗರ್ಭದಲ್ಲಿದ್ದಾಗ, ಆತನ ತಂದೆ ಪ್ರತಿದಿನವೂ ವೇದವನ್ನು ಪಠಿಸುತ್ತಿದ್ದರು. ಅದನ್ನು ಆತ ತಾಯಿಯ ಗರ್ಭದೊಳಗಿನಿಂದಲೇ ಕೇಳುತ್ತಿದ್ದರು.

ಒಂದು ದಿನ ತಾಯಿಯ ಗರ್ಭದೊಳಗಿಂದ ಒಂದು ಧ್ವನಿ ಮೊಳಗಿತು, '' ನಿಲ್ಲಿಸು! ಇವೆಲ್ಲ ಶುದ್ಧ ಅವಿವೇಕ, ಅಸಂಬದ್ಧ. ಈ ಶಬ್ದಪುಂಜಗಳಿಗೆ ಅರ್ಥವೇ ಇಲ್ಲ. ಇವು ಕೇವಲ ಪದಗಳು. ಧರ್ಮಶಾಸ್ತ್ರಗಳಲ್ಲಿ ಜ್ಞಾನ ಎಲ್ಲಿದೆ? ಜ್ಞಾನವು ನಮ್ಮೊಳಗಿರುವುದು. ಶಬ್ದಗಳಲ್ಲಿ ಸತ್ಯವೆಲ್ಲಿದೆ? ಸತ್ಯವಿರುವುದು ನಮ್ಮೊಳಗೆ.''

ಸ್ವಾಭಾವಿಕವಾಗಿ ಆತನ ತಂದೆಗೆ ಕೋಪ ಬಂದಿತು. ಮೊದಲಾಗಿ ತಂದೆ, ಅಲ್ಲದೇ ಆತ ಮಹಾ ವಿದ್ವಾಂಸ ಬೇರೆ. ಮಗ, ತಾಯಿಯ ಗರ್ಭದಿಂದಲೇ, ಅವನಿನ್ನೂ ಹುಟ್ಟೇ ಇಲ್ಲ ಈಗಾಗಲೇ ಇಂಥ ಮಾತುಗಳನ್ನಾಡುತ್ತಿದ್ದಾನೆ. ಆತನಿಗೆ ಕೋಪ ಮತ್ತಷ್ಟು ಏರಿತು. ತಂದೆಯ ಅಹಂ, ವಿದ್ವಾಂಸನ ಅಹಂಕಾರಗಳಿಗೆ ನೇರ ಪೆಟ್ಟು...... ಆತ ಮಹಾನ್ ವಿದ್ವಾಂಸ, ಮಹಾನ್ ಚರ್ಚಾಪಟು, ಶಾಸ್ತ್ರಪ್ರವೀಣ.

ಆ ಸಿಟ್ಟಿನಲ್ಲಿ ಇನ್ನೂ ಹುಟ್ಟದಿರುವ ಮಗುವಿಗೆ ಶಾಪ ನೀಡಿದ. ಹುಟ್ಟುವಾಗಲೇ ಅಂಗಾಂಗಳು ಎಂಟು ಕಡೆ ವಕ್ರವಾಗಿರಲಿ ಎಂದು ಶಾಪ ನೀಡಿದ. ಅದಕ್ಕಾಗಿ ಮಗನಿಗೆ ಅಷ್ಟಾವಕ್ರ ಎಂಬ ಹೆಸರು ಬಂತು. ಆತನ ಅಂಗಗಳು ಎಂಟು ಕಡೆಗಳಲ್ಲಿ ವಕ್ರ, ಊನ ಆಗಿದ್ದವು. ತನ್ನ ಸಿಟ್ಟಿನಲ್ಲಿ ತಂದೆ, ಮಗನನ್ನು ವಿಕಲಾಂಗನನ್ನಾಗಿ ಪರಿವರ್ತಿಸಿದ್ದ.

ಅಷ್ಟಾವಕ್ರರಿಗೆ ಹನ್ನೆರಡು ವರ್ಷಗಳಾಗಿದ್ದಾಗ, ಜನಕ ಮಹಾರಾಜ ಚರ್ಚಾಸ್ಪರ್ಧೆ ಏರ್ಪಡಿಸಿದ್ದ. ಇಡಿ ರಾಷ್ಟ್ರದ ಎಲ್ಲ ಪಂಡಿತರನ್ನು ಆಹ್ವಾನಿಸಿದ್ದ. ಚರ್ಚಾಸ್ಪರ್ಧೆಯಲ್ಲಿ ಜಯಗಳಿಸಿದವರಿಗೆ ಚಿನ್ನ ಮತ್ತು ವಜ್ರದ ಆಭರಣಗಳಿಂದ ಅಲಂಕರಿಸಿದ ಒಂದು ಸಾವಿರ ಆಕಳುಗಳನ್ನು ಬಹುಮಾನ ಕೊಡುವುದಾಗಿ ಘೋಷಿಸಿದ.

ಅದೊಂದು ಅಪೂರ್ವವಾದ ಚರ್ಚಾಸ್ಪರ್ಧೆ. ಅಷ್ಟಾವಕ್ರನ ತಂದೆಯೂ ಭಾಗವಹಿಸಿದ್ದ. ಸಂಜೆಯಾಗುವ ಹೊತ್ತಿಗೆ ಅಷ್ಟಾವಕ್ರರಿಗೆ ಸುದ್ದಿ

ತಿಳಿಯಿತು, ತಂದೆ ಸೋಲುತ್ತಿದ್ದಾನೆ ಎಂದು. ಎಲ್ಲರನ್ನೂ ಪರಾಭವಗೊಳಿಸಿದ ಅಷ್ಟಾವಕ್ರನ ತಂದೆ ವಂದಿನ್ ಎಂಬ ಪಂಡಿತನಿಗೆ ಸೋಲತೊಡಗಿದ. ಸ್ಪರ್ಧೆ ನಿರ್ಣಾಯಕ ಹಂತ ಸಮೀಪಿಸುತ್ತಿತ್ತು. ಸೋಲು ಈಗಲೋ ಆಗಲೋ ಎನ್ನುವಷ್ಟು ಸಮೀಪವಾಗಿತ್ತು.

ಆ ಸಮಯದಲ್ಲಿ ಅಷ್ಟಾವಕ್ರ ಅಲ್ಲಿಗೆ ಆಗಮಿಸಿದರು. ಎಲ್ಲರ ಗಮನ ಆತನ ಕಡೆಗೆ ಹರಿಯಿತು. ವಿದ್ವಾಂಸರ ಜಂಗುಳಿಯೇ ಅಲ್ಲಿ ನೆರೆದಿತ್ತು. ಅಷ್ಟಾವಕ್ರರ ದೇಹ ಎಂಟು ಕಡೆ ತಿರುಚಿಹೋಗಿತ್ತು, ಬಾಗಿತ್ತು. ಆತನ ವಿಚಿತ್ರ ಮೈಮಾಟ ಮತ್ತು ನಡಿಗೆಯನ್ನು ಕಂಡು ಜನರು ನಗುತ್ತಿದ್ದರು. ಆತನ ನಡೆಯೇ ನಗುವಿನ ವಿಷಯವಾಯಿತು.

ಅಷ್ಟಾವಕ್ರ ಅಲ್ಲಿಗೆ ಆಗಮಿಸಿದ ಕೂಡಲೇ ಎಲ್ಲರೂ ನಗತೊಡಗಿದರು. ಅಷ್ಟಾವಕ್ರರೂ ನಕ್ಕರು. ಅದನ್ನು ಕಂಡು ಜನಕ ಕೇಳಿದ, ''ಇಲ್ಲಿ ನೆರೆದವರೆಲ್ಲರೂ ನಗುತ್ತಿದ್ದಾರೆ. ಅವರೇಕೆ ನಗುತ್ತಿದ್ದಾರೆಂಬುದು ನನಗೆ ಗೊತ್ತು. ಆದರೆ ಮಗು, ನೀನೇಕೆ ನಗುತ್ತಿರುವೆ?'' ಅಷ್ಟಾವಕ್ರ ಹೇಳಿದರು, ''ಚಮ್ಮಾರರು, ಮೋಚಿಗಳು ಸೇರಿ ಸತ್ಯದ ಬಗ್ಗೆ ಚರ್ಚಿಸುತ್ತಿರುವುದನ್ನು ನೋಡಿ ನಗು ಬಂತು.'' - ಈ ವ್ಯಕ್ತಿ ಬಲು ವಿರಳನಾಗಿದ್ದಿರಬೇಕು - ''ಈ ಮೋಚಿಗಳಿಗೇನು ಕೆಲಸ ಇಲ್ಲಿ? ಅವರೇನು ಮಾಡುತ್ತಿದ್ದಾರೆ?''

ಚಮ್ಮಾರರು!! ಸಭೆಯಲ್ಲಿ ಇದ್ದಕ್ಕಿದ್ದಂತೆಯೇ ಮೌನ. ಜನಕರಾಜ ಕೇಳಿದ, ''ನಿನ್ನ ಮಾತಿನ ಅರ್ಥವೇನು?''

ಅಷ್ಟಾವಕ್ರ ನುಡಿದರು, ''ಇದು ಸರಳ, ನೇರ ವಿಷಯ. ಅವರು ಕೇವಲ ಚರ್ಮವನ್ನು ಮಾತ್ರ ನೋಡಬಲ್ಲರೇ ವಿನಃ ನನ್ನನ್ನಲ್ಲ. ನನ್ನಷ್ಟು ಸರಳ ಮತ್ತು ಶುದ್ಧ ವ್ಯಕ್ತಿಗಳನ್ನು ನೀವು ನೋಡಲಾರಿರಿ. ಅವರು ನನ್ನನ್ನು ಕಾಣುತ್ತಿಲ್ಲ. ನನ್ನ ದೇಹದ ಅಂಕು ಡೊಂಕು, ತಿರುಚನ್ನು ಕಾಣುತ್ತಿದ್ದಾರೆ. ಆದ್ದರಿಂದ ಮೋಚಿ ಅಥವಾ ಚಮ್ಮಾರ ಎಂದು ಹೇಳಿದೆ. ಅವರು ಚರ್ಮ ನೋಡಿ ನಿರ್ಧರಿಸುತ್ತಾರೆ. ಓ ದೊರೆಯೇ, ದೇಗುಲದ ಗೋಪುರ ಡೊಂಕಾದರೆ, ಆಗಸ ಡೊಂಕಾಗುವುದೇ? ಮಣ್ಣಿನ ಮಡಿಕೆ ಮುರಿದರೆ ಅದರೊಳಗಿನ ಗಾಳಿಯೂ ಮುರಿಯುವುದೇ? ನನ್ನ ದೇಹ ಡೊಂಕಾಗಿರಬಹುದು. ಆದರೆ ನಾನು ಡೊಂಕಲ್ಲ. ಒಳಗಿರುವವನನ್ನು ಕಾಣಿರಿ. ನನಗಿಂತಲೂ ಪರಿಶುದ್ಧ, ನೇರವಾದದ್ದನ್ನು ನೀವು ಮತ್ತಲ್ಲೂ ಕಾಣಿರಿ.''

ಅಷ್ಟಾವಕ್ರರ ಈ ಮಾತು ಮಹತ್ತರ ಘೋಷಣೆ. ಆ ಮಾತಿಗೆ ಇಡೀ ಸಭೆ ದಂಗು ಬಡಿಯಿತು. ದಟ್ಟ ಮೌನ ಎಲ್ಲೆಡೆ ಆವರಿಸಿತ್ತು. ಜನಕರಾಜ ಬೆರಗಾಗಿದ್ದ. ಅಷ್ಟಾವಕ್ರನ ಡೊಂಕು ದೇಹವನ್ನು ನೋಡಿ ನಕ್ಕಿದ್ದಕ್ಕೆ ಪಶ್ಚಾತ್ತಾಪ ಪಟ್ಟುಕೊಂಡ.


ಇಡೀ ದಿನ ರಾಜನಿಗೆ ಏನನ್ನೂ ನುಡಿಯಲು ಸಾಧ್ಯವಾಗಲಿಲ್ಲ. ಮರುದಿನ ಬೆಳಿಗ್ಗೆ ವಿಹಾರಕ್ಕೆ ಹೊರಟಾಗ, ಹಾದಿಯಲ್ಲಿ ಅಷ್ಟಾವಕ್ರರನ್ನು ನೋಡಿದ.

ಜನಕರಾಜ ಕುದುರೆಯಿಂದ ಕೆಳಗಿಳಿದು ಅಷ್ಟಾವಕ್ರರ ಪಾದಕ್ಕೆರಗಿದ. ಹಿಂದಿನ ದಿನ ಎಲ್ಲರ ಮುಂದೆ ಆತನಿಗೆ ಧೈರ್ಯ ಬಂದಿರಲಿಲ್ಲ. ಅಂದು ಆತ ಕೇಳಿದ್ದ ''ನೀನು ಏಕೆ ನಗುತ್ತಿರುವೆ, ಮಗು?'' ಎಂದು. ಅಷ್ಟಾವಕ್ರರ ವಯಸ್ಸು ಆತನ ಬಗ್ಗೆ ಹಿಂದಿನ ದಿನ ರಾಜನಿಗೆ ಬೇರೆ ಅಭಿಪ್ರಾಯವನ್ನೇ ಮೂಡಿಸಿತ್ತು. ಇಂದು ಅಷ್ಟಾವಕ್ರರ ವಯಸ್ಸನ್ನು ಗಮನಿಸದೆಯೇ ಆತ ಅವರ ಚರಣಗಳಿಗೆ ಸಾಷ್ಟಾಂಗವಾಗಿ ನಮಿಸಿದ.

ಜನಕ ಹೇಳಿದ, ''ಪೂಜ್ಯರೇ! ನೀವು ಅರಮನೆಗೆ ಒಮ್ಮೆ ಬರಬೇಕು. ನನ್ನ ಕೆಲವು ಸಂದೇಹಗಳನ್ನು ನಿವಾರಿಸಬೇಕು. ನನಗೆ ಅರ್ಥವಾಯಿತು. ನಿನ್ನೆ ದಿನ ಇಡೀ ರಾತ್ರಿ ನಾನು ನಿದ್ದೆ ಮಾಡಲಿಲ್ಲ. ಕೇವಲ ದೇಹವನ್ನು ಗುರುತಿಸಬಲ್ಲವರ ಅರಿವಿನ ಆಳ ಎಷ್ಟು ಮಹಾ ಇದ್ದೀತು? ಆತ್ಮವನ್ನು ಕುರಿತು ಚರ್ಚಿಸಲು ಕುಳಿತವರೊಳಗೆ ದೈಹಿಕ ಆಕರ್ಷಣೆ, ವಿಕರ್ಷಣೆ ಇನ್ನೂ ಇದೆ. ರಾಗ, ದ್ವೇಷಗಳು ಇನ್ನೂ ಇವೆ. ಅಮರತ್ವದ ಬಗ್ಗೆ ಚರ್ಚಿಸುತ್ತಾ ಸಾವಿನೆಡೆ ಮುಖ ಮಾಡಿದ್ದಾರೆ! ನೀವು ಬಂದು ನನ್ನ ಕಣ್ಣು ತೆರೆಯಿಸಿದ್ದು ನಿಜಕ್ಕೂ ನನ್ನ ಭಾಗ್ಯ. ನನ್ನ ನಿದ್ರೆ ಕಳೆದಿದೆ. ದಯವಿಟ್ಟು ಬನ್ನಿ!''

ಅರಮನೆಯಲ್ಲಿ ಅಷ್ಟಾವಕ್ರರಿಗೆ ರಾಜ ವೈಭವೋಪೇತ ಸ್ವಾಗತ ನೀಡಿದ. ಹನ್ನೆರಡು ವರ್ಷದ ಅಷ್ಟಾವಕ್ರರನ್ನು ಬಂಗಾರದ ಸಿಂಹಾಸನದ ಮೇಲೆ ಕುಳ್ಳಿರಿಸಲಾಯಿತು. ರಾಜ ಆತನ ಅನೇಕ ಸಂದೇಹಗಳನ್ನು ಪ್ರಶ್ನೋತ್ತರಗಳ ಮೂಲಕ ನಿವಾರಿಸಿಕೊಂಡ.

ಅಷ್ಟಾವಕ್ರರ ಬಗ್ಗೆ ಇದಕ್ಕಿಂತ ಹೆಚ್ಚಿನ ಸಂಗತಿ ನಮಗೆ ಗೊತ್ತಿಲ್ಲ. ಹೆಚ್ಚು ತಿಳಿಯುವ ಅಗತ್ಯವೂ ಇಲ್ಲ. ಇಷ್ಟೇ ಸಾಕು. ವಜ್ರಗಳನ್ನು ನೂರು, ಸಾವಿರವೆಂದು ಅಳೆಯುವುದಿಲ್ಲ. ಕೇವಲ ಕಲ್ಲು, ಹರಳುಗಳನ್ನು ಮಾತ್ರ. ಒಂದೇ ಒಂದು ವಜ್ರ ಸಾಕು. ಅದೇ ಯಥೇಚ್ಛ. [92]



ಮೆಹ್ರಾನ್‌ಗಢ್ ಕೋಟೆ, ಜೋಧ್‌ಪುರ್, ರಾಜಾಸ್ಥಾನ್


ಅತೀಶ ಬಹಳ ಅಪರೂಪದ ಗುರು. ಅಪರೂಪ ಏಕೆಂದರೆ ಆತ ಮೂವರು ಪ್ರಖ್ಯಾತ ಮತ್ತು ಮಹಾನ್ ಗುರುಗಳ ಶಿಷ್ಯರಾಗಿದ್ದವರು. ಆ ಮೂವರು ಈತನಿಗೆ ಕಲಿಸಿದ್ದರು. ಮೂವರು ಜ್ಞಾನಿಗಳ ಶಿಷ್ಯನಾಗುವುದು ಅತಿ ವಿಶೇಷ. ಹಿಂದೆಂದೂ ಆಗಿರಲಿಲ್ಲ, ಮುಂದೆ ಆಗಿಯೂ ಇಲ್ಲ. ಒಬ್ಬ ಜ್ಞಾನಿಯೇ ಸಾಕು. ಅತೀಶ ಮೂರು ಮಹಾನ್ ಜ್ಞಾನಿಗಳ ಬಳಿ ಕಲಿತರು ಎಂಬುದನ್ನು ರೂಪಾಲಂಕಾರಕ್ಕೆ ಬಳಸಿದರೂ, ಇದು ಸತ್ಯ. ಐತಿಹಾಸಿಕ ಕೂಡ.

ಮೊದಲು ಅತೀಶ, ಖ್ಯಾತ ಬೌದ್ಧ ಯೋಗಿ ಧರ್ಮಕೀರ್ತಿ ಜತೆ ಅನೇಕ ವರ್ಷಗಳ ಕಾಲ ಅಧ್ಯಯನ ಮಾಡಿದರು. ಧರ್ಮಕೀರ್ತಿ ಅವರಿಗೆ ಅ-ಮನ ಸ್ಥಿತಿ, ಶೂನ್ಯ, ವಿಚಾರರಹಿತನಾಗಿರುವುದನ್ನು ಕಲಿಸಿದರು. ಮನಸ್ಸಿನಲ್ಲಿರುವ ಎಲ್ಲ ವಿಷಯಗಳನ್ನು ಖಾಲಿ ಮಾಡುವ ಮತ್ತು ಶೂನ್ಯ ಮನಸ್ಕನಾಗುವ ಬಗೆ ಕಲಿಸಿದರು. ಎರಡನೆ ಗುರು ಧರ್ಮರಕ್ಷಿತ, ಬೌದ್ಧ ಗುರು. ಅತೀಶರಿಗೆ ಈತ ಪ್ರೀತಿ ಮತ್ತು ಅನುಕಂಪವನ್ನು ಹೇಳಿಕೊಟ್ಟರು. ಮೂರನೆಯವರು ಮತ್ತೊಬ್ಬ ಬೌದ್ಧ ಗುರು ಮೈತ್ರೇಯ. ಮೈತ್ರೇಯ ಅತೀಶರಿಗೆ ಕ್ರಿಯಾಪ್ರೀತಿ - ಇತರರ ಸಂಕಷ್ಟಗಳನ್ನು ಸ್ವೀಕರಿಸಿ ಅದನ್ನು ತನ್ನ ಹೃದಯದಲ್ಲಿ ಇಟ್ಟುಕೊಳ್ಳುವ ಕಲೆಯನ್ನು ಕಲಿಸಿದರು.

ಮೂರು ಮಹಾಜ್ಞಾನಿಗಳಿಂದ ಕಲಿತ ಅತೀಶರಿಗೆ, ''ಅತೀಶ - ತ್ರಿಮಹಾನ್'' ಎಂಬ ಹೆಸರು ಬಂದಿತು. ಅತೀಶರ ಸಾಮಾನ್ಯ ಜೀವನ, ಹುಟ್ಟು, ಊರು ಮುಂತಾದ ವಿವರಗಳು ಯಾರಿಗೂ ಗೊತ್ತಿಲ್ಲ. ಸುಮಾರು ಹನ್ನೊಂದನೆ ಶತಮಾನದಲ್ಲಿ ಈತ ಬದುಕಿದ್ದರು ಎಂದು ಹೇಳುತ್ತಾರೆ. ಈತ ಹುಟ್ಟಿದ್ದು ಭಾರತದಲ್ಲಿ. ಆತನಲ್ಲಿ ಪ್ರೇಮ ಸಕ್ರಿಯಗೊಂಡ ನಂತರ ಅವರು ಯಾವುದೋ ಮಹಾನ್ ಚುಂಬಕದಿಂದ ಸೆಳೆಯಲ್ಪಟ್ಟಂತೆ, ಟಿಬೆಟ್‌ಗೆ ಹೋದರು. ಬಳಿಕ ಹಿಮಾಲಯದಲ್ಲಿ ಅವರಿಗೆ ಜ್ಞಾನೋದಯವಾಯಿತು. ಅವರು ಪುನಃ ಭಾರತಕ್ಕೆ ಮರಳಲಿಲ್ಲ.

ಟಿಬೆಟ್ ಮೇಲೆ ಅವರಿಗೆ ವಿಶೇಷ ಆಸ್ಥೆ. ಅವರ ಪ್ರೀತಿಯೆಲ್ಲ ಅಲ್ಲೇ ಧಾರೆಯಾಯಿತು. ಅವರು ಟಿಬೇಟಿಯನ್‌ರ ತಿಳಿವಳಿಕೆ, ಪ್ರಜ್ಞೆಯನ್ನೇ ಪರಿವರ್ತಿಸಿದರು. ನಿಜಕ್ಕೂ ಅವರು ಪವಾಡ ಸದೃಶ, ಪಾವಾಡಪುರುಷ! ಆತ ಮುಟ್ಟಿದ್ದೆಲ್ಲ ಬಂಗಾರವಾಗಿ ಮಾರ್ಪಡುತ್ತಿತ್ತು. ಈ ವಿಶ್ವವೆಂದೂ ಕಾಣದ ಅಸಾಧಾರಣ ರಸವಾದಿ ಈತ. [93]

ಮನಸ್ಸನ್ನು ತರಬೇತುಗೊಳಿಸುವ ಏಳು ಸೂತ್ರಗಳನ್ನು ಅತೀಶ ಟಿಬೇಟಿಯನ್‌ರಿಗೆ ಕಲಿಸಿದರು. ಟಿಬೇಟ್‌ಗೆ ಭಾರತ ನೀಡಿದ ಅಪೂರ್ವ ಕೊಡುಗೆ ಇದು. ಈ ವಿಶ್ವಕ್ಕೆ ಭಾರತ ಮಹಾನ್ ಕಾಣಿಕೆಗಳನ್ನು ನೀಡಿದೆ. ಅವುಗಳಲ್ಲಿ ಒಂದು ಅತೀಶ. ಭಾರತ ಚೀನಾಕ್ಕೆ ಬೋಧಿಧರ್ಮರನ್ನು ನಿಡಿದಂತೆ, ಟಿಬೆಟ್‌ಗೆ ಅತೀಶರನ್ನು ನೀಡಿದೆ. ಅತೀಶರಿಗೆ ಟಿಬೇಟ್ ಅನವರತ ಋಣಿ ಆಗಿರಬೇಕು.[94]



ಕಾಳಿಗಂಡಕಿ ಕಣಿವೆ, ನೇಪಾಳ

ಈ ದಿನ ಎಷ್ಟು ಸುಂದರ, ಮನಮೋಹಕವಾಗಿದೆ ಎಂದರೆ ಹಿಮಾಲಯದ ಸೂರ್ಯೋದಯವನ್ನು ನೆನಪಿಸುತ್ತದೆ. ಹಿಮಾಲಯದಲ್ಲಿ ಎಲ್ಲಿ ನೋಡಿದರೂ ಹಿಮರಾಶಿ. ಗಿಡಮರಗಳು ಮದುಮಗಳಂತೆ ಕಾಣಿಸುತ್ತವೆ. ಅವುಗಳಲ್ಲಿ ಹಿಮದ ಹೂಗಳು ವಿಕಸಿತಗೊಂಡು ಹಿಮರಾಶಿಯಾಗಿ ಮರಗಳಿಂದ ಉದುರಿರಬಹುದೇನೋ ಎಂಬ ಭ್ರಮೆಯನ್ನು ಹುಟ್ಟಿಸುತ್ತವೆ. ಅಲ್ಲಿ ತಥಾಕಥಿತ ಗಣ್ಯವ್ಯಕ್ತಿಗಳು, ಈ ಪ್ರಪಂಚದ ರಾಷ್ಟ್ರಾಧ್ಯಕ್ಷರು, ಪ್ರಧಾನಿಗಳು, ರಾಜ, ರಾಣಿಯರು ಮುಂತಾದವರ ನೆನಪೇ ಬರುವುದಿಲ್ಲ, ಹಾಗೆ ನೋಡಿದಲ್ಲಿ ರಾಜ, ರಾಣಿಯರು ಶಾಶ್ವತವಾಗಿರುವುದು ಇಸ್ಪೀಟು ಎಲೆಯಲ್ಲಿ ಮಾತ್ರ. ಅಧ್ಯಕ್ಷರು ಮತ್ತು ಪ್ರಧಾನಿಗಳು ಇಸ್ಪೀಟು ಎಲೆಯ ಜೋಕರ್‌ಗಳಿದ್ದಂತೆ!

ಹಿಮಶ್ವೇತದ ಹೂವುಗಳನ್ನು ಹೊದ್ದ ಅಲ್ಲಿನ ಮರಗಳು ..... ಅವುಗಳ ಎಲೆಗಳಿಂದ ಬೀಳುವ ಹಿಮವನ್ನು ನೋಡಿದರೆ, ನಾನು ಬಾಲ್ಯದಲ್ಲಿ ಕಂಡ ಮರವೊಂದು ನೆನಪಾಗುತ್ತದೆ. ಅಂತಹ ಮರವನ್ನು ಭಾರತದಲ್ಲಿ ಮಾತ್ರ ಕಾಣಲು ಸಾಧ್ಯ. ಆ ಮರದ ಹೆಸರು 'ಮಧುಮಾಲತಿ'. ಮಧು ಎಂದರೆ ಸಿಹಿ, ಮಾಲತಿ ಎಂದರೆ ರಾಣಿ. ನನಗೆ ಸುಗಂಧ ದ್ರವ್ಯವೆಂದರೆ ಅಲರ್ಜಿ ಎಂಬುದು ನಿಮಗೆ ಗೊತ್ತು. ನಾನು ಅದನ್ನು ಕೂಡಲೇ ಕಂಡುಹಿಡಿಯಬಲ್ಲೆ. ಪರ್ಫ್ಯೂಮ್‌ಗಳ ಬಗ್ಗೆ ನಾನು ಅತಿ ಸೂಕ್ಷ್ಮ.

ಮಧುಮಾಲತಿ ಒಂದು ಸುಂದರವಾದ ಮರ. ಈ ಮರವನ್ನು ದೇವರು ಏಳನೆ ದಿನ ಸೃಷ್ಟಿಸಿರಬೇಕು. ಈ ಭೂಮಿಯ ಎಲ್ಲ ತಾಪತ್ರಯಗಳು, ಅವಸರಗಳೆಲ್ಲವನ್ನು ಮುಗಿಸಿ, ಹೆಣ್ಣು ಮತ್ತು ಗಂಡು ಸೇರಿದಂತೆ ಎಲ್ಲವನ್ನೂ ಸೃಷ್ಟಿಸಿದ ಬಳಿಕ, ದೇವರು ತನ್ನ ಬಿಡುವಿನ ವೇಳೆಯಲ್ಲಿ, ಭಾನುವಾರದಂದು ಈ ಮರವನ್ನು ಸೃಷ್ಟಿಸಿರಬೇಕು.

ಮಧುಮಾಲತಿ ಒಂದೇ ಸಲ ಸಿಂಗರಿಸಿಕೊಳ್ಳುತ್ತದೆ. ಏಕಕಾಲಕ್ಕೆ ಸಾವಿರಾರು ಹೂಗಳು ಮರವನ್ನು ತುಂಬಿಕೊಳ್ಳುತ್ತವೆ. ಇಲ್ಲೊಂದು, ಅಲ್ಲೊಂದು ಹೂ ಬಿಡುವುದು ಮಧುಮಾಲತಿಯ ಸ್ವಭಾವವಲ್ಲ, ನನ್ನದೂ ಇದೇ ಸ್ವಭಾವ. ನೋಡನೋಡುತ್ತಿದ್ದಂತೆ ಮರಗಳ ಮೇಲೆಲ್ಲಾ ಹೂವುಗಳು ಆವರಿಸಿಬಿಡುತ್ತದೆ. ಕೆಲವೊಮ್ಮೆ ಮರದ ಎಲೆಗಳು ಸಹ ಕಾಣುವುದಿಲ್ಲ. ಆ ಮರಕ್ಕೆ ಹೂವುಗಳ ಅಂತಹ ವೈಭವ, ಅದೆಂತಹ ಪರಿಮಳ. ಇಡೀ ಮರಕ್ಕೆ ಬಿಳಿ ಹೂವಿನ ಕಿರೀಟ.

ಹಿಮಾಚ್ಛಾದಿತ ಮರಗಳನ್ನು ಕಂಡರೆ ನನಗೆ ತಟ್ಟನೆ ಮಧುಮಾಲತಿ ಮರ ನೆನಪಿಗೆ ಬರುತ್ತದೆ. ಹಿಮಕ್ಕೆ ಯಾವುದೇ ಸುವಾಸನೆ ಇಲ್ಲ, ಒಂದು ರೀತಿಯಲ್ಲಿ ನನಗದು ಒಳ್ಳೆಯದೇ. ಮಧುಮಾಲತಿಯ ಸುವಾಸನೆ ಹೀರುವುದು ಇನ್ನು ನನ್ನಿಂದ ಸಾಧ್ಯವಿಲ್ಲ. ಅದು ಮೈಲಿದೂರಕ್ಕೆ ಪಸರಿಸುತ್ತದೆ. ಇದು ಅತಿಶಯೋಕ್ತಿಯಲ್ಲ. ಒಂದು ಮೈಲು ವಿಸ್ತೀರ್ಣದ ಪ್ರದೇಶವನ್ನು ಸುಗಂಧಯುಕ್ತಗೊಳಿಸಲು ಒಂದು ಮಧುಮಾಲತಿ ಮರ ಸಾಕು. [95]

ಜಗತ್ತಿನಲ್ಲಿಯೇ ಅಪೂರ್ವ ಹಾಗೂ ಅಸಾಧಾರಣ ಪರ್ವತವಾದ ಹಿಮಾಲಯ ವಯಸ್ಸಿನಲ್ಲಿ ಅತ್ಯಂತ ಕಿರಿಯದೆಂದರೆ ನಿಮಗೆ ಆಶ್ಚರ್ಯವಾಗಬಹುದು. ಹಿಂದುಧರ್ಮದ ಪ್ರಾಚೀನ ಗ್ರಂಥ - ಋಗ್ವೇದದಲ್ಲಿ ಹಿಮಾಲಯದ ಪ್ರಸ್ತಾಪವಿಲ್ಲ. ಆಶ್ಚರ್ಯವೆಂದರೆ ಇದನ್ನು ಹಿಮಾಲಯದ ಸಮೀಪದಲ್ಲಿಯೇ ಬರೆದಿದ್ದು. ಋಗ್ವೇದದಲ್ಲಿ ಎಲ್ಲ ನದಿಗಳ ಪ್ರಸ್ತಾಪವೂ ಇದೆ. ಕಣ್ಮರೆಯಾದ ಸರಸ್ವತಿ ನದಿಯ ಪ್ರಸ್ತಾಪವೂ ಇದೆ. ಆದರೆ ಈ ಗ್ರಂಥದಲ್ಲಿ ಹಿಮಾಲಯದ ಪ್ರಸ್ತಾಪ ಮಾತ್ರ ಇಲ್ಲ. ಹಿಮಾಲಯ ಹೊಸತು, ಕಿರಿಯದು, ತಾಜಾ ಆಗಿದೆ. ಇನ್ನೂ ಬೆಳೆಯುತ್ತಿದೆ. ಪ್ರತಿ ವರ್ಷ ಒಂದು ಅಡಿ ಎತ್ತರ ಬೆಳೆಯುತ್ತಲಿದೆ.

ಜಗತ್ತಿನಲ್ಲಿಯೇ ಅತ್ಯಂತ ಪ್ರಾಚೀನವಾದ ಪರ್ವತ ವಿಂಧ್ಯಾಚಲ. ನಾನು ಹುಟ್ಟಿದ ಹಳ್ಳಿ ಈ ವಿಂಧ್ಯಾಚಲಕ್ಕೆ ಸಮೀಪವಿದೆ. ಅದು ವೃದ್ಧನಂತೆ. ಅದು ನೆಟ್ಟಗಿಲ್ಲ, ವೃದ್ಧನ ಹಾಗೆ ಬಾಗಿದೆ.

ಈ ಬಗ್ಗೆ ಸ್ವಾರಸ್ಯವಾದ ಕತೆಯಿದೆ. ಒಮ್ಮೆ ಅಗಸ್ತ್ಯ ಮಹಾಮುನಿ ದಕ್ಷಿಣದೆಡೆಗೆ ಹೊರಟ್ಟಿದ್ದರು. ವಿಂಧ್ಯ ಪರ್ವತ ಅಗಸ್ತ್ಯರ ಪಾದಕ್ಕೆರಗಲು ಬಗ್ಗಿದಾಗ, ಅವರು ಹೇಳಿದಂತೆ, '' ವಿಂಧ್ಯ, ಇದೇ ಸ್ಥಿತಿಯಲ್ಲಿರು. ಹೀಗಿದ್ದರೆ, ನಿನ್ನ ಮೇಲೆ ಸುಲಭವಾಗಿ ಏರಿ ಹೋಗಬಹುದು. ನೀನು ನೇರವಾಗಿ ನಿಂತರೆ, ಮುದುಕನಾದ ನಾನು ಹೇಗೆ ಏರಿ ಹೋಗುವುದು? ಅದು ಕಷ್ಟ. ಬಹುಬೇಗನೆ ಅಲ್ಲಿಂದ ಮರಳುವೆ. ನನ್ನ ಶಿಷ್ಯರು ಬಹುದಿನಗಳಿಂದ ಅಲ್ಲಿಗೆ ಬರುವಂತೆ ಆಹ್ವಾನಿಸುತ್ತಿದ್ದಾರೆ. ದಿನದಿಂದ ದಿನಕ್ಕೆ ನಾನು ಸಾವಿಗೆ ಸಮೀಪಿಸುತ್ತಿರುವುದರಿಂದ ಅವರ ಹಂಬಲವನ್ನು ಈಡೇರಿಸಬೇಕಿದೆ. ಅವರನ್ನು ನೋಡಲು ಹೋಗುತ್ತಿರುವೆ. ದಯವಿಟ್ಟು ಬಾಗಿಯೇ ಇರು. ನೆಟ್ಟಗೆ ನಿಂತಿರಬೇಡ''.

ಅಗಸ್ತ್ಯರು ಮರಳಿ ಬರಲೇ ಇಲ್ಲ. ಅವರು ದಕ್ಷಿಣದಲ್ಲಿಯೇ ಕೊನೆಯುಸಿರೆಳೆದರು. ವಿಂಧ್ಯ ಪರ್ವತ ಇಂದಿಗೂ ಅಗಸ್ತ್ಯರಿಗಾಗಿ ಕಾಯುತ್ತಲೇ ಇದೆ, ಬಾಗಿಕೊಂಡು, ಸಾವಿರಾರು ವರ್ಷಗಳ ಹಿಂದೆ ದಕ್ಷಿಣದತ್ತ ಹೋದ ಗುರು ಹಿಂದಿರುಗುವವರೆಂದು ..... [96]

ನಾನು ಹಿಮಾಲಯವನ್ನು ಬಹುವಾಗಿ ಮೆಚ್ಚುತ್ತೇನೆ, ಪ್ರೀತಿಸುತ್ತೇನೆ. ಅಲ್ಲಿಯೇ ಸಾಯಲು ಬಯಸಿದ್ದೆ. ಸಾಯಲು ಅದು ನಿಜಕ್ಕೂ ಅತಿ ಸುಂದರ ಸ್ಥಳ. ಹಾಗೇ ಜೀವಿಸಲಿಕ್ಕೂ. ಸಾಯಲು ಮಾತ್ರ ಅಂಥ ಪ್ರಶಸ್ತ ಸ್ಥಳ ಮತ್ತೊಂದಿಲ್ಲ. ಲಾವ್‌ತ್ಸು ಸತ್ತಿದ್ದು ಇಲ್ಲಿಯೇ. ಹಿಮಾಲಯದ ಕಣಿವೆಯಲ್ಲಿ ಬುದ್ಧ, ಏಸು, ಮೋಸಸ್ ನಿಧನರಾದರು. ಹಿಮಾಲಯದ ವಿನಃ ಮತ್ತಾವುದೇ ಬೆಟ್ಟಗಳು ಬೋಧಿ ಧರ್ಮ, ಮಿಲರೆಪ, ಮಾರ್ಪ,




ಕಾಗ್‌ಬೇರಿಯ ಮೇಲಿರುವ ಡ್ಯಾಂಪಸ್ ಪೀಕ್, ನೇಪಾಳ

ತಿಲೋಪ, ನರೋಪ ಹಾಗೂ ಇತರೆ ಸಾವಿರಾರು ಜ್ಞಾನಿಗಳಿಗೆ ನೆಲೆಯಾಗಿತ್ತೆಂದು ಹೇಳಿಕೊಳ್ಳಲಾಗದು.

ಸ್ವಿಟ್ಜರ್‌ಲ್ಯಾಂಡ್ ಕೂಡ ಸುಂದರ ತಾಣ. ಆದರೆ ಹಿಮಾಲಯದ ಮುಂದೆ ಅದೇನೂ ಅಲ್ಲ. ಎಲ್ಲ ಆಧುನಿಕ ಸೌಲಭ್ಯಗಳಿಂದ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಉಳಿಯುವುದು ಅನುಕೂಲಕರವಾಗಬಹುದು. ಈ ಸೌಲಭ್ಯಗಳು ಇಲ್ಲದ ಹಿಮಾಲಯದಲ್ಲಿ ತಂಗುವುದು ಅನುಕೂಲಕರವಾಗಿಲ್ಲದೆ ಇರಬಹುದು. ಹಿಮಾಲಯಕ್ಕೆ ತಂತ್ರಜ್ಞಾನದ ಬಿಸಿ ತಟ್ಟಿಲ್ಲ. ರಸ್ತೆಗಳಿಲ್ಲ, ವಿದ್ಯುಚ್ಛಕ್ತಿ ಇಲ್ಲ, ವಿಮಾನಗಳಿಲ್ಲ, ರೈಲು ಮಾರ್ಗವಿಲ್ಲ, ಏನೂ ಇಲ್ಲ. ಆದರೆ ಅದು ನಿಮ್ಮನ್ನು ಬೇರೊಂದು ಸಮಯಕ್ಕೆ, ಬೇರೊಂದು ಅಸ್ತಿತ್ವಕ್ಕೆ, ಬೇರೊಂದು ಸ್ತರಕ್ಕೇ ಕೊಂಡೊಯ್ಯುತ್ತದೆ.[97]

ಶತಶತಮಾನಗಳಿಂದ ಮಹಾನ್ ಯೋಗಿಗಳನ್ನು ಹಿಮಾಲಯ ಆಕರ್ಷಿಸುತ್ತಿದೆ. ಪರ್ವತ ಶೃಂಗದಲ್ಲಿ, ಅಲ್ಲಿನ ಎಂದೂ ಕರಗದ ಹಿಮರಾಶಿಯಲ್ಲಿ, ಮುರಿಯದ ನಿರಂತರ ಮೌನದಲ್ಲಿ, ಯಾರೂ ಮೆಟ್ಟದ ಹಿಮಪಥಗಳಲ್ಲಿ ಏನೋ ಒಂದು ರೀತಿಯ ಆಧ್ಯಾತ್ಮಿಕ ವಾತಾವರಣವಿದೆ. ಹಿಮಾಲಯದ ಪರ್ವತ ಶೃಂಗಗಳಿಗೂ ಆಂತರಿಕ ಪ್ರಜ್ಞೆಗೂ ಕೆಲವೊಂದು ಸಾಮ್ಯತೆಗಳಿವೆ.[98]

ನನ್ನ ಮಟ್ಟಿಗೆ ಹೇಳುವುದಾದರೆ, ಭಾರತವು ಧ್ಯಾನ ಕಲಿಕೆಯ ಸಂಕೇತವೇ ಹೊರತು ಮತ್ತೇನೂ ಅಲ್ಲ. ಇದು ಧ್ಯಾನದ ವಿಶ್ವವಿದ್ಯಾಲಯ. ಇದು ಇಂದು, ನಿನ್ನೆಯದಲ್ಲ. ಶತಶತಮಾನಗಳಿಂದ ಭಾರತ ಧ್ಯಾನದ ವಿಶ್ವವಿದ್ಯಾಲಯವಾಗಿದೆ.[99]



ಘಾಟ್ ಮತ್ತು ಮಂದಿರಗಳು, ಪುಷ್ಕರ್, ರಾಜಾಸ್ಥಾನ್

ಧರ್ಮವೆಂಬ ಬೀಜ ಆಳಕ್ಕಿಳಿದು ಮೊಳಕೆಯೊಡಲು ಸಾವಿರಾರು ವರ್ಷಗಳು ಬೇಕು. ಅದು ಕೇವಲ ಮೊಳಕೆಯೊಡೆಯುವುದು ಮಾತ್ರವಲ್ಲ ಹೂವು ಬಿಟ್ಟು ಅರಳಲು ಇಲ್ಲಿ ಪ್ರಯೋಗಗಳನ್ನು ಕೈಗೊಳ್ಳಲಾಗಿದೆ. ಭಾರತೀಯರು ಈ ಹೂವಿನ ಖಜಾನೆಯನ್ನು ಕಳೆದುಕೊಳ್ಳುತ್ತಿದ್ದಾರೆ. ನೀವು ಕಳೆದುಕೊಳ್ಳುತ್ತೀರಿ, ಏಕೆಂದರೆ ನೀವು ಅದನ್ನು ನಿರ್ಲಕ್ಷ್ಯ ಮಾಡಿದ್ದೀರಿ, ಅದರಲ್ಲಿ ಏನನ್ನು ಕಾಣದವರಂತಾಗಿರುವಿರಿ.

ಪಾಶ್ಚಿಮಾತ್ಯ ದೇಶಗಳು ಇನ್ನೂ 'ಅ, ಆ, ಇ, ಈ ...' ಯಿಂದ ಕಲಿಯುತ್ತಿವೆ. ಅವು ಧರ್ಮಯಾತ್ರೆಯನ್ನು ಆರಂಭಿಸಿದರೆ, ಐದು ಸಾವಿರ ವರ್ಷಗಳ ಹಿಂದೆ ನಾವು ಆರಂಭಿಸಿದಲ್ಲಿಂದ ಅವರು ಶುರು ಮಾಡಬೇಕಾಗುವುದು. ಈಗ ನಾವು ಕ್ರಮಿಸಿರುವ ದೂರವನ್ನು ತಲುಪಲು ಪಾಶ್ಚಾತ್ಯರಿಗೆ ಇನ್ನೂ ಐದು ಸಾವಿರ ವರ್ಷಗಳು ಬೇಕು. ಆದರೆ ಈ ಅವಧಿಯಲ್ಲಿ ಮನುಷ್ಯನ ಉಳಿವು ಅಸಾಧ್ಯ.

ಅದಕ್ಕಾಗಿಯೇ ಭಾರತದ ಮೇಲೆ ಬಹಳ ಜವಾಬ್ದಾರಿಯಿದೆ. ನಾವು ಕಂಡು ಹಿಡಿದ ರಹಸ್ಯ, ನಿಯಮ, ಮಾನವ ಪ್ರಜ್ಞೆಯ ಪ್ರವೇಶಿಸುವ ವಿಧಾನ ಮುಂತಾದವುಗಳನ್ನು ತ್ಯಜಿಸಲು ನಿರ್ಧರಿಸಿದರೂ, ಹಾಗೆ ಮಾಡುವ ಮೊದಲು, ಇವುಗಳನ್ನು ಬೇರೆಯವರಿಗೆ ತಿಳಿಸಿಕೊಡುವುದು ಒಳ್ಳೆಯದು. ನೀವು ಮಾಡಬೇಕಾದ ಕನಿಷ್ಠ ಕಾರ್ಯವೇ ಅದು. ಆದರೆ ನೆನಪಿರಲಿ, ನೀವು ಬೇರೆಯವರಿಗೆ ತಿಳಿಸಿಕೊಡಲು ಸಾಧ್ಯವಾಗುವುದು, ನಿಮ್ಮೊಳಗೆ ಸಂಭವಿಸಿದ್ದನ್ನು ಮಾತ್ರ.

ಪಾಶ್ಚಾತ್ಯರಿಗೆ ನಾವು 'ಗೀತೆ'ಯನ್ನು ಕೊಡಬಹುದು. ಆದರೆ ಅದರೊಳಗಿನ ಹಾಡೇ ಇಲ್ಲವಾಗಿದೆ. ಗೀತೆಯಲ್ಲಿರುವ ಶಬ್ದಗಳನ್ನು ಈಗಾಗಲೇ ಪಾಶ್ಚಾತ್ಯ ಭಾಷೆಗಳಿಗೆ ಭಾಷಾಂತರಿಸಲಾಗಿದೆ. ಆದ್ದರಿಂದ ಏನೂ ಪ್ರಯೋಜನವಿಲ್ಲ. ಆದರೆ ಕೃಷ್ಣನ ಅಂತರಂಗದೊಳಗೆ ಇರುವುದನ್ನು ಕೊಡುವುದು ಹೇಗೆ? ಗೀತೆ ಕೇವಲ ಅದರ ನೆರಳು ಅಷ್ಟೆ. ಕೃಷ್ಣನ ಒಳಗೆ ಸಂಭವಿಸಿದ್ದನ್ನು ಇತರರಿಗೆ ಹಸ್ತಾಂತರಿಸುವುದು ಹೇಗೆ ಸಾಧ್ಯ? ನಮ್ಮೊಳಗೆ ಕೂಡ, ಕೃಷ್ಣ ಘಟಿಸುತ್ತಿದ್ದರೆ ಮಾತ್ರ ಹಸ್ತಾಂತರ ಸಾಧ್ಯ.

ನನ್ನ ಉದ್ದೇಶ - ನಿಮ್ಮೊಳಗೂ ಒಬ್ಬ ಧ್ಯಾನಿ ಜನನವಾಗಬೇಕು. ಬುದ್ಧನಂಥ ಕೆಲ ಡಜನ್ ಧ್ಯಾನಿಗಳಿಗೆ ಭಾರತ ಜನ್ಮ ನೀಡಿದರೆ ಆಗ ಮತ್ಯಾವ ತೊಂದರೆ ಇರುವುದಿಲ್ಲ. ಧರ್ಮವು ಭಾರತದಲ್ಲಿ ಅಥವಾ ಪಾಶ್ಚಾತ್ಯ ದೇಶಗಳಲ್ಲಿ ಉಳಿಯಬೇಕೋ ಎಂಬುದು ಪ್ರಶ್ನೆ ಅಲ್ಲ. ಧರ್ಮ ಉಳಿಯುವುದೇ ಎಂಬುದೇ ಪ್ರಶ್ನೆ. ಯಾವ ನೆಲದ ಮೇಲೆ ಮಂದಿರವನ್ನು ಕಟ್ಟಲಾಗುವುದು ಎಂಬುದು ದೊಡ್ಡದಲ್ಲ, ನೆಲ ಎಲ್ಲೆಲ್ಲೂ ಒಂದೇ, ಆದರೆ ನೀವು ದೇಗುಲವನ್ನೇ ಪಾಳು ಬೀಳಿಸುತ್ತಿರುವಿರಿ. [100]

ಆದರೆ ಇನ್ನೊಂದು ಭಾರತವೂ ಇದೆ: ಅದು ಬುದ್ಧರ ಭಾರತ, ಚಿರಂತನ, ಶಾಶ್ವತ ಭಾರತ. ನಾನು ಅದರ ಒಂದು ಭಾಗ. ನೀವೂ ಅದರ ಒಂದು ಭಾಗ. ನಿಜವಾಗಿ ಹೇಳುವುದಾದರೆ, ಎಲ್ಲಿ ಧ್ಯಾನ ಘಟಿಸುವುದೋ, ಯಾರಲ್ಲೇ ಆಗಲಿ ಧ್ಯಾನ ಘಟಿಸುವುದೋ, ಆ ವ್ಯಕ್ತಿ ಈ ಶಾಶ್ವತ ಭಾರತದ ಭಾಗವೇ. ಆ ಶಾಶ್ವತ ಭಾರತ ಭೌಗೋಳಿಕವಾದುದಲ್ಲ, ಅದೊಂದು ಆಧ್ಯಾತ್ಮಿಕ ನಿವೇಶ! [101]